ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಇದು ಸಕಾಲ

ಕರ್ನಾಟಕದಲ್ಲಿ ದೇವಾಲಯಗಳ, ಗ್ರಾಮೀಣ ಭಾಗದ ಜನರ ಮತ್ತು ಇತರರ ಭೂಮಿಯನ್ನು ವಕ್ಫ್ ಮಂಡಳಿ ಕಬಳಿಸಿದೆ. ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಕಾಲ ಕೂಡಿ ಬಂದಿದೆ. ಈ ಮಸೂದೆಯನ್ನು ಬಿಜೆಪಿ ಅಂಗೀಕರಿಸುತ್ತದೆ. ನಮ್ಮನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ವಿಶ್ವವಾಣಿ ಹೊಸ ಅಂಕಣ

ಹಿರಿಯ ಐಎಎಸ್ ಅಧಿಕಾರಿ **ಕೆ. ಶಿವಪ್ರಸಾದ್** ಅವರ "ನಿತ್ಯಜೀವನದಲ್ಲಿ ಭಗವದ್ಗೀತೆ"ಯ ನಿತ್ಯ ಅಂಕಣ "ಆರಾಮ" ಪುಟದಲ್ಲಿ... ನಿರೀಕ್ಷಿಸಿ

ಪುಟ ತೆರೆದಂತೆ...

ಹೀಗಿದ್ದವು ಗ್ರೀಕರ ದೇವಾಲಯ ಆಸ್ಪತ್ರೆಗಳು
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ಆತನ ಬಲಿದಾನಕ್ಕೆ ನ್ಯಾಯ ಸಿಗಬೇಕಲ್ಲವೇ?
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಮಾತಂದ್ರೆ ಮಾತು

ನಾನೊಬ್ಬ ಯೋಗಿ, ನನಗೆ ದೇಶವೇ ಮೊದಲು. ನನ್ನ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರಿಗೂ ದೇಶವೇ ಮೊದಲು. ಆದರೆ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರೇ, ನಿಮಗೆ ಮಾತ್ರ ಅಲ್ಪಸಂಖ್ಯಾತರ ತುಷ್ಟೀಕರಣವೇ ಪ್ರಮುಖ ವಿಷಯ. ನಿಮ್ಮ ಅಧ್ಯಕ್ಷತೆಯ ಕಾಂಗ್ರೆಸ್ ಪಕ್ಷಕ್ಕೂ ಮತ ಬ್ಯಾಂಕ್ ತುಷ್ಟೀಕರಣವೇ ಮೊದಲು ಬರುತ್ತದೆ.

ಯೋಗಿ ಆದಿತ್ಯನಾಥ
ಉ.ಪ್ರ ಸಿಎಂ

ದಾರಿದೀಪೋಕ್ತಿ

ನೀವು ಪ್ರಪಾತಕ್ಕೆ ಬಿದ್ದಾಗ ಎಲ್ಲವೂ ಮುಗಿದು ಹೋಯಿತು ಎಂದು ಭಾವಿಸಬೇಕಿಲ್ಲ. ಆಗ ನಿಮಗೆ ಪ್ರಪಾತ ಎಷ್ಟು ಆಳವಿದೆ ಎಂಬುದು ಗೊತ್ತಾಗುತ್ತದೆ ಮತ್ತು ಆ ಆಳದಿಂದ ಮೇಲೆದ್ದು ಬಂದ ನಿಮ್ಮ ಸಾಮರ್ಥ್ಯದ ಬಗ್ಗೆಯೂ ಹೆಮ್ಮೆ ಎನಿಸುತ್ತದೆ.

ವಕ್ರತುಂಡೋಕ್ತಿ

ಸೆಕ್ರೆಟರಿಯನ್ನು ಮದುವೆಯಾಗುವ ಒಂದು ಲಾಭವೆಂದರೆ, ಮದುವೆಯಾದ ಬಳಿಕ ಅಕೌಂಟೆಂಟನ್ನು ಇಟ್ಟುಕೊಳ್ಳಬೇಕಿಲ್ಲ.

ಫನ್‌ತರಂಗ

- ರಘುಪತಿ ಶೃಂಗೇರಿ -

ಡೊನಾಲ್ಡ್ ಟ್ರಂಪ್ ಮನೆ ಕಾಯುತ್ತಿದೆ ರೋಬಾಟ್ ನಾಯಿ
ಸುದ್ದಿ

ಬೆ.7ರಿಂದ ಸಂಜೆ 6ರವರೆಗೆ ಹಕ್ಕು ಚಲಾವಣೆ | ಮುಕ್ತ ಮತದಾನಕ್ಕೆ ಸಕಲ ವ್ಯವಸ್ಥೆ

ಇಂದು ಮತ ಸಮರ

ಬೆಂಗಳೂರು: ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ಮಿನಿ ಮಹಾಸಮರವಾಗಿರುವ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಇಂದು ನಡೆಯಲಿದ್ದು, ಮುಕ್ತ ಹಾಗೂ ನ್ಯಾಯಸಮ್ಮತ ಮತದಾನಕ್ಕೆ ಚುನಾವಣಾ ಆಯೋಗ ಸಕಲ ವ್ಯವಸ್ಥೆ ಮಾಡಿದೆ.

ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದೆ. ಚನ್ನಪಟ್ಟಣ, ಶಿಗ್ಗಾವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳ ಕಣ ಜಿದ್ದಾಜಿದ್ದಿಯಿಂದ ಕೂಡಿದೆ. ಮತದಾನದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ. ಗಣಿ ಜಿಲ್ಲೆ ಸಂಡೂರು ಮೀಸಲು ಕ್ಷೇತ್ರದಲ್ಲಿ ಅತಿ ಕಡಿಮೆ 6, ಹಾವೇರಿ ಜಿಲ್ಲೆ ಶಿಗ್ಗಾವಿಯಲ್ಲಿ 8 ಹಾಗೂ ರಾಮನಗರ ಜಿಲ್ಲೆ ಚನ್ನಪಟ್ಟಣದಲ್ಲಿ ಪಕ್ಷೇತರರರು ಸೇರಿದಂತೆ ಅತಿ ಹೆಚ್ಚು 31 ಅಭ್ಯರ್ಥಿಗಳು ಸೇರಿ ಒಟ್ಟು 45 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸೋಮವಾರ ಸಂಜೆ 6 ಗಂಟೆಯಿಂದ ಗುರುವಾರ ಬೆಳಗ್ಗೆ 6 ಗಂಟೆವರೆಗೆ ಮದ್ಯ ಮಾರಾಟಕ್ಕೆ ನಿಷೇಧ ಹೇರಲಾಗಿದೆ.

ಜಿದ್ದಾಜಿದ್ದಿನ ಸ್ಪರ್ಧೆ: ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಇಲ್ಲವೇ ಎನ್‌ಡಿಎ ಗೆದ್ದರೆ ಸರಕಾರದ ಮೇಲೆ ನೇರವಾಗಿ ಹೆಚ್ಚಿನ ಪರಿಣಾಮ ಬೀರುವ ಸಾಧ್ಯತೆಗಳಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟದ ಸಹೋದ್ಯೋಗಿಗಳು ಹಾಗೂ ಶಾಸಕರು ಬಿರುಸಿನ ಪ್ರಚಾರ ನಡೆಸಿದ್ದರು. ಸರಕಾರಕ್ಕೆ ಉಪಚುನಾವಣೆ ಯಲ್ಲಿ ಮುಖಭಂಗ ಉಂಟು ಮಾಡಬೇಕೆಂದು ಬಿಜೆಪಿ- ಜೆಡಿಎಸ್ ನಾಯಕರು ಸೇರಿಗೆ ಸವ್ವಾಸೇರು ಎಂಬಂತೆ ಪ್ರಚಾರ ನಡೆಸಿದ್ದರು.

ರಾಜಕೀಯ ಜಿದ್ದಾಜಿದ್ದಿಗೆ ಹೆಸರುವಾಸಿಯಾದ ಚನ್ನಪಟ್ಟಣ ದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಕೇಂದ್ರ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಹಾಗೂ ಡಿ.ಕೆ.ಶಿವಕುಮಾರ್ ನಡುವಿನ ಪ್ರತಿಷ್ಠೆಯ ಕಣವಾಗಿರುವ ಈ ಕ್ಷೇತ್ರದಲ್ಲಿ ಹಿಂದೆಂದಿಗಿಂತಲೂ ತುರುಸಿನ ಸ್ಪರ್ಧೆ ಏರ್ಪಟ್ಟಿದೆ. ಅದರಂತೆ ಸಂಡೂರು ಕೂಡ ರಾಜ್ಯದ ಗಮನ ಸೆಳೆದ ಕ್ಷೇತ್ರವಾಗಿದೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ರಾಜೀನಾಮೆಯಿಂದ ತೆರವಾಗಿರುವ ಶಿಗ್ಗಾವಿಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ.

ಮತದಾನಕ್ಕೆ ಅನುಕೂಲ: ಮೂರು ಕ್ಷೇತ್ರಗಳಲ್ಲಿ ಮತದಾನ ಮಾಡಲು ಅನುಕೂಲವಾಗುವಂತೆ ವೇತನ ಸಹಿತ ರಜೆ ಘೋಷಣೆ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ. ಈ ಕುರಿತು ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಸರಕಾರದ ಅಧೀನ ಕಾರ್ಯದರ್ಶಿ-1 (ಪ) ಸಿಆಸು ಇಲಾಖೆ (ರಾಜ್ಯ ಶಿಷ್ಟಾಚಾರ) ಅಧಿಸೂಚನೆ ಹೊರಡಿಸಿದ್ದಾರೆ.

ಈ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಎಲ್ಲ ರಾಜ್ಯ ಸರಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ (ಅನುದಾನಿತ ಶಿಕ್ಷಣ ಸಂಸ್ಥೆಗಳು ಒಳಗೊಂಡಂತೆ) ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು, ಜೀವವಿಮಾ ನಿಗಮ, ಹಣಕಾಸು ಸಂಸ್ಥೆಗಳು ಇನ್ನಿತರೆ ಔದ್ಯಮಿಕ ಸಂಸ್ಥೆಗಳಲ್ಲಿ ಕಾಯಂ ಆಗಿ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲ ಅರ್ಹ ಮತದಾರರಿಗೆ ಸೀಮಿತವಾದಂತೆ ಹಾಗೂ ಮತದಾನ ಮಾಡಲು ಅನುಕೂಲವಾಗುವಂತೆ 1951 ಕಲಂ 135 ಬಿ ಅಡಿಯಲ್ಲಿನ ಎಲ್ಲ ಉಪಬಂಧಗಳನ್ವಯ ಒಂದು ದಿನದ ವೇತನ ಸಹಿತ ರಜೆ ಮಂಜೂರು ಮಾಡಲು ಅಧಿಕಾರವುಳ್ಳ ಅಧಿಕಾರಿಗಳು ಮಂಜೂರು ಮಾಡತಕ್ಕದ್ದು ಎಂಬ ಷರತ್ತಿಗೊಳಪಟ್ಟು ಒಂದು ದಿನದ ವೇತನ ಸಹಿತ ರಜೆ ನೀಡಲು ಆದೇಶಿಸಿದೆ.

ಸಂಡೂರು ವಿಧಾನಸಭಾ ಕ್ಷೇತ್ರದ ಚುನಾವಣೆ ನಿಮಿತ್ತ ಬಳ್ಳಾರಿ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಮತಯಂತ್ರ ಹೊತ್ತ ಸಿಬ್ಬಂದಿ ತಮ್ಮ ಬೂತ್‌ಗಳತ್ತ ತೆರಳಿದರು.

ಚನ್ನಪಟ್ಟಣ	ಶಿಗ್ಗಾವಿ	ಸಂಡೂರು
ಒಟ್ಟು ಅಭ್ಯರ್ಥಿಗಳು 31	ಒಟ್ಟು ಅಭ್ಯರ್ಥಿಗಳು 8	ಒಟ್ಟು ಅಭ್ಯರ್ಥಿಗಳು 6
ಹಣಾಹಣಿ	ಹಣಾಹಣಿ	ಹಣಾಹಣಿ
ನಿಖಿಲ್ ಎನ್‌ಡಿಎ ಯೋಗೇಶ್ವರ ಕಾಂಗ್ರೆಸ್	ಭರತ್ ಬಿಜೆಪಿ ಪಠಾಣ್ ಕಾಂಗ್ರೆಸ್	ಬಂಗಾರು ಬಿಜೆಪಿ ಅನ್ನಪೂರ್ಣ ಕಾಂಗ್ರೆಸ್
ಪುರುಷರು - 1,12,271	ಪುರುಷರು - 1,21,067	ಪುರುಷರು-1,17,739
ಮಹಿಳೆಯರು- 1,20,557	ಮಹಿಳೆಯರು- 1,15,717	ಮಹಿಳೆಯರು-1,18,279
ಒಟ್ಟು ಮತದಾರರು 2,36,836	ಒಟ್ಟು ಮತದಾರರು 2,36,790	ಒಟ್ಟು ಮತದಾರರು-2,36,047

ಅಪಾರ ಪ್ರಮಾಣದ ನಗದು, ಆಸ್ತಿ ಪತ್ರಗಳು ಪತ್ತೆ

37 ಕಡೆ ಲೋಕಾ ದಾಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಗೋವಿಂದಪ್ಪ ಮನೆಯಲ್ಲಿ ಪತ್ತೆಯಾದ ನಗದು.

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿಗಳಿಕೆ ಆರೋಪದ ಸಂಬಂಧ ವಿವಿಧ ಇಲಾಖೆ, ನಿಗಮಗಳ 8 ಅಧಿಕಾರಿಗಳ ಮನೆ ಮತ್ತು ಇತರೆಡೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ದಾಳಿ ವೇಳೆ ಅಪಾರ ಪ್ರಮಾಣದ ನಗದು, ಆಸ್ತಿ ಪತ್ರಗಳು ಪತ್ತೆಯಾಗಿವೆ.

ಬೆಳಗಾವಿ, ಹಾವೇರಿ, ದಾವಣಗೆರೆ, ಕಲಬುರಗಿ, ರಾಮನಗರ, ಮೈಸೂರು, ಬೆಳಗಾವಿ ಮತ್ತು ಧಾರವಾಡದಲ್ಲಿ ದಾಳಿ ನಡೆದಿದೆ. ಒಂಬತ್ತು ಅಧಿಕಾರಿಗಳ ಮನೆ, ಸಂಬಂಧಿಕರು ಮತ್ತು ಆಪ್ತರ ಮನೆ ಸೇರಿ ಒಟ್ಟು 37 ಸ್ಥಳಗಳಲ್ಲಿ ಮಂಗಳವಾರ ಬೆಳಗ್ಗೆ ಏಕಕಾಲಕ್ಕೆ ದಾಳಿ ನಡೆಸಲಾಗಿದೆ. ಕೆಲವು ಅಧಿಕಾರಿಗಳು ಖಾಸಗಿ ಕಚೇರಿ, ರಿಯಲ್ ಎಸ್ಟೇಟ್ ಏಜೆನ್ಸಿ ನಡೆಸುತ್ತಿರುವುದು ದಾಳಿ ವೇಳೆ ಪತ್ತೆಯಾಗಿದೆ. ಅಪಾರ್ಟ್‌ಮೆಂಟ್‌ಗಳು ಮತ್ತು ಬಡಾವಣೆಗಳ ನಿರ್ಮಾಣದ ಬಗ್ಗೆಯೂ ದಾಖಲೆಗಳು ಪತ್ತೆಯಾಗಿವೆ. ಲೋಕಾಯುಕ್ತ ದಾಳಿ ವೇಳೆ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಹಿರೇಕೆರೂರು ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕಾಶಿನಾಥ್ ಭಜಂತ್ರಿ ಮನೆಯಲ್ಲಿದ್ದ 9 ಲಕ್ಷ ರು. ನಗದಿನ ಗಂಟು ಕಟ್ಟಿ ಶೌಚಾಲಯದ ಕಿಟಕಿಯ ಮೂಲಕ ಹೊರಗೆ ಎಸೆದಿದ್ದರು. ಬಾಗಿಲು ತೆರೆಸಿ ನಂತರ ಒಳಗೆ ಬಂದ ಅಧಿಕಾರಿಗಳು, ಗಂಟು ಪತ್ತೆ ಮಾಡಿದ್ದಾರೆ.

ಯಾರ‍್ಯಾರ ಮೇಲೆ ದಾಳಿ?

- ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಹಿರೇಕೆರೂರು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕಾಶಿನಾಥ್ ಭಜಂತ್ರಿ
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಶ್ರೀನಿವಾಸ್ ಆಲದರ್ತಿ
- ಬೆಂಗಳೂರಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತರಾಗಿರುವ ವೆಂಕಟೇಶ ಮಜುಂದಾರ್
- ನಿಪ್ಪಾಣಿ ತಾಲೂಕಿನ ಬೋರಗಾಂವ ಗ್ರಾಮ ಲೆಕ್ಕಾಧಿಕಾರಿ ವಿಠ್ಠಲ ದವಳೇಶ್ವರ
- ಧಾರವಾಡದ ಕೆಐಡಿಬಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಗೋವಿಂದಪ್ಪ ಭಜಂತ್ರಿ
- ಬೀದರ್ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಅಧಿಕಾರಿ ರವೀಂದ್ರ ರೊಟ್ಟಿ
- ದಾವಣಗೆರೆ ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಸಹಾಯಕ ನಿರ್ದೇಶಕ ಕಮಲ್‌ರಾಜ್
- ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 5ರ ಆಯುಕ್ತ ನಾಗೇಶ್

ಕ್ಷಮೆ ಯಾಚಿಸಿದ ಸಚಿವ ಜಮೀರ್

ಮೈಸೂರು: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಕರಿಯಣ್ಣ ಎಂದು ಕರೆದಿದ್ದ ಸಚಿವ ಜಮೀರ್ ಅಹಮ್ಮದ್ ತಮ್ಮ ಹೇಳಿಕೆಗೆ ಕ್ಷಮೆ ಯಾಚಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಮಾತಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ. ನಾನು ಕುಮಾರಸ್ವಾಮಿ ಅವರನ್ನು ಕರಿಯಣ್ಣ ಎಂದು ಕರೆದದ್ದು ಇದೇ ಮೊದಲೇನಲ್ಲ. ಪ್ರೀತಿಯಿಂದ ಅವರನ್ನು ಹಾಗೇ ಹಲವು ಸಲ ಕರೆದಿದ್ದೇನೆ. ಅವರೂ ನನ್ನನ್ನು ಕುಳ್ಳ ಎಂದು ಕರೆದಿದ್ದಾರೆ. ಆದರೆ ಚುನಾವಣೆ ಕಾರಣಕ್ಕೆ ಇದನ್ನು ವಿವಾದ ಮಾಡಲಾಗುತ್ತಿದೆ ಎಂದರು.

ನಾಗೇಂದ್ರಗೆ ಮತ್ತೆ ಸಚಿವ ಸ್ಥಾನ: ಸಿಎಂ

ಎಚ್.ಡಿ.ಕೋಟೆ: ಶಾಸಕ ಬಿ.ನಾಗೇಂದ್ರ ಅವರನ್ನು ಉಪಚುನಾವಣೆ ನಂತರ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕಾರ್ಯಕ್ರಮವೊಂದರಲ್ಲಿ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಣ ದುರುಪಯೋಗ ಆಗಿದೆಯೆಂದು ಬಿಜೆಪಿಯವರು ಸುಳ್ಳು ಪ್ರಕರಣವನ್ನು ದಾಖಲಿಸಿದ್ದರು. ನಾಗೇಂದ್ರ ಅವರೂ ಜಾಮೀನು ಪಡೆದು ಹೊರಬಂದಿದ್ದಾರೆ. ಈ ಹಿಂದೆ ಸಚಿವರಾಗಿದ್ದರು. ಉಪ ಚುನಾವಣೆ ಮುಗಿದ ನಂತರ ಸಚಿವ ಸ್ಥಾನ ಕೊಡಬೇಕು, ಕೊಡುವೆ ಎಂದರು.

ನಿರ್ದೇಶಕ ಆರ್‌ಜಿವಿ ವಿರುದ್ಧ ಎಫ್‌ಐಆರ್

ಅಮರಾವತಿ: ಚಲನಚಿತ್ರ ನಿರ್ದೇಶಕ ರಾಮ್ ಗೋಪಾಲ್ ವರ್ಮಾ(ಆರ್‌ಜಿವಿ) ವಿರುದ್ಧ ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯ ಮಡ್ಡಿಪಾಡು ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಪುತ್ರ-ಸೊಸೆ, ಡಿಸಿಎಂ ಪವನ್ ಕಲ್ಯಾಣ್ ಹಾಗೂ ಟಿಡಿಪಿ ಹಲವು ನಾಯಕರ ತಿರುಚಿದ ಪೋಟೋಗಳನ್ನು ಆರ್‌ಜಿವಿ ಜಾಲತಾಣದಲ್ಲಿ ಹಂಚಿದ್ದರು. ಟಿಡಿಪಿ ಮುಖಂಡ ರಾಮಲಿಂಗಂ ಅವರು ನೀಡಿದ ದೂರಿನ ಮೇರೆಗೆ ಮಡ್ಡಿಪಾಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಂಗ್ಲಾದಿಂದ ಅಕ್ರಮ ವಲಸೆ: ಇ.ಡಿ ದಾಳಿ

ರಾಂಚಿ: ಬಾಂಗ್ಲಾದೇಶದಿಂದ ಅಕ್ರಮ ವಲಸೆ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಪಶ್ಚಿಮ ಬಂಗಾಳ, ವಿಧಾನಸಭೆ ಚುನಾವಣೆ ನಡೆಯುತ್ತಿರುವ ಜಾರ್ಖಂಡ್‌ನ ಹಲವು ಪ್ರದೇಶಗಳಲ್ಲಿ ಜಾರಿ ನಿರ್ದೇಶನಾಲಯದ(ಇ.ಡಿ) ಅಧಿಕಾರಿಗಳು ದಾಳಿ ನಡೆಸಿದ್ದಾರೆ. ದಾಳಿ ಕುರಿತಂತೆ ಮಾಹಿತಿ ಹಂಚಿಕೊಂಡಿರುವ ಇ.ಡಿ, ನಕಲಿ ಆಧಾರ್ ಕಾರ್ಡ್, ನಕಲಿ ಪಾಸ್‌ಪೋರ್ಟ್, ಅಕ್ರಮ ಶಸ್ತ್ರಾಸ್ತ್ರಗಳು, ಸ್ಥಿರಾಸ್ತಿ ದಾಖಲೆ ಪತ್ರಗಳು, ನಗದು, ಒಡವೆ, ಹಲವು ಯಂತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದೆ.

ವಿಶ್ವವಾಣಿ ಸಂದರ್ಶನದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ

ಚುನಾವಣೆಗಳಲ್ಲಿ ರೊಕ್ಕವೇ ಮುಖ್ಯವಾಗಿದೆ

● **ಸಂದರ್ಶನ: ರಂಜಿತ್ ಎಚ್. ಅಶ್ವತ್ಥ**

ಇಂದಿನ ಚುನಾವಣೆಗಳಲ್ಲಿ ಮೌಲ್ಯಕ್ಕಿಂತ ರೊಕ್ಕವೇ ಮುಖ್ಯವಾಗಿದೆ. ಹಣ ಕೊಟ್ಟು ವೋಟು ಹಾಕಿಸಿಕೊಳ್ಳುವ ವ್ಯಕ್ತಿ, ಐದು ವರ್ಷಗಳ ಬಳಿಕ ಮತ್ತೆ ಹಣ ಕೊಟ್ಟೇ ಗೆಲ್ಲಲು ನೋಡುತ್ತಾನೆ. ಈ ಹಣ ಪಡೆದು ವೋಟು ಹಾಕುವ, ಕೊಟ್ಟು ಹಾಕಿಸಿಕೊಳ್ಳುವ ಕೆಟ್ಟ ಸಂಸ್ಕೃತಿ ತೊಲಗುವ ತನಕ ದೇಶದಲ್ಲಿ ಪ್ರಜಾಪ್ರಭುತ್ವ ಎನ್ನುವುದು ನಾಮ್‌ಕೆವಾಸ್ತೆಯಾಗಿ ರುತ್ತದೆ ಅಷ್ಟೇ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ಹೊರ ಹಾಕಿದರು. ಇಂದಿನ ರಾಜಕೀಯ ಪರಿಸ್ಥಿತಿ, ಚುನಾವಣಾ ವ್ಯವಸ್ಥೆ ಬಗ್ಗೆ 'ವಿಶ್ವವಾಣಿ' ಯೊಂದಿಗೆ ಮಾತನಾಡಿದ ಅವರು, ಮುಂದೊಂದು ದಿನ ಕಾಲಚಕ್ರದಲ್ಲಿ ಈ ಎಲ್ಲವೂ ಬದಲಾಗಲಿದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿ ದರು. ಸಂದರ್ಶನದ ಆಯ್ದ ಭಾಗ ಇಲ್ಲಿದೆ.

● **ಪರಿಷತ್‌ಗೆ ಪ್ರವೇಶ ಪಡೆಯುತ್ತಿರುವವರ ಮೌಲ್ಯ ಕಡಿಮೆಯಾಗಿದೆ ಎನ್ನುವ ಆರೋಪವಿದೆಯಲ್ಲ?**

ವಿಧಾನ ಪರಿಷತ್ ಎನ್ನುವುದು ಚಿಂತಕರ ಚಾವಡಿ, ಹಿರಿಯರ ಮನೆ. ಸಾಹಿತಿಗಳು, ಸಿನಿಮಾ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರದ ಸಾಧಕರು ಬರಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಈ ಮೌಲ್ಯಾಧಾರಿತ ಆಯ್ಕೆ ಕಡಿಮೆಯಾಗುತ್ತಿದೆ. ಇಲ್ಲಿಯೇ ಈ ರೀತಿ ನಡೆಯುತ್ತಿದ್ದರೆ ಬೇರೆ ಕಡೆ ಏನು ಮಾಡಲು ಸಾಧ್ಯ? ದುಡ್ಡು ಕೊಟ್ಟು ವೋಟು ಪಡೆಯು ವವರು; ದುಡ್ಡು ತಗೊಂಡು ವೋಟು ಹಾಕುವ ವರು ಇರುವವರೆಗೂ ಏನೂ ಬದಲಾವಣೆ ಮಾಡಲು ಸಾಧ್ಯವಿಲ್ಲ. ರಾಮಕೃಷ್ಣ ಹೆಗಡೆ ಅವರಿದ್ದಾಗ ಮೌಲ್ಯಾಧಾರಿತ ರಾಜಕೀಯವಿತ್ತು. ಆದರೀಗ ಮೌಲ್ಯವೊಂದನ್ನು ಬಿಟ್ಟು ಬೇರೆಲ್ಲ ಇದೆ. ಮೌಲ್ಯವಿಟ್ಟುಕೊಂಡು ರಾಜಕೀಯ ನಡೆಯುತ್ತಿರುವವರು ಶೇ.3-4ರಷ್ಟು ಮಂದಿ ಇದ್ದಾರೆ. ಅವರಿಂದ ಏನೂ ಮಾಡಲು ಆಗುವುದಿಲ್ಲ. ಎಂ.ಪಿ.ಪ್ರಕಾಶ್ ಮೊದಲ ಬಾರಿಗೆ ಶಾಸಕರಾಗಿ, ಸಚಿವರಾಗಿ ಉತ್ತಮ ಕೆಲಸ ಮಾಡಿದ್ದರೂ ಎರಡನೇ ಬಾರಿಗೆ ಅವರನ್ನು ಜನ ಸೋಲಿಸಿದ್ದರು. ಜಾತಿ ಆಧಾರದಲ್ಲಿ ಸೋತಿದ್ದರು. ಇದು ವಾಸ್ತವ ಪರಿಸ್ಥಿತಿ.

ಈ ಹಿಂದೆ ಒಂದೊಂದು ರುಪಾಯಿ ಖರ್ಚು ಮಾಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದರು. ಆದರೀಗ ಸಾಲ ಮಾಡುವುದೇ ಒಂದು ಉದ್ಯೋಗವಾಗಿದೆ. ಜನರಿಗೆ ದುಡಿಯೋದೇ ಬೇಡ ಅಂದಾಗ, ಸಾಲ ಹೆಚ್ಚಾಗುತ್ತಲೇ ಹೋಗುತ್ತದೆ.
– **ಬಸವರಾಜ ಹೊರಟ್ಟಿ**, ವಿಧಾನ ಪರಿಷತ್ ಸಭಾಪತಿ

- ಇಡೀ ಸಮಾಜವನ್ನು ತಿದ್ದಬೇಕಾದ ಶಿಕ್ಷಕರೇ ಪ್ರತಿ ವೋಟಿಗೆ 10 ಸಾವಿರ ಪಡೆದಿರುವ ಉದಾಹರಣೆಗಳಿವೆ
- ಚುನಾವಣಾ ರ‍್ಯಾಲಿಯಲ್ಲಿ ಅಭಿವೃದ್ಧಿಗಿಂತ ಹೆಚ್ಚಾಗಿ ರಾಜಕೀಯ ಟೀಕೆಗಳೇ ತಾಂಡವವಾಗುತ್ತಿವೆ
- ಇಂದಿನದು ನಾಮ್‌ಕೆವಾಸ್ತೆ ಪ್ರಜಾಪ್ರಭುತ್ವ ಇದು ಸರಿ ಹೋಗಲು ಎಲ್ಲರ ಪಾತ್ರ ಅಗತ್ಯ
- ಒಮ್ಮೆ ಒಂದು ಪಕ್ಷದಿಂದ ಆಯ್ಕೆಯಾದ ಬಳಿಕ, ಆತ ಪಕ್ಷಾಂತರ ಮಾಡಲು ಮುಂದಾದರೆ ಆತ ಚುನಾವಣೆಗೇ ಸ್ಪರ್ಧಿಸುವಂತಿಲ್ಲ ಎನ್ನುವ ಕಾನೂನು ಬಂದರೆ ಮಾತ್ರ ಪಕ್ಷಾಂತರಕ್ಕೆ ಅಂಕುಶ ಬೀಳಲಿದೆ

ಸಂದರ್ಶನದ ಪೂರ್ಣಪಾಠ→ 4



ಸಮಾಚಾರ ಸಣ್ಣದಲ್ಲ

ರಾಬರಿ ಗ್ಯಾಂಗ್‌ನ ಫಹೀಮ್ ಬಂಧನ

ಬೆಂಗಳೂರು: ರಾಬರಿ ಗ್ಯಾಂಗ್‌ನ ಮಾಸ್ಟರ್‌ಮೈಂಡ್ ಫಹೀಮ್‌ನನ್ನು ಉತ್ತರ ಪ್ರದೇಶದ ಮುರ್ದಾಬಾದ್‌ನಲ್ಲಿ ಬಂಧಿಸಲಾಗಿದೆ. ಬಂಧಿತ ಆರೋಪಿ ಫಹೀಮ್ ಅಲಿಯಾಸ್ ಎಟಿಎಂ. ಇಡೀ ಭಾರತದಾದ್ಯಂತ

ಮನೆಗಳ್ಳತನ ಮಾಡುತ್ತಿದ್ದ ಫಹೀಮ್‌ಗಾಗಿ ವಿವಿಧ ರಾಜ್ಯದ ಪೊಲೀಸರು ಹುಡುಕಾಟ ನಡೆಸಿದ್ದರು. ಜೈಲು ಸೇರಿದ್ದರೂ ಕೂಡ ಪೆರೋಲ್ ಮೇಲೆ ಹೊರಬಂದು ಮತ್ತೆ ಕಳ್ಳತನಕ್ಕೆ ಇಳಿದಿದ್ದ. ಏ.24 ರಂದು ಮುಸುಕುಧಾರಿಯಾಗಿ ಬಂದು ಸಹಕಾರನಗರದಲ್ಲಿರುವ ಡಾ. ಉಮಾಶಂಕರ್ ಮನೆಗೆ ನುಗ್ಗಿ 40 ಲಕ್ಷ ರು. ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿದ್ದ. ಈ ವೇಳೆ ವೈದ್ಯನಿಗೆ ಗನ್ ತೋರಿಸಿ ಪರಾರಿಯಾಗಿದ್ದ. ಈ ಘಟನೆ ಸಂಬಂಧ ಕೊಡಿಗೇಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಆರೋಪಿಗಳ ಹುಡುಕಾಟ ನಡೆಸಿದ್ದ ಪೊಲೀಸರು ಮೂವರನ್ನು ಬಂಧಿಸಿದ್ದರು. ಇನ್ನೂ ಮೊದಲ ಆರೋಪಿ ಫಹೀಮ್‌ಗಾಗಿ ಬಲೆ ಬೀಸಿದ್ದರು. ತಲೆಮರೆಸಿಕೊಂಡಿದ್ದ ಫಹೀಮ್ ನನ್ನು ಸದ್ಯ ಮುರ್ದಾಬಾದ್ ಪೊಲೀಸರು ಬಂಧಿಸಿದ್ದಾರೆ. ಬಂಧನದ ಬಳಿಕ ಆತನ ಮನೆ ಬುಲ್ಡೋಜರ್‌ನಿಂದ ನೆಲಸಮಗೊಳಿಸಿದ್ದಾರೆ. ಈತನ ಬಂಧನದಿಂದ ದೇಶಾದ್ಯಂತ 65 ಪ್ರಕರಣಗಳು ಬೆಳಕಿಗೆ ಬಂದಿವೆ. ಬಾಡಿ ವಾರಂಟ್ ಮೇಲೆ ಕೊಡಿಗೇಹಳ್ಳಿ ಪೊಲೀಸರು ಆತನನ್ನು ವಶಕ್ಕೆ ಪಡೆಯಲು ಮುಂದಾಗಿದ್ದಾರೆ.

ಅಪಘಾತ: ಇಬ್ಬರ ದುರ್ಮರಣ

ಬೆಂಗಳೂರು: ಲಾರಿಗೆ ಬಿಎಂಟಿಸಿ ವೋಲ್ವೋ ಬಸ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ವಿಮಾನ ನಿಲ್ದಾಣ ರಸ್ತೆಯ ಮೇಲ್ಸೇತುವೆ ಮೇಲೆ ನಡೆದಿದೆ. ಅಪಘಾತದಲ್ಲಿ ಮೃತಪಟ್ಟವರ ಗುರುತು ಪತ್ತೆಯಾಗಿಲ್ಲ. ಇನ್ನೂ ಬಸ್ ಚಾಲಕ ಗಂಭೀರವಾಗಿ ಗಾಯಗೊಂಡಿದ್ದು, ಆತನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಯಲಹಂಕ ಮೇಲ್ಸೇತುವೆ ಮೇಲೆ ಇನೋವಾ ಕಾರಿಗೆ ಮೊದಲು ಸಿಮೆಂಟ್ ಲಾರಿ ಡಿಕ್ಕಿ ಹೊಡೆದಿತ್ತು. ಇದರಿಂದ ಲಾರಿ ಚಾಲಕ ಹಾಗೂ ಕಾರಿನ ಚಾಲಕ ಇಬ್ಬರು ಬಲಭಾಗದಲ್ಲಿ ನಿಲ್ಲಿಸಿಕೊಂಡು ಗಲಾಟೆ ಮಾಡುತ್ತಿದ್ದರು. ಈ ವೇಳೆ ವೇಗವಾಗಿ ಬಂದ ಬಿಎಂಟಿಸಿ ವೋಲ್ವೋ ಬಸ್ ಲಾರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಬಸ್‌ನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಅದೃಷ್ಟವಶಾತ್ ಬಸ್‌ನಲ್ಲಿ ವಿಮಾನ ನಿಲ್ದಾಣಕ್ಕೆ ಹೋಗುವ ಒಬ್ಬರೆ ಪ್ರಯಾಣಿಕರಿದ್ದ ಕಾರಣ ಹೆಚ್ಚಿನ ಅವಘಡ ಸಂಭವಿಸಿಲ್ಲ. ಈ ಸಂಬಂಧ ಯಲಹಂಕ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದೇಶಿ ಪ್ರಜೆಗಳ ಮೇಲೆ ಹಲ್ಲೆ: ಬಂಧನ

ಬೆಂಗಳೂರು: ವಿದೇಶಿ ಪ್ರಜೆಗಳಿದ್ದ ಮನೆಗೆ ನುಗ್ಗಿ ಚಾಕುವಿನಿಂದ ಹಲ್ಲೆ ನಡೆಸಿ ಸುಲಿಗೆ ಮಾಡಿದ್ದ ನಾಲ್ವರನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಭರತ್, ಗಯಾಜ್, ಅಭಿಷೇಕ್ ಹಾಗೂ ಶ್ರೇಯಸ್ ಬಂಧಿತರು. ಆರೋಪಿಗಳಿಂದ 2 ದ್ವಿಚಕ್ರ ವಾಹನ, 11 ಗ್ರಾಂ ತೂಕದ ಚಿನ್ನದ ಚೈನ್, 3 ಐಫೋನ್ ವಶಕ್ಕೆ ಪಡೆಯಲಾಗಿದೆ. ಅ. 27ರಂದು ರಾತ್ರಿ ಬಾಗಲಗುಂಟೆ ಠಾಣೆ ವ್ಯಾಪ್ತಿಯ ದೊರೆಸ್ವಾಮಿ ಪಾಳ್ಯದಲ್ಲಿ ಆಫ್ರಿಕಾ ಪ್ರಜೆಗಳು ವಾಸವಿದ್ದ ಮನೆಗೆ ನುಗ್ಗಿದ್ದ ಆರೋಪಿಗಳು ಚಾಕು ತೋರಿಸಿ, ಹಣ, ಐಫೋನ್ ಕೊಡುವಂತೆ ಬೆದರಿಸಿದ್ದರು. ನಿರಾಕರಿಸಿದಾಗ ಅವರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ, ಐಫೋನ್‌ಗಳು, 50 ಸಾವಿರ ಬೆಲೆ ಬಾಳುವ 11 ಗ್ರಾಂ ತೂಕದ ಚಿನ್ನದ ಚೈನ್, ನಗದು ಕಸಿದುಕೊಂಡು ಪರಾರಿಯಾಗಿದ್ದರು. ಪ್ರಕರಣದ ತನಿಖೆ ಕೈಗೊಂಡ ಬಾಗಲಗುಂಟೆ ಠಾಣೆ ಪೊಲೀಸರು, ಆರೋಪಿಗಳನ್ನು ಬಂಧಿಸಿದ್ದಾರೆ.

ಬರೋಬ್ಬರಿ 15.15 ಕೋಟಿ ಮೌಲ್ಯದ ವಸ್ತು ದೋಚಿ ಪರಾರಿಯಾಗಿದ್ದ ಆರೋಪಿಗಳು

ನಗ-ನಗದು ದರೋಡೆ: ಮೂವರ ಬಂಧನ

ಬೆಂಗಳೂರು: ಮಾಲೀಕನ ಪ್ರಜ್ಞೆ ತಪ್ಪಿಸಿ ಮನೆಯಲ್ಲಿದ್ದ ಚಿನ್ನಾಭರಣ, ನಗದು ದೋಚಿದ್ದ ನೇಪಾಳ ಮೂಲದ ಗ್ಯಾಂಗ್‌ನ ಮೂವರು ಆರೋಪಿಗಳನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿಗಳು

ಪ್ರಕಾಶ್, ಜಗದೀಶ್ ಹಾಗೂ ಅಘಿಲ್ ಬಂಧಿತ ಆರೋಪಿಗಳು. ಸಂಪಿಗೆ ಥಿಯೇಟರ್ ಮಾಲೀಕ ನಾಗೇಶ್ ಅವರ ಜಯನಗರದ 3ನೇ ಬ್ಲಾಕ್‌ನಲ್ಲಿರುವ ಮನೆಯಲ್ಲಿ ಅ. 21ರಂದು ಕಳ್ಳತನ ನಡೆದಿತ್ತು. ಮನೆಯಲ್ಲಿದ್ದ ಚಿನ್ನಾಭರಣ, ನಗದು ದೋಚಿ ಪರಾರಿಯಾಗಿದ್ದ ಆರೋಪಿಗಳ ವಿರುದ್ಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮಲ್ಲೇಶ್ವರದಲ್ಲಿರುವ ಸಂಪಿಗೆ ಥಿಯೇಟರ್ ಮಾಲೀಕ ನಾಗೇಶ್ ಅವರ ಮನೆಯಲ್ಲಿ 2 ವರ್ಷಗಳಿಂದಲೂ ನೇಪಾಳ ಮೂಲದ ಗಣೇಶ್ ಹಾಗೂ ಗೀತಾ ದಂಪತಿ ಕೆಲಸ ಮಾಡಿಕೊಂಡಿದ್ದರು.

ಅಕ್ಟೋಬರ್ 20ರಂದು ಸಂಬಂಧಿಕರ ಮನೆಯಲ್ಲಿ ಕಾರ್ಯಕ್ರಮವಿದ್ದಿದ್ದರಿಂದ ನಾಗೇಶ್ ಅವರನ್ನು ಹೊರತುಪಡಿಸಿ ಮನೆಯವರೆಲ್ಲರೂ ತೆರಳಿದ್ದರು. ಮನೆಯಲ್ಲಿ ಒಂಟಿಯಾಗಿದ್ದ ನಾಗೇಶ್, ಮದ್ಯಪಾನ ಮಾಡುವಾಗ ಆರೋಪಿ ದಂಪತಿ ಪ್ರಜ್ಞೆ ತಪ್ಪಿಸುವ ಔಷಧ ಬೆರೆಸಿ ಕುಡಿಸಿದ್ದರು. ಬಳಿಕ ಉಳಿದ ಆರೋಪಿಗಳ ನೆರವಿನಿಂದ ಮನೆಯಲ್ಲಿದ್ದ 2.5 ಕೆಜಿ ಚಿನ್ನ ಹಾಗೂ ಬೆಳ್ಳಿಯ ಆಭರಣಗಳು ಸೇರಿದಂತೆ 5 ಲಕ್ಷ ರೂಪಾಯಿ ನಗದು ಕದ್ದು ಪರಾರಿಯಾಗಿದ್ದರು.



ಚಿನ್ನಾಭರಣ, ನಗದು ದೋಚಿದ್ದ ಆರೋಪಿಗಳು

- ಜಯನಗರದ 3ನೇ ಬ್ಲಾಕ್‌ನಲ್ಲಿರುವ ಮನೆಯಲ್ಲಿ ಅ. 21ರಂದು ಕಳ್ಳತನ ನಡೆದಿತ್ತು
- ಆರೋಪಿಗಳ ವಿರುದ್ಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.
- ಮನೆಯಲ್ಲಿದ್ದ 2.5 ಕೆಜಿ ಚಿನ್ನ, ಬೆಳ್ಳಿಯ ಆಭರಣಗಳು ಸೇರಿದಂತೆ 5 ಲಕ್ಷ ರೂಪಾಯಿ ನಗದು ಕದ್ದು ಪರಾರಿ

ಇತ್ತೀಚೆಗೆ ಬೆಂಗಳೂರಿನ ಚಿನ್ನದ ವ್ಯಾಪಾರಿ ಮನೆಯಲ್ಲಿ ಕೆಲಸಕ್ಕಿದ್ದ ವ್ಯಕ್ತಿ ನಗದು, ಚಿನ್ನಾಭರಣ ಸೇರಿದಂತೆ ಬರೋಬ್ಬರಿ 15.15 ಕೋಟಿ ರು. ಮೌಲ್ಯದ ವಸ್ತುಗಳನ್ನು ದೋಚಿ ಪರಾರಿಯಾದ ಘಟನೆ ವಿಜಯನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿತ್ತು.

ಅರಿಹಂತ್ ಜ್ಯುವೆಲ್ಲರ್ಸ್ ಮಾಲೀಕ ಸುರೇಂದ್ರ ಕುಮಾರ್ ಜೈನ್ ಅವರು ತಮ್ಮ ಮನೆಯಲ್ಲಿ ಕಳ್ಳತನ ನಡೆದಿದೆ ದೂರು ನೀಡಿದ್ದರು. ತಮ್ಮ ಜ್ಯುವೆಲ್ಲರಿ ಸೆಕ್ಯುರಿಟಿ ಕೆಲಸಕ್ಕಿದ್ದ ನೇಪಾಳ ಮೂಲದ ನಮ್ರಾಜ್ ಎಂಬಾತನ ವಿರುದ್ಧ ವಿಜಯನಗರ ಠಾಣೆಯಲ್ಲಿ ಅವರು ದೂರು ನೀಡಿದ್ದ, ಪ್ರಕರಣ ದಾಖಲಾಗಿದೆ. ಸುರೇಂದ್ರ ಕುಮಾರ್ ಜೈನ್ ಅವರ ಅರಿಹಂತ್ ಜ್ಯುವೆಲ್ಲರ್ಸ್ ಶಾಪ್‌ನಲ್ಲಿ ನೇಪಾಳ ಮೂಲದ ನಮ್ರಾಜ್ 6 ತಿಂಗಳಿನಿಂದ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡಿಕೊಂಡಿದ್ದ.

ಉಳಿದುಕೊಳ್ಳಲು ಮನೆ ವ್ಯವಸ್ಥೆ ಇರದ ನಮ್ರಾಜ್‌ನಿಗೆ ಸುರೇಂದ್ರ ಕುಮಾರ್ ಜೈನ್ ತಮ್ಮದೇ ಮನೆಯಲ್ಲಿ ಒಂದು ರೂಮ್ ಸಹ ನೀಡಿದ್ದರು. ಜೈನ್ ಕುಟುಂಬಸ್ಥರು ಊರಿಗೆ ಹೋದಾಗ ಆರೋಪಿ ಮನೆಗೆ ಕನ್ನ ಹಾಕಿ ಪರಾರಿ ಆಗಿದ್ದಾನೆ. ಈ ಕುರಿತಂತೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಆರೋಪಿ ದಂಪತಿ ನಾಪತ್ತೆ

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಸಿಸಿಟಿವಿ ದೃಶ್ಯಗಳು ಹಾಗೂ ಮೊಬೈಲ್ ನೆಟ್‌ವರ್ಕ್ ಆಧರಿಸಿ ಹೈದರಾಬಾದ್, ಮುಂಬೈ, ಗುಜರಾತ್‌ನಲ್ಲಿ ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ 1.12 ಕೋಟಿ ರು. ಮೌಲ್ಯದ 1.6 ಕೆಜಿ ಚಿನ್ನಾಭರಣ, 450 ಗ್ರಾಂ ಬೆಳ್ಳಿಯ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಇನ್ನಿಬ್ಬರು ಆರೋಪಿ ದಂಪತಿ ನಾಪತ್ತೆಯಾಗಿದ್ದು, ಅವರ ಪತ್ತೆಕಾರ್ಯ ಮುಂದುವರಿದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕರ್ನಾಟಕ, ಆಂಧ್ರ, ತಮಿಳುನಾಡಿನಲ್ಲಿ ಆರೋಪಿ ವಿರುದ್ಧ ಹಲವು ಪ್ರಕರಣ

ಅಂತಾರಾಜ್ಯ ಮನೆಗಳ್ಳನ ಬಂಧನ

ಬೆಂಗಳೂರು: ಮನೆ ಬಾಗಿಲು ಒಡೆದು ಚಿನ್ನಾಭರಣ, ನಗದು ಕಳ್ಳತನ ಮಾಡಿದ್ದ ಅಂತಾರಾಜ್ಯ ಮನೆಗಳ್ಳನನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಗರಾಜ (68) ಬಂಧಿತ. ಆರೋಪಿಯಿಂದ 208 ಗ್ರಾಂ ಚಿನ್ನಾಭರಣ, 1.1 ಕೆಜಿ ಬೆಳ್ಳಿಯ ವಸ್ತುಗಳು, 2.5 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ. ಅ.10ರಂದು ಕೋಣನಕುಂಟೆ ಕ್ರಾಸ್‌ನಲ್ಲಿರುವ ಮನೆಯಲ್ಲಿ ಕಳ್ಳತನ ನಡೆದಿತ್ತು. ನಿವೃತ್ತಿ ಬಳಿಕ ಕಳ್ಳತನ ಮಾಡುವುದನ್ನು ಕಾಯಕ ಮಾಡಿಕೊಂಡಿದ್ದನು. ಈತನ ವಿರುದ್ಧ ಆಂಧ್ರ, ತಮಿಳುನಾಡು ಮತ್ತು ಬೆಂಗಳೂರಿನಲ್ಲಿ 30 ಪ್ರಕರಣ ದಾಖಲಾಗಿವೆ. ಆರೋಪಿ ಬಸ್‌ನಲ್ಲಿ ಬಂದು ಮನೆಗಳ್ಳತನ ಮಾಡಿ ಪರಾರಿಯಾಗುತ್ತಿದ್ದ. ಇದೀಗ, ಪೊಲೀಸರು ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೇಕರಿ ಮಾಲೀಕನ ಮನೆಯಲ್ಲಿ ಕಳವು ಬೇಕರಿ ನಡೆಸುತ್ತಿದ್ದ ಮನೆ ಮಾಲೀಕ ಆಯುಧಪೂಜೆ ಹಬ್ಬದ ನಿಮಿತ್ತ ಸ್ವೀಟ್ಸ್ ಆರ್ಡರ್ ಹೆಚ್ಚಿದ್ದ ಕಾರಣ ಅ.10ರಂದು ರಾತ್ರಿ ಮನೆಗೆ ಬಂದಿರಲಿಲ್ಲ. ಮಾರನೇ ದಿನ ಮನೆಗೆ ಬಂದು ನೋಡಿದಾಗ ಮನೆಯ ಬಾಗಿಲು ಒಡೆದು, ಕೊಠಡಿ ಬೀರುವಿನಲ್ಲಿಟ್ಟಿದ್ದ 182 ಗ್ರಾಂ ಚಿನ್ನಾಭರಣ, 200 ಗ್ರಾಂ ಬೆಳ್ಳಿ ವಸ್ತುಗಳು ಮತ್ತು 5 ಲಕ್ಷ ನಗದು ಹಣ ಕದ್ದೊಯ್ಯಲಾಗಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಅ. 28ರಂದು ಅತ್ತಿಬೆಲೆ ಬಸ್ ನಿಲ್ದಾಣದ ಬಳಿ ಆರೋಪಿಯನ್ನು ಬಂಧಿಸಿದ್ದರು. ವಿಚಾರಣೆಗೊಳಪಡಿಸಿದಾಗ ಆತ ಕಳವು ಮಾಡಿದ್ದ ಚಿನ್ನಾಭರಣ, ಬೆಳ್ಳಿಯ ವಸ್ತುಗಳು ಹಾಗೂ ನಗದು ಹಣವನ್ನು ಸ್ನೇಹಿತ ಹಾಗೂ ಭಾವಮೈದುನನಿಗೆ ನೀಡಿದ್ದಾಗಿ ಬಾಯ್ಬಿಟ್ಟಿದ್ದ. ಬಂಧಿತನ ವಿರುದ್ಧ ಕರ್ನಾಟಕ ಹಾಗೂ ಅಕ್ಕಪಕ್ಕದ ರಾಜ್ಯಗಳ ವಿವಿಧ ಠಾಣೆಗಳಲ್ಲಿ 30ಕ್ಕೂ ಅಧಿಕ ಪ್ರಕರಣ ದಾಖಲಾಗಿದ್ದವು.

31 ಸಾವಿರ ರು.ಪಾವತಿ ಬಗ್ಗೆ ನಕಲಿ ಚಿತ್ರ ತೋರಿಸಿ ವಂಚನೆ ಪ್ರಕರಣ ವಿಮಾ ಕಂಪನಿಯ ಉದ್ಯೋಗಿ, ಸಿಎ ಬರೆಯಲು ಸಜ್ಜಾಗಿದ್ದ ಯುವತಿ

ಬಟ್ಟೆ ಖರೀದಿಸಿ ನಕಲಿ ಪಾವತಿ ಖತರ್ನಾಕ್ ಯುವತಿ ಬಂಧನ

ಬೆಂಗಳೂರು: ನಗರದ ಪ್ರತಿಷ್ಠಿತ ಬಟ್ಟೆ ಶೋ ರೂಮ್‌ನಲ್ಲಿ 31 ಸಾವಿರ ರೂ. ಮೌಲ್ಯದ ಬಟ್ಟೆ ಖರೀದಿಸಿ, ನಂತರ ಆನ್‌ಲೈನ್ ಮೂಲಕ ಹಣ ಪಾವತಿಯಾಗಿದೆ ಎಂದು ನಕಲಿ ಫೋಟೋ ತೋರಿಸಿ ವಂಚಿಸಿದ್ದ ಯುವತಿಯನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೊಡ್ಡಬಳ್ಳಾಪುರದ ರಶ್ಮಿ (25) ಬಂಧಿತೆ. ಆರೋಪಿ ಸದಾಶಿವನಗರದ ಆರ್‌ಎಂವಿ ಎಕ್ಸ್‌ಟೆನ್ಷನ್‌ನಲ್ಲಿರುವ ವಸಿಷ್ಠ ಬೊಟಿಕ್ ಎಂಬ ಬಟ್ಟೆ ಶೋ ರೂಮ್‌ನಲ್ಲಿ ಅ.29ರಂದು 31,800 ರು. ಮೌಲ್ಯದ ಬಟ್ಟೆ ಖರೀದಿಸಿ ವಂಚಿಸಿದ್ದಳು. ಶೋ ರೂಮ್‌ನ ಡಿಸೈನರ್ ಸಂಪದ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ರಶ್ಮಿ ನಗರದ ವಿಮಾ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಜತೆಗೆ ಚಾರ್ಟೆಡ್ ಅಕೌಂಟೆಂಟ್ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಾಳೆ. ಅ.29ರಂದು ಮಧ್ಯಾಹ್ನ ವಸಿಷ್ಠ ಬಟ್ಟೆ ಶೋ ರೂಮ್‌ಗೆ ಬಂದಿದ್ದಾಳೆ. ಡಿಸೈನರ್ ಸಂಪದ ಅವರಿಂದ 31,800 ರು. ಮೌಲ್ಯದ ಬಟ್ಟೆಗಳನ್ನು ಖರೀದಿಸಿ, ಸ್ನೇಹಾ ಎಂಬ ಹೆಸರಿನಲ್ಲಿ ಬಿಲ್ ಮಾಡಿಸಿದ್ದಾಳೆ. ಬಳಿಕ ಶೋರೂಮ್‌ನಲ್ಲಿದ್ದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹಣ ಪಾವತಿ ಮಾಡಿರುವುದಾಗಿ ಮೊಬೈಲ್‌ನ ಸ್ಕ್ರೀನ್ ಶಾಟ್ ತೋರಿಸಿದ್ದಾಳೆ. ಆದರೆ, ಶೋರೂಮ್ ಬ್ಯಾಂಕ್ ಖಾತೆಗೆ ಹಣ ಸಂದಾಯವಾಗಿರಲಿಲ್ಲ. ಅಲ್ಲದೆ, ಸಿಬ್ಬಂದಿ ಸಂಪದ ಕೂಡ ಹಣ ಪಾವತಿಯಾಗಿಲ್ಲ ಎಂದಿದ್ದಾರೆ. ಆಗ ರಶ್ಮಿ ಹಣ ಪಾವತಿಯಾಗಿದೆ ಎಂದು ಮತ್ತೊಮ್ಮೆ ತನ್ನ ಮೊಬೈಲ್‌ನಲ್ಲಿ ಫೋಟೋ ತೋರಿಸಿದ್ದಾಳೆ. ಈ ವೇಳೆ ಸಿಬ್ಬಂದಿ ಸಂಪದ ಶೋ ರೂಮ್‌ನ ಮಾಲೀಕರಿಗೆ ಕರೆಮಾಡಿ ವಿಚಾರ ತಿಳಿಸಿದ್ದಾರೆ. ಆಗ ಮಾಲೀಕರು ಸದ್ಯ ಹಣ ಸಂದಾಯವಾಗಿಲ್ಲ, ತಡವಾಗಿ ಹಣ ಸಂದಾಯವಾಗಬಹುದು. ಗ್ರಾಹಕರ ಮೊಬೈಲ್ ಸಂಖ್ಯೆ ಪಡೆದು ಕಳುಹಿಸಿಕೊಡುವಂತೆ ಹೇಳಿದ್ದಾರೆ. ಅದರಂತೆ ಸಂಪದ, ರಶ್ಮಿ ಮೊಬೈಲ್ ಸಂಖ್ಯೆ ಪಡೆದು ಕಳುಹಿಸಿದ್ದಾರೆ.

ಬ್ಯಾಂಕ್ ಖಾತೆಗೆ ಸಂದಾಯವಾಗದ ಹಣ; ದೂರು: ಸಂಜೆಯಾದರೂ ಶೋರೂಮ್ ಬ್ಯಾಂಕ್ ಖಾತೆಗೆ ಹಣ ಬಂದಿಲ್ಲ. ಬಳಿಕ ರಶ್ಮಿ ನೀಡಿದ್ದ ಮೊಬೈಲ್ ಸಂಖ್ಯೆಗೆ ವಾಟ್ಸ್ ಆ್ಯಪ್ ಸಂದೇಶ ಕಳುಹಿಸಿದರೂ ಪ್ರತಿಕ್ರಿಯೆ ಬಂದಿಲ್ಲ. ಹಲವು ಬಾರಿ ಕರೆ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಮರುದಿನ ಮತ್ತೊಮ್ಮೆ ಕರೆ ಮಾಡಿದಾಗ, ಪುರುಷನೊಬ್ಬ ಕರೆ ಸ್ವೀಕರಿಸಿ ರಾಂಗ್ ನಂಬರ್ ಎಂದು ಕರೆ ಸ್ಥಗಿತಗೊಳಿಸಿದ್ದಾನೆ. ಬಳಿಕ ತಾವು ವಂಚನೆಗೊಳಗಾಗಿರುವುದು ಗೊತ್ತಾಗಿ ಠಾಣೆಗೆ ದೂರು ನೀಡಿದ್ದಾರೆ. ಈ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಶವಗಳ ಕಣ್ಣು, ಮೂಗು ಇಲಿ ಪಾಲು

ಬೆಂಗಳೂರು: ನಗರದ ಪ್ರತಿಷ್ಠಿತ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಿದ್ದ ಮೃತದೇಹದ ಭಾಗಗಳನ್ನು ಇಲಿಗಳು ಕಚ್ಚಿ ತಿಂದಿರುವ ಘಟನೆ ನಡೆದಿದೆ. ಕುಟುಂಬದ ವ್ಯಕ್ತಿ ಸಾವನ್ನಪ್ಪಿದ್ದಾರೆ ಎಂಬ ನೋವಿನ ಜತೆಗೆ ಈಗ ಮುಖವನ್ನು ಇಲಿಗಳು ತಿಂದು ವಿರೂಪವಾಗಿ ನೋಡುವ ನೋವು ಕುಟುಂಬದ ಸದಸ್ಯರಿಗೆ ಎದುರಾಗಿದೆ. ಸೋಮವಾರ ಸಂಜೆ ಸಾವನ್ನಪ್ಪಿದ್ದ ವ್ಯಕ್ತಿಯ ಮೃತದೇಹವನ್ನು ನಗರದ ಕೆಜಿ ಹಳ್ಳಿಯ ಅಂಬೇಡ್ಕರ್ ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿ ಇಡಲಾಗಿತ್ತು. ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದರೂ ಮೂಗು, ಕಣ್ಣಿನ ರೆಪ್ಪೆಯನ್ನು ಇಲಿಗಳು ತಿಂದಿವೆ.

ರಂಗಸ್ವಾಮಿ (37) ಹರ್ನಿಯಾ ಸಮಸ್ಯೆಯಿಂದ ಶೇಷಾದ್ರಿಪುರದ ಖಾಸಗಿ ಆಸ್ಪತ್ರೆಗೆ ದಾಖಲಿಸಗಾಗಿತ್ತು. ಆಪರೇಷನ್ ಸಂದರ್ಭದಲ್ಲಿ ಸಮಸ್ಯೆ ಆದ ಕಾರಣ ಕೆಜಿ ಹಳ್ಳಿಯ ಅಂಬೇಡ್ಕರ್ ಮೆಡಿಕಲ್ ಕಾಲೇಜಿಗೆ ಕಳುಹಿಸಲಾಗಿತ್ತು. ಅಲ್ಲಿಗೆ ಬರುವ ಹೊತ್ತಿಗೆ ಅವರ ಪ್ರಾಣ ಹೋದಂತೆ ಆಗಿತ್ತು. ಖಾಸಗಿ ಆಸ್ಪತ್ರೆಯಲ್ಲೇ ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಮೃತ ರಂಗಸ್ವಾಮಿಯ ಅಣ್ಣ ಆರೋಪಿಸಿದ್ದಾರೆ.

ಬಳಿಕ ಅಂಬೇಡ್ಕರ್ ಮೆಡಿಕಲ್ ಕಾಲೇಜಿಗೆ ಅವರನ್ನು ದಾಖಲಿಸಲಾಗಿತ್ತು. ಕೆಲ ಹೊತ್ತಲೇ ಅವರು ಸಾವನ್ನಪ್ಪಿದ್ದಾರೆ. ಸಣ್ಣ ಶಸ್ತ್ರಚಿಕಿತ್ಸೆಯಲ್ಲೂ ನಿರ್ಲಕ್ಷ್ಯ ಮಾಡಿದ ವೈದ್ಯರ ವಿರುದ್ಧ ದೂರು ಕೊಡಲು ಶವಾಗಾರದಲ್ಲೇ ದೇಹ ಇರಿಸಲು ಕುಟುಂಬ ತೀರ್ಮಾನಿಸಿತ್ತು. ದೂರು ಕೊಟ್ಟು ಬರುವ ಹೊತ್ತಿಗೆ ಮುಖ ವಿಕಾರವಾಗಿತ್ತು. ಇಲಿಗಳು ಕಣ್ಣಿನ ರೆಪ್ಪೆ ಹಾಗೂ ಮೂಗನ್ನು ತಿಂದುಹಾಕಿದ್ದವು. ಇದನ್ನು ಆಸ್ಪತ್ರೆಯವರು ಒಪ್ಪಿಕೊಂಡಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು, ನಮಗೆ ನ್ಯಾಯ ಬೇಕು ಎಂದು ಕುಟುಂಬದವರು ಆಗ್ರಹಿಸಿದ್ದಾರೆ.

64 ಜನರ ಬಂಧನ, 140 ಕೆಜಿ ಗಾಂಜಾ ಜಪ್ತಿ

ಬೆಂಗಳೂರು: ಕಳೆದ 1 ತಿಂಗಳಲ್ಲಿ 42 ಗಾಂಜಾ , ಡ್ರಗ್ಸ್ ಪ್ರಕರಣ ದಾಖಲಾಗಿ 10 ವಿದೇಶಿ ಪ್ರಜೆ ಸೇರಿ 64 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಅವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಂಧಿತರಿಂದ 140 ಕೆಜಿ ಗಾಂಜಾ, 1 ಕೆಜಿ ಗಾಂಜಾ ಆಯಿಲ್, 609 ಗ್ರಾಂ ಆಫೀಮು, 770 ಗ್ರಾಂ ಹೆರಾಯಿನ್, 2ಕೆಜಿ 436 ಗ್ರಾಂ ಚರಸ್, 509 ಗ್ರಾಂ ಕೊಕೇನ್, 5 ಕೆಜಿ 397 ಗ್ರಾಂ ಎಂಡಿಎಂಎ, 2569 ಎಲ್‌ಎಸ್‌ಡಿ ಸ್ಟ್ರಿಪ್, 6 ಕೆಜಿ 725 ಗ್ರಾಂ ಅಂಫಟಮೈನ್, 11,908 ಎಕ್ಸ್‌ಟೆಸಿ ಮಾತ್ರೆ ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

ಸಿಸಿಬಿ ಅಧಿಕಾರಿಗಳ ವಿರುದ್ಧ ಕೇಳಿಬಂದಿರುವ ಆರೋಪ ವಿಚಾರವಾಗಿ ಮಾತನಾಡಿದ ದಯಾನಂದ, ರೇವ್ ಪಾರ್ಟಿ ಕೇಸ್‌ನಲ್ಲಿ ತನಿಖೆ ನಡೆಸಿರುವ ಸಿಸಿಬಿ, ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ. ಸಿಸಿಬಿ ಅಧಿಕಾರಿಗಳು ತನಿಖೆ ನಡೆಸಿದ್ದಾರೆ. ತನಿಖೆ ನಡೆಸಿದ ಅಧಿಕಾರಿಗಳ ವಿರುದ್ಧ ಆರೋಪಿಸಿ ದೂರುಗಳನ್ನು ನೀಡಿದ್ದಾರೆ. ಬಂದ ದೂರುಗಳ ತನಿಖೆ ಬೇರೆ ಬೇರೆ ಸಂಸ್ಥೆಗಳು ನಡೆಸುತ್ತಿವೆ. ಆರೋಪಿಗಳು ತನಿಖೆಯ ದಿಕ್ಕು ತಪ್ಪಿಸಲು ಈ ರೀತಿ ಮಾಡಿದ್ದಾರೆ ಎಂದರು.

ಟಾಕ್ಸಿಕ್ ಸಿನಿಮಾ ಸೆಟ್‌ಗೆ ಮರಗಳ ಕಡಿತ: ಎಫ್‌ಐಆರ್ ದಾಖಲು

ಬೆಂಗಳೂರು: ಯಶ್ ನಟನೆಯ ಟಾಕ್ಸಿಕ್ ಸಿನಿಮಾ ಸೆಟ್‌ಗೆ ಮರಗಳನ್ನು ಕಡಿದ ಆರೋಪದ ಮೇಲೆ ಅರಣ್ಯ ಇಲಾಖೆ ಎಫ್‌ಐಆರ್ ದಾಖಲಿಸಿದೆ. ನ್ಯಾಯಾಲಯದ ಆದೇಶ ಪಡೆದು ಅರಣ್ಯ ಇಲಾಖೆ ಎಫ್‌ಐಆರ್ ದಾಖಲಿಸಿದೆ. ಈ ಸಂಬಂಧ ಕೆವಿನ್ ಸಂಸ್ಥೆ, ಕೆನರಾ ಬ್ಯಾಂಕ್ ಜನರಲ್ ಮ್ಯಾನೇಜರ್, ಎಚ್‌ಎಂಟಿ ಜನರಲ್ ಮ್ಯಾನೇಜರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಮರಗಳ ಮಾರಣಹೋಮದ ಆರೋಪ ಕೇಳಿ ಬಂದಿದ್ದ ಬೆನ್ನಲ್ಲೇ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಥಳ ಪರಿಶೀಲನೆ ನಡೆಸಿದ್ದರು. ಆರೋಪ ಸಾಬೀತಾದಲ್ಲಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮದ ಎಚ್ಚರಿಕೆ ನೀಡಿದ್ದರು. ಎಚ್‌ಎಂಟಿ ವಶದಲ್ಲಿರುವ ಅರಣ್ಯ ಭೂಮಿಯಲ್ಲಿ ಟಾಕ್ಸಿಕ್ ಚಲನಚಿತ್ರದ ಚಿತ್ರೀಕರಣಕ್ಕಾಗಿ ನೂರಾರು ಮರಗಳನ್ನು ಅಕ್ರಮವಾಗಿ ಕಡಿದು ಹಾನಿಗೊಳಿಸಿದ ವಿಚಾರ ಗಂಭೀರ ಚಿಂತೆ ಮೂಡಿಸಿದೆ. ಉಪಗ್ರಹ ಚಿತ್ರಗಳಿಂದ ಈ ಕೃತ್ಯ ಸ್ಪಷ್ಟವಾಗಿ ಕಾಣುತ್ತಿದೆ. ಈ ಅಕ್ರಮ ಕೃತ್ಯಕ್ಕೆ ಹೊಣೆಗಾರರ ವಿರುದ್ಧ ತಕ್ಷಣವೇ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ ಎಂದು ಸಚಿವರು ಈ ಹಿಂದೆ ತಿಳಿಸಿದ್ದರು.

ಅಲ್ ಖೈದಾ ಪರ ಬಾಂಗ್ಲಾ ಪ್ರಜೆಗಳಿಂದ ಅಕ್ರಮ ಚಟುವಟಿಕೆ

ರಾಜ್ಯಗಳಲ್ಲಿ ಎನ್‌ಐಎ ದಾಳಿ: ಹಲವು ಸಾಕ್ಷ್ಯ ಲಭ್ಯ

ಬೆಂಗಳೂರು: ಅಲ್‌ಖೈದಾದ ಸಂಚಿನ ಭಾಗವಾಗಿ ಬಾಂಗ್ಲಾದೇಶಿ ಪ್ರಜೆಗಳಿಂದ ಅಕ್ರಮ ಚಟುವಟಿಕೆ ಪ್ರಕರಣ ಸಂಬಂಧ ದೇಶಾದ್ಯಂತ ಅನೇಕ ಸ್ಥಳಗಳಲ್ಲಿ ಎನ್‌ಐಎ ಅಧಿಕಾರಿಗಳು ಏಕಕಾಲದಲ್ಲಿ ಶೋಧ ನಡೆಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಪಶ್ಚಿಮ ಬಂಗಾಳ, ಬಿಹಾರ, ತ್ರಿಪುರಾ ಮತ್ತು ಅಸ್ಸಾಂ ರಾಜ್ಯಗಳ 9 ಸ್ಥಳಗಳಲ್ಲಿ ದಾಳಿ ನಡೆಸಿರುವ ಎನ್‌ಐಎ ಅಧಿಕಾರಿಗಳು ಬಾಂಗ್ಲಾದೇಶ ಮೂಲದ ಅಲ್-ಖೈದಾ ನೆಟ್ ವರ್ಕ್ ಬೆಂಬಲಿಸುವ ಮತ್ತು ಆರ್ಥಿಕ ನೆರವು ನೀಡುತ್ತಿದ್ದ ಶಂಕಿತ ವ್ಯಕ್ತಿಗಳನ್ನು ವಶಕ್ಕೆ ಪಡೆದಿದ್ದಾರೆ. ಶೋಧದ ಸಂದರ್ಭದಲ್ಲಿ ಭಯೋತ್ಪಾದಕ ನಿಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಬ್ಯಾಂಕ್ ವ್ಯವಹಾರದ ದಾಖಲೆ, ಮೊಬೈಲ್ ಫೋನ್‌ಗಳು, ಡಿಜಿಟಲ್ ಸಾಧನಗಳು ಮತ್ತು ಇತರ ಪುರಾವೆಗಳನ್ನು ವಶಕ್ಕೆ

ಪಡೆಯಲಾಗಿದೆ ಎಂದು ಎನ್‌ಐಎ ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ ಖೈದಾಗೆ ಹಣ ಸಂಗ್ರಹ: ಬಂಧಿತ ಆರೋಪಿಗಳು ತಮ್ಮ ಉಗ್ರ ಚಟುವಟಿಕೆಗಳನ್ನು ಗೌಪ್ಯವಾಗಿ ನಡೆಸಲು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದರು ಎಂಬುದು ಎನ್‌ಐಎ ತನಿಖೆಯಿಂದ ತಿಳಿದು ಬಂದಿತ್ತು. ಉಗ್ರ ಚಟುವಟಿಕೆ ನಡೆಸಲು ಭಾರತದಲ್ಲಿನ ಮುಸ್ಲಿಂ ಯುವಕರನ್ನು ಪ್ರೇರೇಪಿಸುವಲ್ಲಿ ಬಂಧಿತರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಜತೆಗೆ ಅಲ್‌ಖೈದಾದ ಹಿಂಸಾತ್ಮಕ ಸಿದ್ಧಾಂತ ಪ್ರಚಾರ ಮಾಡುತ್ತಿದ್ದರು. ಅಲ್-ಖೈದಾಗೆ ಹಣ ಸಂಗ್ರಹಿಸಿ ಕಳುಹಿಸುತ್ತಿದ್ದರು. ಆರೋಪಿಗಳು ತಮ್ಮ ಚಟುವಟಿಕೆಗಳನ್ನು ಗೌಪ್ಯವಾಗಿ ನಡೆಸಲು ನಕಲಿ ದಾಖಲೆ ಸೃಷ್ಟಿಸುತ್ತಿದ್ದರು ಎಂದು ಎನ್‌ಐಎ ಮಾಹಿತಿ ನೀಡಿದೆ.

ಪ್ರಕರಣದ ಹಿನ್ನೆಲೆ

2023ರಲ್ಲಿ ಬಾಂಗ್ಲಾದೇಶ ಮೂಲದ ಅಲ್‌ಖೈದಾ ಕಾರ್ಯಕರ್ತರು ಭಾರತವನ್ನು ಅಸ್ಥಿರಗೊಳಿಸುವ ಉದ್ದೇಶದ ಭಾಗವಾಗಿ ಪಿತೂರಿ ನಡೆಸುತ್ತಿರುವುದರ ಕುರಿತು ಎನ್‌ಐಎ ಪ್ರಕರಣ ದಾಖಲಿಸಿಕೊಂಡಿತ್ತು. ಕಳೆದ ವರ್ಷ ನವೆಂಬರ್‌ನಲ್ಲಿ ಬಾಂಗ್ಲಾದೇಶಿ ಪ್ರಜೆಗಳಾದ ಮೊಹಮದ್ ಸೋಜಿಬ್ ಮಿಯಾನ್, ಮುನ್ನಾ ಖಾಲಿದ್ ಅನ್ಸಾರಿ ಅಲಿಯಾಸ್ ಮುನ್ನಾ ಖಾನ್, ಅಜರುಲ್ ಇಸ್ಲಾಂ ಅಲಿಯಾಸ್ ಜಹಾಂಗೀರ್ ಅಥವಾ ಆಕಾಶ್ ಖಾನ್, ಅಬ್ದುಲ್ ಲತೀಫ್ ಅಲಿಯಾಸ್ ಮೊಮಿನುಲ್ ಅನ್ಸಾರಿ ಹಾಗೂ ಭಾರತೀಯ ಪ್ರಜೆ ಫರೀದ್ ವಿರುದ್ಧ ಎನ್‌ಐಎ ಅಧಿಕಾರಿಗಳು ಚಾರ್ಜ್‌ಶೀಟ್ ಸಲ್ಲಿಸಿದ್ದರು. ತಮ್ಮ ಚಟುವಟಿಕೆಗಳನ್ನು ಗೌಪ್ಯವಾಗಿ ನಡೆಸಲು ನಕಲಿ ದಾಖಲೆಗಳನ್ನು ಸಂಗ್ರಹಿಸಿದ್ದ ಆರೋಪಿಗಳು ಭಾರತದಲ್ಲಿ ಮುಸ್ಲಿಂ ಯುವಕರನ್ನು ಒಗ್ಗೂಡಿಸಿ ಅಲ್‌ಖೈದಾದ ಹಿಂಸಾತ್ಮಕ ಸಿದ್ಧಾಂತದೆಡೆಗೆ ಅವರನ್ನು ಪ್ರೇರೇಪಿಸುವಲ್ಲಿ ಸಕ್ರಿಯವಾಗಿದ್ದರು. ಮತ್ತು ಹಣ ಸಂಗ್ರಹಿಸಿ ಸಂಘಟನೆಗೆ ವರ್ಗಾಯಿಸುತ್ತಿದ್ದರು ಎಂದು ಎನ್‌ಐಎ ತನಿಖೆ ವೇಳೆ ತಿಳಿದು ಬಂದಿತ್ತು.

ಎಚ್‌ಎಂಟಿ ಅರಣ್ಯಭೂಮಿ ಪ್ರಕರಣ: ಖಂಡ್ರೆ ಸೂಚನೆ

ನಾಲ್ವರು ಐಎಫ್‌ಎಸ್ ಅಧಿಕಾರಿಗಳಿಗೆ ನೋಟಿಸ್

ಬೆಂಗಳೂರು: ಎಚ್‌ಎಂಟಿ ವಶದಲ್ಲಿರುವ ಅರಣ್ಯ ಭೂಮಿಯು ಅರಣ್ಯ ಸ್ವರೂಪ ಕಳೆದುಕೊಂಡಿದೆ ಎಂಬ ಕಾರಣ ನೀಡಿ ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿ, ಡಿನೋಟಿಫಿಕೇಶನ್‌ಗೆ ಅನುಮತಿ ಕೋರಿದ್ದ ಐಎಫ್‌ಎಸ್ ಅಧಿಕಾರಿಗಳಿಗೆ ಅರಣ್ಯ ಸಚಿವ

ಈಶ್ವರ್ ಖಂಡ್ರೆ ನೋಟಿಸ್ ನೀಡಲು ಸೂಚಿಸಿದ್ದಾರೆ.

ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಸಂದೀಪ್ ದವೆ, ಪ್ರಧಾನ ಕಾರ್ಯದರ್ಶಿಯಾಗಿದ್ದ ವಿಜಯ್‌ಕುಮಾರ್ ಗೋಗಿ ಹಾಗೂ ಐಟಿಸಿ ವಿಭಾಗದ ಈಗಿನ ಹೆಚ್ಚುವರಿ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಸ್ಮಿತಾ ಬಿಜೂರ್, ತಾಂತ್ರಿಕ ಕೋಶದ ಅಧಿಕಾರಿ ಆರ್.ಗೋಕುಲ್‌ಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 2020ರಲ್ಲಿ ನಡೆದ ಸಭೆಯಲ್ಲಿ 1980ರ ಪೂರ್ವದದಲ್ಲಿ ವಿವಿಧ ಸರಕಾರಿ ಸಂಸ್ಥೆಗಳಿಗೆ ನೀಡಿದ್ದ ಜಮೀನು ಮಂಜೂರಾತಿಗಳ ಬಗ್ಗೆ ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ಪಡೆದು ಅರಣ್ಯ ಪ್ರದೇಶಗಳ ಡಿನೋಟಿಫಿಕೇಶನ್ ಪ್ರಸ್ತಾವವನ್ನು ಸಚಿವ ಸಂಪುಟದ ನಿರ್ಧಾರಕ್ಕಾಗಿ ಸಲ್ಲಿಸಲು ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಲಾಗಿತ್ತು. ಆದರೆ ಸಂಪುಟದ ಗಮನಕ್ಕೆ ತಾರದೇ ಡಿನೋಟಿಫಿಕೇಶನ್‌ಗೆ ಅನುಮತಿ ಕೋರಿ ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ. ಇದು ಕರ್ನಾಟಕ ಸರಕಾರದ ಕಾರ್ಯ ಕಲಾಪಗಳ ನಿರ್ವಹಣಾ ನಿಯಮಾವಳಿ 1977ರ ಉಲ್ಲಂಘನೆ ಎಂದು ನೋಟಿಸ್‌ನಲ್ಲಿ ಪ್ರಶ್ನಿಸಲಾಗಿದೆ.

ನಿಯಮ ಪಾಲಿಸದ ಅಧಿಕಾರಿಗಳಿಗೆ ನೋಟಿಸ್

ಸುಪ್ರೀಂಕೋರ್ಟ್ ನಿರ್ದೇಶನದಂತೆ ಅನ್ಯ ಉದ್ದೇಶಕ್ಕೆ ಭೂ ಪರಿವರ್ತನ ಆಗದ ಹೊರತು ಒಮ್ಮೆ ಅರಣ್ಯ ಎಂದು ನಮೂದಾದ ಭೂಮಿ ಅರಣ್ಯವೇ ಆಗಿರುತ್ತದೆ. ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿ ಅರಣ್ಯ ಭೂಮಿ ಅರಣ್ಯೇತರ ಬಳಕೆಗೆ ಪರಿಹಾರ ಭೂಮಿ ಒದಗಿಸುವಾಗ ಮೊತ್ತ ಪಾವತಿಸಿ ಕಡ್ಡಾಯವಾಗಿ ಅನುಮತಿ ಪಡೆಯಬೇಕಾಗುತ್ತದೆ. ಅನುಮತಿ ನೀಡಿದರೂ ಅರಣ್ಯ ಭೂಮಿ ಗುತ್ತಿಗೆ ಮಾತ್ರ ನೀಡಬೇಕು. ಗುತ್ತಿಗೆ ಅವಧಿ ಮುಗಿದ ಬಳಿಕ ಅರಣ್ಯ ಇಲಾಖೆಗೆ ಮರಳಿ ಪಡೆಯಬೇಕಾಗುತ್ತದೆ. ಆದರೂ, ನಾಲ್ವರು ಅಧಿಕಾರಿಗಳು ನಿಯಮ ಏಕೆ ಪಾಲಿಸಲಿಲ್ಲ ಎಂದು ನೋಟಿಸ್ ಮೂಲಕ ಪ್ರಶ್ನಿಸಲಾಗಿದೆ.

ಜಡ್ಜ್ ವಿರುದ್ಧ ಪೋಸ್ಟ್ ಪ್ರಕರಣ ರದ್ದತಿಗೆ ಹೈ ನಕಾರ

ಬೆಂಗಳೂರು: ನ್ಯಾಯಾಧೀಶರ ಬಗ್ಗೆ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ ಆರೋಪದ ಮೇಲೆ ರಾಮನಗರದ ವಕೀಲ ಚಾನ್ ಪಾಷಾ ಐಜೂರ್ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ವಕೀಲ ಚಾನ್ ಪಾಷಾ ಐಜೂರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಆರೋಪಗಳನ್ನು ಕೈಬಿಡುವಂತೆ ಕೋರಿ ವಿಚಾರಣಾ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಬಹುದು. ಆದರೆ, ನಾನು(ಪೀಠ)ಎಫ್‌ಐಆರ್ ರದ್ದುಪಡಿಸು ವುದಿಲ್ಲ. ಕೊನೆಪಕ್ಷ ಎಫ್‌ಐಆರ್‌ಗೆ ತಡೆಯಾಜ್ಞೆಯೂ ನೀಡುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿ ಅರ್ಜಿ ಇತ್ಯರ್ಥಪಡಿಸಿದರು.

ಪೋಸ್ಟ್‌ನಲ್ಲಿ ಭಯಾನಕ ಪದಗಳ ಬಳಕೆ: ಅರ್ಜಿದಾರರ ಪರ ವಕೀಲರು ಹಾಜರಾಗಿ ಎಫ್‌ಐಆರ್ ತಡೆ ನೀಡಲು ಕೋರಿದಾಗ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, ನಾನು ಅರ್ಜಿದಾರರ ವಿರುದ್ಧದ ಎಫ್‌ಐಆರ್‌ಗೆ ತಡೆ ನೀಡುವುದೇ ಇಲ್ಲ. ಪೋಸ್ಟ್‌ನಲ್ಲಿ ಭಯಾನಕ ಪದಗಳನ್ನು ಬಳಕೆ ಮಾಡಿದ್ದಾರೆ ಎಂದು ಪೀಠ ತಿಳಿಸಿತು. ಅರ್ಜಿದಾರನ ಪರ ವಕೀಲರು, ಚಾನ್ ಪಾಷಾ ರಾಮನಗರದಲ್ಲಿ ಒಬ್ಬ ವಕೀಲರಾಗಿದ್ದಾರೆ. ಪ್ರಕರಣ ಕುರಿತಂತೆ ಅವರು ಸಹ ಪೊಲೀಸರಿಗೆ ದೂರು ನೀಡಿದ್ದಾರೆ. ತಮ್ಮ ಫೇಸ್‌ಬುಕ್ ಖಾತೆ ಯಾರಿಂದಲೋ ಹ್ಯಾಕ್ ಆಗಿದೆ. ಹ್ಯಾಕ್ ಮಾಡಿದವರು ಖಾತೆ ದುರ್ಬಳಕೆ ಮಾಡಿದ್ದಾರೆ ಎಂಬುದಾಗಿ ದೂರಿನಲ್ಲಿ ತಿಳಿಸಿದ್ದಾರೆ ಎಂದು ವಿವರಿಸಿದರು. ವಾದ ತಿರಸ್ಕರಿಸಿದ ಪೀಠ, ಅರ್ಜಿದಾರರು ವಿಚಾರಣಾ ನ್ಯಾಯಾಲಯದ ಮುಂದೆಯೇ ಆರೋಪಗಳನ್ನು ಕೈಬಿಡಲು ಕೋರಿ ಅರ್ಜಿ ಸಲ್ಲಿಸಿಎಂದು ಅರ್ಜಿದಾರ ಪರ ವಕೀಲರಿಗೆ ಸೂಚಿಸಿತು.

ಪ್ರಕರಣದ ಹಿನ್ನೆಲೆ: ಪಿ. ಶಿವಾನಂದ ಎಂಬುವವರು ರಾಮನಗರ ಟೌನ್ ಪೊಲೀಸ್ ಠಾಣೆಗೆ 2024ರ ಫೆ.3 ರಂದು ದೂರು ನೀಡಿದ್ದರು. ಫೆ. 2ರಂದು ನಾನು ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್ ವೀಕ್ಷಣೆ ಮಾಡುತ್ತಿದ್ದಾಗ ಚಾನ್ ಪಾಷಾ ಐಜೂರ್ ಎಂಬ ಖಾತೆಯಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿದ್ದಾರೆ. ಅಲ್ಲದೇ, ಈ ರೀತಿ ನ್ಯಾಯಾಧೀಶರ ಬಗ್ಗೆ ಅವಹೇಳನಕಾರಿ ಪೋಸ್ಟ್ ಮಾಡಿ ಸಮಾಜದಲ್ಲಿ ಆಕ್ಷೇಪಾರ್ಹ ಭಾವನೆ ವ್ಯಕ್ತಪಡಿಸಿರುವ ಚಾನ್ ಪಾಷಾ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ದೂರುದಾರರು ಕೋರಿದ್ದರು. ಇದರಿಂದ ಚಾನ್ ಪಾಷಾ ವಿರುದ್ಧ ಉದ್ದೇಶ ಪೂರ್ವಕವಾಗಿ ಅವಮಾನ ಮಾಡಿದ, ಶಾಂತಿಭಂಗಕ್ಕೆ ಪ್ರಚೋದನೆ ನೀಡಿದ, ದ್ವೇಷಭಾವನೆ ಮೂಡಿ ಸುವಂತ ಹೇಳಿಕೆ ನೀಡಿದ ಆರೋಪದ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ವಾರಾ ಣಸಿಯ ಜ್ಞಾನವ್ಯಾಪಿ ಮಸೀದಿಯಲ್ಲಿ ಹಿಂದೂ ಗಳಿಗೆ ಪೂಜೆಗೆ ಅವಕಾಶ ಕಲ್ಪಿಸಿ, ತೀರ್ಪು ನೀಡಿದ್ದ ಉತ್ತರ ಪ್ರದೇಶದ ನ್ಯಾಯಾಧೀಶರ ಬಗ್ಗೆ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ ಆರೋಪವಿದೆ.

PUBLIC NOTICE

General Public are hereby informed, That my client Sri Naveen Kumar. T. S/o **late Thimmarayappa,** Aged about 31 years residing at No 330, Chunchughatta, Kothnur Main Road, Konanakunte Post, Bengaluru- 560062 represents that **ORIGINAL SALE DEED** dated 02-09-1976, vide document No 634/1976-77, Book No 1, volume No.1198, at page No 65 to 67, executed by Sri. Bettanna and his minor children's in favour of **Sri. Thimmarayappa,** ORIGINAL SALE DEED dated 01-05-1975, vide document No 678/ 1975-76, Book No 1, volume No 1147, at page No. 217 to 219, executed by Sri. Siddappa in favour of Sri. **Thimmarayappa** and **RECTIFICATION DEED** dated 04-12-1986, vide document No 5086/1986-87, Book No 1, volume No 2509, at page No 148 to 150, executed by Sri. Muniyappa S/o Late Siddappa, in favour of Sri. Thimmarayappa registered in the office of sub-registrar Bengaluru South Taluk, Bengaluru, which have been lost/misplaced in the BMTC Bus travelling from City Market to Kothnur Bus Stop, around 11 AM on 11-10-2024, in which my client has lodged complaint on 26-10-2024 to the Konanakunte Police Station around 7-20 PM of Serial No 1306049 and Lost Report No 1306049/ 2024, If any body other than the said Mr. Naveen Kumar. T. has any claim, right, title, and interest on the **schedule properties** by virtue of possession or otherwise of the above said Original Documents, or any right's they should file their claim with documentary proof within **7 days** from the date of issuance of this public notice in our office at the address mention below, failing which it will be taken for granted that, nobody has any manner of right, title, interest or claim over the schedule properties, other than the said Mr. Naveen Kumar. T.

SCHEDULE PROPERTY

1. All that piece and parcel of the property bearing Old Sy. No.72/5 at present Sy No 172/5, measuring 1 acre Situated at **Kothnur Village, Uttrahalli Hobli, Bengaluru South Taluk,** and bounded on
East by : Sri. P.S. Srinivas property, West by : Sri. Venkatshamy property, North by : Sri. Obanna's property, South by : Remaining land purchased From Siddappa property.
2. All that piece and parcel of the property bearing Old Sy No 72/5, at present Sy No 172/5, measuring 1 acre Situated at **Kothnur Village, Uttrahalli Hobli, Bengaluru South Taluk** and bounded on
East by : Sri. Muniswamy property, West by : Sri. Srinivas property, North by : Sri. Obanna's property, South by : Remaining land purchased from Siddappa property.

Sd
M.B. SHANKARE GOWDA
ADVOCATE B.A., LL.B.
No. 62/2, 1st Floor, 27th Cross,
Cubbonpet Main Road,
BANGALORE-560002
Roll No. KAR/1637/98
Mob: 9845074243
Email: shankaregowdamb4gmail.com

ನಮೂನೆ ಸಂ. ಐಎನ್‌ಸಿ-26
[ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ]
ಕೇಂದ್ರ ಸರ್ಕಾರ, ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ ಇವರ ಎದುರು
ಉಪ ಸೆಕ್ಷನ್(4) ಸೆಕ್ಷನ್ 13ರ ಕಂಪನಿಗಳ ಕಾಯಿದೆ 2013 ಮತ್ತು ಕಂಪನಿಗಳ (ಸಂಯೋಜನೆ) ನಿಯಮಗಳು 2014 ರ ಷರತ್ತು (ಎ)ಯ ಉಪ-ನಿಯಮ(5) ಇವುಗಳ ವಿಷಯವಾಗಿ
ಮತ್ತು
ಮಡ್‌ಚಿಟ್ಟರ್ ಬ್ರಾಂಡ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್,
(ಸಿಐಎನ್:ಯು74999ಕೆಎ2022ಪಿಟಿಸಿ165286)
ನೋಂದಾಯಿತ ಕಚೇರಿ: #101, ಗ್ರೀನ್ಸ್ ಸಂಡೇಲ್ ಅಪಾರ್ಟ್‌ಮೆಂಟ್ಸ್, 3 ಮತ್ತು 4, ಅನುಗ್ರಹ ಎಲ್/ಒ, 3ನೇ ಕ್ರಾಸ್, ಬೆಂಗಳೂರು, ಕರ್ನಾಟಕ – 560048
........ಅರ್ಜಿದಾರ ಕಂಪನಿ/ಅರ್ಜಿದಾರ

ಸಾರ್ವಜನಿಕರಿಗೆ ಈ ಸೂಚನೆಯು ಮೂಲಕ ತಿಳಿಯಪಡಿಸುವು ದೇನೆಂದರೆ, ಸೆಕ್ಷನ್ 13(4)ರ ಕಂಪನಿ ಕಾಯಿದೆ, 2013ನ್ನು ಓದಿಕೊಂಡಂತೆ ಮೇಲಿನ ನಿಯಮಗಳಂತೆ ಕೇಂದ್ರ ಸರ್ಕಾರದ ಎದುರು ಕಂಪನಿಯ ನೋಂದಾಯಿತ ಕಚೇರಿಯನ್ನು **"ಕರ್ನಾಟಕ ರಾಜ್ಯದಿಂದ ಮಹಾರಾಷ್ಟ್ರ ರಾಜ್ಯಕ್ಕೆ"** ವರ್ಗಾಯಿಸಲು ಅರ್ಜಿ ಸಲ್ಲಿಸಲು ಉದ್ದೇಶಿಸಲಾಗುವುದು ಎಂದು **05ನೇ ಅಕ್ಟೋಬರ್ 2024** ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ವಿಶೇಷ ನಿರ್ಣಯವನ್ನು ಅಂಗೀಕರಿಸಲಾಯಿತು.

ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಛೇರಿಯು ಪ್ರಸ್ತಾವಿತ ಬದಲಾವಣೆಯಿಂದ ತೊಂದರೆಯಾಗುತ್ತಿದೆ ಎಂದಾದರೆ, **ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್ ನ್ನು, ಎಂಸಿಎ-21 ಪೋರ್ಟಲ್** (**www.mca.gov.in**) ಮೂಲಕ ಸಲ್ಲಿಸಿ, ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ **ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂದಲಗುಡ, ನಾಗೋಲೆ, ತಟ್ಟಿಯನ್‌ನರಮ್ ಗ್ರಾಮ, ಹಯಾತ್ ನಗರ ಮಂಡಲ, ರಂಗ ರೆಡ್ಡಿ ಜಿಲ್ಲೆ, ಹೈದರಾಬಾದ್ – 500 068, ತೆಲಂಗಾಣ,** ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು (14) ದಿನಗಳ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ.

#101, ಗ್ರೀನ್ಸ್ ಸಂಡೇಲ್ ಅಪಾರ್ಟ್‌ಮೆಂಟ್ಸ್, 3 ಮತ್ತು 4, ಅನುಗ್ರಹ ಎಲ್/ಒ, 3ನೇ ಕ್ರಾಸ್, ಬೆಂಗಳೂರು, ಕರ್ನಾಟಕ – 560048

ಮಡ್‌ಚಟ್ಟರ್ ಬ್ರಾಂಡ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಪರವಾಗಿ
ಸಹಿ/-
ರಚ್ನಾ ಬರೂಹ್
(ನಿರ್ದೇಶಕರು)
ಡಿಐಎನ್: 07766260
ದಿನಾಂಕ: 12.11.2024
ಸ್ಥಳ: ಬೆಂಗಳೂರು

ವಿರಾಮ
ಪ್ರತಿ ಭಾನುವಾರ

CHANGE OF NAME

I, **ANVI AGARWAL,** D/o Anil Kumar Agarwal got married on 27.11.2023 with Sri Anurag Singhi, after my marriage I have changed my surname from **"ANVI AGARWAL"** to **'ANVI SINGHI'** vide affidavit dated **28.08.2024** sworn to before B.Chitra, Advocate & Notary, at Bangalore.

PUBLIC NOTICE

Public are informed that, my client Azeem is the absolute owner of Residential Property bearing Site No.12. Formed in Property No.97/5B, Present BBMP Katha No.97/5B-12 (old Katha No. 97/5B), Situated at Begur Village, Begur Hobli, Bangalore South Taluk, Bangalore, presently comes under the limits of Bruhat Bengaluru Mahanagara Palike, Begur Sub-Division, Bangalore, since the schedule property is triangle shaped it is add measuring East to West on the Northern Side 50 Feet and on the Southern Side 0 Feet i.e., (50+0)/2 Feet and North to South 38.50 Feet, totally measuring 962.50 Sq. Ft, and bounded as follows:
East by: Property belongs to Rama Reddy,
West by: Road,
North by: Site No.11,
South by: Private Property.
and informing general public that Azeem intent to mortgage the said property in favour of M/s PIRAMAL CAPITAL AND HOUSING FINANCE LIMITED and anyone having any claim over the said property or any other claims by any person/s Nationalized banks, MNC Banks Private Banks, Co-Operative Banks any Financial institutions Governed by the RBI Rules may lodge their objections in writing within 07 days from this day to the under mentioned Advocate.

KSR Associates
ADVOCATES & LEGAL CONSULTANTS, OFFICE # 53/1, 1st Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com, Mob: 99450 00789

ಒಂದು ಕೆ.ಜಿ ತ್ಯಾಜ್ಯಕ್ಕೆ ₹12 ಸೆಸ್ ವಿಧಿಸಲು ಮುಂದಾದ ಬಿಬಿಎಂಪಿ

ನಗರದಲ್ಲಿ ಭಾರಿ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದನೆ | ಇನ್ನು ಜನರ ಜೇಬಿಗೆ ಕತ್ತರಿ

ಬೆಂಗಳೂರು: ನಗರದಲ್ಲಿ ಭಾರೀ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದಿಸುವವರಿಗೆ ಪ್ರತಿ ಕೆ.ಜಿ ಕಸಕ್ಕೆ 12 ರು. ಸೆಸ್ ವಿಧಿಸಲು ಪಾಲಿಕೆ ಮುಂದಾಗಿದೆ.

ನಗರದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಈಗ ದರ ಜತೆಗೆ ಕಸದ ಹೆಸರಿನಲ್ಲಿ ನಗರ ಜನರ ಜೇಬಿಗೆ ಕತ್ತರಿ ಹಾಕಲು ಪಾಲಿಕೆ ಸಜ್ಜಾಗಿದ್ದು, ದಿನನಿತ್ಯ ಉತ್ಪತ್ತಿಯಾಗುವ ಬೃಹತ್ ಪ್ರಮಾಣದ ತ್ಯಾಜ್ಯಕ್ಕೆ ಪ್ರತಿ ಕೆಜಿಗೆ 12 ರುಪಾಯಿ ಸೆಸ್ ವಿಧಿಸಲು ಪಾಲಿಕೆ ಮುಂದಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, ಅಪಾರ್ಟ್‌ಮೆಂಟ್‌ಗಳು, ಹೋಟೆಲ್‌ಗಳು ಮತ್ತು ಮಾಲ್‌ಗಳು ಪ್ರತಿನಿತ್ಯ 100 ಕೆಜಿಗೂ ಹೆಚ್ಚು ತ್ಯಾಜ್ಯ ಉತ್ಪಾದಿಸಿ ಬಿಬಿಎಂಪಿಯ ಕಾಂಪ್ಯಾಕ್ಟರ್‌ಗಳಿಗೆ ಕಳುಹಿಸುತ್ತಿವೆ. ಇದರಿಂದ ಕಸ ಸಂಗ್ರಹ ವ್ಯವಸ್ಥೆಯ ಮೇಲೆ ಹೊರೆ ಹೆಚ್ಚುತ್ತಿದೆ. ಹೀಗಾಗಿ ಅದನ್ನು ನಿಯಂತ್ರಿಸಲು ಉದ್ದೇಶಿತ ಸೆಸ್ ಪ್ರಸ್ತಾವನೆ ಸರಕಾರದ ಮುಂದಿಡಲಾಗಿದೆ. ಘನತ್ಯಾಜ್ಯ ವಿಲೇವಾರಿ ನಿಯಮದ ಪ್ರಕಾರ ಮನೆ ಮನೆಯಿಂದ ಕಸ ಸಂಗ್ರಹಿಸಿ ವಿಲೇವಾರಿ ಮಾಡುವುದು ಬಿಬಿಎಂಪಿ ಜವಾಬ್ದಾರಿಯಾಗಿದೆ. ಆದರೆ, ನಗರದಲ್ಲಿ ಅನಧಿಕೃತವಾಗಿ ಹೋಟೆಲ್‌ಗಳು ಸೇರಿದಂತೆ ಸಗಟು ತ್ಯಾಜ್ಯ ಉತ್ಪಾದಕರು ಬಿಬಿಎಂಪಿಗೆ ತಮ್ಮ ಕಸ ಹಾಕುತ್ತಿದ್ದಾರೆ. ಇದರಿಂದ ಬಿಬಿಎಂಪಿಗೆ ಕಸ ವಿಲೇವಾರಿ ಹೆಚ್ಚಾಗಿ ಸಮಸ್ಯೆ ಆಗುತ್ತಿದೆ ಎಂದರು.

ಹೋಟೆಲ್ ಮಾಲೀಕರಿಂದ ವಿರೋಧ

ಪಾಲಿಕೆಯ ಈ ಕ್ರಮಕ್ಕೆ ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ಸ್, ಈ ಹಿಂದೆ ಪ್ರತಿ ಕೆಜಿ ತ್ಯಾಜ್ಯಕ್ಕೆ 50 ಪೈಸೆ ವಿಧಿಸಲಾಗುತ್ತಿತ್ತು. ಪ್ರಸ್ತಾವಿತ ಸೆಸ್ ಜಾರಿಗೆ ಬಂದರೆ, ಸಣ್ಣ ಹೋಟೆಲ್ ಮಾಲೀಕರು ಪ್ರತಿ ತಿಂಗಳು 35,000 ರು, ಪಾವತಿಸಬೇಕಾಗುತ್ತದೆ. ಪಾಲಿಕೆ ಕೂಡಲೇ ಸಂಬಂಧಪಟ್ಟವರೊಂದಿಗೆ ಸಭೆ ಕರೆಯಬೇಕು ಎಂದು ಆಗ್ರಹಿಸಿದ್ದು, ನಮ್ಮ ಸಂಘವು 2,000 ಸದಸ್ಯರನ್ನು ಹೊಂದಿದ್ದು, ಬುಧವಾರ ಸಭೆ ನಡೆಸಲಿದ್ದೇವೆ. ಸಭೆಯ ನಂತರ ಸರಕಾರ ಮತ್ತು ಬಿಬಿಎಂಪಿಗೆ ನಮ್ಮ ಒತ್ತಾಯ ಮುಂದಿಡಲಾಗುವುದು ಎಂದು ಬಿಬಿಎಚ್‌ಎ ಅಧ್ಯಕ್ಷ ಪಿ.ಸಿ.ರಾವ್ ಹೇಳಿದ್ದಾರೆ.

ಆರು ತಿಂಗಳ ಹಿಂದೆಯೇ ನಗರದ ಸಗಟು ತ್ಯಾಜ್ಯ ಉತ್ಪಾದಕರಿಗೆ ನೋಟಿಸ್ ನೀಡಲಾಗಿದ್ದು, ತಮ್ಮಲ್ಲಿ ಉತ್ಪಾದನೆಯಾಗುವ ಕಸ ವಿಲೇವಾರಿಗೆ ಕ್ರಮ ಕೈಗೊಳ್ಳಿ ಎಂದು ಸೂಚಿಸಲಾಗಿತ್ತು. ಆದರೆ, ಈವರೆಗೆ ಸಗಟು ತ್ಯಾಜ್ಯ ಉತ್ಪಾದಕರು ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾಗಿ, ಸ್ವಂತ ವ್ಯವಸ್ಥೆ ಮಾಡಿಕೊಳ್ಳದವರೆಗೆ ಸಗಟು ತ್ಯಾಜ್ಯ ಉತ್ಪಾದಕರಿಂದ ಕಸ ಸಂಗ್ರಹಿಸುವುದಕ್ಕೆ ಪ್ರತಿ ಕೆ.ಜಿ. 12 ರು. ದರ ನಿಗದಿ ಪಡಿಸಲಾಗಿದೆ. ಈಗಾಗಲೇ ಹೋಟೆಲ್, ಅಪಾರ್ಟ್ ಮೆಂಟ್ ಸಂಕೀರ್ಣ, ಕೈಗಾರಿಕೆಗಳಂತಹ ಬೃಹತ್ ತ್ಯಾಜ್ಯ ಉತ್ಪಾದಕರೊಂದಿಗೆ ಮಾತುಕತೆ ನಡೆಸಲಾಗುತ್ತಿದೆ.

-ತುಷಾರ್ ಗಿರಿನಾಥ್ ಬಿಬಿಎಂಪಿ ಮುಖ್ಯ ಆಯುಕ್ತ

ಮತ್ತೆರಡು ಡಬಲ್ ಡೆಕ್ಕರ್ ಮೇಲ್ಸೇತುವೆ



ಬೆಂಗಳೂರು: ನಮ್ಮ ಮೆಟ್ರೋದ ಮೂರನೇ ಹಂತದ ಯೋಜನೆಯು ಜೆ.ಪಿ.ನಗರ 4ನೇ ಹಂತದಿಂದ ಕೆಂಪಾಪುರ ಹಾಗೂ ಹೊಸಹಳ್ಳಿಯಿಂದ ಕಡಬಗೆರೆ ವರೆಗೆ ಎರಡು ಕಾರಿಡಾರ್‌ಗಳನ್ನೊಳಗೊಂಡಿದೆ.

ಕೇಂದ್ರ ಸರಕಾರ ಆಗಸ್ಟ್‌ನಲ್ಲಿ 15,611 ಕೋಟಿ ರು. ಮೊತ್ತದ ಯೋಜನೆಗೆ ಅನುಮತಿ ನೀಡಿದ ಬಳಿಕ ಯೋಜನೆ ಅನುಷ್ಠಾನದ ಪ್ರಕ್ರಿಯೆ ಚುರುಕುಗೊಂಡಿದೆ. ಇದೀಗ ಮೂರನೇ ಹಂತದಲ್ಲಿ ಡಬಲ್ ಡೆಕ್ಕರ್ ಯೋಜನೆಯ ವಿನ್ಯಾಸಕ್ಕಾಗಿ ನಮ್ಮ ಮೆಟ್ರೋ ಮೂರು ಹಂತಗಳಲ್ಲಿ ಟೆಂಡರ್ ಕರೆದಿದೆ.

ಸುಮನಹಳ್ಳಿಯಿಂದ ಕಡಬಗೆರೆ ವರೆಗೆ

ಸುಮನಹಳ್ಳಿ ಕ್ರಾಸ್ ಸ್ಟೇಷನ್‌ನಿಂದ ಕಡಬಗೆರೆವರೆಗೆ, ಸುಮನಹಳ್ಳಿ ಕ್ರಾಸ್‌ನಿಂದ ಕೆಂಪಾಪುರದವರೆಗೆ ಹಾಗೂ ಜೆ.ಪಿ.ನಗರ ಸ್ಟೇಷನ್‌ನಿಂದ ಬಿಡಿಎ ಕಾಂಪ್ಲೆಕ್ಸ್ ನಾಗರಬಾವಿ ಸ್ಟೇಷನ್‌ವರೆಗೆ ಡಬಲ್ ಡೆಕ್ಕರ್, ಎತ್ತರಿಸಿದ ಮಾರ್ಗ, ನಿಲ್ದಾಣಗಳು, ರಸ್ತೆ ಮಾರ್ಗ, ರ‍್ಯಾಂಪ್‌ಗಳ ನಿರ್ಮಾಣಕ್ಕಾಗಿ ವಿನ್ಯಾಸ ರೂಪಿಸಿಕೊಳ್ಳಲು ಮುಂದಾಗಲಾಗಿದೆ. ಇದರ ಜತೆಗೆ ಪೀಣ್ಯ ಹಾಗೂ ಸುಮನಹಳ್ಳಿ ಬಳಿ ಡಿಪೊ, ಸ್ಕೈವಾಕ್, ಬಹುಮಾದರಿ ಸಾರಿಗೆ ವ್ಯವಸ್ಥೆ ನಿರ್ಮಾಣವನ್ನು ಯಾವ ರೀತಿ ನಿರ್ಮಿಸಬೇಕು ಎಂಬುದರ ಬಗ್ಗೆ ನಿಗಮ ಸಲಹಾ ವರದಿ ಪಡೆಯಲಿದೆ.

ಮೆಟ್ರೋ 3ನೇ ಹಂತದ 44.65 ಕಿಮೀ ಮಾರ್ಗಕ್ಕಾಗಿ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಯೂ ನಡೆಯುತ್ತಿದ್ದು, ಮೊದಲ ಪ್ಯಾಕೇಜ್‌ನಲ್ಲಿ ಹೊರವರ್ತುಲ ರಸ್ತೆ ಮಾರ್ಗದಲ್ಲಿ 299 ಆಸ್ತಿಗಳನ್ನು ಗುರುತಿಸಲಾಗಿದೆ. ಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಗೆ (ಕೆಐಎಡಿಬಿ) ಸಲ್ಲಿಸಲಾಗಿದೆ. ಎರಡನೇ ಪ್ಯಾಕೇಜ್‌ನಲ್ಲಿ ಭೂಸ್ವಾಧೀನಕ್ಕಾಗಿ ಜಂಟಿ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೋ ಮಾರ್ಗಕ್ಕೆ ಸೀಮಿತ

ಕೇಂದ್ರ ಸರಕಾರಕ್ಕೆ ಮೂರನೇ ಹಂತದ ಮೆಟ್ರೋ ನಿರ್ಮಾಣದ ಪ್ರಸ್ತಾವನೆ ಸಲ್ಲಿಸಿದ ಬಳಿಕ ರಾಜ್ಯ ಸರಕಾರವು ಈ ಮಾರ್ಗದಲ್ಲಿ ಡಬಲ್ ಡೆಕ್ಕರ್ ರೂಪಿಸಲು ತೀರ್ಮಾನಿಸಿತ್ತು. ಹೀಗಾಗಿ ಕೇಂದ್ರದಿಂದ ಸದ್ಯದ ಯೋಜನಾ ವೆಚ್ಚ ಮೆಟ್ರೋ ಮಾರ್ಗ ನಿರ್ಮಾಣಕ್ಕೆ ಮಾತ್ರ ಸೀಮಿತವಾಗಿದೆ. ಡಬಲ್ ಡೆಕ್ಕರ್ ಯೋಜನೆಗೆ ಬೇಕಾಗುವ ಹಣವನ್ನು ಹೇಗೆ ಹೊಂದಿಸಬೇಕೆನ್ನುವುದರ ಬಗ್ಗೆ ರಾಜ್ಯ ಸರಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಶಬರಿಮಲೆ ಯಾತ್ರೆಗೆ ವೋಲ್ವೋ ಸೇವೆ

ಬೆಂಗಳೂರು: ಬೆಂಗಳೂರಿನಿಂದ ಶಬರಿಮಲೆ ಯಾತ್ರೆ ಕೈಗೊಳ್ಳುವ ಅಯ್ಯಪ್ಪ ಭಕ್ತರಿಗೆ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ಹೊಸದಾಗಿ ವೋಲ್ವೋ ಬಸ್ ಸೇವೆ ಆರಂಭಿಸಿದೆ. ನವೆಂಬರ್ 29 ರಿಂದ ಬೆಂಗಳೂರು-ನೀಲಕ್ಕಲ್ (ಪಂಪಾ-ಶಬರಿಮಲೈ) ಮಾರ್ಗದಲ್ಲಿ ವೋಲ್ವೋ ಬಸ್ ಸೇವೆ ಆರಂಭವಾಗಲಿದ್ದು, ಶಾಂತಿನಗರ ಬಸ್ ನಿಲ್ದಾಣದಿಂದ ಮಧ್ಯಾಹ್ನ 1.50ಕ್ಕೆ ಬಸ್ ಹೊರಟು, ಮರುದಿನ ಬೆಳಗ್ಗೆ 6.45ಕ್ಕೆ ನೀಲಕ್ಕಲ್ ತಲುಪುತ್ತದೆ. ನೀಲಕ್ಕಲ್‌ನಿಂದ ಸಂಜೆ 6 ಗಂಟೆಗೆ ಹೊರಡುವ ಬಸ್ ಮರುದಿನ ಬೆಳಗ್ಗೆ 10 ಗಂಟೆಗೆ ಬೆಂಗಳೂರು ತಲುಪಲಿದೆ. ಪ್ರಯಾಣ ದರ ವಯಸ್ಕರಿಗೆ 1,750 ರು. ನಿಗದಿಪಡಿಸಲಾಗಿದೆ.

ನೀರಿನ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ಜಲ ಮಂಡಳಿಯ ವತಿಯಿಂದ ನ.14ರಂದು ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್ ಆಯೋಜಿಸಲಾಗಿದೆ. ನಗರದ ಉತ್ತರ-2-1, ದಕ್ಷಿಣ-1-1, ದಕ್ಷಿಣ-2-1, ನೈರುತ್ಯ -1, ನೈರುತ್ಯ - 4, ಪೂರ್ವ -1-2, ಪೂರ್ವ -2-2, ಆಗ್ನೇಯ - 2, ಆಗ್ನೇಯ - 5, ಪಶ್ಚಿಮ-1-2 ಮತ್ತು ಪಶ್ಚಿಮ-2-2, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ಅಥವಾ ವಾಟ್ಸ್ ಅಪ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದು ಎಂದು ಮಂಡಳಿ ತಿಳಿಸಿದೆ.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಜಯನಗರದ 66/11 ಕೆ.ವಿ. ಸಾರಕ್ಕಿಯಲ್ಲಿ ತುರ್ತು ನಿರ್ವಹಣಾ ಕಾಮಗಾರಿಯಿಂದಾಗಿ ಬುಧವಾರ ನ.13ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. ಶಾಖಾಂಬರಿನಗರ, ಪೈಪ್ ಲೈನ್ ರೋಡ್, ರಾಘವೇಂದ್ರ ಸ್ವಾಮಿ ಮಠ, ಜೆ.ಪಿ ನಗರ ಮೊದಲನೇ ಹಂತ, 14ನೇ ಅಡ್ಡ ರಸ್ತೆ, ಸಲಾರ್ಪುರಿಯಾ ಅಪಾರ್ಟ್‌ಮೆಂಟ್, ಪುಟ್ಟೇನಹಳ್ಳಿ, ಜಯನಗರ 4, 5, 7, 8ನೇ ಬ್ಲಾಕ್, ಆರ್.ವಿ.ಡೆಂಟಲ್ ಕಾಲೇಜ್ ಸುತ್ತಮುತ್ತಲ ಪ್ರದೇಶಗಳು, 24ನೇ ಮೇನ್, ಎಲ್‌ಐಸಿ ಕಚೇರಿ ಹಿಂಬಾಗ, ಎಲ್‌ಐಸಿ ಕಾಲೋನಿ, ಜೆ.ಪಿ.ನಗರ 5ನೇ ಹಂತ, ಸಾಯಿ ನರ್ಸರಿ ರಸ್ತೆ, ಜೆ.ಪಿ.ನಗರ 1,2,3,4,5,6ನೇ ಹಂತ, 15ನೇ ಕ್ರಾಸ್, 16 12 ನೇ ಅಡ್ಡ ರಸ್ತೆ, ಸಿಂಧೂರ ಕನ್ವೇಷನ್ ಹಾಲ್ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕೆಂಗೇರಿ ಚಿತಾಗಾರ ಸ್ಥಗಿತ

ಬೆಂಗಳೂರು: ಆರ್‌ಆರ್ ನಗರ ವಲಯ ವ್ಯಾಪ್ತಿಯ ಕೆಂಗೇರಿ ಚಿತಾಗಾರದಲ್ಲಿ ತುರ್ತು ನಿರ್ವಹಣೆಯ ಪ್ರಯುಕ್ತ ನ.18ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತಿದ್ದು, ಈ ಚಿತಾಗಾರಕ್ಕೆ ಮೃತ ದೇಹಗಳನ್ನು ದಹನ ಕ್ರಿಯೆಗಾಗಿ ತರುವ ಸಾರ್ವಜನಿಕರು ಸಮೀಪದಲ್ಲಿರುವ ಸುಮ್ಮನಹಳ್ಳಿ, ಮೇಡಿ ಅಗ್ರಹಾರ ಅಥವಾ ಪೀಣ್ಯ ವಿದ್ಯುತ್ ಚಿತಾಗಾರ ಉಪಯೋಗಿಸಿಕೊಳ್ಳಬಹುದಾಗಿದೆ.

ಮೀಸಲು ಪ್ರಸ್ತಾವನೆ ತಳ್ಳಿಹಾಕಿದ ಸರಕಾರ

ಬೆಂಗಳೂರು: ಗುತ್ತಿಗೆಗಳಲ್ಲಿ ಅಲ್ಪಸಂಖ್ಯಾತರಿಗೆ ಶೇ.4 ಮೀಸಲು ನೀಡುವ ಯಾವುದೇ ಪ್ರಸ್ತಾವನೆ ಸರಕಾರದ ಮುಂದೆ ಇಲ್ಲ ಎಂದು ಮುಖ್ಯಮಂತ್ರಿಗಳ ಕಚೇರಿ ಸ್ಪಷ್ಟಪಡಿಸಿದೆ. ಈ ಸಂಬಂಧ ಮಾಧ್ಯಮ ಸ್ಪಷ್ಟನೆ ಹೊರಡಿಸಿರುವ ಸಿಎಂ ಕಚೇರಿ, ಕಾಮಗಾರಿಯಲ್ಲಿ ಮುಸ್ಲಿಂರಿಗೆ ಮೀಸಲಾತಿ ನೀಡುವ ಪ್ರಸ್ತಾವನೆ ಸರಕಾರದ ಮುಂದೆ ಇದೆ ಎಂಬ ವರದಿ ಕೆಲ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಮೀಸಲಾತಿ ನೀಡಬೇಕೆಂಬ ಬೇಡಿಕೆ ಬಂದಿರುವುದು ನಿಜ. ಆದರೆ, ಈ ಕುರಿತು ಸರಕಾರದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು ತಿಳಿಸಿದೆ.

{ ಆರ್.ಅಶೋಕ್ } ಪ್ರತಿಪಕ್ಷ ನಾಯಕ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಳಾಗಿರುವುದು, ಕೆಟ್ಟಿರುವುದೇ ಅವರ ಹಿಂಬಾಲಕರಿಂದ. ಮುಡಾ ಪ್ರಕರಣದಲ್ಲಿ ಅವರಾಗಿಯೇ 14 ನಿವೇಶನಕ್ಕೆ 62 ಕೋಟಿ ಆಗುತ್ತದೆ ಎಂದು ಹೇಳಿದ್ದಾರೆ. ಅವರು ಹೇಳುವವರೆಗೂ ನಾವು ಲಕ್ಷದ ಲೆಕ್ಕದಲ್ಲೇ ಇದ್ದೆವು. ಸಿದ್ದರಾಮಯ್ಯ ನನ್ನದು ತೆರೆದ ಪುಸ್ತಕ ಎಂದೇ ಹೇಳುತ್ತಿದ್ದರು. ಈಗ ಪುಸ್ತಕ ತೆರೆದರೇ ಬರೀ 14 ಸೈಟ್, 62 ಕೋಟಿ ಎಂದೇ ಕಾಣುತ್ತದೆ.

ಅನಂತಕುಮಾರ್ ಪುಣ್ಯ ಸ್ಮರಣೆ ಅಂಗವಾಗಿ ಆಯೋಜಿಸಲಾಗಿದ್ದ ಅನಂತ ಸ್ಮೃತಿ ನಡಿಗೆ -ಪಂಜಿನ ಮೆರವಣಿಗೆಯಲ್ಲಿ ಅದಮ್ಯ ಚೇತನ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಕೃಷ್ಣ ಭಟ್, ಮಾಜಿ ಸಚಿವ ಅರವಿಂದ್ ಲಿಂಬಾವಳಿ, ಟಿಟಿಡಿ ನೂತನ ಸದಸ್ಯ ಎಸ್ .ನರೇಶ್ ಕುಮಾರ್, ಶಾಸಕರಾದ ರವಿ ಸುಬ್ರಮಣ್ಯ, ರಾಮಮೂರ್ತಿ, ರವಿ , ಮಾಜಿ ಬಿಬಿಎಂಪಿ ಸದಸ್ಯರಾದ ಸದಾಶಿವ, ಸುಬ್ಬಣ್ಣ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಸೌತ್ ಎಂಡ್ ವೃತ್ತದಲ್ಲಿರುವ ಅನಂತ ಪ್ರೇರಣ ಕೇಂದ್ರದಿಂದ ಪ್ರಾರಂಭವಾದ ಈ ನಡಿಗೆ ಸುಮಾರು ಮೂರು ಕಿ.ಮೀ ದೂರ ಕ್ರಮಿಸಿತು.

ಭಸ್ಮಾಸುರ-ಬಕಾಸುರ ಕೈ ಪಕ್ಷಕ್ಕೆ ಬುದ್ಧಿ ಕಲಿಸಿ

ಬೆಂಗಳೂರು: ಭಸ್ಮಾಸುರ ಹಾಗೂ ಬಕಾಸುರನಂತೆ ವರ್ತಿಸುವ ಕಾಂಗ್ರೆಸ್ ಪಕ್ಷಕ್ಕೆ ಉಪ ಚುನಾವಣೆಯಲ್ಲಿ ಬುದ್ಧಿ ಕಲಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಕ್ಫ್ ಬೋರ್ಡ್ ಹೆಸರಿನಲ್ಲಿ ನಮ್ಮ ಭೂಮಿ ಕಿತ್ತುಕೊಳ್ಳುವ ಕೆಲಸ, ರೈತರ, ದಲಿತರ ಭೂಮಿ ಕಿತ್ತುಕೊಳ್ಳುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಆಧುನಿಕ ಭಸ್ಮಾಸುರನಂತೆ ಮಾಡುತ್ತಿದೆ. ಬಕಾಸುರ ಮತ್ತು ಭಸ್ಮಾಸುರ ಎರಡೂ ಸೇರಿದರೆ ಏನಾಗುತ್ತದೋ ಅದು ಕಾಂಗ್ರೆಸ್ ಆಗಿದೆ ಎಂದರು.

ಸಚಿವ ಜಮೀರ್, ದೇವೇಗೌಡರ ಕುಟುಂಬವನ್ನು ಕೊಂಡುಕೊಳ್ಳುವುದಾಗಿ ತಿಳಿಸಿರುವುದು ಅಧಿಕಾರದ ಮದ, ಹಣದ ಮದ ತಲೆಗೇರಿದರೆ ಮನುಷ್ಯ ಹುಚ್ಚುಚ್ಚಾಗಿ ಆಡುತ್ತಾನಂತೆ ಎಂಬಂತಿದೆ. ಈ ಹುಚ್ಚುಗಳನ್ನು ಜನರು ಮಾತ್ರ ಇಳಿಸಲು ಸಾಧ್ಯ. ಜಮೀರ್ ಬಳಿ ಲೂಟಿ ಹೊಡೆದ ಹಣವಿದ್ದು, ಒಕ್ಕಲಿಗರು, ಹಿಂದೂಗಳನ್ನು ಕೊಂಡುಕೊಳ್ಳಬಹುದೆಂಬ ಸೊಕ್ಕು ಮೂಡಿಸಿದೆ. ಇಂತಹ ಅವಸವ್ಯ ದೂರ ಹಾಕಲು ಒಂದೊಂದು ಮಾತಿಗೂ ಜನರು ಉತ್ತರ ನೀಡುವ ಮಾದರಿಯಲ್ಲಿ ಮತ ಹಾಕಬೇಕೆಂದರು.

ಡಾ. ಅಂಬೇಡ್ಕರ್ ಇಸ್ಲಾಂಗೆ ಮತಾಂತರಗೊಳ್ಳಲು ಸಿದ್ಧವಾಗಿದ್ದರು ಎಂದು ಅಜ್ಜಂಪುರ ಪೀರ್ ಖಾದ್ರಿ, ಹೇಳಿ ತಮ್ಮ ಅಜ್ಞಾನದ ಪ್ರದರ್ಶನ ಮಾಡಿದ್ದಾರೆ. ಅಲ್ಲದೆ ಅಂಬೇಡ್ಕರ್ ಅವರ ವ್ಯಕ್ತಿತ್ವಕ್ಕೆ ಅವಮಾನ ಮಾಡಿದ್ದಾರೆ. ಅಂಬೇಡ್ಕರ್ ಅವರು ಬಹಳ ಸ್ಪಷ್ಟವಾದಿಯಾಗಿದ್ದರು. ನಾನು ನನ್ನ ಪ್ರತಿಭಟನೆ ದಾಖಲಿಸಲು ಮತಾಂತರವಾಗುತ್ತೇನೆ. ದೇಶಾಂತರ ಅಲ್ಲ ಮತ್ತು ಸಂಸ್ಕೃತಿಯಿಂದ ದೂರ ಹೋಗುವುದಿಲ್ಲ. ಇಸ್ಲಾಂ ಅಥವಾ ಕ್ರಿಶ್ಚಿಯಾನಿಟಿಗೆ ಹೋದರೆ ಮೂಲ ಸಂಸ್ಕೃತಿಯಿಂದ ದೂರ ಹೋಗಬೇಕಾಗುತ್ತದೆ. ಹಾಗಾಗಿ ನಾನು ಅವುಗಳನ್ನು ಸ್ವೀಕರಿಸುವುದಿಲ್ಲ ಎಂದಿದ್ದರು. ತಮ್ಮ ಥಾಟ್ಸ್ ಆಫ್ ಪಾಕಿಸ್ತಾನ್ ನಲ್ಲಿ ಇಸ್ಲಾಂ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಇವತ್ತಿಗೂ ಕೂಡ ಪುಸ್ತಕ ಲಭ್ಯವಿದೆ ಎಂದರು.

ಥಾಟ್ಸ್ ಆಫ್ ಪಾಕಿಸ್ತಾನ್ ಓದಲು ಸಲಹೆ: ಇಸ್ಲಾಂ ಪ್ರತಿಪಾದಿಸಿದ್ದು ಬ್ರದರ್ ಹುಡ್ ಎಂಬ ಸಹೋದರತ್ವ (ಭಾಯಿಚಾರ) ಏನಿದೆಯೋ ಅದು ಕೇವಲ ಮುಸಲ್ಮಾನರಿಗೆ ಮಾತ್ರ. ಎಲ್ಲ ಮಾನವರಲ್ಲಿ ಅದು ಸಹೋದರತ್ವವನ್ನು ಬೆಳೆಸುವುದಿಲ್ಲ. ಕೇವಲ ಮುಸ್ಲಿಮರಿಗೆ ಮಾತ್ರ ಅದು ಸಹೋದರತ್ವ ಮಾಡುತ್ತದೆ ಎಂದು ಅಂಬೇಡ್ಕರರು ಹೇಳಿದ್ದರು ಎಂದರು. ಇದನ್ನು ಅಜ್ಜಂಪುರ ಪೀರ್ ಖಾದ್ರಿ ಅವರು ಓದಬೇಕಾದ ಅವಶ್ಯಕತೆ ಇದೆ. ಥಾಟ್ಸ್ ಆಫ್ ಪಾಕಿಸ್ತಾನ್ ಓದಿದರೆ ಖಾದ್ರಿ, ಅವರ ಅಜ್ಞಾನದ ಹೇಳಿಕೆಗೆ ಜ್ಞಾನದ ಬೆಳಕು ಸಿಗುತ್ತದೆ ಎಂದು ವಿಶ್ಲೇಷಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಆವರಣದಲ್ಲಿ ಸ್ವಚ್ಛತಾ ಅಭಿಯಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡು, 1400 ಕೆ.ಜಿ ತ್ಯಾಜ್ಯ ಸಂಗ್ರಹ ಮಾಡಲಾಗಿದೆ.

ಬೆಂಗಳೂರು ವಿವಿಯು ಸುಮಾರು 1200 ಕಿ.ಮೀ ವ್ಯಾಪ್ತಿ ಪ್ರದೇಶವಿದ್ದು, ಇತ್ತೀಚೆಗೆ ರಸ್ತೆ ಬದಿಯಲ್ಲಿ ಹೆಚ್ಚು ಕಸ ಬಿಸಾಡುವ ಸ್ಥಳಗಳು ಸೃಷ್ಟಿಯಾಗುತ್ತಿರುವ ಹಿನ್ನೆಲೆಯಲ್ಲಿ ಪಾಲಿಕೆ, ಬೆಂಗಳೂರು ವಿವಿ ಹಾಗೂ ಇತರೆ ಸಂಸ್ಥೆಗಳ ಸಹಯೋಗದಲ್ಲಿ ಸ್ವಚ್ಛತಾ ಆಂದೋಲನದಡಿ ಪ್ಲಾಸ್ಟಿಕ್ ಹಾಗೂ ಒಣ ತ್ಯಾಜ್ಯ ಸಂಗ್ರಹಣೆ ಮಾಡಲಾಯಿತು.

ವಿವಿಗೆ ಪ್ರವೇಶ ಕಲ್ಪಿಸುವ ಪ್ರಮುಖ 3 ದ್ವಾರಗಳಲ್ಲಿ ಮೂರು ತಂಡ ರಚಿಸಿಕೊಂಡು ರಸ್ತೆ ಬದಿ, ಪಾದಚಾರಿ ಮಾರ್ಗದಲ್ಲಿ ಬಿದ್ದಿರುವಂತಹ ಒಣ ತ್ಯಾಜ್ಯ, ಪ್ಲಾಸ್ಟಿಕ್ ಉತ್ಪನ್ನಗಳನ್ನು ಸಂಗ್ರಹಿಸಲಾಯಿತು. ಅದರಂತೆ ಜ್ಞಾನಭಾರತಿ ಆವರಣದಲ್ಲಿ ಬೆಳಗ್ಗೆ 10.30 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಸುಮಾರು 9 ಕಿ.ಮೀ ವ್ಯಾಪ್ತಿಯಲ್ಲಿ ಪೇಪರ್, ಪ್ಲಾಸ್ಟಿಕ್ ಕವರ್, ಪ್ಲಾಸ್ಟಿಕ್ ಬಾಟಲ್ ಸೇರಿದಂತೆ ಇನ್ನಿತರೆ ಸಾಮಗ್ರಿಗಳನ್ನು ಒಳಗೊಂಡಂತೆ 1,400 ಕೆಜಿ ತ್ಯಾಜ್ಯ ಸಂಗ್ರಹಿಸಲಾಗಿದೆ.

ಈ ವೇಳೆ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ ನಿರ್ದೇಶಕ ಬಿ.ಪಿ ರವಿ, ಬೆಂಗಳೂರು ವಿವಿ ಕುಲಪತಿ ಡಾ. ಜಯಕರ್ ಎಸ್.ಎಂ, ಭೀಮೇಶ್, ಪೂರ್ಣಿಮಾ, ಪಾಲಿಕೆ ಅಧಿಕಾರಿಗಳು, ಅರಣ್ಯ ವಿಭಾಗದ ಸಿಬ್ಬಂದಿ, ಪೊಲೀಸ್ ಇಲಾಖೆ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

350 ವಿದ್ಯಾರ್ಥಿಗಳು ಭಾಗಿ

ಸ್ವಚ್ಛತಾ ಅಭಿಯಾನದಲ್ಲಿ ಪಾಲಿಕೆ ಅಧಿಕಾರಿ, ಸಿಬ್ಬಂದಿ, ಜ್ಞಾನಭಾರತಿ-ಬೆಂಗಳೂರು ವಿವಿಯ ಸಹಯೋಗದೊಂದಿಗೆ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಇತರೆ ಸಂಸ್ಥೆಗಳ ಸಹಯೋಗದಲ್ಲಿ ಸ್ವಚ್ಛತಾ ಆಂದೋಲನದಡಿ ಪ್ಲಾಸ್ಟಿಕ್ ಹಾಗೂ ಒಣ ತ್ಯಾಜ್ಯ ಸಂಗ್ರಹಣೆ ಮಾಡಲಾಯಿತು.

ನ.15 ರಿಂದ 17 ಪುಸ್ತಕ ಸಂತೆ ಆಯೋಜನೆ

ಬೆಂಗಳೂರು: ಕನ್ನಡದ ಪ್ರಮುಖ ಪ್ರಕಾಶನವಾದ ವೀರಲೋಕದ ವತಿಯಿಂದ ಎರಡನೇ ವರ್ಷದ ಪುಸ್ತಕ ಸಂತೆ ನ.15, 16 ಹಾಗೂ 17ರಂದು ಬೆಂಗಳೂರಿನ ಜಯನಗರದ ಶಾಲಿನಿ ಮೈದಾನದಲ್ಲಿ ನಡೆಯಲಿದೆ ಎಂದು ವೀರಲೋಕದ ರೂವಾರಿ ವೀರಕಪುತ್ರ ಶ್ರೀನಿವಾಸ್ ತಿಳಿಸಿದ್ದಾರೆ.

ನೂರಾರು ಲೇಖಕರು ಇದರಲ್ಲಿ ಪಾಲ್ಗೊಳ್ಳಲಿದ್ದು, ಹತ್ತಾರು ಕೃತಿಗಳು ಬಿಡುಗಡೆಗೊಳ್ಳಲಿವೆ. ಕನ್ನಡ ಪುಸ್ತಕಗಳು ಎಲ್ಲೆಂದರಲ್ಲಿ ಸಿಗಬೇಕು, ಕನ್ನಡಿಗರು ಇರುವ ಕಡೆಯೇ ಪುಸ್ತಕಗಳು ಸಿಗಬೇಕು. ಕನ್ನಡ ಪುಸ್ತಕಗಳು ಕನ್ನಡಿಗರ ಬದುಕಿನ ಭಾಗವಾಗಬೇಕು ಎಂಬ ಆಶಯಗಳೊಂದಿಗೆ ಪುಸ್ತಕ ಸಂತೆ ಆಯೋಜಿಸಲಾಗಿದ್ದು, ಕಳೆದ ವರ್ಷ ನಡೆದ ಪುಸ್ತಕ ಸಂತೆಯ ಮೊದಲ ಆವೃತ್ತಿ ಭಾರೀ ಯಶಸ್ವಿಯಾದ ಹಿನ್ನೆಲೆಯಲ್ಲಿ ಈ ವರ್ಷವೂ ಪ್ರಕಾಶಕರು, ಲೇಖಕರು ಹಾಗೂ ಓದುಗರನ್ನು ಒಟ್ಟುಗೂಡಿಸುವ ಹಬ್ಬಕ್ಕೆ ವೀರಲೋಕ ಮುಂದಾಗಿದೆ ಎಂದರು.

ಪುಸ್ತಕ ಸಂತೆಗೆ ವೀರಲೋಕದ ಜತೆಗೆ ಹಲವು ಸಂಸ್ಥೆಗಳು ಕೈಜೋಡಿಸಿದ್ದು, ನೂರಾರು ಪ್ರಕಾಶಕರು ಇಲ್ಲಿ ಸ್ಟಾಲ್‌ಗಳನ್ನು ಹಾಕುತ್ತಿದ್ದಾರೆ. ಕರ್ನಾಟಕ ಸರಕಾರ ಸಚಿವಾಲಯ ಕ್ಲಬ್ ಪುಸ್ತಕ ಸಂತೆಯಲ್ಲಿ ಪಾಲ್ಗೊಳ್ಳುತ್ತಿದೆ. ಜತೆಗೆ ಕನ್ನಡ ನಾಡಿನ ಅಷ್ಟೂ ಸರಕಾರಿ ನೌಕರರ ಸಂಘ ಸಂಸ್ಥೆಗಳನ್ನೂ ಭಾಗವಹಿಸುವಂತೆ ಕೋರಲಾಗಿದೆ. ಓದುಗರು ಹಾಗೂ ಲೇಖಕರು ಮುಖಾಮುಖಿಯಾಗಿಸುವುದು ಈ ಪ್ರಯೋಗದ ಉದ್ದೇಶ ಎಂದರು.

ತನ್ನ ಮೆಚ್ಚಿನ ಲೇಖಕರನ್ನು ಕಾಣುವ ಆಸೆ ಓದುಗರಿಗಿರಬಹುದು, ತಮ್ಮ ಅನಾಮಿಕ ಓದುಗರನ್ನು ಭೇಟಿಯಾಗುವ ಆಸೆ ಸಾಹಿತಿಗಳಿಗೂ ಇರಬಹುದು. ಆ ಇಬ್ಬರ ಮುಖಾಮುಖಿಗೆ ಈ ಸಂತೆ ವೇದಿಕೆಯಾಗುತ್ತಿದೆ. ಇಂತಹ ಪ್ರಯೋಗಕ್ಕೆ ತುಂಬು ಪ್ರೀತಿಯಿಂದ ಒಪ್ಪಿಗೆ ನೀಡಿದ ಎಲ್ಲಾ ಸಾಹಿತಿಗಳಿಗೆ ವೀರಲೋಕ ಮನದಾಳದ ಧನ್ಯವಾದಗಳನ್ನು ತಿಳಿಸಲಿಚ್ಛಿಸುತ್ತೇನೆ ಎಂದು ತಿಳಿಸಿದರು.

ಚೆನ್ನೈನ ಬ್ರೈನ್ ಕಾರ್ವ ಎಜುಕೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಹಾಗೂ ರಾಬಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನ ಸಹಯೋಗದಲ್ಲಿ ಆಯೋಜಿಸಿದ್ದ ಟ್ಯಾಲೆಂಶಿಯಾ-24 (ಅಬಾಕಸ್ ಮತ್ತು ವೇದಗಣಿತದ ವರ್ಚುವಲ್ ಸ್ಪರ್ಧೆ) ಹಾಗೂ ಜೂನಿಯರ್ ಲೆವೆಲ್ ಅಬಾಕಸ್ ಮ್ಯಾಥ್ ಜೇನಿ 2024 ಸ್ಪರ್ಧೆಯಲ್ಲಿ ಭಾಗವಹಿಸಿದ್ದ ತನಿಶಾ ಪ್ರದೀಪ್ 2ನೇ ಸ್ಥಾನ ಪಡೆದಿದ್ದಾರೆ.

ನಗರದಲ್ಲಿ ನೀರಿನ ಸಂರಕ್ಷಣೆಗೆ ಜಲ ಮಂಡಳಿಯಿಂದ ಉಪಯುಕ್ತ ಯೋಜನೆಗೆ ಚಿಂತನೆ

ನೀರಿನ ಸೋರಿಕೆ ತಡೆಗೆ ಗ್ರೇ ವಾಟರ್ ರಿಸೈಕ್ಲಿಂಗ್ ವ್ಯವಸ್ಥೆ

ಬೆಂಗಳೂರು: ನೀರಿನ ಸಂರಕ್ಷಣೆ ಸಲುವಾಗಿ ನಗರದಲ್ಲಿ ಹೊಸದಾಗಿ ನಿರ್ಮಿಸಲಾಗುವ ಒಂಟಿ ಮನೆಗಳಲ್ಲಿ ಗ್ರೇ ವಾಟರ್ ರಿಸೈಕ್ಲಿಂಗ್ ವ್ಯವಸ್ಥೆಯ ಅಳವಡಿಕೆ ಕಡ್ಡಾಯಗೊಳಿಸಲು ಬೆಂಗಳೂರು ಜಲಮಂಡಳಿ ಚಿಂತನೆ ನಡೆಸಿದೆ.

ಬೆಂಗಳೂರಿನಲ್ಲಿ ನೀರಿನ ಬಳಕೆ ಕಡಿಮೆ ಮಾಡಲು ಮತ್ತು ಒಳಚರಂಡಿ ಒತ್ತಡ ಸರಾಗಗೊಳಿಸುವ ಹಾಗೂ ನೀರು ಸಂರಕ್ಷಣಾ ದೃಷ್ಟಿಯಿಂದ ಹೊಸ ಮನೆಗಳಿಗೆ ಗ್ರ ವಾಟರ್ ರೀಸೈಕ್ಲಿಂಗ್ ಕಡ್ಡಾಯ ಮಾಡಲು ಜಲಮಂಡಳಿ ಮುಂದಾಗಿದ್ದು, ಈ ಮೂಲಕ ನಗರದಲ್ಲಿ ನೀರಿನ ಸಮಸ್ಯೆ ನಿರ್ವಹಿಸಲು ಯೋಜನೆ ಹಾಕಿದೆ. ನಗರದಲ್ಲಿ ಹೊಸದಾಗಿ ನಿರ್ಮಾಣ ಮಾಡಲಾಗುವ ಒಂಟಿ(ಇಂಡಿಪೆಂಡೆಂಟ್) ಮನೆಗಳಿಗೆ ಈ ವ್ಯವಸ್ಥೆಯ ಅಳವಡಿಕೆ ಕಡ್ಡಾಯವಾಗಿದೆ.

ನಗರದಲ್ಲಿ ತ್ಯಾಜ್ಯ ನೀರು ಸಂಸ್ಕರಣೆ ಮತ್ತು ನಿರ್ವಹಣೆಯ ಉದ್ದೇಶದಿಂದ ಈಗಾಗಲೇ ನಗರದಲ್ಲಿರುವ 120 ಪ್ಲಾಟ್‌ಗಳಿಗಿರುವ ಅಪಾರ್ಟ್‌ಮೆಂಟ್‌ಗಳಿಗೆ ತ್ಯಾಜ್ಯ ನೀರು ಸಂಸ್ಕರಣ ಘಟಕದ ನಿರ್ಮಾಣ ಕಡ್ಡಾಯಗೊಳಿಸಿತ್ತು, ಇದರ ಮುಂದುವರಿದ ಭಾಗವಾಗಿ ಈಗ ಹೊಸದಾಗಿ ನಿರ್ಮಿಸಲಾಗುವ ಮನೆಗಳಿಗೆ ಗ್ರೇ ವಾಟರ್ ರೀಸೈಕ್ಲಿಂಗ್ ಪದ್ಧತಿ ಕಡ್ಡಾಯಗೊಳಿಸಲು ಮುಂದಾಗಿದ್ದು, ಈ ನಿಟ್ಟಿನಲ್ಲಿ ತಜ್ಞರ ಜತೆ ನಾಲ್ಕಾರು ಬಾರಿ ಚರ್ಚಿಸಿ ಅಂತಿಮ ನಿರ್ಧಾರ ಮಾಡಿದೆ. ಈ ಸಂಬಂಧ ನಿಯಮ ರೂಪಿಸಲು ಜಲಮಂಡಳಿ ರಾಜ್ಯ ಸರಕಾರಕ್ಕೆ ಶೀಘ್ರ ಪ್ರಸ್ತಾವನೆ ಸಲ್ಲಿಸಲಿದೆ.

ಶೇ.50ರಷ್ಟು ಉಳಿತಾಯ: ನಗರದಲ್ಲಿ ಶೇ.40ರಷ್ಟು ನೀರು ಅನ್ಯ ಕಾರಣಕ್ಕೆ ಪೋಲಾಗುತ್ತಿದ್ದು, ಗ್ರೇ ವಾಟರ್‌ನ್ನೂ ಚರಂಡಿಗೆ ಬಿಡುತ್ತಿರುವುದರಿಂದ ಚರಂಡಿಯ ಒತ್ತಡ ಹೆಚ್ಚಾಗುತ್ತಿದೆ. ಜತೆಗೆ ಭವಿಷ್ಯಕ್ಕೆ ಧಕ್ಕೆಯಾಗದಂತೆ ವರ್ತಮಾನದ ನೀರಿನ ಅಗತ್ಯ ಪೂರೈಸುವ ಸಾಮರ್ಥ್ಯ ಮತ್ತು ಸುಸ್ಥಿರ ನೀರಿನ ನಿರ್ವಹಣೆ ಸಾಧಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದ್ದು, ಇದರಿಂದ ಶೇ.50ರಷ್ಟು ನೀರನ್ನು ಉಳಿತಾಯ ಮಾಡಬಹುದಾಗಿದ್ದು, ಜಲಮಂಡಳಿ ವಾರ್ಷಿಕ 20 ಸಾವಿರ ಕೋಟಿ ರು.ಉಳಿಸಬಹುದಾಗಿದೆ ಎಂದು ಜಲಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

ಏನಿದು ಗ್ರೇ ವಾಟರ್ ರೀಸೈಕ್ಲಿಂಗ್

- ದಿನನಿತ್ಯ ಬಳಸುವ ಸ್ನಾನ, ಪಾತ್ರೆ ಮತ್ತು ಬಟ್ಟೆ ತೊಳೆದ, ಅಡುಗೆ ಮನೆ ಮತ್ತು ಮನೆ ಬಳಕೆಯ ಇತರೆ ನೀರನ್ನು ಮರುಬಳಕೆ ಮಾಡುವುದು.
- ಮಲಮಿಶ್ರಿತವಲ್ಲದ ತ್ಯಾಜ್ಯ ನೀರಿನ ಮರುಬಳಕೆ ವ್ಯವಸ್ಥೆ.
- ಮನೆಯಲ್ಲಿ ಸ್ಯಾನಿಟರಿ ಮತ್ತು ಗೇ ವಾಟರ್ ಪ್ರತ್ಯೇಕವಾಗಿ ಹರಿಯಲು ಎರಡು ಪೈಪ್‌ಲೈನ್ ಮಾಡಿಸುವುದು.
- ಈ ಮೂಲಕ ಗ್ರೇ ವಾಟರ್ ಸಂಗ್ರಹಕ್ಕೆ ಪ್ರತ್ಯೇಕವಾದ ಸಿಂಟೆಕ್ಸ್ ಅಥವಾ ಟ್ಯಾಂಕ್ ವ್ಯವಸ್ಥೆ ಮಾಡಿಕೊಳ್ಳುವುದು.
- ರೀಸೈಕ್ಲಿಂಗ್ ಮಾಡಿದರೆ, ಮನೆಯ ಕೈ-ತೋಟ ಮತ್ತು ಶೌಚಗೃಹದ ಫ್ಲಶ್‌ಗೆ ಬಳಸಿ ಕಾವೇರಿ ನೀರಿನ ಉಳಿತಾಯ.
- ಯಾವುದೇ ರೀತಿಯ ಶಾಂಪೂ, ಸೋಪಿನ ಕವರ್‌ಗಳು, ಕಸ, ಕಡ್ಡಿಗಳು ಗ್ರೇ ವಾಟರ್‌ನಲ್ಲಿಸೇರದಂತೆ ಕ್ರಮ ವಹಿಸಬೇಕು.
- ಪ್ರತ್ಯೇಕ ಇಂಗು ಗುಂಡಿ ನಿರ್ಮಿಸಿ ಇಂಗಿಸಬಹುದು.
- ಕಸ, ಕಡ್ಡಿ ಮತ್ತು ಘನ ವಸ್ತುಗಳು ಇಂಗುಗುಂಡಿ ಸೇರದಂತೆ ನೋಡಿಕೊಳ್ಳಬೇಕು.

ಶಿಕ್ಷಣ ತಜ್ಞರಾಗಿ ಸರಕಾರದ ಹಲವು ಉನ್ನತ ಸಮಿತಿಗಳಲ್ಲಿ ಕೆಲಸ | ಮನೋ ವಿಜ್ಞಾನದಲ್ಲಿ ಅಪಾರ ಪಾಂಡಿತ್ಯ | ಅಧ್ಯಾಪನದ ಜತೆಗೆ ಆಡಳಿತದಲ್ಲೂ ಗಟ್ಟಿತನ

ಶಿಕ್ಷಣ ತಜ್ಞ ಪ್ರೊ.ಎಂ.ಎಸ್.ತಿಮ್ಮಪ್ಪ ನಿಧನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಾಗೂ ಶಿಕ್ಷಣ ತಜ್ಞ ಪ್ರೊ.ಎಂ.ಎಸ್.ತಿಮ್ಮಪ್ಪ (83) ಅವರು ಬೆಂಗಳೂರಿನಲ್ಲಿ ಮಂಗಳವಾರ ನಿಧನರಾಗಿದ್ದಾರೆ.

ಅಕ್ಟೋಬರ್ 11ರಂದು ತಮ್ಮ ಬೆಡ್‌ರೂಮ್‌ನಲ್ಲಿ ಜಾರಿ ಬಿದ್ದಿದ್ದರಿಂದ ಮೆದುಳಿಗೆ ಗಾಯಗೊಂಡಿದ್ದ ಎಂ.ಎಸ್.ತಿಮ್ಮಪ್ಪರನ್ನು ನಗರದ ಅಪೊಲೊ ಆಸ್ಪತ್ರೆಗೆ ದಾಖಲಿಸಲಾ ಗಿತ್ತು. ಚಿಕಿತ್ಸೆ ಫಲಿಸದೆ ಸೋಮವಾರ ತಡರಾತ್ರಿ 1:50ರ ಸುಮಾರಿಗೆ ಅವರು ಕೊನೆಯುಸಿರೆಳೆದರು. 2000ರಲ್ಲಿ ಏಕೈಕ ಪುತ್ರಿ ಹಾಗೂ 2007ರಲ್ಲಿ ಪತ್ನಿ ಕಳೆದುಕೊಂಡಿದ್ದ ಅವರು, ನಿವೃತ್ತಿಯ ಬಳಿಕ ಒಬ್ಬರೇ ವಾಸವಿದ್ದರು.

ರಾಜ್ಯ ಸರಕಾರಕ್ಕೆ ಉಪಯುಕ್ತ ಸಲಹೆ: ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವೃತ್ತಿಜೀವನ ಆರಂಭಿಸಿ ಬೆಂಗಳೂರು ವಿಶ್ವವಿದ್ಯಾನಿಲಯ ಸೇರಿದ್ದ ಅವರು ಹಂತಹಂತವಾಗಿ ಉನ್ನತ ಹುದ್ದೆಗೆ ಏರಿದ್ದರು. ಅಧ್ಯಾಪಕರಿಂದ ಕುಲಪತಿ ಹುದ್ದೆಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಲಂಕರಿಸಿ ಅಧ್ಯಾಪನದ ಜತೆಗೆ ಆಡಳಿತದಲ್ಲೂ ಗಟ್ಟಿತನ ತೋರಿದ್ದರು. ಒಂದೂವರೆ ದಶಕದ ಹಿಂದೆ ನಿವೃತ್ತರಾದರೂ ಈಗಲೂ ಹಲವಾರು ಶೈಕ್ಷಣಿಕ ಚಟುವಟಿಕೆಗಳು, ಸಂಸ್ಥೆಗಳಲ್ಲಿ ಪ್ರೊ.ತಿಮ್ಮಪ್ಪ ಸಕ್ರಿಯರಾಗಿದ್ದರು. ಶಿಕ್ಷಣ ತಜ್ಞರಾಗಿ ಸರಕಾರದ ಹಲವು ಉನ್ನತ ಸಮಿತಿಗಳಲ್ಲೂ ಕೆಲಸ ಮಾಡಿದ್ದರು. ಶಿಕ್ಷಣ ವಲಯದ ಸುಧಾರಣೆ ನಿಟ್ಟಿನಲ್ಲಿ ಹಲವಾರು ಸಮಿತಿಗಳ ಮೂಲಕ ಸಲಹೆ, ಮಾರ್ಗದರ್ಶನ ನೀಡುತ್ತಲೇ ಇದ್ದರು. ವಿಶೇಷವಾಗಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ನಿಯಮ ಗಳನ್ನು ರೂಪಿಸುವಲ್ಲಿ ಅಪಾರ ಜ್ಞಾನ ಹೊಂದಿದ್ದರು. ಶೈಕ್ಷಣಿಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ರಾಜ್ಯ ಸರಕಾರಕ್ಕೆ ಸಲಹೆಗಳನ್ನು ನೀಡುತ್ತಿದ್ದರು.

ಮಂಚಾಲೆ ಸೂರ್ಯನಾರಾಯಣರಾವ್ ತಿಮ್ಮಪ್ಪ ಅವರು ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಸಾಗರ

ತಾಲ್ಲೂಕಿನ ಮಂಚಾಲೆಯಲ್ಲಿ 14 ನವೆಂಬರ್ 1942 ರಂದು ಜನಿಸಿದರು. ಸಾಗರದಲ್ಲಿ ಶಿಕ್ಷಣ ಪಡೆದು ನಂತರ ಪದವಿ ಶಿಕ್ಷಣಕ್ಕಾಗಿ ಮೈಸೂರಿಗೆ ತಿಮ್ಮಪ್ಪ ಬಂದಿದ್ದರು. ಅವರು 1962 ರಲ್ಲಿ ಮನೋವಿಜ್ಞಾನ ಮತ್ತು ಅರ್ಥಶಾಸ್ತ್ರವನ್ನು ಪ್ರಮುಖ ವಿಷಯಗಳಾಗಿ ಬಿ.ಎ.ಪದವಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು ಮತ್ತು ಮಾನಸ ಗಂಗೋತ್ರಿಯಿಂದ 1964 ರಲ್ಲಿ ಕೌನ್ಸೆಲಿಂಗ್ ಮತ್ತು ಮಾರ್ಗದರ್ಶನ ವಿಶೇಷದೊಂದಿಗೆ ಮನೋವಿಜ್ಞಾನ ದಲ್ಲಿ ಎಂ.ಎ.ಪದವಿ ಪಡೆದರು.

1967 ರಲ್ಲಿ ವೈದ್ಯಕೀಯ ಮತ್ತು ಸಾಮಾಜಿಕ ಮನೋವಿಜ್ಞಾನದಲ್ಲಿ ಡಿಪ್ಲೊಮಾ ಮತ್ತು ಪಿಎಚ್.ಡಿ ಮಾಡಿದರು. 1969 ರಲ್ಲಿ ಕ್ಲಿನಿಕಲ್ ಸೈಕಾಲಜಿಯಲ್ಲಿ ಬೆಂಗಳೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋ ಸೈನ್ಸಸ್ (ನಿಮ್ಹಾನ್ಸ್) ನಲ್ಲಿ ಉನ್ನತ ಸಂಶೋಧನೆ ಕೈಗೊಂಡಿದ್ದರು. ಅವರು ಇಂಡಿಯನ್ ಅಸೋಸಿಯೇಷನ್ ಆಫ್ ಕ್ಲಿನಿಕಲ್ ಸೈಕಾಲಜಿ (ಎಫ್ ಐಎಸಿಪಿ) ಮತ್ತು ನ್ಯಾಷನಲ್ ಅಕಾಡೆಮಿ ಆಫ್ ಸೈಕಾಲ ಜಿಯ ಫೆಲೋ ಸಹ ಆಗಿದ್ದರು. ಮಾನಸಿಕ ವಿಜ್ಞಾನದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಅವರು ವಿದೇಶಗಳಲ್ಲೂ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ತಮ್ಮ ಜ್ಞಾನ ಹಂಚಿಕೊಂಡಿದ್ದಾರೆ. ನಿಮ್ಹಾನ್ಸ್‌ನಲ್ಲಿ ವಿನೂತನ ಸಂಶೋಧನೆಗಳಿಗೆ ಸಹಕಾರ ನೀಡುತ್ತಿದ್ದರು.

ನಿಮ್ಹಾನ್ಸ್‌ನಲ್ಲಿ ಉಪನ್ಯಾಸಕರಾಗಿ ಸೇವೆ: ಡಾ.ಎಂ.ಎಸ್ .ತಿಮ್ಮಪ್ಪ ಅವರು 1969-73ರಲ್ಲಿ ನಿಮ್ಹಾನ್ಸ್‌ನಲ್ಲಿ ಸಂಶೋಧಕ ರಾಗಿ ಮತ್ತು ನಂತರ ಉಪನ್ಯಾಸಕರಾಗಿ ನಾಲ್ಕು ವರ್ಷ ಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಮನೋವಿಜ್ಞಾನದ ಸ್ನಾತಕೋತ್ತರ ವಿಭಾಗದಲ್ಲಿ 1973-77 ರಲ್ಲಿ ನಾಲ್ಕು ವರ್ಷಗಳ ಕಾಲ ಮನೋವಿಜ್ಞಾನದ ಉಪನ್ಯಾ ಸಕರಾಗಿ ಕೆಲಸ ಮಾಡಿದರು. ನಂತರ ರೀಡರ್ ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಮೈಸೂರು ವಿವಿಯಲ್ಲಿ ಮನೋವಿಜ್ಞಾನ ವಿಭಾಗದಲ್ಲಿ ಶೈಕ್ಷಣಿಕವಾಗಿ ಹಲವು ಮಾರ್ಪಾಡು ಮಾಡಿದ ಕೀರ್ತಿ ಪ್ರೊ.ತಿಮ್ಮಪ್ಪ ಅವರಿಗೆ ಸಲ್ಲುತ್ತದೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕುಲಪತಿಗಳಾಗಿ ತಿಮ್ಮಪ್ಪ: 1977 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಮನೋವಿಜ್ಞಾನ ವಿಭಾಗದಲ್ಲೇ ರೀಡರ್ ಆಗಿ ಸೇರ್ಪಡೆಗೊಂಡು ಮುಂದಿನ 29 ವರ್ಷಗಳ ಕಾಲ ಅಲ್ಲಿಯೇ ಕಾರ್ಯನಿರ್ವಹಿಸಿದರು. 1986 ರಲ್ಲಿ ಮನೋವಿಜ್ಞಾನದ ಪ್ರಾಧ್ಯಾಪಕರಾಗಿ ಬಡ್ತಿ ಪಡೆದರು. ಫೆಡರೇಶನ್ ಆಫ್ ಕರ್ನಾಟಕ ವಿಶ್ವವಿದ್ಯಾಲಯ ಶಿಕ್ಷಕರ ಸಂಘದ ಅಧ್ಯಕ್ಷರು ಮತ್ತು ಎರಡು ಅವಧಿಗೆ ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕರ ಪರಿಷತ್ತಿನ ಅಧ್ಯಕ್ಷರು, 1996-2000 ರ ಅವಧಿಯಲ್ಲಿ ನಾಲ್ಕು ವರ್ಷಗಳ ಕಾಲ ರಿಜಿಸ್ಟ್ರಾರ್ ಮತ್ತು 2002-06 ರಲ್ಲಿ ನಾಲ್ಕು ವರ್ಷಗಳ ಕಾಲ ಬೆಂಗಳೂರು ವಿಶ್ವವಿದ್ಯಾನಿಲಯ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಬೆಂಗಳೂರು ವಿವಿಯಲ್ಲಿ ಮೌನಾಚರಣೆ: ಬೆಂಗಳೂರು ವಿವಿಯ ನಿವೃತ್ತ ಕುಲಪತಿ ಡಾ.ತಿಮ್ಮಪ್ಪನವರ ಅಗಲಿಕೆಗೆ ವಿವಿ ವತಿಯಿಂದ ಸಂತಾಪ ಸೂಚಿಸಲಾಯಿತು. ಜ್ಞಾನಭಾರತಿ ಆವರಣದ ಮುಖ್ಯ ಕಚೇರಿ ಸಭಾಂಗಣದಲ್ಲಿ ನಡೆದ ಸಂತಾಪ ಸೂಚನಾ ಕಾರ್ಯಕ್ರಮದಲ್ಲಿ ಡಾ.ಎಂ.ಎಸ್.ತಿಮ್ಮಪ್ಪನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮೌನಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಡಾ.ಎಂ.ಎಸ್.ತಿಮ್ಮಪ್ಪ ಅವರ ಸೇವೆಯನ್ನು ಸ್ಮರಿಸಿಕೊಂಡರು.

ವಿಶ್ವವಿದ್ಯಾಲಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಡಾ.ತಿಮ್ಮಪ್ಪನವರ ಕೊಡುಗೆ ಅಪಾರ. ಬೆಂಗಳೂರು ವಿವಿಯ ಪ್ರಾಧ್ಯಾಪಕರಾಗಿ, ಕುಲಸಚಿವರಾಗಿ, ಕುಲಪತಿಗಳಾಗಿ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ವಿಶ್ವವಿದ್ಯಾಲಯ ಪ್ರಗತಿಗೆ ಪ್ರತ್ಯಕ್ಷ ಕಾರಣವಾಗಿದ್ದಾರೆ. ಸಾಕಷ್ಟು ಮಾನವೀಯ ಮೌಲ್ಯ,ಸಾಮಾಜಿಕ ಕಳಕಳಿ, ವೈಜ್ಞಾನಿಕ ಚಿಂತನೆ ಹೊಂದಿದ್ದ ತಿಮ್ಮಪ್ಪನವರು ಶಿಕ್ಷಕ ಮತ್ತು ಶಿಕ್ಷಕೇತರ ನೌಕರರ ಪರವಾಗಿ ಸಾಕಷ್ಟು ಶ್ರಮಿಸಿದ್ದು, ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಜೀವನ ರೂಪಿಸಿದ್ದಾರೆ. ನಿವೃತ್ತಿಯ ಬಳಿಕವೂ ಶಿಕ್ಷಣ ಕ್ಷೇತ್ರದಲ್ಲಿನ ಬದಲಾವಣೆಗಳಿಗೆ ಸದಾ ಸಕ್ರಿಯರಾಗಿದ್ದ ಅವರು ನೀತಿ ನಿರೂಪಣೆ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಡಾ.ತಿಮ್ಮಪ್ಪನವರ ಅಗಲಿಕೆ ವಿವಿ ಮತ್ತು ಅವರ ವಿದ್ಯಾರ್ಥಿ ವರ್ಗಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

-ಡಾ.ಎಸ್.ಎಂ.ಜಯಕರ, ಕುಲಪತಿ, ಬೆಂಗಳೂರು ವಿವಿ

- ಬೆಂಗಳೂರು ವಿಶ್ವವಿದ್ಯಾನಿಲಯ ಕಟ್ಟಿದ ಬೆಳೆಸಿದ ಕೀರ್ತಿ ಎಂ.ಎಸ್.ತಿಮ್ಮಪ್ಪ ಅವರಿಗೆ ಸಲ್ಲಿಕೆ
- ಅಧ್ಯಾಪಕರಿಂದ ಕುಲಪತಿ ಹುದ್ದೆಯನ್ನೂ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಲಂಕರಿಸಿ ಉತ್ತಮ ಆಡಳಿತ
- ಶಿಕ್ಷಣ ತಜ್ಞರಾಗಿಯೂ ಹಲವು ಕ್ಷೇತ್ರಗಳಲ್ಲಿ ಅಪಾರ ಸೇವೆ
- ಶಿಕ್ಷಣ ವಲಯದ ಸುಧಾರಣೆ ನಿಟ್ಟಿನಲ್ಲಿ ಹಲವಾರು ಸಮಿತಿಗಳ ಮೂಲಕ ಸಲಹೆ, ಮಾರ್ಗದರ್ಶನ
- ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳ ಮಂಡನೆ
- ಮಾನವ ಪ್ರಜ್ಞೆ ಮತ್ತು ವೈಯಕ್ತಿಕ ಬೆಳವಣಿಗೆಯ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ
- ವಿಜ್ಞಾನ, ಆಧ್ಯಾತ್ಮ, ಸಂಸ್ಕೃತಿ ಮತ್ತು ಕಲೆ ಬಗ್ಗೆ ಅಪಾರ ಆಸಕ್ತಿ
- ಬೆಂಗಳೂರು ವಿವಿಯಲ್ಲಿ ಇ ಆಡಳಿತ ವ್ಯವಸ್ಥೆ ಜಾರಿಗೆ
- ಕುಲಪತಿ ಆಗಿದ್ದಾಗ ಎಂ.ಎಸ್.ತಿಮ್ಮಪ್ಪ ಅವರು ಹೊಸ ಕೋರ್ಸ್ ಪರಿಚಯಿಸಿದ ಹೆಗ್ಗಳಿಕೆ

ಪಾರದರ್ಶಕ ಆಡಳಿತ

ವಿ.ಸಿಗಳಾಗಿ ನೇಮಕಗೊಳ್ಳಲು ಅರ್ಹರಾದ ನೂರಾರು ಮಂದಿಯ ಪಟ್ಟಿಯನ್ನು ತಜ್ಞರ ಸಮಿತಿ ಸಿದ್ಧಪಡಿಸಲಿದ್ದು, ನಿವೃತ್ತಿ ಹೊಂದಿದವರನ್ನು ಕೈಬಿಟ್ಟು ಹೊಸದಾಗಿ ಅರ್ಹರಾದವರ ಸೇರ್ಪಡೆಗೆ ಆಗಿಂದಾಗ ಸಮಿತಿಯು ಪಟ್ಟಿ ಪರಿಷ್ಕರಿಸುತ್ತದೆ. ಯಾವುದೇ ವಿ.ವಿ ಕುಲಪತಿ ನೇಮಕ ಅಗತ್ಯವಾದಾಗ ಸಿಎಂ ಅಧ್ಯಕ್ಷತೆಯ ಉನ್ನತ ಶಿಕ್ಷಣ ಸಚಿವರು ಹಾಗೂ ಇನ್ನಿತರರನ್ನು ಒಳಗೊಂಡ ಉನ್ನತಾಧಿಕಾರ ಸಮಿತಿಯು ಸೂಕ್ತ ಹೆಸರನ್ನು ಆಯ್ಕೆ ಮಾಡಿಕೊಂಡು ರಾಜ್ಯಪಾಲರಿಗೆ ಶಿಫಾರಸು ಮಾಡುತ್ತದೆ. ಇದರಿಂದ ಪಾರದರ್ಶಕತೆ ಸಾಧ್ಯ. ವಿ.ಸಿ.ಗಳ ನೇಮಕದಲ್ಲಿ ಹಣ, ಜಾತಿ, ಪ್ರದೇಶ ಹಾಗೂ ರಾಜಕೀಯ ವಿಚಾರಗಳೇ ಮುಖ್ಯವಾಗಬಹುದು ಎಂಬ ಅಭಿಪ್ರಾಯವನ್ನು ವಿಶ್ರಾಂತ ಕುಲಪತಿ ಡಾ.ಎಂ.ಎಸ್.ತಿಮ್ಮಪ್ಪ ಅವರು ಪಾರದರ್ಶಕ ಹಾಗೂ ವ್ಯವಸ್ಥೆ ಸುಧಾರಣೆ ಬಗ್ಗೆ ಅವರ ಮನದಾಳದ ಮಾತುಗಳನ್ನು ಸ್ಮರಣೆ ಮಾಡಿಕೊಳ್ಳಬಹುದಾಗಿದೆ.

ಹಲವು ಸಮಿತಿಗಳಲ್ಲಿ ಸಕ್ರಿಯ

ಡಾ.ಎಂ.ಎಸ್.ತಿಮ್ಮಪ್ಪ ಅವರು ಮೂವತ್ತು ವರ್ಷಗಳ ಕಾಲ ಸಂಶೋಧನಾ ವಿದ್ಯಾರ್ಥಿಗಳಿಗೆ ಮನೋವಿಜ್ಞಾನ ಕಲಿಸಿದರು. ಮೆದುಳು-ನಡವಳಿಕೆ (ದೇಹ-ಮನಸ್ಸು) ಸಂಬಂಧ, ಮಾನವ ಪ್ರಜ್ಞೆ ಮತ್ತು ವೈಯಕ್ತಿಕ ಬೆಳವಣಿಗೆಯ ಕ್ಷೇತ್ರದಲ್ಲಿ ಅವರು ಹೆಚ್ಚಿನ ಸಂಶೋಧನೆ ಮಾಡಿದ್ದಾರೆ. ಹಲವಾರು ಡಾಕ್ಟರೇಟ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದರು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದರು. ಹಲವಾರು ಜರ್ನಲ್‌ಗಳಲ್ಲಿ ನಿಯತಕಾಲಿಕೆಗಳನ್ನು ಪ್ರಕಟಿಸಿದ್ದರು. ಕೌನ್ಸೆಲಿಂಗ್ ಮತ್ತು ಸೈಕೋಥೆರಪಿ ಅಭ್ಯಾಸ ಮಾಡುವ ತರಬೇತಿ ಪಡೆದ ಕ್ಲಿನಿಕಲ್ ಸೈಕಾಲಜಿಸ್ಟ್ ಆಗಿದ್ದರು. ಅವರು ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಪ್ರೇರಣೆ, ಪರಸ್ಪರ ಸಂಬಂಧಗಳು, ನಾಯಕತ್ವ, ತಂಡ ನಿರ್ಮಾಣ, ನಡವಳಿಕೆ ಬದಲಾವಣೆ ಮತ್ತು ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಉದ್ಯೋಗಿಗಳಿಗೆ ಒತ್ತಡ ನಿರ್ವಹಣೆ ವಿಷಯಗಳ ಕುರಿತು ತರಬೇತಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಶಿಕ್ಷಣ ತಜ್ಞರಾಗಿ ಹಲವಾರು ಸಮಿತಿಗಳಲ್ಲಿ ಸಕ್ರಿಯರಾಗಿದ್ದವರು.

ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ

ಕಲಬುರಗಿ: ಮಾರಕಾಸ್ತ್ರಗಳಿಂದ ಕೊಚ್ಚಿ ರೌಡಿಶೀಟರ್ ಬರ್ಬರವಾಗಿ ಹತ್ಯೆ ಮಾಡಿದ ಘಟನೆ ಕಲಬುರಗಿ ತಾಲೂಕಿನ ಪಟ್ಟಣ ಗ್ರಾಮದಲ್ಲಿ ನಡೆದಿದೆ. ಸೋಮು ತಾಳಿಕೋಟಿ (40) ಕೊಲೆಯಾಗಿರುವ ರೌಡಿಶೀಟರ್ ಆಗಿ ದ್ದು, ಬರ್ಬ ರವಾಗಿ ಕೊಲೆ ಮಾಡಿದ ದುಷ್ಕರ್ಮಿಗಳು ಆಳಂದ ರಸ್ತೆಯ ರೈಲ್ವೆ ಹಳಿ ಬಳಿ ಶವವನ್ನು ಬಿಸಾಕಿದ್ದಾರೆ. ರೌಡಿಶೀಟರ್ ಸೋಮು ತಾಳಿಕೋಟಿ ಕಲಬುರಗಿ ತಾಲೂಕಿನ ಪಟ್ಟಣ ಗ್ರಾಮದ ನಿವಾಸಿಯಾಗಿದ್ದು,ಕೆಲ ತಿಂಗಳ ಹಿಂದೆ ಪಟ್ಟಣ ಗ್ರಾಮದ ದಾಬಾ ಮಾಲೀಕ ರೊಂದಿಗೆ ಗಲಾಟೆ ಮಾಡಿಕೊಂಡಿದ್ದನು. ಸಾಬಾ ಮಾಲೀಕ ನನ್ನು ಸೋಮು ಆಂಡ್ ಗ್ಯಾಂಗ್ ಹಲ್ಲೆ ಮಾಡಿದ್ದರು. ಹಳೆಯ ವೈಷಮ್ಯದ ಹಿನ್ನೆಲೆಯಲ್ಲಿ ಕೊಲೆ ಮಾಡಲಾಗಿದೆ ಎಂಬ ಶಂಕೆ ವ್ಯಕ್ತವಾಗಿದ್ದು,ಈ ಕುರಿತು ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಸಲ್ ಓಡಾಟ ಶಂಕೆ: ಮನೆಯಲ್ಲಿ ಬಂದೂಕು ಪತ್ತೆ

ಚಿಕ್ಕಮಗಳೂರು: ನಕ್ಸಲ್ ಸಹಾನುಭೂತಿಯುಳ್ಳ ಇಬ್ಬರನ್ನು ಶೃಂಗೇರಿ ಪೊಲೀಸ್ ಠಾಣೆಗೆ ಕರೆತಂದು ವಿಚಾರಣೆ ನಡೆಸಿರುವ ಬೆನ್ನಲ್ಲೆ, ನಕ್ಸಲ್ ನಿಗ್ರಹ ದಳದ ಸಿಬ್ಬಂದಿ ಮತ್ತು ಪೊಲೀಸರು ಕಾರ್ಯಾಚರಣೆಗೆ ಇಳಿದಿದ್ದಾರೆ.

ಕೊಪ್ಪ ತಾಲೂಕು ಕಡೆಗುಂಡಿ ಗ್ರಾಮದವರೊಬ್ಬರ ಮನೆಯೊಂದರಲ್ಲಿ ಮೂರು ಬಂದೂಕು ಪತ್ತೆಯಾಗಿದ್ದು, ಈ ಮನೆಗೆ ನಕ್ಸಲರ ತಂಡ ಭೇಟಿ ನೀಡಿದ್ದಾರೆಂಬ ಸುಳಿವು ಸಿಕ್ಕಿದೆ ಎಂಬ ಸುದ್ದಿ ಹೊರಬಿದ್ದಿದೆ. ಬಂದೂಕು ಸಿಕ್ಕಿರುವ ಹಿನ್ನೆಲೆ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಪಶ್ಚಿಮ ವಲಯ ಐಜಿಪಿ ಅಮಿತ್, ಸಿಂಗ್ ಸಿಐಡಿ ಎಡಿಜಿಪಿ ಪ್ರಣಬ್ ಮೊಹಂತಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆಂಬ ಮಾಹಿತಿ ಲಭ್ಯವಾಗಿದೆ.

ನಕ್ಸಲ್ ತಂಡದವರು ಕೊಪ್ಪ, ಶೃಂಗೇರಿ ತಾಲೂಕು ವ್ಯಾಪ್ತಿಯಲ್ಲಿ ಸಭೆಗಳನ್ನು ನಡೆಸಿರುವ ಶಂಕೆ ವ್ಯಕ್ತವಾಗಿದ್ದು, ಜಿಲ್ಲೆಯಲ್ಲಿ ಪೊಲೀಸ್ ಮತ್ತು ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿಗಳು ಅಧಿಕಾರಿಗಳು ಅಲರ್ಟ್ ಆಗಿದ್ದಾರೆ. ನಕ್ಸಲ್ ಸಹಾನುಭೂತಿಯುಳ್ಳ ಇಬ್ಬರನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ. ನಕ್ಸಲ್ ಪ್ರಭಾವಿತ ಪ್ರದೇಶಗಳಲ್ಲಿ ತೀವ್ರ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ. ಚೆಕ್ಪೋಸ್ಟ್ ಗಳಲ್ಲಿ ನಾಕಾಬಂಧಿ ಹಾಕಿ ತಪಾಸಣೆಯನ್ನು ತೀವ್ರಗೊಳಿಸಲಾಗಿದೆ.

ಮಲೆನಾಡಿನಲ್ಲಿ ಮತ್ತೆ ಆತಂಕ

ಶೃಂಗೇರಿ ಮತ್ತು ಕೊಪ್ಪ ತಾಲೂಕಿನಲ್ಲಿ ನಕ್ಸಲರು ಓಡಾಡಿರುವ ಮಾಹಿತಿ ಆಧರಿಸಿ ಎರಡೂ ತಾಲೂಕಿನ ಹಲವೆಡೆ ನಕ್ಸಲ್ ನಿಗ್ರಹ ಪಡೆಯ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರಕುಮಾರ್ ದಯಾಮ ನೇತೃತ್ವದಲ್ಲಿ ಕೂಂಬಿಂಗ್ ನಡೆಯುತ್ತಿದ್ದು, ಪಶ್ಚಿಮ ವಲಯ ಐಜಿಪಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ಶೃಂಗೇರಿಯಲ್ಲಿ ಮೊಕ್ಕಾಂ ಹೂಡಿದ್ದಾರೆ. ಎಎನ್‌ಎಫ್ ಕ್ಯಾಂಪ್ ನಲ್ಲಿದ್ದ ಸಿಬ್ಬಂದಿಗಳು ಏಕಕಾಲದಲ್ಲಿ ಕಾರ್ಯಾಚರಣೆಗೆ ಇಳಿದಿದ್ದಾರೆ ಎನ್ನಲಾಗುತ್ತಿದೆ. ಹಲವೆಡೆಗಳಲ್ಲಿ ಚೆಕ್‌ಪೋಸ್ಟ್ ಅಳವಡಿಸಿ ತೀವ್ರ ತಪಾಸಣೆ ನಡೆಸಲಾಗುತ್ತಿದೆ. ಎಎನ್‌ಎಫ್ ತಂಡ ಈಗ ಹಲವು ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ ಎನ್ನಲಾಗುತ್ತಿದೆ ಎಂದು ಮೂಲಗಳಿಂದ ತಿಳಿದು ಬಂದಿದ್ದು ಮಲೆನಾಡಿನಲ್ಲಿ ನಕ್ಸಲ್ ಆತಂಕ ಮತ್ತೆ ಮನೆಮಾಡಿದೆ.

ಕಡವೆ ಬೇಟೆ: ಆರೋಪಿ ಬಂಧನ

ಶಿವಮೊಗ್ಗ: ದಾನವಾಡಿ ಕಿರು ಅರಣ್ಯ ಪ್ರದೇಶದಲ್ಲಿ ಕಡವೆ ಬೇಟೆಯಾಡಿದ್ದ ಆರೋಪಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ. ಬಂಧಿತನನ್ನು ಮಂಜು ನಾಥ್ ಎಂದು ಗುರುತಿಸಲಾಗಿದೆ. ಐವರು ದುಷ್ಕರ್ಮಿ ಗಳು ಸೇರಿ ಭದ್ರಾವತಿ ತಾಲೂಕಿನ ದಾನವಾಡಿ ಅರಣ್ಯ ಪ್ರದೇಶದಲ್ಲಿ ಕಡವೆಯನ್ನು ಬೇಟೆಯಾಡಿದ ಮಾಹಿತಿ ತಿಳಿದು ಅಧಿಕಾರಿಗಳು ದಾಳಿ ನಡೆಸಿ ಒಬ್ಬ ಆರೋಪಿ ಯನ್ನು ಬಂಧಿಸಿದ್ದಾರೆ. ಉಳಿದ ನಾಲ್ವರು ಆರೋಪಿಗಳು ಸ್ಥಳದಿಂದ ಪರಾರಿಯಾ ಗಿದ್ದಾರೆ. ಕಾರ್ಯಾಚರಣೆ ವೇಳೆ ಕಡವೆಯ ಮಾಂಸವನ್ನು ಅರಣ್ಯಾಧಿಕಾರಿಗಳು ಜಪ್ತಿ ಮಾಡಿದ್ದಾರೆ. ಭದ್ರಾವತಿ ವಲ ಯದ ಉಪ ಅರಣ್ಯ ಸಂರ ಕ್ಷಣಾಧಿ ಕಾರಿ ಅಶೀಶ್ ರೆಡ್ಡಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದ್ದು, ಆರೋಪಿಯನ್ನು ವಿಚಾರಣೆಗೆ ಒಳಪಡಿಸ ಲಾಗಿದೆ. ಉಳಿದ ಆರೋಪಿಗಳ ಬಂಧನಕ್ಕೆ ಅರಣ್ಯ ಅಧಿಕಾರಿಗಳು ಬಲೆ ಬೀಸಿದ್ದಾರೆ.

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು-560059. ದೂರವಾಣಿ: 080-28484515 / 28484518

ಸಂಖ್ಯೆ: ಡಿಪಿಎಸ್/ಪಿಯುಆರ್‌ಡಿ/ಕೆಟಿಪಿಪಿ/2/2024-ಪಿಯುಆರ್ ದಿನಾಂಕ: 07-11-2024

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ರಿಂಟಿಂಗ್ ಮತ್ತು ಇತರ ವಿವಿಧ ಯಂತ್ರಗಳನ್ನು ಸರಬರಾಜು ಮತ್ತು ಅಳವಡಿಸಲು ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 104.00 ಲಕ್ಷಗಳು** ಹಾಗೂ ಇ.ಎಂ.ಡಿ. ಯು **ರೂ.5.33 ಲಕ್ಷ**ಗಳಾಗಿರುತ್ತದೆ. ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: **14-11-2024 ಬೆಳಿಗ್ಗೆ 11.30ಕ್ಕೆ** ಹಾಗೂ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **22-11-2024, 17.30 ಗಂಟೆಗೆ.** ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ನಿರ್ದೇಶಕರು (ಪ್ರ)
ವಾಸಾಸಂಇ/ವಾ.ಪ್ರ/3151/ಎಂಎಎ/2024-25

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ನವನಗರ ಹುಬ್ಬಳ್ಳಿ

ಸಂಖ್ಯೆ: ಹು.ಧಾ.ನ.ಪ್ರಾ/ಇ.ಹ.ಪ್ರ/01/2024-25/3235 ದಿನಾಂಕ: 12/11/2024

ಇ-ಹರಾಜು ಪ್ರಕಟಣೆ
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿಯ ಮೂಲೆ ನಿವೇಶನಗಳು ಹಾಗೂ ಬಿಡಿ ನಿವೇಶನಗಳ ಇ-ಹರಾಜು ಪ್ರಕಟಣೆ

(1) ಇ-ಹರಾಜು ತೆರೆಯುವ ದಿನಾಂಕ: **14-11-2024** ಭಾರತೀಯ ಕಾಲಮಾನ **ಮದ್ಯಾಹ್ನ 4.00** ಗಂಟೆಯ ನಂತರ.
(2)ಇ-ಹರಾಜಿನಲ್ಲಿ ಪಾಲ್ಗೊಳ್ಳಲು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ: **02-12-2024** ಭಾರತೀಯ ಕಾಲಮಾನ **ಮಧ್ಯಾಹ್ನ 4:00** ಗಂಟೆವರೆಗೆ.
(3) ಇ-ಹರಾಜನಲ್ಲಿ ನೇರ ಬಿಡ್ಡಿಂಗ್ ದಿನಾಂಕ: **03-12-2024** ಭಾರತೀಯ ಕಾಲಮಾನ ಮುಂಜಾನೆ **11.00 ಗಂಟೆ**ಯಿಂದ ಆರಂಭ.
(4) ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ: **05-12-2024** ಭಾರತೀಯ ಕಾಲಮಾನ ಮಧ್ಯಾಹ್ನ **4.00 ಗಂಟೆಗೆ** (ಡೆಲ್ಟಾ ಟೈಮ್ 5.00 ನಿಮಿಷ).
ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://www.kppp.karnataka.gov.in ನ್ನು ಸಂಪರ್ಕಿಸಿ.

ಸಹಿ/- (ಶಾಕೀರ್ ಸನದಿ)ಅಧ್ಯಕ್ಷರು, ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
ಸಹಿ/-(ಡಾ॥ ಸಂತೋಷಕುಮಾರ ಬಿರಾದಾರ) ಆಯುಕ್ತರು ಕೆ.ಎ.ಎಸ್. ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
ವಾ.ಸಾ.ಇ/ಧಾರವಾಡ/603/ದೇಶಪಾಂಡೆಪಬ್ಲಿಸಿಟಿ/2024-25

ನಗರಸಭಾ ಕಾರ್ಯಾಲಯ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ-573201.
ದೂ.ಸಂ: 08172-268276, 233702 Email: commn_hassan@yahoo.com
ಸಂ:ಪೌಆ/ಹಾಸನ/ಇ.ವಿ/ಜೆ.ಇ-2/ಟೆಂಡರ್ ಶಾಖೆ/2024-25
ದಿನಾಂಕ:08-11-2024

ಟೆಂಡರ್ ಪ್ರಕಟಣೆ
: ಕೆ.ಪಿ.ಪಿ. ಪೋರ್ಟಲ್ ಮೂಲಕ :

ಹಾಸನ ನಗರಸಭೆಯ ವಿವಿಧ ಅನುದಾನದಡಿಯಲ್ಲಿ ಈ ಕೆಳಕಂಡ ವಿವರದ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ದರ್ಜೆಯ ಗುತ್ತಿಗೆದಾರರುಗಳಿಂದ ಷರತ್ತುಗಳಿಗೊಳಪಟ್ಟು ಕೆ.ಪಿ.ಪಿ.ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕ್ರ.ಸಂ.ಕಾಮಗಾರಿ ವಿವರ: 2023-24 ನೇ ಸಾಲಿನ ನಗರಸಭಾ ಅನುದಾನ 1.DMA/2023-24/RD/WORK_INDENT17606/CALL-3 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 4.92 ಇ.ಎಂ.ಡಿ. (ರೂ.ಗಳಲ್ಲಿ): 12,300.00 2020-21ನೇ ಸಾಲಿನ 15ನೇ ಹಣಕಾಸು ಯೋಜನೆಯ ಉಳಿಕೆ ಅನುದಾನ 2.DMA/2023-24/RD/WORK_INDENT16598/CALL-3 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 6.00 ಇ.ಎಂ.ಡಿ. (ರೂ.ಗಳಲ್ಲಿ):15,000.00 2020-21ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ 3.DMA/2024-25/WS/WORK_INDENT 31980 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 10.35 ಇ.ಎಂ.ಡಿ. (ರೂ.ಗಳಲ್ಲಿ):22,000.00 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ 4.DMA/2024-25/WS/WORK_INDENT 31983 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 20.00 ಇ.ಎಂ.ಡಿ. (ರೂ.ಗಳಲ್ಲಿ):42,400.00 2024-25ನೇ ಸಾಲಿನ ನಗರಸಭಾ ಅನುದಾನ. 5.DMA/2024-25/OW/WORK_INDENT26855/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 14.85 ಇ.ಎಂ.ಡಿ. (ರೂ.ಗಳಲ್ಲಿ):18,563.00 6.DMA/2024-25/WS/WORK_INDENT26859/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 13.75 ಇ.ಎಂ.ಡಿ. (ರೂ.ಗಳಲ್ಲಿ):17,188.00 7.DMA/2023-24/RD/WORK_INDENT26831/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 15.00 ಇ.ಎಂ.ಡಿ. (ರೂ.ಗಳಲ್ಲಿ):18,750.00 ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-1 ಟೆಂಡರ್ ಫಾರಂ ಬೆಲೆ- ಕೆ.ಪಿ.ಪಿ. ಪೋರ್ಟಲ್‌ನಂತೆ ಕಾಲಾವಧಿ- 03 ತಿಂಗಳು (ಮಳೆಗಾಲ ಹೊರತು ಪಡಿಸಿ) 1.ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27-11-2024 ರ ಸಂಜೆ 05.00 ಗಂಟೆಯವರೆಗೆ. 2.ಟೆಂಡರ್ ತೆರೆಯುವ ದಿನಾಂಕ: 28-11-2024 ರ ಬೆಳಿಗ್ಗೆ 5.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಸಹಿ/-ಅಧ್ಯಕ್ಷರು, ನಗರಸಭೆ, ಹಾಸನ.
ಸಹಿ/-ಪೌರಾಯುಕ್ತರು, ನಗರಸಭೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/646/ಕೆಎಸ್‌ಎಂಸಿಎ/2024-25

ಪುರಸಭಾ ಕಾರ್ಯಾಲಯ ಅಂಕೋಲಾ (ಉ.ಕ) 581314
ದೂರವಾಣಿ/ಫ್ಯಾಕ್ಸ್: 08388-230268 Website: www.ankolatown.gov.in
Email: itstaff_ulb_ankola@yahoo.com, co_ankola@yahoo.in
ಕ್ರ:ಪು.ಸ.ಅಂ.ಕಾ.ವಿ.ಟಿ.ಪ್ರ:ಎಂ.ಆರ್.ಎಫ್:ವಿವ/2024-25 ದಿನಾಂಕ: 08/11/2024

ತಿದ್ದುಪಡಿ ಪ್ರಕಟಣೆ

ಈ ಕಛೇರಿಯಿಂದ ದಿನಾಂಕ: 04/11/2024 ರಂದು ಪ್ರಕಟಣೆ ನೀಡಲಾದ ಟೆಂಡರಿನಲ್ಲಿಯ ಎಂ.ಆರ್.ಎಫ್ ಘಟಕ ನಿರ್ಮಾಣ/ಯಂತ್ರೋಪಕರಣ ಪೂರೈಕೆಯ ಟೆಂಡರಿಗೆ ದರ ಸಲ್ಲಿಸಲು ಕೊನೆಯ ದಿನಾಂಕಗಳು ಈ ಕೆಳಕಂಡಂತೆ ತಿದ್ದುಪಡಿಯಾಗಿರುತ್ತದೆ.
(1) ತಾಂತ್ರಿಕ ಹಾಗೂ ಆರ್ಥಿಕವಾಗಿ ದ್ವಿ-ಲಕೋಟೆಯಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 19/11/2024 ಸಂಜೆ 4:00 ಗಂಟೆ (2) ಇ-ಪ್ರೊಕ್ಯೂರ್‌ಮೆಂಟ್ ಬಿಡ್ ತೆರೆಯುವ ದಿನಾಂಕ: 20/11/2024 ಸಂಜೆ: 5.00 ಗಂಟೆ

ಸಹಿ/- ಮುಖ್ಯಾಧಿಕಾರಿ, ಪುರಸಭೆ ಅಂಕೋಲಾ
ಸಹಿ/- ಅಧ್ಯಕ್ಷರು ಪುರಸಭೆ ಅಂಕೋಲಾ
DIPR/ADK/KSMCA/499/24-25 dt: 12.11.2024

ಜಿಲ್ಲಾಧಿಕಾರಿಯವರ ಕಛೇರಿ, ತುಮಕೂರು ಜಿಲ್ಲೆ, ತುಮಕೂರು
ಟೆಂಡರ್‌ಬುಲೆಟಿನ್ ಸಂಖ್ಯೆ:ಜಿಪವಕ:ತುಮ:ಹೊ.ಸಂ.ಮೊರಾರ್ಜಿ:ಸಿಆರ್:06/2024-25, ದಿನಾಂಕ: 13-11-2024

ಮರು-ಟೆಂಡರ್ ಬುಲೆಟಿನ್

ಟೆಂಡರ್ ಹೊರಡಿಸುವ ಪ್ರಾಧಿಕಾರ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ. ಟೆಂಡರ್ ಕ್ರಮಾಂಕ: ಜಿಪವಕ:ತುಮ:ಹೊ.ಸಂ.ಮೊ.ದೇ:ಸಿಆರ್:06/2024-25. ಕಾಮಗಾರಿ ವಿವರ : ಹೊರಸಂಪನ್ಮೂಲ ಏಜೆನ್ಸಿಯಿಂದ ವಸತಿಶಾಲೆಗಳಿಗೆ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾ ಸಿಬ್ಬಂದಿ ಹಾಗೂ ಇತರೆ ಗ್ರೂಪ-ಡಿ ನೌಕರರ ಸೇವೆಯನ್ನು ಪಡೆಯಲು ಅಲ್ಪಾವಧಿ ಮರು ಟೆಂಡರ್ ಪ್ರಕಟಿಸುವ ಬಗ್ಗೆ. ಅಂದಾಜು ಮೊತ್ತ (ಕೋಟಿಗಳಲ್ಲಿ): **2.25** ಇ.ಎಂ.ಡಿ ಮೊತ್ತ (ರೂಗಳಲ್ಲಿ): **3,38,000/-.** ಖಾಲಿ ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ : **13/11/2024.** ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **27/11/2024.** ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **27/11/2024.** ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ **28/11/2024.** ಟೆಂಡರ್ ಸ್ವೀಕರಿಸುವ ಪ್ರಾಧಿಕಾರ : **ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ.**

ಸಹಿ/- ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ತುಮಕೂರು ಜಿಲ್ಲೆ.
DIPR/TUM/RO-79/24-25/Oysters

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ವಿಜಯನಗರ.
ಸಂಖ್ಯೆ: EE/RWS&SD/VJNR/e-tender/Tech/2024-25/
ದಿನಾಂಕ:11-11-2024

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ-14/2024-25.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು 2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಅನುಮೋದನೆಯಾದ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ **05** ಕಾಮಗಾರಿಗಳಿಗೆ **ರೂ 243.20** ಲಕ್ಷ ರೂಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ-ಪ್ರೊಕ್ಯೂರಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ **ದಿನಾಂಕ:11.11.2024** ರಿಂದ **25.11.2024**ರ ಸಾಯಂಕಾಲ 05.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ **ದಿನಾಂಕ:26.11.2024**ರಂದು ಸಾಯಂಕಾಲ 05.05 ಗಂಟೆಗೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ವೆಬ್‌ಸೈಟ್‌ನಲ್ಲಿ ಪಡೆಯಬಹುದು. **(www.kppp.karnataka.gov.in)** ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನೀಯರ್, ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/359

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU-210/1947/2024-25 ದಿನಾಂಕ:12.11.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಸುರೇಶ್ ಜಿ.ನಾನ್ವಾನಿ ಮತ್ತು ಮೆ॥ ವರ್ಕ್ ಸಿನರ್ಜಿ ಹೋಮ್ಸ್ ಪ್ರೈ.ಲಿ.,ರವರು ನಂ.9, 2ನೇ ಮಹಡಿ, ಬಿಇಎಲ್ ಏರ್‌ಡ್ರೈವ್ ಮೇಕ್ರಿ ಸರ್ಕಲ್, ಬಳ್ಳಾರಿ ರಸ್ತೆ, ಬೆಂಗಳೂರು-560 032	ಯಲಹಂಕ	ಜಾಲ	ಹುಣಸ ಮಾರನ ಹಳ್ಳಿ	143/1, 143/3, 145/2, 152/2, 155/1, 155/2, 162/1, 165/1, & 165/7	ಒಟ್ಟು 13ಎ-20ಗುಂ (ಬಂಡಿದಾರಿ ಬಗ್ಗೆ 0-04 ಗುಂ ಖರಾಬು ಹೊರತು ಪಡಿಸಿ)	ವ್ಯವಸಾಯ	ವಸತಿ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗ'ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ - 562 110.
ಸಂ: ಬಿಐಎಎಪಿಎ/ಟಿಪಿ/ಭೂಉಬ/85/2024-25/1872 ದಿನಾಂಕ: 06-11-2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎ.ವಿ.ನಾರಾಯಣಸ್ವಾಮಿ ಬಿನ್ ಲೇ॥ ವೆಂಕಟೇಗೌಡ	ದೇವನಹಳ್ಳಿ	ಕಸಬಾ	ಆವತಿ	90/6	2-20	ವ್ಯವಸಾಯ	ವಸತಿ

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಪ್ರಶ್ನಿತ ಜಮೀನಿನ ಪರಿಸರದಲ್ಲಿ ಅತಿ ಹೆಚ್ಚಾಗಿ ವಸತಿಯೇತರ ಹಾಗೂ ವಸತಿ ಅಭಿವೃದ್ಧಿಗಳು ಬರುತ್ತಿದ್ದು, ಭವಿಷ್ಯದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚಿನ ಬೇಡಿಕೆ ಇದ್ದು, ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ ಭೂಉಪಯೋಗ ವಲಯ"** ದಿಂದ **"ವಸತಿ ವಲಯ"** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ
ವಾಸಾಸಂಇ/ವಾಪ್ರ/ಸ್ಪ್ಯಾನ್/3156/2024-25

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ವಕ್ಫ್ ಮಂಡಳಿಯ ಆಟಾಟೋಪ ಮಿತಿಮೀರಿದೆ. ಕಣ್ಣಿಗೆ ಕಂಡ ಭೂಮಿಯನ್ನೆಲ್ಲ ತನ್ನದು ಎನ್ನುವ ಮೂಲಕ ಭಾರತದ ಭೂಮಿಯ ಮೇಲೆ ಹಕ್ಕು ಸ್ವಾಮ್ಯ ಸ್ಥಾಪಿಸುತ್ತಿದ್ದಾರೆ. ಕರ್ನಾಟಕದಲ್ಲಿ ಬಿರುಗಾಳಿ ಎಬ್ಬಿಸಿದ ವಕ್ಫ್ ಈಗ ಕೇರಳಕ್ಕೂ ಕಾಲಿರಿಸಿದೆ. ಎರ್ನಾಕುಲಂ ಜಿಲ್ಲೆಯ ಮುನಂಬಂ ಎಂಬ ಇಡೀ ಗ್ರಾಮವನ್ನೇ ತನ್ನ ಆಸ್ತಿ ಎನ್ನುತ್ತಿದೆ ವಕ್ಫ್. 600ಕ್ಕೂ ಅಧಿಕ ಕುಟುಂಬಗಳಿರುವ ಗ್ರಾಮಕ್ಕೆ ಗ್ರಾಮವೇ ಜಮೀನು ಕಳೆದುಕೊಳ್ಳುವ ಭೀತಿಯಲ್ಲಿದೆ.

ಶ್ರೀಕಂಠ ಸ್ವಾಮಿ, ಬೆಂಗಳೂರು

ಕೇರಳದಲ್ಲಿ ಆಳುತ್ತಿರುವುದು ಕಮ್ಯುನಿಸ್ಟ್ ಪಕ್ಷ, ಅಲ್ಲಿ ವಿರೋಧ ಪಕ್ಷ ಕಾಂಗ್ರೆಸ್ ಎನ್ನುವುದು ನಿಮಗೆ ಗೊತ್ತಿಲ್ಲವೇ..? ನಿಮಗೆ ಎಲ್ಲ ಕಡೆ ಕಾಂಗ್ರೆಸ್ ಕಾಣುತ್ತಿದೆ, ಕಾಮಾಲೆ ರೋಗ ಆಗಿದೆ.

ಸಂಜೆ: 06.55 ರಿಂದ 08.15 ರವರೆಗೆ

ವಿಶ್ವವಾಣಿ ಕ್ಲಬ್ ಹೌಸ್

ಕಾರ್ನರ್ 13.11.2024



ಬುಧವಾರದ ಅತಿಥಿ

ಶ್ರೀ ರವಿಕುಮಾರ್ ವೆಂ ಚಿತ್ರದುರ್ಗ

ವಿಷಯ

ಸೋಮೇಶ್ವರ ಶತಕ

vishwavani.news

ಎಚ್.ಡಿ.ಕೋಟೆಯಲ್ಲಿ 443 ಕೋಟಿಯ ಕಾಮಗಾರಿಗಳಿಗೆ ಸಿಎಂ ಸಿದ್ದರಾಮಯ್ಯ ಭೂಮಿಪೂಜೆ

ಗ್ಯಾರಂಟಿ ಜತೆ ಅಭಿವೃದ್ಧಿಗೂ ಅನುದಾನ

ಮೈಸೂರು: ನಮ್ಮ ಸರಕಾರ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ನುಡಿದಂತೆ ನಡೆದಿದ್ದೇವೆ. ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 58 ಸಾವಿರ ಖರ್ಚು ಮಾಡುತ್ತಿದ್ದರೂ ಅಭಿವೃದ್ಧಿ ಯೋಜನೆಗಳಿಗೆ ಸೂಕ್ತ ಅನುದಾನ ನೀಡಲಾಗುತ್ತಿದೆ. ಇದಕ್ಕೆ ಶಂಕುಸ್ಥಾಪನೆ ಮಾಡಿದ ಕಾಮಗಾರಿಗಳೇ ಸಾಕ್ಷಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹೆಗ್ಗಡದೇವನ ಕೋಟೆಯ ಪದವಿಪೂರ್ವ ಕಾಲೇಜು ಆವರಣದಲ್ಲಿ ವಾಲ್ಮೀಕಿ ಜಯಂತಿ ಹಾಗೂ ಎಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 443.35 ಕೋಟಿ ರು. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

> ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿಗೆ 2013 ರಲ್ಲಿ ಎಸ್‌ಸಿ ಪಿ ಹಾಗೂ ಟಿಎಸ್‌ಪಿ ಕಾನೂನನ್ನು ಜಾರಿಗೆ ತಂದು ಅಭಿವೃದ್ಧಿಗೆ ಅನುದಾನವನ್ನು ಮೀಸಲಿಟ್ಟು ಬಳಕೆ ಮಾಡಲಾಗುತ್ತಿದೆ. ಬಸವ ,ಬುದ್ಧ, ಮಹಾತ್ಮ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ತತ್ವಗಳಲ್ಲಿ ನಂಬಿಕೆ ಇಟ್ಟುಕೊಂಡು ಬಡವರ ಅಭಿವೃದ್ಧಿಗೆ ಶ್ರಮಿಸುವುದು ನನ್ನ ಗುರಿಯಾಗಿದೆ. ಎಚ್.ಡಿ. ಕೋಟೆಯಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ 2 ಕೋಟಿ ಅನುದಾನವನ್ನು ನೀಡಲಾಗುವುದು.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ವಾಲ್ಮೀಕಿಯ ಸಂಸ್ಕೃತ ಪಾಂಡಿತ್ಯಕ್ಕೆ ಮೆಚ್ಚುಗೆ: ಇಡೀ ರಾಜ್ಯದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸುತ್ತಿದ್ದೇವೆ. ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಜನಾಂಗದವರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ. 24 ಸಾವಿರ ಶ್ಲೋಕಗಳು ಇರುವ ರಾಮಾಯಣ ಮಹಾಗ್ರಂಥವನ್ನು ಮಹರ್ಷಿ ವಾಲ್ಮೀಕಿ ಅವರು ಸಂಸ್ಕೃತದಲ್ಲಿ ರಚಿಸಿದರು. ಆ ಕಾಲದಲ್ಲಿ ತಳ ಸಮುದಾಯಕ್ಕೆ ಸೇರಿದವರು ಸಂಸ್ಕೃತವನ್ನು ಕಲಿಯಲು ಅವಕಾಶ ಇರಲಿಲ್ಲ, ಅಂತಹ ಕಾಲದಲ್ಲಿಯೂ ಸಂಸ್ಕೃತ ಕಲಿತು ರಾಮಾಯಣ ರಚಿಸಿದ್ದು ನಮ್ಮೆಲ್ಲರ ಹೆಮ್ಮೆಯ ವಿಷಯ ಎಂದರು.

443.35 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಮಾಡಲಾಗುತ್ತಿದೆ. ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದರೂ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ನೀಡಲಾಗುತ್ತಿದೆ. ಶಕ್ತಿ ಯೋಜನೆಯಡಿ 324 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ. 1.64 ಕೋಟಿ ಕುಟುಂಬಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. 1.22 ಕೋಟಿ ಮನೆಯ ಯಜಮಾನಿಯರಿಗೆ ಮಾಸಿಕ 2000 ರು. ನೀಡಲಾಗುತ್ತಿದೆ. ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಸದಸ್ಯರಿಗೆ 5 ಅಕ್ಕಿ ಹಾಗೂ 5 ಅಕ್ಕಿಗೆ ಹಣ ನೀಡಲಾಗುತ್ತಿದೆ. ಯುವನಿಧಿ ಯೋಜನೆಯಡಿ ಡಿಗ್ರಿ ಮಾಡಿದವರಿಗೆ 3 ಸಾವಿರ ಹಾಗೂ ಡಿಪ್ಲೊಮಾ ಮಾಡಿದವರಿಗೆ 1500 ರು. ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪರಿಶಿಷ್ಟರಿಗೆ ಅನುದಾನ ಹೆಚ್ಚಿಸಿ: ರಾಜಮನೆ ಮಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ರತ್ನಾಕರ ಮೂಲತಃ ಬೇಡ. ಇವರು ತಮ್ಮನ್ನು ಪರಿವರ್ತನೆ ಮಾಡಿಕೊಂಡು ಮಹರ್ಷಿ ವಾಲ್ಮೀಕಿ ಆಗಿ ರಾಮಾಯಣವನ್ನು ರಚಿಸಿದರು. ರಾಮಾಯಣ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿದೆ. ರಾಮಾಯಣ ಎಂದರೆ ಅಣ್ಣ-ತಮ್ಮಂದಿರ ಆಸ್ತಿ ಮತ್ತು ಅಧಿಕಾರ ತ್ಯಾಗಕ್ಕಾಗಿ ನಡೆದದ್ದು. ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯಕ್ಕೆ ಇನ್ನೂ ಹೆಚ್ಚಿನ ಅನುದಾನವನ್ನು ನೀಡಿ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್, ಶಾಸಕರಾದ ಅನಿಲ್ ಕುಮಾರ್, ಯತೀಂದ್ರ ಸಿದ್ದರಾಮಯ್ಯ, ಡಿ.ರವಿಶಂಕರ್, ದರ್ಶನ್ ಧ್ರುವನಾರಾಯಣ್, ಡಿ.ತಿಮ್ಮಯ್ಯ, ಪ್ರಾದೇಶಿಕ ಆಯುಕ್ತ ರಮೇಶ್, ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ ಮೊದಲಾದವರು ಇದ್ದರು.



ಎಚ್.ಡಿ.ಕೋಟೆಯಲ್ಲಿ ವಾಲ್ಮೀಕಿ ಜಯಂತಿ ಹಾಗೂ 443.35 ಕೋಟಿ ರು.ಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು.

ಎಚ್.ಡಿ.ಕೋಟೆಯ ಕೆರೆಹಾಡಿಗೆ ಭೇಟಿ ನೀಡಿದ ಸಿಎಂ ಸಿದ್ದರಾಮಯ್ಯ ಅವರನ್ನು ಆದಿವಾಸಿ ಯುವಕರು ನೃತ್ಯದ ಮೂಲಕ ಸ್ವಾಗತಿಸಿದರು. ಇದೇ ವೇಳೆ ಸಿದ್ದರಾಮಯ್ಯ ಅವರು ಸಹ ಕೋಲಾಟಕ್ಕೆ ಹೆಜ್ಜೆ ಹಾಕಿದರು.

ನಿಮ್ಮ ಜೀವನದ ಶಿಲ್ಪಿ ನೀವೇ?

ವಿದ್ಯೆ ಯಾರಪ್ಪನ ಸ್ವತ್ತು ಅಲ್ಲ. ವಿದ್ಯಾವಂತರಾಗಲು ಯಾವುದೇ ಜಾತಿ ಅವಶ್ಯಕತೆ ಇಲ್ಲ. ವಿದ್ಯೆ ಕಲಿಯಲು ಪ್ರತಿಯೊಬ್ಬರಿಗೂ ಸಮಾನ ಅವಕಾಶ ಸಿಗಬೇಕು. ನಿಮ್ಮ ಜೀವನವನ್ನು ರೂಪಿಸಿಕೊಳ್ಳುವ ಶಿಲ್ಪಿ ನೀವೇ ಎಂದು ಮಹರ್ಷಿ ವಾಲ್ಮೀಕಿ ಅವರು ತಿಳಿಸಿದ್ದಾರೆ. ಜೀವನದ ತತ್ವ -ಆದರ್ಶಗಳನ್ನು ಕಲಿಯಲು ರಾಮಾಯಣ ಮಹಾಗ್ರಂಥದಿಂದ ಸಾಧ್ಯ. ರಾಮರಾಜ್ಯ ಎಂದು ಗಾಂಧೀಜಿ ಅವರು ಕರೆದರು. ರಾಮರಾಜ್ಯದಲ್ಲಿ ಯಾವುದೇ ಜಾತಿ, ಮೇಲು- ಕೀಳು ಭಾವನೆ ಇರಬಾರದು. ಸಮಸಮಾಜದ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಿ ಎಂದರು.

- ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ನುಡಿದಂತೆ ನಡೆದಿದ್ದೇವೆ
- ಸಮಸಮಾಜದ ನಿರ್ಮಾಣಕ್ಕೆ ಜನತೆ ಸಹಕರಿಸಲು ಸಿಎಂ ಮನವಿ

ಅಪಾರ ಪ್ರಮಾಣದ ನಗದು, ಆಸ್ತಿಪತ್ರಗಳು ಪತ್ತೆ | 37 ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ | 9 ಲಕ್ಷ ಎಸೆದ ಅಧಿಕಾರಿ

ಭ್ರಷ್ಟರಿಗೆ ಬಿಸಿ ಮುಟ್ಟಿಸಿದ ಲೋಕಾಯುಕ್ತ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಕೆ ಆರೋಪದ ಸಂಬಂಧ ವಿವಿಧ ಇಲಾಖೆ ಮತ್ತು ನಿಗಮಗಳ 8 ಅಧಿಕಾರಿಗಳ ಮನೆ ಮತ್ತು ಇತರೆಡೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿದ್ದಾರೆ. ದಾಳಿ ವೇಳೆ ಅಪಾರ ಪ್ರಮಾಣದ ನಗದು, ಆಸ್ತಿ ಪತ್ರಗಳು ಪತ್ತೆಯಾಗಿವೆ. ಬೆಳಗಾವಿ, ರಾಮನಗರ, ಹಾವೇರಿ, ದಾವಣಗೆರೆ, ಬೀದರ್, ಮೈಸೂರು ಮತ್ತು ಧಾರವಾಡದಲ್ಲಿ ದಾಳಿ ನಡೆದಿದೆ. 9 ಅಧಿಕಾರಿ ಗಳ ಮನೆ, ಸಂಬಂಧಿಕರು ಮತ್ತು ಆಪ್ತರ ಮನೆ ಸೇರಿ ಒಟ್ಟು 37 ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಲಾಗಿದೆ.

9 ಲಕ್ಷ ಎಸೆದ ಅಧಿಕಾರಿ: ಹಾವೇರಿ ಹಿರೇಕೆರೂರು ಉಪವಿಭಾಗದ ಅಧಿಕಾರಿ ಕಾಶೀನಾಥ್ 9 ಲಕ್ಷ ರು. ನಗದನ್ನು ಗಂಟುಕಟ್ಟಿ ಮನೆಯಿಂದ ಹೊರಗೆ ಎಸೆದಿದ್ದು, ಅದನ್ನು ವಶಕ್ಕೆ ಪಡೆಯಲಾಗಿದೆ. ಎಚ್ಚರಿಕೆಯಿಂದಿದ್ದ ಅಧಿಕಾರಿಗಳು ನಗದನ್ನು ವಶಕ್ಕೆ ತೆಗೆದುಕೊಂಡು ಅಧಿಕಾರಿಯ ವಿಚಾರಣೆ ನಡೆಸಿದ್ದಾರೆ.

ಅಕ್ರಮ ಆಸ್ತಿ ಪತ್ತೆ: ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲೂಕಿನ ಬೋರಗಾವ್‌ನ ಗ್ರಾಮ ಆಡಳಿತಾಧಿಕಾರಿ ವಿಠ್ಠಲ್ ಶಿವಪ್ಪ ಧವಳೇಶ್ವರ್ ಅವರಿಗೆ ಸೇರಿದ ಒಟ್ಟು 4 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದೆ. 1 ವಾಸದ ಮನೆ, 4 ಎಕರೆ ಕೃಷಿ ಜಮೀನು 1.50 ಕೋಟಿ ರು. ಮೌಲ್ಯದ ಸ್ಥಿರಾಸ್ತಿ ಪತ್ತೆಯಾಗಿದೆ. 8 ಲಕ್ಷ ರು. ಮೌಲ್ಯದ ಚರಾಸ್ತಿ ಪತ್ತೆಯಾಗಿದ್ದು, ಒಟ್ಟು 1.8 ಕೋಟಿ ರು. ಮೌಲ್ಯದ ಆಸ್ತಿ ಪತ್ತೆಯಾಗಿದೆ.

2.21 ಕೋಟಿ ಅಸ್ತಿ ಪತ್ತೆ: ಬೆಂಗಳೂರಿನ ಕೋರಮಂಗಲದ ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತ ವೆಂಕಟೇಶ್ ಎಸ್. ಮುಜುಮ್ದಾರ್‌ಗೆ 5 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿರುತ್ತದೆ. 2 ವಾಸದ ಮನೆಗಳು, 1 ಗ್ಯಾಸ್ ಗೋಡೌನ್, 1 ಎಕರೆ ಕೃಷಿ ಜಮೀನು ಸೇರಿ ಒಟ್ಟು 1.63 ಕೋಟಿ ರು. ಮೌಲ್ಯದ ಒಟ್ಟು ಸ್ಥಿರ ಆಸ್ತಿ ಪತ್ತೆಯಾಗಿದೆ. ಒಟ್ಟು ಚರ ಆಸ್ತಿಯ ಅಂದಾಜು ಮೌಲ್ಯ 1,42,000 ನಗದು ರು., 39,31,900 ಬೆಲೆಬಾಳುವ ಚಿನ್ನಾಭರಣಗಳು, 17,70,000 ರು. ಬೆಲೆಬಾಳುವ ವಾಹನಗಳು ಎಲ್ಲಾ ಸೇರಿ ಒಟ್ಟು ಮೌಲ್ಯ ರು. 58,43,900 ಪತ್ತೆಯಾಗಿದೆ. ಒಟ್ಟು . 2.21 ಕೋಟಿ ರು. ಮೌಲ್ಯದ ಆಸ್ತಿಯನ್ನು ಲೋಕಾಯುಕ್ತ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

ಎಂಜಿನಿಯರ್ ಅಕ್ರಮ ಅಸ್ತಿ ಪತ್ತೆ: ಹಿರೇಕೆರೂರಿನ ಗ್ರಾಮೀಣ ಕುಡಿಯುವ ನೀರು ಮತ್ತು ಒಳ ಚರಂಡಿ ಇಲಾಖೆ ಸಹಾಯಕ ಎಂಜಿನಿಯರ್ ಕಾಶಿನಾಥ್ ಬುದ್ದಪ್ಪ ಭಜಂತ್ರಿ ಅವರಿಗೆ ಸೇರಿದ 4 ಸ್ಥಳಗಳಲ್ಲಿ ಲೋಕಾಯುಕ್ತ ದಾಳಿ ನಡೆಸಲಾಗಿದೆ. 6 ನಿವೇಶನಗಳು, 2 ವಾಸದ ಮನೆಗಳು, 5 ಎಕರೆ ಜಮೀನು, ಎಲ್ಲಾ ಸೇರಿ ಒಟ್ಟು 2.61 ಕೋಟಿ ರು. ಸ್ಥಿರಾಸ್ತಿ, 20 ಲಕ್ಷ ನಗದು, 10 ಲಕ್ಷ ರು ಬೆಲೆ ಬಾಳುವ ಚಿನ್ನಾಭರಣಗಳು, 11.30 ಲಕ್ಷ ರು. ಬೆಲೆಬಾಳುವ ವಾಹನಗಳು, 18.32 ಲಕ್ಷ ರು. ಬೆಲೆಬಾಳುವ ಇತರೆ ವಸ್ತುಗಳು ಪತ್ತೆಯಾಗಿದೆ.

ಕೋಟ್ಯಂತರ ರು. ಅಕ್ರಮ ಸ್ಥಿರಾಸ್ತಿ: ಮೈಸೂರು ಸಿಟಿ ಕಾರ್ಪೊರೇಷನ್‌ನ , ಸಾರ್ವಜನಿಕ ಸಂಪರ್ಕ ಅಧಿಕಾರಿ ನಾಗೇಶ್ ಅವರಿಗೆ ಸೇರಿದ 2 ನಿವೇಶನ , 1 ವಾಸದ ಮನೆ. ಎಲ್ಲಾ ಸೇರಿ ಒಟ್ಟು ಮೌಲ್ಯ 1.95 ಲಕ್ಷ ರು. ಸ್ಥಿರಾಸ್ತಿ ಹಾಗೂ 98 ಸಾವಿರ ನಗದು, ಸೇರಿ 2,72,74,716 ಕೋಟಿ ರು. ಒಟ್ಟು ಆಸ್ತಿ ಲೋಕಾಯಕ್ತ ದಾಳಿ ವೇಳೆ ಬೆಳಕಿಗೆ ಬಂದಿದೆ.

ಹಿರೇಕೆರೂರು ಉಪವಿಭಾಗದ ಅಧಿಕಾರಿ 9 ಲಕ್ಷ ರು. ಗಂಟುಕಟ್ಟಿ ಮನೆಯಿಂದ ಹೊರಗೆ ಎಸೆದ ಹಣ.

4.22 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ

ದಾವಣಗೆರೆಯ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕ ಕಮಲ್ ರಾಜ್ ಅವರಿಗೆ ಸೇರಿದ ಶೋಧನಾ ಕಾರ್ಯ ನಡೆಸಲಾಗಿದ್ದು, 6 ನಿವೇಶನಗಳು, 2 ವಾಸದ ಮನೆಗಳು, 1 ಎಕರೆ ಕೃಷಿ ಜಮೀನು ಎಲ್ಲಾ ಸೇರಿ ಒಟ್ಟು 1.32 ಕೋಟಿ ರು., ಒಟ್ಟು ಸ್ಥಿರಾಸ್ತಿ, 67.24 ಲಕ್ಷ ರು. ಚರಾಸ್ತಿ ಸೇರಿದಂತೆ 1.99 ಕೋಟಿ ರು. ಆಸ್ತಿಯನ್ನು ಲೋಕಾಯುಕ್ತ ಪೊಲೀಸರು ಪತ್ತೆ ಹಚ್ಚಿದ್ದಾರೆ. ಬೀದರ್‌ನ ತರಬೇತಿ ಸಂಸ್ಥೆಯ ಉಪ ನಿರ್ದೇಶಕ ರವೀಂದ್ರ ಕುಮಾರ್ ಅವರಿಗೆ 5 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿರುತ್ತದೆ. 7 ನಿವೇಶನ, 5 ವಾಸದ ಮನೆ, 10 ಎಕರೆ ಕೃಷಿ ಜಮೀನು ಸೇರಿ 3.50 ಕೋಟಿ ರು. ಸ್ಥಿರಾಸ್ತಿ, 72.75 ಲಕ್ಷ ರು. ಚರಾಸ್ತಿ ಸೇರಿದಂತೆ 4.22 ಕೋಟಿ ರು. ಮೌಲ್ಯದ ಆಸ್ತಿ ಪತ್ತೆ ಹಚ್ಚಲಾಗಿದೆ.

ನಿವೃತ್ತಿ ಅಧಿಕಾರಿ ಬಳಿ 4.26 ಕೋಟಿ ಆಸ್ತಿ

ರಾಮನಗರದ ಕೆಎಸ್‌ಆರ್‌ಟಿಸಿ ಡಿಎಂಇ (ನಿವೃತ್ತ) ಅಧಿಕಾರಿ ಪ್ರಕಾಶ್‌ಗೆ ಸೇರಿದ 3 ಸ್ಥಳಗಳಲ್ಲಿ ಶೋಧನೆ ನಡೆಸಲಾಗಿದ್ದು, 8 ನಿವೇಶನಗಳು, 6 ವಾಸದ ಮನೆ, 6 ಎಕರೆ ಕೃಷಿ ಜಮೀನು ಸೇರಿ ಒಟ್ಟು ಸ್ಥಿರಾಸ್ತಿ 3.97 ಕೋಟಿ ರು. ಮತ್ತು 28.17 ಲಕ್ಷ ರು. ಚರಾಸ್ತಿ ಸೇರಿದಂತೆ 4.26 ಕೋಟಿ ರು. ಆಸ್ತಿ ಹೊಂದಿರುವುದು ತಿಳಿದುಬಂದಿದೆ. ಧಾರವಾಡ ಜಿಲ್ಲೆಯ ಲಕ್ಕಮನಹಳ್ಳಿಯ ಕೆ ಐಎಡಿಬಿಯ ಸಹಾಯಕ ಕಾರ್ಯದರ್ಶಿ ಗೋಂದಪ್ಪ ಹನುಮಂತಪ್ಪ ಭಜಂತ್ರಿಗೆ 7 ಸ್ಥಳಗಳಲ್ಲಿ ಶೋಧನಾ ಕಾರ್ಯ ನಡೆಸಲಾಗಿದ್ದು, 3 ನಿವೇಶನಗಳು, 1 ವಾಸದ ಮನೆ, 7 ಎಕರೆ 26 ಗುಂಟೆ ಕೃಷಿ ಜಮೀನು ಸೇರಿದಂತೆ 1.85 ಕೋಟಿ ರು. ಸ್ಥಿರಾಸ್ತಿ ಹಾಗೂ 94,22,300 ಲಕ್ಷ ರು. ಚರಾಸ್ತಿ ಸೇರಿದಂತೆ 2.79 ಕೋಟಿ ರು. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಕ್ಷಮೆ ಕೇಳಲು ಸಿದ್ಧ: ಜಮೀರ್

ಮೈಸೂರು: ನನ್ನ ಹೇಳಿಕೆಯಿಂದ ಯಾರಿಗಾದರೂ ಬೇಸರವಾಗಿದ್ದರೆ, ಕ್ಷಮೆ ಯಾಚಿಸುತ್ತೇನೆ ಎಂದು ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬಗ್ಗೆ ನೀಡಿದ ವಿವಾದಾತ್ಮಕ ಹೇಳಿಕೆ ಕುರಿತಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಹೇಳಿರುವ ಉದ್ದೇಶವೇ ಬೇರೆ. ಈ ಹಿಂದೆ ನಾನು ಅವರು ಜತೆಯಲ್ಲಿದ್ದಾಗ ನನ್ನನ್ನು ಕುಳ್ಳ ಎನ್ನುತ್ತಿದ್ದರು. ನಾನು ಅವರನ್ನು ಕರಿಯಣ್ಣ ಎಂದು ಕರೆಯುತ್ತಿದ್ದೆ. ಪ್ರೀತಿಯಿಂದ ಅವರು ಕುಳ್ಳ ಎಂದಾಗ ನಾನು ಪ್ರೀತಿಯಿಂದಲೇ ಕರಿಯಣ್ಣ ಎನ್ನುತ್ತಿದ್ದೆ. ಅದನ್ನಷ್ಟೇ ಹೇಳಿದ್ದೇನೆ. ಅವರ ಮೇಲೆ ನನಗೆ ಈಗಲೂ ಗೌರವವಿದೆ. ನನ್ನ ಹೇಳಿಕೆಯಿಂದ ಯಾರಿಗಾದರೂ ಬೇಸರವಿದ್ದರೆ ಕ್ಷಮೆ ಕೇಳಲು ನಾನು ಸಿದ್ಧ ಎಂದರು.

ನಾನು ಬಸ್ ಮಾಲೀಕ: ನಾನು ಬಸ್ ಡ್ರೈವರಲ್ಲ ಮಾಲೀಕ. ಕುಮಾರಸ್ವಾಮಿಗಾಗಿ ಡ್ರೈವರ್ ಆಗಿದ್ದೆ ಅಷ್ಟೇ. ನಮ್ಮ ತಾತಾನ ಕಾಲದಿಂದಲೂ ನಾವು ಬಸ್ ಮಾಲೀಕರು ಎಂದು ಹೇಳಿದರು.

ರಾಜೀನಾಮೆ ಕೊಡುವ ಅಗತ್ಯವಿಲ್ಲ: ಎಚ್.ಡಿ. ದೇವೇಗೌಡರ ಕುಟುಂಬ ಕೊಂಡು ಕೊಳ್ಳುತ್ತೇನೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಯಾರಾದರೂ ದೇವೇಗೌಡರ ಕುಟುಂಬ ಕೊಂಡುಕೊಳ್ಳಲು ಸಾಧ್ಯವಾ ? ನನಗೆ ದೇವೇಗೌಡರ ಮೇಲೆ ಬಹಳ ಗೌರವವಿದೆ. ಈ ಹಿಂದೆ ಚುನಾವಣೆಯಲ್ಲಿ ಮುಸ್ಲಿಂ ಮತಗಳನ್ನು ಖರೀದಿ ಮಾಡುತ್ತೇನೆ ಎಂದಿದ್ದರು. ಅದನ್ನು ಉಲ್ಲೇಖಿಸಿ ನಾನು ಹೇಳಿದ್ದೇನೆ ಅಷ್ಟೇ. ರಾಜೀನಾಮೆ ಕೊಡುವ ತಪ್ಪನ್ನು ನಾನೇನು ಮಾಡಿಲ್ಲ. ರಾಜೀನಾಮೆ ಕೊಡುವ ಅಗತ್ಯವೂ ಇಲ್ಲ ಎಂದರು.

ಸಮಾಚಾರ ಸಣ್ಣದಲ್ಲ

ಕೇಂದ್ರ ವಿತ್ತ ಸಚಿವೆ ನಾಳೆ ಧರ್ಮಸ್ಥಳಕ್ಕೆ

ಉಜಿರೆ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಾಳೆ ಗುರುವಾರ ಪೂರ್ವಾಹ್ನ ಹತ್ತು ಗಂಟೆಗೆ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾ ಭವನದಲ್ಲಿ ಸುಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವ-ಸಹಾಯ ಸಂಘಗಳ ಸದಸ್ಯರಿಗೆ 600 ಕೋಟಿ ರು. ಲಾಭಾಂಶ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಗ್ರಾಮಾಭಿವೃದ್ಧಿ ಯೋಜನೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನಿಲ್ ಕುಮಾರ್, ಎಸ್.ಎಸ್. ತಿಳಿಸಿದ್ದಾರೆ. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷತೆ ವಹಿಸು ವರು. ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ನಬಾರ್ಡ್ ಅಧ್ಯಕ್ಷ ಶಾಜಿ, ಕೆ.ವಿ. ಸಂಸದ ಬ್ರಿಜೇಶ್ ಚೌಟ, ಶಾಸಕ ಹರೀಶ್ ಪೂಂಜ ಶುಭಾಶಂಸನೆ ಮಾಡುವರು.

ದುಡ್ಡು ಕೊಟ್ಟು ಮತ ಕೇಳುವ, ಪಡೆದು ಮತಹಾಕುವ ಜನರಿಂದ ಬದಲಾವಣೆ ಸಾಧ್ಯವಿಲ್ಲ | ಇಂದು ಮೌಲ್ಯಾಧಾರಿತ ರಾಜಕಾರಣ ಮೂಲೆ ಸೇರಿದೆ | ಚಿಂತಕರ ಚಾವಡಿ ಎನಿಸಿರುವ ಪರಿಷತ್‌ನಲ್ಲಿ ಈ ಸಂಸ್ಕೃತಿ ಶುರುವಾಗಿರುವುದು ಆತಂಕಕಾರಿ

ಪ್ರಜಾಪ್ರಭುತ್ವ ಸರಿಹೋಗಬೇಕೆಂದರೆ ಜನ, ರಾಜಕಾರಣಿ ಬದಲಾಗಬೇಕು

ವಿಶ್ವವಾಣಿ ಸಂದರ್ಶನ

ರಂಜಿತ್ ಎಚ್. ಅಶ್ವತ್ಥ

ಇಂದಿನ ರಾಜಕೀಯ ಪರಿಸ್ಥಿತಿಗೆ ರಾಜಕಾರಣಿಗಳು ಮಾತ್ರವಲ್ಲದೇ, ಮತದಾರರು ಕಾರಣ. ಚುನಾವಣೆ ವೇಳೆ ಅಭಿವೃದ್ಧಿಗಿಂತ ಹೆಚ್ಚಾಗಿ ಟೀಕೆಗಳೇ ಸದ್ದು ಮಾಡುತ್ತವೆ. ಉಚಿತ ಯೋಜನೆಗಳನ್ನು ಸ್ಪರ್ಧೆಗೆ ಬಿದ್ದು ನೀಡುತ್ತಿರುವ ರಾಜಕೀಯ ಪಕ್ಷಗಳು ಮುಂದೊಂದು ದಿನ ಜನರು ಕೆಲಸಕ್ಕೆ ಹೋಗದಂತೆ ಮಾಡುವ ಆತಂಕವಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಆತಂಕ ವ್ಯಕ್ತಪಡಿಸಿದರು.

ಉಪಚುನಾವಣೆ, ಮೌಲ್ಯಾಧಾರಿತ ರಾಜಕಾರಣ, ಸೈದ್ಧಾಂತಿಕ ಪ್ರಜ್ಞೆ, ವಿಧಾನಪರಿಷತ್‌ನಲ್ಲಿಯೂ ಕುಸಿಯುತ್ತಿರುವ ಮೌಲ್ಯ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ 'ವಿಶ್ವವಾಣಿ' ಯೊಂದಿಗೆ ಮಾತನಾಡಿದರು. ಸಂದರ್ಶನದಲ್ಲಿ ಪ್ರಜಾ ಪ್ರಭುತ್ವದ ಮೌಲ್ಯ ಅಧಃಪತನದ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಸರಿಹೋಗ ಬೇಕೆಂದರೆ ಜನ ಹಾಗೂ ರಾಜಕಾರಣಿಗಳ ಇಚ್ಛಾ ಶಕ್ತಿ ಅಗತ್ಯವೆಂದರೆ. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

• ಸಭಾಪತಿಗಳಾಗಿ ಇಂದಿನ ರಾಜಕೀಯ ಯಾವ ರೀತಿ ನೋಡುವಿರಿ?

ನಾನು ಮೂರನೇ ಬಾರಿಗೆ ಸಭಾಪತಿಯಾಗಿದ್ದೇನೆ. ಈ ಹಿಂದಿನ ಅವಧಿಗೆ ಗಮನಿಸಿದರೆ, ಈಗ ಶಿಸ್ತುಬದ್ಧವಾಗಿ ಸದನಗಳ ಕಲಾಪ ನಡೆಯುತ್ತಿಲ್ಲ, ಸಣ್ಣ ವಿಷಯಕ್ಕೆ ಸಭಾಧ್ಯಕ್ಷರ ಪೀಠದೆದುರು ಪ್ರತಿಭಟನೆ ನಡೆಸುವುದು, ಧಿಕ್ಕಾರ ಕೂಗುವುದು, ಇನ್ನೊಬ್ಬರು ಮಾತನಾಡುವಾಗ ಮಧ್ಯೆ ಬಾಯಿಹಾಕುವ ಘಟನೆಗಳೇ ಹೆಚ್ಚಾಗಿವೆ. ವಿಧಾನಪರಿಷತ್‌ಗೆ ಸೀಮಿತವಾಗಿ ಹೇಳುವುದಾದರೆ, ಈ ಪದ್ಧತಿ ಬದಲಾಯಿಸಲು ಹಲವು ಬಾರಿ ಪ್ರಯತ್ನಿಸಿದ್ದೇನೆ. ಆಡಳಿತ ಪಕ್ಷದ ಸದಸ್ಯರು, ಸಚಿವರೂ ಸಭಾಪತಿಗಳ ಅನುಮತಿ ಇಲ್ಲದೇ ಮಾತನಾಡುತ್ತಾರೆ. ಇದರಿಂದಲೇ ಅನೇಕ ಗಲಾಟೆಯಾಗಿರುವುದನ್ನು ಗಮನಿಸಿದ್ದೇವೆ. ಇದನ್ನು ಸರಿಪಡಿಸಲು ಹಲವು ಬಾರಿ ಪ್ರಯತ್ನಿಸಿದರೂ ಕೆಲವೊಮ್ಮೆ ಯಶಸ್ವಿಯಾಗಿದೆ.

ಆದರೆ ಇಡೀ ದಿನ ಸದನದಲ್ಲಿ ಯಾರೂ ಕೂರುವುದಿಲ್ಲ. ಪ್ರಶ್ನೋತ್ತರ ಅವಧಿಯಲ್ಲಿ ಆಯಾ ಸದಸ್ಯನ ಪ್ರಶ್ನೆ ಮುಗಿಯುತ್ತಿದ್ದಂತೆ ಹೊರಡುವ ಪರಿಪಾಠ ಹೆಚ್ಚುತ್ತಿದೆ. ಈ ರೀತಿ ಎಲ್ಲರೂ ಮಾಡದಿದ್ದರೂ, ಬಹುತೇಕರು ಇದೇ ಹಾದಿ ಹಿಡಿದಿರುವುದು ದುರಂತ. ಈ ರೀತಿ ಎದ್ದು ಹೋಗುವುದು ಇಂದಿನ ಟ್ರೆಂಡ್ ಆಗಿದೆ. ನಾವು ಆರಂಭದಲ್ಲಿ ಸದನದಲ್ಲಿರುತ್ತಿದ್ದಾಗ, ಇಡೀ ಸದನ ಆಲಿಸುತ್ತಿದ್ದೆವು. ಆದರಿಂದು ಸದನಗಳು ಸರಿಯಾಗಿ ನಡೆಯುತ್ತಿಲ್ಲ. ಮಂತ್ರಿಗಳು ಸರಿಯಾಗಿ ಅಧ್ಯಯನ ಮಾಡಿಕೊಂಡು ಬರುವುದಿಲ್ಲ.

• ಪರಿಷತ್‌ಗೆ ಪ್ರವೇಶ ಪಡೆಯುತ್ತಿರುವವರ ಮೌಲ್ಯ ಕಡಿಮೆಯಾಗಿದೆ ಎನ್ನುವ ಆರೋಪವಿದೆಯಲ್ಲ?

ವಿಧಾನಪರಿಷತ್ ಎನ್ನುವುದು ಚಿಂತಕರ ಛಾವಡಿ, ಹಿರಿಯರ ಮನೆ. ಸಾಹಿತಿಗಳು, ಸಿನಿಮಾ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರದ ಸಾಧಕರು ಬರಬೇಕು. ಆದರೆ ಇತ್ತೀಚಿನ ದಿನದಲ್ಲಿ ಈ ಮೌಲ್ಯಾಧಾರಿತ ಆಯ್ಕೆ ಕಡಿಮೆಯಾಗು ತ್ತಿದೆ. ಇಲ್ಲಿಯೇ ಈ ರೀತಿ ನಡೆಯುತ್ತಿದ್ದರೆ ಬೇರೆ ಕಡೆ ಏನು ಮಾಡಲು ಸಾಧ್ಯ? ಪ್ರಜಾಪ್ರಭುತ್ವದ ಈ ವ್ಯವಸ್ಥೆ ಯಾವ ಹಂತಕ್ಕೆ ಬಂದಿದೆ ಅಂದರೆ, 'ದುಡ್ಡು ಕೊಟ್ಟು ವೋಟು ಪಡೆಯುವವರು; ದುಡ್ಡು ತಗೊಂಡು ವೋಟು ಹಾಕುವವರು ಇರುವ' ಬದಲಾವಣೆ ಸಾಧ್ಯ ವಿಲ್ಲ. ಉದಾಹರಣೆಗೆ, ನಮ್ಮ ವಿಧಾನಪರಿಷತ್‌ನಲ್ಲಿ ಶಿಕ್ಷಕರ ಕ್ಷೇತ್ರದಿಂದ ಆರಿಸಿ ಬಂದವರು ಪ್ರತಿ ಶಿಕ್ಷಕರಿಗೆ 10 ಸಾವಿರ, ಮುಖ್ಯ ಶಿಕ್ಷಕರಿಗೆ 25 ಸಾವಿರ ರುಪಾಯಿ ಕೊಟ್ಟು ಮತ ಹಾಕಿಸಿಕೊಂಡಿದ್ದಾರೆ. ಶಿಕ್ಷಕರೇ ಈ ರೀತಿ ಹಣ ಪಡೆದು ಮತಹಾಕಲು ನಿಂತಾಗ ಬೇರೆಯವರಿಂದ ಏನು ನಿರೀಕ್ಷೆ ಸಾಧ್ಯ? ಈ ಹಣ ಪಡೆದ ಜನಪ್ರತಿನಿಧಿಯಿಂದ ಏನಾಗುತ್ತದೆ ಎನ್ನುವುಕ್ಕೆ ಒಂದು ನಿದರ್ಶನ ಇಲ್ಲಿ ಹೇಳಲೇಬೇಕು. ಕೆಲ ತಿಂಗಳ ಹಿಂದೆ ದುಡ್ಡುಕೊಟ್ಟು ಮತ ಹಾಕಿಸಿಕೊಂಡ ಪರಿಷತ್ ಸದಸ್ಯರ ಕ್ಷೇತ್ರದ ಶಿಕ್ಷಕರೊಬ್ಬರು ನನ್ನ ಬಳಿ ಸಮಸ್ಯೆ ಹೇಳಿಕೊಂಡು ಬಂದಿದ್ದರು. ಅದೇ ಸಮಯಕ್ಕೆ ಈ ಶಾಸಕರೂ ಬಂದರು. ಆಗ ಸಮಸ್ಯೆ ಬಗೆಹರಿಸುವಂತೆ ಸದಸ್ಯರಿಗೆ ಹೇಳಿದಾಗ, 'ಏ ಮಾಸ್ತರ್ 10 ಸಾವಿರ ಕೊಟ್ಟಿಲ್ಲವೇ, ಮತ್ತೇನು ಮಾಡಬೇಕು' ಎಂದರು. ಕೇವಲ ಅದೊಂದೇ ಅಲ್ಲ, ಇತರ ಪರಿಷತ್ ಚುನಾವಣೆ ವೇಳೆಯೂ 6ರಿಂದ 10 ಸಾವಿರ ರುಪಾಯಿ ಕೊಟ್ಟೇ ಮತ ಪಡೆಯುವ ಸ್ಥಿತಿ ಬಂದಿದೆ. ಇದು ಇಂದಿನ ಪ್ರಜಾಪ್ರಭುತ್ವದ ದುರಂತ.



> ಸದನದ ಕಲಾಪ ನಡೆಯುವಾಗ ಎಲ್ಲವೂ ಸರಿಯಾಗಿ ನಡೆಯಬೇಕು. ನಡೆಯಲು ಬಿಡದಿದ್ದರೆ ಯಾರೇನು ಮಾಡಲು ಸಾಧ್ಯ? ಈ ನಿಟ್ಟಿನಲ್ಲಿ ಎಲ್ಲ ಪಕ್ಷದವರು ಆಲೋಚಿಸಬೇಕು. ಆದರೆ ಬಹುತೇಕರಿಗೆ ಇಚ್ಛಾಶಕ್ತಿಯ ಕೊರತೆಯಿದೆ.
> -ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸದಸ್ಯ

ಪ್ರಮುಖಾಂಶ

- ಗ್ರಾಮ ಪಂಚಾಯಿತಿ ಚುನಾವಣೆಗೆ ಲಕ್ಷ ಲಕ್ಷ ಖರ್ಚು ಮಾಡಿದ್ದಾರೆ; ಹೀಗಿರುವಾಗ ಏನು ನಿರೀಕ್ಷೆ ಸಾಧ್ಯ?
- ಟಿಕೆಟ್ ಎಲ್ಲ ಜಾತಿ, ಹಣ ನೋಡಿ ಕೊಡುತ್ತಾರೆ; ಹೀಗಿದ್ದರೆ ಸಿದ್ಧಾಂತ ಉಳಿಸಲು ಸಾಧ್ಯವೇ?
- ಜಾತ್ಯತೀತ ರಾಷ್ಟ್ರದಲ್ಲಿ ಜಾತಿ ಬಿಟ್ಟು ಏನು ನಡೆಯುವುದಿಲ್ಲ; ಇದು ಪ್ರಜಾಪ್ರಭುತ್ವದ ವಿಪರ್ಯಾಸ
- ದುಡ್ಡಿಗೆ ಮತ ಹಾಕುವವರು ಇರುವತನಕ ಪ್ರಜಾಪ್ರಭುತ್ವ ಹೀಗೇ ಇರುತ್ತದೆ

• ಇತ್ತೀಚಿನ ಚುನಾವಣೆಗಳ ಬಗ್ಗೆ ನಿಮ್ಮ ಅಭಿಪ್ರಾಯ?

ಇತ್ತೀಚಿನ ದಿನದಲ್ಲಿ ಯಾವ ಪಕ್ಷದ ನಾಯಕರಾದರೂ ಕ್ಷೇತ್ರಕ್ಕೆ ಯಾವೆಲ್ಲ ಅಭಿವೃದ್ಧಿ ಮಾಡುತ್ತೇವೆ? ನಿಮ್ಮ ಕ್ಷೇತ್ರಕ್ಕೆ ಯಾವೆಲ್ಲ ಯೋಜನೆ ತರುತ್ತೇವೆ ಎಂದು ಮಾತನಾಡುವುದನ್ನು ನೋಡಿಲ್ಲ. ಬದಲಿಗೆ ದೇವೇಗೌಡರನ್ನು ಸಿದ್ದರಾಮಯ್ಯ ಬೈಯುವುದು, ಸಿದ್ದರಾಮಯ್ಯ ಅವರನ್ನು ಕುಮಾರಸ್ವಾಮಿ ಟೀಕಿಸುವುದು ಇದೇ ತುಂಬಿ ಹೋಗಿದೆ. ಹೀಗಿರುವಾಗ ಪ್ರಜಾಪ್ರಭುತ್ವ ಹೇಗೆ ಸುಧಾರಣೆಯಾಗುತ್ತದೆ? ಬಹುತೇಕರು ದುಡ್ಡು, ಸೀರೆ, ಕುಕ್ಕರ್ ಕೊಟ್ಟು ಮತಗಳನ್ನು ಖರೀದಿ ಮಾಡುವ ಮೂಲಕ ಚುನಾವಣೆ ನಡೆಸೋಣ ಎನ್ನುವ ಮನಸ್ಥಿತಿಯಲ್ಲಿದ್ದಾರೆ. ಸಿದ್ಧಾಂತಬದ್ಧ ರಾಜಕೀಯ ಮಾಡುವವರು ಇದ್ದರೂ ಅವರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಅವರನ್ನು ಯಾರೂ ಬೆಂಬಲಿಸುವುದೂ ಇಲ್ಲ.

• ಹಾಗಾದರೆ, ಚುನಾವಣಾ ರಾಜಕೀಯ ಬದಲಾವಣೆ ಸಾಧ್ಯವಿಲ್ಲವೇ?

ಬದಲಾವಣೆಯಾಗಬೇಕು ಎಂದರೆ ಅದರಲ್ಲಿ ರಾಜಕಾರಣಿಗಳಷ್ಟೇ ಮತದಾರರ ಪಾತ್ರವೂ ಇರುತ್ತದೆ. ಮತದಾರರು ಎಲ್ಲಿಯವರೆಗೆ ಸಾವಿರ ರುಪಾಯಿ, ಮದ್ಯಕ್ಕೆ ಮತಗಳನ್ನು ಮಾರಾಟ ಮಾಡಿಕೊಳ್ಳುವುದನ್ನು ನಿಲ್ಲಿಸುತ್ತಾರೋ ಅಲ್ಲಿಯವರೆಗೆ ಪ್ರಜಾಪ್ರಭುತ್ವ ಎನ್ನುವುದು ನಾಮ್‌ಕೇವಾಸ್ತೆಯಾಗಿರುತ್ತದೆ ಅಷ್ಟೇ. ಇದರೊಂದಿಗೆ ಇತ್ತೀಚಿನ ದಿನದಲ್ಲಿ ಉಚಿತ ಘೋಷಣೆಗಳನ್ನು ಮಾಡುತ್ತಿರುವುದು ಜನರನ್ನು ಕೆಲಸದತ್ತ ಹೊರಳಿಸುವ ಬದಲು, ಮನೆಯಲ್ಲಿದ್ದುಕೊಂಡೇ ಜೀವನ ಸಾಗಿಸುವಂತೆ ಆಗಿದೆ. ರಾಜಕಾರಣದಲ್ಲಿರುವ ಎಲ್ಲ ಪಕ್ಷಗಳ ಬಹುತೇಕರು ರಾಜ್ಯ, ದೇಶದ ಕಾಳಜಿ ಬಗ್ಗೆ ಇಟ್ಟುಕೊಂಡು ಮುಂದು ವರಿಯುತ್ತಿದ್ದಾರೆ ಎನ್ನುವ ನಂಬಿಕೆಯಿಲ್ಲ. ಆದರೆ ಮುಂದೊಂದು ದಿನ ಇದು ಬದಲಾಗುತ್ತದೆ ಎನ್ನುವ ವಿಶ್ವಾಸವಿದೆ. ಕಾಲಚಕ್ರ ದಲ್ಲಿ ಈ ಎಲ್ಲವೂ ಹೋಗುತ್ತದೆ. ಈ ಪರಿಸ್ಥಿತಿಗೆ ನ್ಯಾಯ ದೇವತೆಯೇ ಉತ್ತರ ನೀಡಲಿದ್ದಾಳೆ ಎನ್ನುವುದು ನಮ್ಮ ವಿಶ್ವಾಸ.

• ರಾಜಕಾರಣದಲ್ಲಿ ಮೌಲ್ಯ ಮುಖ್ಯವೋ ತೋಳ್ಬಲ, ಹಣಬಲ ಮುಖ್ಯವೋ?

ರಾಮಕೃಷ್ಣ ಹೆಗಡೆ ಅವರಿದ್ದಾಗ ಮೌಲ್ಯಾಧಾರಿತ ರಾಜಕೀಯವಿತ್ತು. ಆದರೀಗ ಮೌಲ್ಯವೊಂದನ್ನು ಬಿಟ್ಟು ಬೇರೆಲ್ಲ ಇದೆ. ಮೌಲ್ಯವಿಟ್ಟುಕೊಂಡು ರಾಜ ಕೀಯ ನಡೆಯುತ್ತಿರುವ ಶೇ.3-4ರಷ್ಟು ಮಂದಿಯಿ ದ್ದಾರೆ. ಅವರಿಂದ ಏನು ಮಾಡಲು ಆಗುವುದಿಲ್ಲ. ಎಂ.ಪಿ. ಪ್ರಕಾಶ್ ಮೊದಲ ಬಾರಿಗೆ ಶಾಸಕರಾಗಿ, ಸಚಿವರಾಗಿ ಉತ್ತಮ ಕೆಲಸವನ್ನು ಮಾಡಿದ್ದರೂ, ಎರಡನೇ ಬಾರಿಗೆ ಅವರನ್ನು ಜನ ಸೋಲಿಸಿದ್ದರು. ಜಾತಿಯ ಆಧಾರದಲ್ಲಿ ಸೋತಿದ್ದರು. ಇದು ವಾಸ್ತವ ಪರಿಸ್ಥಿತಿ. ದೇವೇಗೌಡರು, ಎಸ್.ಎಂ.ಕೃಷ್ಣ ಅವರಿಗೆಲ್ಲ ಮೌಲ್ಯಾಧಾರಿತವಿತ್ತು. ಹಾಗೇ ನೋಡಿದರೆ, ಕುಮಾರಸ್ವಾಮಿ ಅವರ ಮೊದಲ ಅವಧಿಯಲ್ಲಿಯೂ ಈ ಮೌಲ್ಯಾಧಾರಿತ ರಾಜಕಾರಣಕ್ಕೇನೂ ಕಡಿಮೆಯಿರಲಿಲ್ಲ. ಬಳಿಕ ಸಮ್ಮಿಶ್ರ ಸರಕಾ ರದ ಅವಧಿಯಲ್ಲಿ ಅವರೂ ಮೌಲ್ಯಾಧಾರಿತವನ್ನು ಬಿಟ್ಟರು. ಈ ಬಗ್ಗೆ ಪ್ರಶ್ನಿಸಿದ್ದಕ್ಕೆ, 'ಈ ರೀತಿ ಮಾಡದಿದ್ದರೆ 15 ದಿನಕ್ಕೆ ರಾಜೀನಾಮೆ' ನೀಡಬೇಕಾಗುತ್ತದೆ ಎಂದಿದ್ದರು. ಆದ್ದರಿಂದ ರಾಜಕೀಯದಲ್ಲಿ ಮೌಲ್ಯವಿಲ್ಲ. ಎಲ್ಲ ಅಪಮೌಲ್ಯವಾಗಿದೆ. ಶೇ.90ರಷ್ಟು ಅಪ ಮೌಲ್ಯವಾಗಿದ್ದರೂ, 10ರಷ್ಟು ಮೌಲ್ಯಾಧಾರಿತ ರಾಜಕಾರಣಿಗಳಿದ್ದಾರೆ. ಆದರೆ ಅಂತಹವರಿಗೆ ಧ್ವನಿಯಿಲ್ಲವಾಗಿದೆ.

> ರಾಜಕಾರಣ ಸಂಪೂರ್ಣ ಕಲುಷಿತವಾಗಿದೆ. ಇದನ್ನು ಸರಿಪಡಿಸುವ ಕಾರಣಕ್ಕೆ ನಾವೆಲ್ಲ ಪ್ರಯತ್ನಪಡುತ್ತಿದ್ದೇವೆ. ಆದರೆ ಇದನ್ನು ಯಾವ ರೀತಿ ಅಳವಡಿಸಿ ಕೊಳ್ಳುತ್ತಾರೆ ಎನ್ನುವುದನ್ನು ಕಾದು ನೋಡಬೇಕು.

• ಪಕ್ಷಾಂತರಕ್ಕೆ ಮೂಗುದಾರವಿರಬೇಕೆಂದು ಅನಿಸುವುದಿಲ್ಲವೇ?

ಈ ಹಿಂದೆ ಪಕ್ಷಾಂತರ ಮಾಡುವುದಕ್ಕೆ ಅವಕಾಶವಿತ್ತು. ಆದರೆ ಈಗ ಪಕ್ಷಾಂತರ ನಿಷೇಧ ಕಾಯಿದೆ ಇದೆ. ಆದರೆ ಇದು ಜನಪ್ರತಿನಿಧಿಯಾಗದಿದ್ದವರಿಗೆ ಅನ್ವಯಿಸುವುದಿಲ್ಲ. ಆದರೆ ಯಾರಿಗೂ ಒಂದು ತತ್ವ ಎನ್ನುವುದಿಲ್ಲ. ಪಕ್ಷಾಂತರ ಶಾಸಕರಿದ್ದಾಗ ಮಾಡಿದರೆ ಸದಸ್ಯತ್ವ ಹೋಗುತ್ತದೆ. ಇಲ್ಲದಿದ್ದರೆ ಯಾರು ಯಾವಾಗ ಬೇಕಾದರೂ ಹೋಗಬಹುದು, ಬರಬಹುದು. ಇದು ಸರಿಹೋಗಬೇಕು ಎಂದರೆ, ಒಮ್ಮೆ ಸದಸ್ಯನಾದ ಮೇಲೆ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಪಕ್ಷಾಂತರ ಮಾಡಿದರೆ ಚುನಾವಣೆಗೆ ನಿಲ್ಲಲು ಅವಕಾಶ ನೀಡಬಾರದು ಎನ್ನುವ ಕಾನೂನು ಬಂದರೆ ಮಾತ್ರ ಸುಧಾರಣೆಯಾಗುತ್ತದೆ.

• ಸೈದ್ಧಾಂತಿಕ ರಾಜಕೀಯಕ್ಕೆ ಅರ್ಥವಿದೆಯಾ?

ರಾಜಕಾರಣದಲ್ಲಿ ಸೈದ್ಧಾಂತಿಕ ಹಾಗೂ ಬದ್ಧತೆ ಇಲ್ಲವಾಗಿದೆ. ಏಕೆಂದರೆ, ಶಾಸಕರು, ಪರಿಷತ್ ಸದಸ್ಯರು ದುಡ್ಡುಕೊಟ್ಟು ಆರಿಸಿ ಬಂದ ಬಳಿಕ ಐದು ವರ್ಷ ಬೆಂಗಳೂರಿನಲ್ಲಿ ಇರುತ್ತಾರೆ. ಐದು ವರ್ಷ ದುಡ್ಡು ಮಾಡುತ್ತಾರೆ. ಬಳಿಕ ಅದೇ ದುಡ್ಡನ್ನು ಹಾಕಿ ಚುನಾವಣೆಯನ್ನು ಗೆಲ್ಲುತ್ತಾರೆ. ಎಲ್ಲವೂ ದುಡ್ಡಿನ ಮೇಲೆ ನಿಂತಿರುವಾಗ ಏನು ಮಾಡಲು ಸಾಧ್ಯ? ಸಿದ್ಧಾಂತದ ಮೇಲೆ ಚುನಾವಣೆ ನಡೆಸುವವರು, ಜಾತಿ, ದುಡ್ಡಿನ ಮೇಲೆ ರಾಜಕೀಯ ಮಾಡುವ ಅನೇಕರನ್ನು ಸೋಲಿಸಿರುವ ಉದಾಹರಣೆ ನಮ್ಮ ಕಣ್ಣ ಮುಂದಿದೆ.

ವಿಶ್ವವಾಣಿ

ಸಂಪಾದಕೀಯ

ಕೆಟ್ಟ ಮೇಲೂ ಬುದ್ಧಿ ಬರಲಿಲ್ಲ!

ಕೆಲವರ ಜಾಯಮಾನವೇ ಹಾಗೆ, ಕೆಟ್ಟರೂ ಬುದ್ಧಿ ಕಲಿಯುವುದಿಲ್ಲ. ದ್ವೇಷ, ಅಸೂಯೆ, ಆಕ್ರಮಣಕಾರಿ ನಿಲುವು, ಹಿಂಸಾವಿನೋದಿ ಚಿತ್ತಸ್ಥಿತಿ ಇಂಥವುಗಳನ್ನು ಮುಂದುವರಿಸಿಕೊಂಡು ಹೋದರೆ ಒದಗುವ ಪರಿಣಾಮವೂ ವ್ಯತಿರಿಕ್ತವಾಗೇ ಇರುತ್ತದೆ. ಇದಕ್ಕೆ ಪ್ರಸ್ತುತ ಪ್ಯಾಲೆಸ್ತೀನಿಯರು ಅನುಭವಿಸುತ್ತಿರುವ ದುಸ್ಥಿತಿಯೇ ಸಾಕ್ಷಿ. ಅಲ್ಲಿನ ಹಮಾಸ್ ಉಗ್ರರು ಸುಖಾಸುಮ್ಮನೆ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ಮಾಡಿದ್ದಕ್ಕೆ ಇಸ್ರೇಲಿಗರೂ ಪ್ರತೀಕಾರ ತೀರಿಸಿಕೊಳ್ಳಲು ಮುಂದಾಗಿದ್ದು, ಅದರ ಪರಿಣಾಮವಾಗಿ ಗಾಜಾ ಪಟ್ಟಿ ಪ್ರದೇಶ ಹಾಗೂ ಅಲ್ಲಿನ ಜನಜೀವನವು ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು ಜಗತ್ತಿಗೇ ತಿಳಿದಿರುವ ಸಂಗತಿ. ಸಮಸ್ಯೆಗಳ ಇತ್ಯರ್ಥಕ್ಕೆ ಆಯುಧವನ್ನು ಎತ್ತಿಕೊಳ್ಳುವುದಷ್ಟೇ ಮಾರ್ಗವಲ್ಲ, ಪರಸ್ಪರ ಸಮಾಲೋಚಿಸಿ ಪರಿಹಾರದ ಮದ್ದು ಅರೆಯಬಲ್ಲಂಥ ವಿವೇಚನಾಯುತ ಶಾಂತಿಮಾರ್ಗವೂ ಇದೆ. ಆದರೆ ಹಿಂಸಾವಿನೋದಿಗಳಿಗೆ ಮತ್ತು ವಿಕೃತ ಮನಸ್ಥಿತಿಯವರಿಗೆ ಇಂಥ ಸರಳಸತ್ಯ ಅರ್ಥವಾಗಬೇಕಲ್ಲ? ಖಲಿಸ್ತಾನಿ ಉಗ್ರ ಗುರು ಪತ್ವಂತ್ ಸಿಂಗ್ ಪನ್ನುನ್‌ನ ಇತ್ತೀಚಿನ ವರ್ತನೆ ಈ ಮಾತಿಗೆ ಪುಷ್ಟಿ ನೀಡುವಂತಿದೆ. ''ಅಯೋಧ್ಯೆಯ ಶ್ರೀರಾಮ ಮಂದಿರದ ತಳಪಾಯವನ್ನೇ ಸ್ಫೋಟಿಸುವೆ. ಹಿಂದುತ್ವ ಸಿದ್ಧಾಂತದ ಮೂಲಕೇಂದ್ರವಾದ ಈ ಮಂದಿರದಲ್ಲಿ ನವೆಂಬರ್ 16-17ರಂದು ಹಿಂಸಾಚಾರ ನಡೆಯಲಿದೆ'' ಎಂಬುದಾಗಿ ಆತ ಬೆದರಿಕೆ ಹಾಕಿರುವ ವಿಡಿಯೋ ಬಿಡುಗಡೆಯಾಗಿದ್ದು, ಇದರಲ್ಲಿ ಆತ ಕೆನಡಾದಲ್ಲಿನ ಕನ್ನಡಿಗ ಸಂಸದ ಚಂದ್ರ ಆರ್ಯ ಅವರಿಗೂ ಜೀವಭಯ ಒಡ್ಡಿದ್ದಾನೆ. ಕೆಲವರಿಗೆ ಕೆಟ್ಟ ಮೇಲೂ ಬುದ್ಧಿ ಬರುವುದಿಲ್ಲ ಎಂಬುದಕ್ಕೆ ಈತನೇ ಸಾಕ್ಷಿ. ಭಾರತವು ಈಗಲೂ ದಶಕಗಳ ಹಿಂದಿದ್ದ ಭಾರತವೇ ಎಂದು ಪತ್ವಂತ್ ಸಿಂಗ್ ಭಾವಿಸಿದಂತಿದೆ! ಬದಲಾದ ಪರಿಸ್ಥಿತಿಯಲ್ಲಿ ಭಾರತವು ಉಗ್ರವಾದದ ಹಾಗೂ ಉಗ್ರವಾದಿಗಳ ಬಾಲವನ್ನು ಕತ್ತರಿಸಿರುವುದನ್ನು ಈತ ಮರೆತಿರಬಹುದು. ಪಾಕಿಸ್ತಾನದ ಬಾಲಾಕೋಟ್‌ನಲ್ಲಿ ನೆಲೆಗೊಂಡಿದ್ದ ಉಗ್ರವಾದಿ ಗುಂಪುಗಳ ತರಬೇತಿ ಶಿಬಿರದ ಮೇಲೆ 2019ರ ಫೆಬ್ರವರಿಯಲ್ಲಿ ವಾಯುದಾಳಿ ನಡೆಸಿ 'ಉದಯೋನ್ಮುಖ ಉಗ್ರರನ್ನು' ಭಾರತ ಹೊಸಕಿ ಹಾಕಿದ್ದನ್ನು ಪತ್ವಂತ್ ಸಿಂಗ್ ಒಮ್ಮೆ ನೆನಪಿಸಿಕೊಳ್ಳಲಿ. ಅಯೋಧ್ಯೆಯ ರಾಮಮಂದಿರವನ್ನು ಸ್ಫೋಟಿಸುವುದು ಅಷ್ಟು ಸುಲಭವಲ್ಲ...

ಸೊಂಪಾದಕೀಯ

ಛೂ ಬಾಣ

ಒಂದು ಕುಟುಂಬದಲ್ಲಿನ ಆಸ್ತಿಗೆ ಸಂಬಂಧಿಸಿದ ಜಗಳಗಳು ಯಾವ ಹಂತಕ್ಕೆ ಬೇಕಾದರೂ ಹೋಗಬಲ್ಲವು. ಅದರಲ್ಲೂ ಅಪ್ಪ ಅಮ್ಮ ತೀರಿಕೊಂಡು ಅವರ ಅಸ್ಥಿ ಬಿಟ್ಟ ಮೇಲೆ ಆಸ್ತಿಗೆ ಸಂಬಂಧಿಸಿದ ತಕರಾರುಗಳು ಜಾಸ್ತಿ. ಈ ಸಂಬಂಧ ಸಂಬಂಧಿಕರಲ್ಲಿ ಪ್ರಾಣ ತೆಗೆಯುವ ಹಂತಕ್ಕೂ ಜಗಳಗಳು ಹೋಗುತ್ತವೆ. ಹಾಗಂತ ಇದು ಕೇವಲ ದೂರದ ಸಂಬಂಧಿಕರಿಗೆ ಮಾತ್ರ ಸಂಬಂಧಪಡುವ ಜಗಳ ಅಲ್ಲ. ಸ್ವಂತ ಅಕ್ಕ, ತಮ್ಮ, ಅಣ್ಣ, ತಮ್ಮಂದಿರ ಜತೆಗೂ ಇದು ಸಾಧ್ಯ. ಇದನ್ನು ನೋಡಿಯೇ 'ಯಾಕೆ ಬಡಿದಾಡ್ತಿ ತಮ್ಮ' ಅಂತ ದೊಡ್ಡವರು ಹಾಡು ಬರೆದಿದ್ದು. ಇಲ್ಲಿ ಅಂಥದ್ದೇ ಒಂದು ಜಗಳ ಶುರುವಾಗಿದ್ದು ಅದು ಕೋರ್ಟಿಗೆ ಬಂದಾಗ ಕೊಂಚ ನಗೆಪಾಟಲಿಗೆ ಈಡಾಗಿದೆ. ಯಾಕಂದ್ರೆ, ಇಲ್ಲಿ ಸೋದರನೊಬ್ಬ ತನ್ನ ಸಹೋದರಿಯೊಂದಿಗೆ ಜಗಳ ಆಡಿದ್ದಾನೆ. ಆಸ್ತಿ ವಿಷಯದಲ್ಲಿ ತಕರಾರು ಎತ್ತಿ ಮನೆಗೆ ಬಂದ ಸೋದರಿ ಜತೆಗೆ ವಾಗ್ವಾದ ಮಾಡುತ್ತಾ ಆತ ಈ ಜಗಳ ಶಮನಕ್ಕೆ ಶ್ವಾನವನ್ನು ಬಳಸಿಕೊಂಡಿದ್ದಾನೆ ಅನ್ನೋದು ಇಂಟರೆಸ್ಟಿಂಗ್. ಹೌದು, ಜಗಳ ಶುರುವಾಗಿದೆ, ಮಾತಿಗೆ ಮಾತು ಬೆಳೆದಿದೆ, ಆದರೆ ಇದ್ಯಾವುದೂ ಫಲ ಕೊಡುತ್ತಿಲ್ಲ ಅಂತ ಈ ಸಹೋದರನಿಗೆ ಅನ್ನಿಸಿದೆ. ನಾನು ಬರೀ ಮಾತಲ್ಲಿ ಹೇಳಿದರೆ ಇವಳು ಕೇಳೋದಿಲ್ಲ ಅಂತ ತಡ ಮಾಡದೇ ತನ್ನ ಮನೆಯಲ್ಲಿದ್ದ ನಾಯಿಯನ್ನು ಸಹೋದರಿಯ ಮೇಲೆ ಛೂ ಬಿಟ್ಟಿದ್ದಾನೆ. ಇದನ್ನು ಕೇಳಿದರೆ ಕೊಂಚ ಗಾಬರಿ ಆಗೋದು ಸಹಜ. ಯಾಕಂದ್ರೆ, ಹಾವು ಕಚ್ಚಿದರೆ ಹೆಂಗೋ ಆ ಕ್ಷಣದಲ್ಲಿ ಸಾವು, ಬದುಕು ಅಂತ ನಿರ್ಧಾರ ಆಗಿಬಿಡುತ್ತದೆ. ಆದರೆ ನಾಯಿ ಕಚ್ಚಿದರೆ ಅದರ ಅವಾಂತರ ಯಾರಿಗೂ ಬೇಡ. ಈ ಕೇಸಿನಲ್ಲಿ ಕೋರ್ಟ್‌ನಲ್ಲಿ ನ್ಯಾಯಾಧೀಶರು ಕೂಡಾ ನಾಯಿಯ ವಿಷಯವನ್ನು ಲೈಟ್ ಆಗಿ ತಗೊಂಡು ತಮಾಷೆಯಾಗಿ ಪ್ರಶ್ನೆ ಮಾಡಿದ್ದಾರೆ. ಆಸ್ತಿ ಜಗಳ ಅನ್ನೋದು ಜಗದಗಲ ವ್ಯಾಪಿಸಿರುವ ಸಮಸ್ಯೆ. ಅದನ್ನು ನೀವೇ ಸರಿಮಾಡಿಕೊಳ್ಳೋದು ಬಿಟ್ಟು ಜಗಳ ಬಗೆಹರಿಸುವ ಕೆಲಸವನ್ನು ನಾಯಿಗೆ ಯಾಕೆ ಕೊಟ್ರಿ ಅನ್ನೋದು ಅವರ ಪ್ರಶ್ನೆ. ಅದು ಸರಿಯೇ. ಪಾಪ ಮನುಷ್ಯರಿಂದ ಬಗೆಹರಿಯದ ಸಮಸ್ಯೆ ನಾಯಿಯ ಮಾತಿನಿಂದ ಅರ್ಥಾತ್ ಬೊಗಳುವಿಕೆಯಿಂದ ಇತ್ಯರ್ಥ ಆಗುತ್ತದೆಯೇ? ಆದರೆ ಸಹೋದರಿಯನ್ನು ಮಟ್ಟ ಹಾಕಲು ಮಾತಿನ ತಿರುಗುಬಾಣ ಹಾಕುವುದರ ಬದಲು ನಾಯಿಯ 'ಛೂ' ಬಾಣ ಹಾಕಿರೋದು ಮಾತ್ರ ಎಲ್ಲರ ಗಮನಸೆಳೆದಿದೆ.

ಸಂಪಾದಕರ ಸದ್ಯಶೋಧನೆ

ವಿಶ್ವದ ಅತಿದೊಡ್ಡ ಮರುಭೂಮಿ

ಜಗತ್ತಿನ ಅತಿದೊಡ್ಡ ಮರುಭೂಮಿ ಯಾವುದು ಎಂದು ಯಾರನ್ನೇ ಕೇಳಿದರೂ, ಅವರ ಪೈಕಿ ಅನೇಕರು ಥಟ್ಟನೆ 'ಸಹಾರಾ' ಎಂದು ಉದ್ಗರಿಸುತ್ತಾರೆ. ಆದರೆ ಈ ಉತ್ತರ ಅರ್ಧ ಸರಿ, ಅರ್ಧ ತಪ್ಪು. ಅರ್ಧ ಸರಿ ಯಾಕೆಂದರೆ, ಸಹಾರಾ ಮರುಭೂಮಿ ಜಗತ್ತಿನ ಅತ್ಯಂತ ದೊಡ್ಡ ಬಿಸಿ ಮರುಭೂಮಿ ಎಂಬುದೇನೋ ನಿಜ. ಆದರೆ ಈ ಪ್ರಶ್ನೆಗೆ ಸರಿಯಾದ ಉತ್ತರ 'ಅಂಟಾರ್ಕ್ಟಿಕಾ' ಅಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಇದಕ್ಕೆ ಮೂಲಕಾರಣ ಮರುಭೂಮಿ ಅಂದರೆ ಏನು ಎಂಬುದನ್ನು ತಪ್ಪಾಗಿ ತಿಳಿದುಕೊಂಡಿರುವುದೇ ಆಗಿದೆ. ಹಾಗಾದರೆ ಮರುಭೂಮಿ ಎಂದರೇನು? ಅನೇಕರು ಮರುಭೂಮಿಯನ್ನು ಬಿಸಿಯಾಗಿರುವ ಅಥವಾ ಉಷ್ಣ ಪ್ರದೇಶ ಎಂದೂ, ಮರಳಿನಿಂದ ಕೂಡಿದ ಪ್ರದೇಶವೆಂದೂ ಭಾವಿಸಿದ್ದಾರೆ. ಆದರೆ ವಿಜ್ಞಾನದಲ್ಲಿ 'ಮರುಭೂಮಿ' ಎಂಬ ಪದಕ್ಕೆ, 'ವರ್ಷದಲ್ಲಿ 250 ಮಿ.ಮೀ.ಗಿಂತ ಕಡಿಮೆ ಮಳೆಯಾಗುವ ಸ್ಥಳ' ಎಂಬ ವ್ಯಾಖ್ಯಾನವಿದೆ. ಅಂದರೆ, ಮರುಭೂಮಿಯು ಉಷ್ಣವಾಗಿರಬಹುದು ಅಥವಾ ತಂಪಾಗಿರಬಹುದು, ಆದರೆ ಅಲ್ಲಿ ಮಳೆ ಪ್ರಮಾಣ 250 ಮಿ.ಮೀ.ಗಿಂತ ಕಡಿಮೆಯಿರುತ್ತದೆ. ಯಾವ ಪ್ರದೇಶದಲ್ಲಿ 250 ಮಿ.ಮೀ. ಅಥವಾ ಅದಕ್ಕಿಂತ ಕಡಿಮೆ ಮಳೆಯಾಗುವುದೋ ಅದು ಮರುಭೂಮಿ ಎಂದು ಕರೆಯಿಸಿಕೊಳ್ಳುತ್ತದೆ. ಅಂಟಾರ್ಕ್ಟಿಕಾ ಶಾಶ್ವತವಾಗಿ ಹಿಮದಿಂದ ಆವೃತವಾಗಿದ್ದು, ಪ್ರಪಂಚದ ಅತಿ ದೊಡ್ಡ ಮರುಭೂಮಿಯಾಗಿದೆ. ಯಾಕೆಂದರೆ ಅಲ್ಲಿ ಮಳೆಯೇ ಆಗುವುದಿಲ್ಲ. ಒಂದು ವೇಳೆ ಆದರೂ ಅದು 50 ಮಿ.ಮೀ. ಅನ್ನು ಮೀರುವುದಿಲ್ಲ. ಅಂಟಾರ್ಕ್ಟಿಕಾ ಸುಮಾರು 14 ದಶಲಕ್ಷ ಚದರ ಕಿಲೋಮೀಟರ್ ಪ್ರದೇಶವನ್ನು ವ್ಯಾಪಿಸಿದೆ. ಇದು ಸುಮಾರು ಶೇ.98ರಷ್ಟು ಹಿಮದಿಂದ ಆವೃತವಾಗಿದೆ. ಅತ್ಯಂತ ತಂಪು ಪ್ರದೇಶವಾಗಿರುವ ಅಂಟಾರ್ಕ್ಟಿಕಾದಲ್ಲಿ ತಾಪಮಾನ ಮೈನಸ್ 89 ಡಿಗ್ರಿ ಸೆಲ್ಸಿಯಸ್‌ವರೆಗೆ ತಲುಪುವುದುಂಟು. ಈ ಕಾರಣದಿಂದ ಅಂಟಾರ್ಕ್ಟಿಕಾವನ್ನು 'ಮಹಾ ಮರುಭೂಮಿ' ಎಂದು ಕರೆಯಲಾಗುತ್ತದೆ. ಉತ್ತರ ಆಫ್ರಿಕಾದಲ್ಲಿರುವ ಸಹಾರಾ ಮರುಭೂಮಿ 9.2 ದಶಲಕ್ಷ ಚದರ ಕಿಲೋಮೀಟರ್ ಪ್ರದೇಶವನ್ನು ವ್ಯಾಪಿಸಿದೆ. ಇದು ಬಹುಶಃ ಜನಪ್ರಿಯ ಮರುಭೂಮಿಯೂ ಆಗಿದೆ. ಇಲ್ಲಿ ಉಷ್ಣಾಂಶವು ಬೇಸಗೆಯಲ್ಲಿ 50 ಡಿಗ್ರಿ ಸೆಲ್ಸಿಯಸ್‌ವರೆಗೆ ತಲುಪುತ್ತದೆ. ಸಹಾರಾದಲ್ಲಿ ಸಾವಿರಾರು ವರ್ಷಗಳಿಂದ ಜನರು ವಾಸಿಸುತ್ತಿದ್ದಾರೆ. ಅಷ್ಟೇ ಅಲ್ಲ, ಪ್ರಾಣಿ-ಪಕ್ಷಿಗಳೂ ವಾಸಿಸುತ್ತಿವೆ. ಅಂಟಾರ್ಕ್ಟಿಕಾ ಮತ್ತು ಸಹಾರಾ ಎರಡೂ ಮರುಭೂಮಿಗಳೇ ಎಂದಂತಾಯಿತು. ಮಳೆ ಬೀಳುವ ಪ್ರಮಾಣ ಕಮ್ಮಿಯಾಗಿರುವುದರಿಂದ ಮತ್ತು ಹೆಚ್ಚಿನ ಭೂಪ್ರದೇಶ ಹೊಂದಿರುವುದರಿಂದ ಅಂಟಾರ್ಕ್ಟಿಕಾವನ್ನೇ 'ವಿಶ್ವದ ಅತಿದೊಡ್ಡ ಮರುಭೂಮಿ' ಎಂದು ಕರೆಯಬಹುದು. ಜಗತ್ತಿನ ಬಿಸಿ ಮರುಭೂಮಿ ಯಾವುದು ಎಂದು ಕೇಳಿದರೆ, ಆಗ 'ಸಹಾರಾ ಮರುಭೂಮಿ' ಸರಿ ಉತ್ತರವಾಗಬಲ್ಲದು. ಅಂಟಾರ್ಕ್ಟಿಕಾ ಮರುಭೂಮಿ ಮಂಜಿನಿಂದ ಸಂಪೂರ್ಣ ಆವೃತವಾಗಿರುವುದರಿಂದ, ಭೂಮಿಯ ಸರಾಸರಿ ಶೇ.70ರಷ್ಟು ತಾಜಾ, ಪರಿಶುದ್ಧ ನೀರು ಅಲ್ಲಿನ ಹಿಮದಲ್ಲಿ ಸಂಗ್ರಹವಾಗಿದೆ. ಇಲ್ಲಿಯ ತೀವ್ರ ತಂಪು, ಕಡಿಮೆ ತೇವಾಂಶದಿಂದಾಗಿ, ಇಲ್ಲಿ ಕೇವಲ ಕೆಲವು ಬ್ಯಾಕ್ಟೀರಿಯಾ, ಶೈವಲ, ಪಾಚಿ, ಹಾವಸೆ, ಪೆಂಗ್ವಿನ್ ಹಾಗೂ ಸೀಲ್ ಪ್ರಾಣಿಗಳು ಮಾತ್ರ ಜೀವಿಸುತ್ತವೆ. ಅಂಟಾರ್ಕ್ಟಿಕಾದಲ್ಲಿ ವರ್ಷಗಟ್ಟಲೆ ಮಳೆಯಾಗುವುದೇ ಇಲ್ಲ. ಕೆಲವು ಸಲ ಎರಡು-ಮೂರು ವರ್ಷವಾದರೂ ಮಳೆಯಾಗದೇ ಇರುವುದುಂಟು. ಒಂದು ವೇಳೆ ಅಂಟಾರ್ಕ್ಟಿಕಾ ಸಂಪೂರ್ಣವಾಗಿ ಕರಗಿದರೆ, ಭೂಮಿಯ ಸಮುದ್ರ ಮಟ್ಟವು ಸುಮಾರು 58 ಮೀಟರ್ ಏರಬಹುದು. ಇದು ತೀರ ಪ್ರದೇಶಗಳಿಗೆ ಅಪಾಯ. ನೀರಿನ ಮಟ್ಟ ಕೇವಲ ನಾಲ್ಕೈದು ಮೀಟರ್ ಏರಿದರೇ ಸಾವಿರಾರು ದ್ವೀಪಗಳು ಮುಳುಗುವ ಸಾಧ್ಯತೆ ಇರುವಾಗ, 58 ಮೀಟರ್ ಏರಿದರೆ ಏನಾಗಬಹುದು ಎಂಬುದನ್ನು ಊಹಿಸುವುದೂ ಕಷ್ಟ. ಇನ್ನು ಸಹಾರಾ ಮರುಭೂಮಿ ಅದೆಷ್ಟು ದೊಡ್ಡದಾಗಿದೆಯೆಂದರೆ, ಅದು ಚೀನಾ ದೇಶದಷ್ಟು ಬೃಹತ್ತಾಗಿದೆ. ಸಹಾರಾ ಮರುಭೂಮಿಯು ವಾಸಯೋಗ್ಯವಲ್ಲ. ಅಲ್ಲಿ ಒಂಟೆ, ಫೆನೆಕ್ ಫಾಕ್ಸ್, ಮರಳು ಸರ್ಪಗಳು ಮತ್ತು ನೂರಾರು ಬಗೆಯ ಸಸ್ಯಗಳು ಮಾತ್ರ ಬದುಕುತ್ತವೆ.

ಹೀಗಿದ್ದವು ಗ್ರೀಕರ ದೇವಾಲಯ ಆಸ್ಪತ್ರೆಗಳು

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಗ್ರೀಕ್ ಸಂಸ್ಕೃತಿಯಲ್ಲಿ ಚಿಕಿತ್ಸಾ ಅಧಿದೈವ ಆಸ್ಕ್ಲೆಪಿಯಸ್. ತಂದೆ ಅಪೋಲೊ, ತಾಯಿ ಕೊರೋನಿಸ್. 'ಸತ್ತವರನ್ನು ಬದುಕಿಸಬಲ್ಲ ಸಾಮರ್ಥ್ಯ' ಆಸ್ಕ್ಲೆಪಿಯಸ್‌ಗೆ ಇತ್ತು. ಮನುಷ್ಯನಾಗಿದ್ದ ಆಸ್ಕ್ಲೆಪಿಯಸ್ ಕ್ರಿ.ಪೂ.5ನೆಯ ಶತಮಾನದ ಹೊತ್ತಿಗೆ ಪ್ರಧಾನ ದೈವವಾದ. ಆತನ ಹೆಸರಿನಲ್ಲಿ ದೇವಾಲಯಗಳು ಆರಂಭವಾದವು. ಅವನ್ನು 'ಆಸ್ಕ್ಲೆಪಿಯಾನ್' ಎನ್ನುತ್ತಿದ್ದರು. 'ಆಸ್ಕ್ಲೆಪಿಯಡೆ' ಎನ್ನುವವರು ಈ ದೇಗುಲಗಳ ಪುರೋಹಿತರಾಗಿದ್ದರು. ಇವು ಸಾಮಾನ್ಯ ದೇಗುಲಗಳಾಗಿರಲಿಲ್ಲ, ಇಲ್ಲಿ ಧರ್ಮ ಹಾಗೂ ವೈದ್ಯಕೀಯಗಳೆರಡೂ ಮಿಳಿತವಾಗಿದ್ದವು. ಮೂಲತಃ ಧಾರ್ಮಿಕ ಕೇಂದ್ರಗಳಾಗಿದ್ದ ಇವು ಧಾರ್ಮಿಕ ಆಚರಣೆಗಳಿಗೆ ಆದ್ಯತೆ ನೀಡಿದ್ದರೂ, ರೋಗಗಳನ್ನು ಗುಣಪಡಿಸುವ ಆಸ್ಪತ್ರೆಗಳ ಆರಂಭಿಕ ಸ್ವರೂಪದ ಕೇಂದ್ರಗಳೂ ಆಗಿದ್ದವು. ಇಲ್ಲಿ ರೋಗಗಳನ್ನು ಗುರುತಿಸಿ ಚಿಕಿತ್ಸೆ ನೀಡುತ್ತಿದ್ದರು. ರೋಗ ಪ್ರಗತಿಯ ಬಗ್ಗೆ ಮೊದಲೇ ಸೂಚಿಸುತ್ತಿದ್ದರು. ಮಿಗಿಲಾಗಿ ಆಪ್ತಸಲಹೆ-ಸಮಾಧಾನ ನೀಡುತ್ತಿದ್ದರು. ಮುಂದೆ ಇದೇ ಆಸ್ಕ್ಲೆಪಿಯಾನುಗಳು, ವೈದ್ಯಕೀಯ ಶಿಕ್ಷಣ ನೀಡುವ ಮೂಲಕ, ವೈದ್ಯ ವಿದ್ಯಾಲಯಗಳೂ ಆಗಿ ಮೂರೂ ತರಹದ ಸೇವೆ ಸಲ್ಲಿಸಿದವು. ಪಾಶ್ಚಾತ್ಯ ಜಗತ್ತಿನಲ್ಲಿ ಧರ್ಮ, ಶಿಕ್ಷಣ ಹಾಗೂ ಚಿಕಿತ್ಸಾಲಯಗಳ ಸಮ್ಮಿಶ್ರ ರೂಪದ ಆಸ್ಪತ್ರೆಗಳಿಗೆ ಜನ್ಮವಿತ್ತವು.

ಮೊದಲ ಆಸ್ಕ್ಲೆಪಿಯಾನ್, ಪರಮಪವಿತ್ರವೆಂದು ಪರಿಗಣಿತವಾದ 'ಎಪಿಡಾರಸ್' ಎಂಬಲ್ಲಿ ಆರಂಭವಾಯಿತು. ಇದು ಅತ್ಯಲ್ಪ ಕಾಲದಲ್ಲೇ ಸರ್ವರೋಗಗಳನ್ನು ಗುಣಪಡಿಸಬಲ್ಲ ಕೇಂದ್ರವೆಂದು ಜನಪ್ರಿಯವಾಯಿತು. ಅಲ್ಪಕಾಲದಲ್ಲಿ ಟ್ರಿಕ್ಕಾ, ಕಾಸ್ ದ್ವೀಪ, ಅಥೆನ್ಸ್, ಕಾರಿಂಥ್, ಪೆರ್ಗಮಾನ್ ಮುಂತಾದೆಡೆ ಹೊಸ ಆಸ್ಕ್ಲೆಪಿಯಾನುಗಳು ಶುರುವಾದವು. ಗ್ರೀಸ್ ಮತ್ತು ಮೆಡಿಟರೇನಿಯನ್ ಸಮುದ್ರದ ಆಸುಪಾಸಿನಲ್ಲಿ 300ಕ್ಕೂ ಹೆಚ್ಚು ದೇಗುಲ ಆಸ್ಪತ್ರೆಗಳು ಆರಂಭವಾದವು. ಕಾಸ್ ದ್ವೀಪದಲ್ಲಿದ್ದ ಆಸ್ಕ್ಲೆಪಿಯಾನ್‌ನಲ್ಲಿ 'ಆಧುನಿಕ ವೈದ್ಯಕೀಯದ ಪಿತಾಮಹ' ಎಂದು ಹೆಸರಾದ ಹಿಪ್ಪೋಕ್ರೇಟ್ಸ್ ವೈದ್ಯಕೀಯ ಶಿಕ್ಷಣ ಪಡೆದರೆ, ಪೆರ್ಗಮಾನ್‌ನಲ್ಲಿ ಪ್ರಖ್ಯಾತ ರೋಮನ್ ವೈದ್ಯ ಗ್ಯಾಲನ್ ಶಿಕ್ಷಣ ಪಡೆದು ವೈದ್ಯನಾದ.

ಆಸ್ಕ್ಲೆಪಿಯಾನ್ ರಚನೆ: ಇದು ಗಮನೀಯ. ದೇಗುಲ ಸಮುಚ್ಚಯದಲ್ಲಿ ಹಲವು ಕಟ್ಟಡಗಳು ಇರುತ್ತಿದ್ದವು. ಪ್ರಧಾನ ಕಟ್ಟಡವು 'ಚಿಕಿತ್ಸಾ ಅಧಿದೈವ' (ಗಾಡ್ ಆಫ್ ಹೀಲಿಂಗ್) ಆಸ್ಕ್ಲೆಪಿಯಸ್‌ನದಾಗಿತ್ತು. ನಾಯಿಗಳು ಮತ್ತು ವಿಷರಹಿತ ಆಸ್ಕ್ಲೆಪಿಯಾನ್ ಹಾವುಗಳಿಗಾಗಿ ಪ್ರತ್ಯೇಕ ಕಟ್ಟಡವಿರುತ್ತಿದ್ದವು. ಪ್ರಾಚೀನ ಗ್ರೀಕ್ ವೈದ್ಯಕೀಯದಲ್ಲಿ ಹಾವು ಗುಣಮುಖದ ಸಂಕೇತವಾಗಿತ್ತು (ಹುಟ್ಟು ಮತ್ತು ಸಾವಿನ ಸಂಕೇತ. ಹಾವು ಪೊರೆ ಬಿಡುವುದೆಂದರೆ ಹೊಸ ಜೀವನವನ್ನು ಆರಂಭಿಸುವುದು ಎಂದರ್ಥ). ಪವಿತ್ರಜಲವನ್ನು ಚಿಮ್ಮಿಸುವ ಒಂದು ಕಾರಂಜಿ ಇರುತ್ತಿತ್ತು. 'ಥಲಾಮೋಸ್' ಎಂಬ ವಿಶಾಲ ಕಟ್ಟಡವಿರುತ್ತಿತ್ತು. ಇದೊಂದು ಸ್ವಪ್ನಗೃಹ. ಮೊಟ್ಟೆಯೊಡೆದು ಮರಿ ಹೊರಬರಲು, ಮೊಟ್ಟೆಗೆ ನಿಗದಿತ ಅವಧಿವರೆಗೆ ಕಾವು ಕೊಡಬೇಕಲ್ಲವೆ! ಹಾಗೆಯೇ ವ್ಯಕ್ತಿಯು ಅನಾರೋಗ್ಯದ ನಿವಾರಣೆಯ ಮಾರ್ಗವನ್ನು ಸ್ವತಃ ಕನಸಿನಲ್ಲಿ ಕಾಣಲು ಹಲವು ದಿನಗಳವರೆಗೆ ಕಾಯಾಬೇಕಾದ ಸ್ಥಳ ಸ್ವಪ್ನಗೃಹ. ಇದನ್ನು 'ಇನ್‌ಕ್ಯುಬೇಟರ್' ಎನ್ನುತ್ತಿದ್ದರು. ಆಟದ ಅಂಗಳಗಳು, ಮನರಂಜನೆಗಾಗಿ ವಿಶೇಷ ವೇದಿಕೆಗಳು (ಆಂಫಿಥಿಯೇಟರ್) ಇರುತ್ತಿದ್ದವು.

ಚಿಕಿತ್ಸಾ ಸ್ವರೂಪ: ದೇವಾಲಯ ಆಸ್ಪತ್ರೆಗಳು ಪ್ರಶಾಂತ ಪರಿಸರದಲ್ಲಿರುತ್ತಿದ್ದವು, ಗದ್ದಲ ಗೌಜುಗಳಿಗೆ ಅವಕಾಶವಿರುತ್ತಿರಲಿಲ್ಲ, ಹಾಗಾಗಿ ರೋಗಿಗಳು ಈ ಪರಿಸರದೊಳಗೆ ಹೆಜ್ಜೆಯಿಡುತ್ತಿದ್ದ ಹಾಗೆ ಅವರಿಗೆ ಒಂದು ರೀತಿಯ ಅಲೌಕಿಕ ಶಾಂತಿಯ ಅನುಭವವಾಗುತ್ತಿತ್ತು. ಆಸ್ಕ್ಲೆಪಿಯಾನುಗಳಲ್ಲಿ ರೋಗಿಗಳಿಗೆ ಮಾನಸಿಕ ಹಾಗೂ ದೈಹಿಕ ಚಿಕಿತ್ಸೆ ದೊರೆಯುತ್ತಿದ್ದವು. ಚಿಕಿತ್ಸೆಯು ಪ್ರಧಾನವಾಗಿ 2 ಘಟ್ಟಗಳಲ್ಲಿ ದೊರೆಯುತ್ತಿತ್ತು. ಮೊದಲನೆಯದು ಕೆಥಾರಸಿಸ್, ಎರಡನೆಯದು ಇನ್‌ಕ್ಯುಬೇಶನ್. ಕೆಥಾರಸಿಸ್ ಎಂದರೆ ಮಾನಸಿಕ ಹಾಗೂ ದೈಹಿಕ ಶುದ್ಧೀಕರಣ. ಮೊದಲು ಹಲವು ಸಲ ನಾನಾ ರೀತಿಯ ಅಭ್ಯಂಜನ, ನಂತರ ವಿರೇಚನ (ಬೇಧಿ) ಮಾಡಿಸುತ್ತಿದ್ದರು. ಕೊನೆಯಲ್ಲಿ ವಿಶೇಷ ಪಥ್ಯಾಹಾರವನ್ನು ವಿಧಿಸುತ್ತಿದ್ದರು. ಈ ಕ್ರಮಬದ್ಧ ಶುದ್ಧೀಕರಣದ ನಂತರವೇ ರೋಗಿಗಳು ಮುಂದಿನ ಹಂತದ ಚಿಕಿತ್ಸೆಗೆ ಅರ್ಹತೆ ಪಡೆಯುತ್ತಿದ್ದರು. ಈ ವಿಧಿಗಳು ಹಲವು ದಿನಗಳವರೆಗೆ ವಿಸ್ತೃತವಾಗಿ ನಡೆದು, ರೋಗಿಗಳ ಮನದ ಒತ್ತಡ ಮತ್ತು ಆತಂಕವನ್ನು ಪರಿಣಾಮಕಾರಿಯಾಗಿ ಶಮನಗೊಳಿಸುತ್ತಿದ್ದವು. ಮನದಲ್ಲಿ ಶಾಂತಿ ನೆಲೆಸುತ್ತಿತ್ತು.

ಚಿಕಿತ್ಸೆಯ 2ನೇ ಹಂತವು ಸ್ವಪ್ನಗೃಹದಲ್ಲಿ ನಡೆಯುತ್ತಿತ್ತು. ಇದನ್ನು 'ಸ್ವಪ್ನಚಿಕಿತ್ಸೆ' ಎಂದೂ ಕರೆಯುತ್ತಿದ್ದರು. ಸ್ವಪ್ನಗೃಹದಲ್ಲಿರುತ್ತಿದ್ದ 'ಎಂಕೋಯಿಮೆಟೀರಿಯಾನ್' ಎಂಬ ಶಯನಗೃಹಗಳಲ್ಲಿ ರೋಗಿಗಳಿಗೆ 'ಪವಿತ್ರ ನಿದ್ರೆ' ಬರಲು ಚಿಕಿತ್ಸೆ ನೀಡುತ್ತಿದ್ದರು. ನಿದ್ರಿಸಲು ಅಫೀಮು ಮುಂತಾದ ನಿದ್ರಾಕಾರಕಗಳನ್ನು ಕೊಡುತ್ತಿದ್ದರೆ ಅಥವಾ ವಶೀಕರಣದ (ಹಿಪ್ನೋಸಿಸ್) ಮೂಲಕ ನಿದ್ರೆ ತರಿಸುತ್ತಿದ್ದರೆ? ಎನ್ನುವುದು ತಿಳಿದುಬಂದಿಲ್ಲ. ಈ ನಿದ್ರಾಪ್ರಚೋದಕ ಚಿಕಿತ್ಸೆಯನ್ನು 'ಎಂಕೋಯಿಮೆಸಿಸ್' ಎನ್ನುತ್ತಿದ್ದರು. ಹೀಗೆ ರೋಗಿಗಳು ದೇವಾಲಯ ಆಸ್ಪತ್ರೆಯಲ್ಲಿ ಹಲವು ದಿನಗಳವರೆಗೆ ನಿದ್ರಿಸುತ್ತಿದ್ದರು. ಎಂದಾದರೂ ಒಂದು ರಾತ್ರಿ, ಸ್ವಯಂ ಆಸ್ಕ್ಲೆಪಿಯಸ್ ರೋಗಿಗಳ ಕನಸಲ್ಲಿ ಬಂದು ಅವರ ಅನಾರೋಗ್ಯವನ್ನು ಗುಣಪಡಿಸುತ್ತಿದ್ದ. ಪ್ರತಿಯೊಬ್ಬರಿಗೂ ಸ್ವಯಂ ಆಸ್ಕ್ಲೆಪಿಯಸ್ ಬರುತ್ತಿರಲಿಲ್ಲ, ಆತನ ಹೆಣ್ಣು ಮಕ್ಕಳಾದ ಪನೇಶಿಯ ಅಥವ ಹೈಜಿಯಾ ಬಂದು ಚಿಕಿತ್ಸೆ ನೀಡುತ್ತಿದ್ದರು. ಇಲ್ಲವೇ ಆಸ್ಕ್ಲೆಪಿಯಸ್‌ನ ಮಗ ಹಾಗೂ ಅತ್ಯುತ್ತಮ ಶಸ್ತ್ರವೈದ್ಯ ಮೆಚಿಯಾನ್ ಅಥವಾ ಇನ್ನೊಬ್ಬ ಮಗ ಪೊಡಾಲೀರಿಯಸ್ ಬರುತ್ತಿದ್ದರು. ಕೆಲವೊಮ್ಮೆ ಆಸ್ಕ್ಲೆಪಿಯಸ್‌ನ ನಾಯಿ ಅಥವಾ ಹಾವು ಕನಸಿನಲ್ಲಿ ಬಂದು ರೋಗಿಗಳನ್ನು ಗುಣಪಡಿಸುತ್ತಿದ್ದವು ಇಲ್ಲವೇ ಗುಣವಾಗುವ ಮಾರ್ಗವನ್ನು ತೋರುತ್ತಿದ್ದವು.

ಕನಸು ಬಿದ್ದ ಕೂಡಲೇ ರೋಗಿಗಳು ದೇವಾಲಯದಲ್ಲಿದ್ದ ಆಸ್ಕ್ಲೆಪಿಯಡೆ ಎಂಬ ಪುರೋಹಿತರನ್ನು ಭೇಟಿಯಾಗುತ್ತಿದ್ದರು. ಇವರು ರೋಗಿಗಳು ಹೇಳುವ ಕನಸನ್ನು ಅರ್ಥೈಸುತ್ತಿದ್ದರು. ರೋಗ ಸ್ವಯಂ ಗುಣವಾಗುತ್ತದೆ ಎಂದೋ, ಇಲ್ಲವೇ ಇಂತಿಂಥ ಚಿಕಿತ್ಸೆ ಪಡೆದರೆ ನಿವಾರಣೆಯಾಗುತ್ತದೆ ಎಂದೋ ಹೇಳುತ್ತಿದ್ದರು. ಇವರಿಗೆ ಧಾರ್ಮಿಕ ಆಚರಣೆ ನಡೆಸುವುದರ ಜತೆಯಲ್ಲಿ ಅಗತ್ಯ ವೈದ್ಯಕೀಯ ತಿಳಿವು ಹಾಗೂ ತರಬೇತಿ ದೊರೆತಿರುತ್ತಿತ್ತು. ಗಾಯಗಳನ್ನು ಗುಣಪಡಿಸುವಲ್ಲಿ ನುರಿತಿದ್ದ ಇವರು ಮುರಿದ ಮೂಳೆಗಳನ್ನು ಸ್ವಸ್ಥಾನದಲ್ಲಿ ಕೂರಿಸಲು, ಸಣ್ಣಪುಟ್ಟ ಸರಳ ಶಸ್ತ್ರಚಿಕಿತ್ಸೆ ಮಾಡಲು ಬಲ್ಲವರಾಗಿದ್ದರು. ಮೂಲಿಕೆಗಳಿಂದ ನಾನಾ ಔಷಧಗಳನ್ನು ಸಿದ್ಧಪಡಿಸುತ್ತಿದ್ದರು. ರೋಗಿಗಳಿಗೆ ನಿಗದಿತ ಸ್ನಾನವಿಧಿ, ಪಥ್ಯಾಹಾರ, ಜಿಮ್ನಾಶಿಯಂನಲ್ಲಿನ ದೈಹಿಕ ಚಟುವಟಿಕೆಗಳನ್ನು ಸೂಚಿಸುತ್ತಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಇವರು ಆಪ್ತಸಲಹೆ ನೀಡಬಲ್ಲವರಾಗಿದ್ದರು. ದೈವ ಪ್ರತಿನಿಧಿಗಳಾಗಿದ್ದ ಇವರ ಮಾತನ್ನು ಶ್ರೀಸಾಮಾನ್ಯರು ನಂಬುತ್ತಿದ್ದರು.

ಹಿಪ್ಪೋಕ್ರೇಟನ ಸಂಹಿತೆ (ಹಿಪ್ಪೋಕ್ರ್ಯಾಟಿಕ್ ಕಾರ್ಪಸ್): ಆಸ್ಕ್ಲೆಪಿಯಾನ್ ಕೇವಲ ಶ್ರದ್ಧಾ ಹಾಗೂ ಚಿಕಿತ್ಸಾ ಕೇಂದ್ರವಾಗಿರಲಿಲ್ಲ, ಅಧ್ಯಯನ-ಅಧ್ಯಾಪನ ಶಾಲೆಯೂ ಆಗಿತ್ತು. ಆಸ್ಕ್ಲೆಪಿಯಾನುಗಳಲ್ಲಿ ಪುರೋಹಿತ ವೈದ್ಯರು ನೂರಾರು ವರ್ಷಗಳವರೆಗೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಈ ಅವಧಿಯಲ್ಲಿ ಅವರಿಗೆ ರೋಗಿಯ ದೇಹ-ಮನಸ್ಸುಗಳ ಅಧ್ಯಯನಕ್ಕೆ ವಿಪುಲ ಅವಕಾಶ ದೊರೆಯುತ್ತಿತ್ತು. ಬಹುಶಃ ತಾವು ನೀಡುತ್ತಿದ್ದ ಪ್ರಯೋಗಾತ್ಮಕ ಚಿಕಿತ್ಸೆಗಳ ಗುಣಾವಗುಣಗಳ ಅಧ್ಯಯನ ಮಾಡಿ ಅವನ್ನು ದಾಖಲಿಸುತ್ತಿದ್ದರು. ತಮಗೆ ಕಂಡ ಸತ್ಯಗಳನ್ನೆಲ್ಲ ಸೂತ್ರರೂಪದಲ್ಲಿ ಬರೆದಿಟ್ಟರು. ಈ ಸೂತ್ರಸಾಹಿತ್ಯವನ್ನು ಇಂದು 'ಹಿಪ್ಪೋಕ್ರೇಟನ ಸಂಹಿತೆ' ಎನ್ನುತ್ತೇವೆ. ಸ್ವಯಂ ಹಿಪ್ಪೋಕ್ರೇಟ್ ಕೂಡ ಕಾಸ್ ದ್ವೀಪದ ಆಸ್ಕ್ಲೆಪಿಯಾನ್‌ನಲ್ಲಿ ಕಲಿತು, ಅಂದು ಲಭ್ಯವಿದ್ದ ಎಲ್ಲ ಆರೋಗ್ಯ-ಅನಾರೋಗ್ಯ ಮಾಹಿತಿಯನ್ನು ಸೂತ್ರರೂಪದಲ್ಲಿ ಸಂಗ್ರಹಿಸಿದ. ತನ್ನ ಅಧ್ಯಯನ-ಸಂಶೋಧನೆ-ಪ್ರಯೋಗ-ಫಲಿತಾಂಶಗಳನ್ನೂ ಅದಕ್ಕೆ ಸೇರಿಸಿದ. ಸಮಗ್ರ ಹಿಪ್ಪೋಕ್ರೇಟ್ ಸಂಹಿತೆಯನ್ನು ಸ್ವಯಂ ಹಿಪ್ಪೋಕ್ರೇಟ್ ಬರೆಯಲಿಲ್ಲ. ಆತ ಕೆಲವನ್ನಷ್ಟೇ ಬರೆದ. ಉಳಿದದ್ದು ಪಾರಂಪರಿಕ ತಿಳಿವಳಿಕೆ. ಆದರೆ ಇದನ್ನು ಇಂದು ನಾವು ಆತನ ಹೆಸರಿನಲ್ಲಿ ಗುರುತಿಸುತ್ತಿದ್ದೇವೆ. ಜತೆಗೆ 'ಆಧುನಿಕ ವೈದ್ಯಕೀಯದ ಪಿತಾಮಹ' ಎಂಬ ಅಭಿದಾನವನ್ನೂ ನೀಡಿದ್ದೇವೆ. ಹಿಪ್ಪೋಕ್ರೇಟನ ಸಂಹಿತೆಯು ಅನೇಕ ಮಹತ್ವಯುತ ಸತ್ಯಗಳನ್ನು ಬೆಳಕಿಗೆ ತಂದಿತು.



ಕಲಾವಿದನ ಕಲ್ಪನೆಯಲ್ಲಿ ಆಸ್ಕ್ಲೆಪಿಯಾನ್.

ಪ್ರಾಯೋಗಿಕ ವೀಕ್ಷಣೆ: ಪ್ರಾಚೀನ ಗ್ರೀಕ್ ಸಂಸ್ಕೃತಿಯಲ್ಲಿ 'ದೇವತಾವಾದ'ಕ್ಕೆ ಆದ್ಯತೆಯಿತ್ತು. ಎಲ್ಲವೂ ದೈವನಿರ್ಣಿತ ಎಂಬ ಅಂಶವನ್ನು ಅವರು ಒಪ್ಪಿದ್ದರು. ಆದರೂ ಆಸ್ಕ್ಲೆಪಿಯಾನ್‌ನಲ್ಲಿ ರೋಗಿಗಳ ವೀಕ್ಷಣೆ, ಅದರಲ್ಲಿ ತಾವು ಕಂಡ ಲಕ್ಷಣಗಳ ಕ್ರಮಬದ್ಧ ದಾಖಲೆ, ಅವುಗಳ ತಾರ್ಕಿಕ ವಿಶೇಷಣೆ ನಂತರ ಒಂದು ತಾತ್ಕಾಲಿಕ ರೋಗನಿದಾನ ಮಾಡುವ ಪದ್ಧತಿ ಜನಪ್ರಿಯವಾಯಿತು. ಹೀಗೆ ಹಲವು ರೋಗಿಗಳ ಅಧ್ಯಯನದ ನಂತರ ಒಂದು 'ಅನುಭವಜನ್ಯ ಚಿಕಿತ್ಸೆ' (ಎಂಪೆರಿಕಲ್ ಟ್ರೀಟ್‌ಮೆಂಟ್) ಯನ್ನು ರೂಪಿಸುತ್ತಿದ್ದರು. ಈ ವಿಧಾನವು ಆಧುನಿಕ ವೈದ್ಯಕೀಯ ವಿಜ್ಞಾನ ಬೆಳೆಯಲು ಭದ್ರ ತಳಪಾಯವನ್ನು ಹಾಕಿತು.

ರೋಗಿ ಕೇಂದ್ರಿತ ಚಿಕಿತ್ಸೆ: ಆಸ್ಕ್ಲೆಪಿಯಾನ್‌ನಲ್ಲಿ ಪ್ರತಿ ರೋಗಿಯನ್ನೂ ವೈಯುಕ್ತಿಕವಾಗಿ ಅಧ್ಯಯನ ಮಾಡಿ ಅವನ ದೈಹಿಕ, ಮಾನಸಿಕ ರೋಗಲಕ್ಷಣಗಳು, ಆಹಾರ ಪದ್ಧತಿ ಮತ್ತು ಜೀವನ ಶೈಲಿಗಳನ್ನು ಗಮನಿಸಿ ಅವನ್ನು ದಾಖಲಿಸುತ್ತಿದ್ದರು. ನಂತರ ಅವನ ಕನಸನ್ನು, ಅವನ ಆರೋಗ್ಯ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಿದ್ದರು. ನಂತರವಷ್ಟೇ ಅವನಿಗೆ ಸೂಕ್ತ ಚಿಕಿತ್ಸಾ ಸ್ವರೂಪವನ್ನು ನಿರ್ಣಯಿಸುತ್ತಿದ್ದರು. ಹೀಗೆ ರೋಗಿ ಕೇಂದ್ರಿತ ಹಾಗೂ ಅವನಿಗೆಂದೇ ಸಿದ್ಧಪಡಿಸಿದ ವೈಯುಕ್ತಿಕ ಚಿಕಿತ್ಸಾ ಜವಾಬ್ದಾರಿಯನ್ನು ಪುರೋಹಿತ ವೈದ್ಯರು ಹೊರುತ್ತಿದ್ದರು.

ಚಿಕಿತ್ಸೆಯಲ್ಲಿ ನೈತಿಕತೆ: ಹಿಪ್ಪೋಕ್ರೇಟನ ಸಂಹಿತೆಯಲ್ಲಿ ಅತ್ಯಂತ ಪ್ರಮುಖವಾಗಿದ್ದು ಇಂದಿಗೂ ಬಳಕೆಯಲ್ಲಿರುವುದು 'ಹಿಪ್ಪೋಕ್ರೇಟನ ಶಪಥ' ಅಥವಾ 'ಹಿಪ್ಪೋಕ್ರೇಟ್ ಓಥ್'. ಇದು ವೈದ್ಯ ವೃತ್ತಿಗೆ ನೈತಿಕ ಮಾನದಂಡಗಳನ್ನು ರೂಪಿಸಿತು, ಕರುಣೆಯ ಮಹತ್ವವನ್ನು, ರೋಗಿಯ ಚಿಕಿತ್ಸಾ ವಿವರಗಳ ಗೌಪ್ಯತೆ ಕಾಪಾಡಿಕೊಳ್ಳಬೇಕಿರುವುದನ್ನು ವೈದ್ಯರಿಗೆ ಒತ್ತಿ ಹೇಳಿತು. ಗುಣಪಡಿಸಲು ಸಾಧ್ಯವಿಲ್ಲದ ಸಂದರ್ಭಗಳಲ್ಲಿ ಕನಿಷ್ಠ ಯಾವುದೇ ಹಾನಿಯಾಗದಂತೆ ಎಚ್ಚರಿಕೆ ವಹಿಸಬೇಕಾದ ಅಗತ್ಯವನ್ನು ಸಾರಿತು. ಆಸ್ಕ್ಲೆಪಿಯಾನ್‌ಗಳಲ್ಲಿ ಸೇವಾ ಮತ್ತು ಚಿಕಿತ್ಸಾ ಸಮರ್ಪಣೆಯಿಂದ ಪ್ರೇರಿತವಾಗಿರುವ ಈ ನೈತಿಕ ಸಂಹಿತೆ, ವೈದ್ಯಕೀಯ ವೃತ್ತಿಪರತೆಯ ಬೆನ್ನೆಲುಬಾಗಿ ಕಾರ್ಯನಿರ್ವಹಿಸಿದೆ.

ರೋಗರಕ್ಷಣಾ ಜೀವನಶೈಲಿ: ರೋಗ ಬಂದ ಮೇಲೆ ಗುಣಪಡಿಸುವುದಕ್ಕಿಂತ, ಅದು ಬಾರದಂತೆ ಜೀವನಶೈಲಿ ರೂಪಿಸಿಕೊಂಡು ಕಾರ್ಯರೂಪಕ್ಕೆ ತರಬೇಕಾದ ಮಹತ್ವವನ್ನು ಆಸ್ಕ್ಲೆಪಿಯಾನ್ ಸಾರಿತು. ಪ್ರತಿ ವ್ಯಕ್ತಿಯು ತನ್ನ ದೇಹ-ಮನಸ್ಸಿನ ಹಿನ್ನೆಲೆಯಲ್ಲಿ ಸೇವಿಸಬೇಕಾದ ಆಹಾರ, ನಡೆಸಬೇಕಾದ ದೈಹಿಕ ಚಟುವಟಿಕೆ ಹಾಗೂ ಜೀವನಶೈಲಿಯನ್ನು ವಿಧಿಸಿತು. ಆರೋಗ್ಯವೆಂದರೆ ದೇಹ, ಮನಸ್ಸು ಮತ್ತು ಪರಿಸರದ ನಡುವಿನ ಸಂತುಲನದ ಸ್ಥಿತಿ ಎಂಬುದನ್ನು ಪುರೋಹಿತ ವೈದ್ಯರು ಅರ್ಥಮಾಡಿಕೊಂಡರು.

ಸಂಧಿಕಾಲ: ವೈದ್ಯಕೀಯ ಇತಿಹಾಸದಲ್ಲಿ ಆಸ್ಕ್ಲೆಪಿಯಾನುಗಳದ್ದು ಒಂದು ಸಂಧಿಕಾಲವೆನ್ನಬಹುದು. ಇಲ್ಲಿ 3 ರೀತಿಯ ಚಟುವಟಿಕೆಗಳು ಒಟ್ಟೊಟ್ಟಿಗೆ ನಡೆಯುತ್ತಿದ್ದವು. ಮೊದಲನೆಯದ್ದು ಗ್ರೀಕ್ ಧಾರ್ಮಿಕ ಆಚರಣೆಗಳು. ಗ್ರೀಕರು ತಮ್ಮದೇ ಆದ ದೇವತೆಗಳನ್ನು ನಂಬುತ್ತಿದ್ದರು. ಮನುಷ್ಯರಿಗೆ ಒದಗುವ ಅದೃಷ್ಟ-ದುರದೃಷ್ಟಗಳಿಗೆ ದೇವತೆಗಳ ಕೃಪೆ ಇಲ್ಲವೇ ಅವಕೃಪೆಗಳೇ ಕಾರಣ ಎಂಬುದು ಅವರ ನಂಬಿಕೆಯಾಗಿತ್ತು. ಇಂಥವರಿಗೆ ಅಗತ್ಯವಾದ ಧಾರ್ಮಿಕ-ಭಾವನಾತ್ಮಕ-ಮಾನಸಿಕ-ನೈತಿಕ ಮಾರ್ಗದರ್ಶನಗಳನ್ನು ಒದಗಿಸಿದ ಆಸ್ಕ್ಲೆಪಿಯಾನುಗಳು ಅವರಿಗೆ ಸಾಂತ್ವನ ನೀಡಿ ದುಃಖ-ದುಮ್ಮಾನಗಳನ್ನು ಕಳೆಯುತ್ತಿದ್ದವು. ಬಹುಶಃ ಇವೆಲ್ಲವೂ ಪ್ಲಾಸಿಬೋ ಪರಿಣಾಮಗಳಾಗಿ ಉಪಯುಕ್ತವಾಗುತ್ತಿದ್ದಿರಬಹುದು. ಎರಡನೆಯದು 'ಟ್ರಯಲ್ ಆ್ಯಂಡ್ ಎರರ್' ಸೂತ್ರದನ್ವಯದ ಮೂಲಿಕಾ ಚಿಕಿತ್ಸೆ, ಆಹಾರ ಚಿಕಿತ್ಸೆ, ಕಾಯ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆಗಳು. ಇವು ಆಧುನಿಕ-ತಾರ್ಕಿಕ-ಅನುಭವಜನ್ಯ ಹಾಗೂ ವೈಜ್ಞಾನಿಕ ವೈದ್ಯಕೀಯ ವಿಜ್ಞಾನಗಳ ಆವಿರ್ಭಾವಕ್ಕೆ ಭದ್ರವಾಗಿ ಬುನಾದಿ ಹಾಕಿದವು. ಮೂರನೆಯದಾಗಿ ವೈದ್ಯರಿಗೆ ನಿರ್ದಿಷ್ಟ ಕಟ್ಟುಪಾಡುಗಳನ್ನು ವಿಧಿಸಿ, ಅವರು ನೀತಿಮಾರ್ಗದಲ್ಲೇ ನಡೆಯುವಂತೆ ವಿಧಿಗಳನ್ನು ರೂಪಿಸಿದವು.

ಅವನತಿ ಮತ್ತು ಪರಂಪರೆ: ಆಸ್ಕ್ಲೆಪಿಯಾನುಗಳು ಸರಿಸುಮಾರು ಕ್ರಿ.ಪೂ.5ನೇ ಶತಮಾನದಲ್ಲಿ ಆರಂಭವಾಗಿ ಕ್ರಿ.ಶ.4ನೇ ಶತಮಾನದವರೆಗೆ ಮುಂದುವರಿದವು. ಈ ವೇಳೆಗೆ ಕ್ರೈಸ್ತಧರ್ಮ ಶುರುವಾಗಿ ಯುರೋಪಿನಲ್ಲಿ ಬೇರುಬಿಡಲು ಯತ್ನಿಸುತ್ತಿತ್ತು. ಇದರ ಪ್ರಭಾವಕ್ಕೆ ಸಿಲುಕಿ ಆಸ್ಕ್ಲೆಪಿಯಾನುಗಳು ಕ್ರಮೇಣ ತಮ್ಮ ಜನಪ್ರೀತಿ ಮತ್ತು ಖ್ಯಾತಿಯನ್ನು ಕಳೆದುಕೊಳ್ಳಲಾರಂಭಿಸಿದವು. ಕೆಲವು ಆಸ್ಕ್ಲೆಪಿಯಾನುಗಳು ಪಾಳುಬಿದ್ದರೆ, ಉಳಿದವನ್ನು ಕ್ರೈಸ್ತರು 'ಕ್ರಿಶ್ಚಿಯನ್ ಬೆಸಿಲಿಕ'ಗಳಾಗಿ ಪರಿವರ್ತಿಸಿಕೊಂಡರು. ಆದರೆ ಆಸ್ಕ್ಲೆಪಿಯಾನುಗಳ ಪರಂಪರೆಗೆ ಅಂಥ ದೊಡ್ಡ ಚ್ಯುತಿಯೇನೂ ಬರಲಿಲ್ಲ. ಮಧ್ಯಯುಗದ ವೇಳೆಗೆ ಕ್ರೈಸ್ತ ಚರ್ಚುಗಳ ಆಸ್ಪತ್ರೆಗಳು (ಮೊನಾಸ್ಟಿಕ್ ಆಸ್ಪತ್ರೆಗಳು) ಆರಂಭವಾದಾಗ, ಅವು ಹೆಚ್ಚುಕಡಿಮೆ ಆಸ್ಕ್ಲೆಪಿಯಾನುಗಳ ತತ್ವಗಳನ್ನೇ ಅಳವಡಿಸಿಕೊಂಡು ಕಾರ್ಯರೂಪಕ್ಕೆ ತಂದವು. ಅದೇ ಚರ್ಚ್ ಆಸ್ಪತ್ರೆಗಳು ಮುಂದೆ ಆಧುನಿಕ ಆಸ್ಪತ್ರೆಗಳ ಜನನಕ್ಕೆ ಕಾರಣವಾದುದನ್ನು ಇತಿಹಾಸದಲ್ಲಿ ನೋಡಿದ್ದೇವೆ. ಹೀಗೆ ಗ್ರೀಕರ ಆಸ್ಕ್ಲೆಪಿಯಾನುಗಳು ಧರ್ಮ-ಮನಸ್ಸು-ವೈದ್ಯಕೀಯಗಳನ್ನು ಸಮನ್ವಯಗೊಳಿಸಿದವು. ದೇಹ-ಮನಸ್ಸು-ಆತ್ಮಗಳ ಸಮನ್ವಯ ಮತ್ತು ಸಂತುಲನದಿಂದ ಮಾತ್ರ ನಾವು ಆರೋಗ್ಯವಾಗಿರಬಲ್ಲೆವು ಎಂಬ ಸತ್ಯವನ್ನು ಸಾರಿದವು. ಆಸ್ಕ್ಲೆಪಿಯೇಡುಗಳಿಗೆ ನಮೋನ್ನಮಃ

ಜಾಗತಿಕ ಲಿಂಗಾಹತದ ಜಾಗತಿಕ ಸತ್ಯ!

ಬಸವ ಮಂಟಪ

ರವಿ ಹಂಜ್
vveditoped@gmail.com

ಭಾಗ 3

ಇದೇ ರೀತಿ ಕಲಬುರ್ಗಿಯವರು ಚೆನ್ನಬಸವಣ್ಣನ ಹುಟ್ಟಿನ ಕುರಿತಾದ ತಮ್ಮ ಸಂಕಥನಕ್ಕೆ ಡೋಹರ ಕಕ್ಕಯ್ಯನಿಗೆ ಮಲ್ಲಿದೇವಿ ಎಂಬ ಮಡದಿಯಿದ್ದಳು ಎಂಬುದು ತಾಳೆಯಾಗದ ಕಾರಣ ಮಲ್ಲಿದೇವಿ ಎನ್ನುವ ಸುಧಾರಿಸಿದ ಹೆಸರನ್ನು ನಂಬುವುದು ಕಷ್ಟ ಎಂದು ವಾದಿಸಿದ್ದರು. ಮಲ್ಲಿನಾಥ, ಮಲ್ಲಿಕಾರ್ಜುನ, ಮಲ್ಲಯ್ಯ, ದೇವಿ ಎಂಬ ಮಾಯಿದೇವಿ ಹೆಸರುಗಳನ್ನು ವಚನಕಾರರೇ ಬಳಸಿರುವಾಗ ಮತ್ತು 'ಮಲ್ಲಿನಾಥ ಪುರಾಣ'ವನ್ನು ಸ್ವತಃ ತಾವೇ ಸಂಪಾದಿಸಿರುವಾಗ ಮಲ್ಲಿದೇವಿ ಎಂಬುದು ಹೇಗೆ ಸುಧಾರಿತ ಎನಿಸುತ್ತದೆ ಎಂಬ ವಿವರಣೆಯನ್ನು ಎಲ್ಲಿಯೂ ಕೊಟ್ಟಿಲ್ಲ. ಈ ಕುರಿತಾಗಿ ''ಕಲಬುರ್ಗಿಯವರಿಗೆ ತಿಳಿಹೇಳಿದ ಮೇಲೂ ತಿದ್ದಿಕೊಳ್ಳದಿರುವುದು ಅಪರಾಧವಾಗುವುದು'' ಎಂದು ಎಲ್.ಬಸವರಾಜುರವರು ಹೇಳಿದ್ದಾರೆ ಎಂಬಲ್ಲಿಗೆ ಕನ್ನಡ ನಾಮೋತ್ಪತ್ತಿ ವಾದ ರದ್ದಾಗುತ್ತದೆ.

ಇನ್ನು ಸಂಶೋಧನಾ ನೆಲೆಯಲ್ಲಿ ಏನೇ ತಿಪ್ಪರಲಾಗ ಹಾಕಿದರೂ 12ನೇ ಶತಮಾನದ ಶರಣರ ಚರ್ಚೆಯ ದಾಖಲೆಯ ಯಾವುದೇ ವಚನಗಳ ದಾಖಲಾತಿಯ ಒಂದೇ ಒಂದು ಮೂಲ ಓಲೆಗರಿ ಈವರೆಗೆ ಸಿಕ್ಕಿಲ್ಲ. ಸಿಕ್ಕಿರುವ ವಚನಗಳ ಓಲೆಗರಿಯ ಪ್ರತಿಗಳೆಲ್ಲವೂ 15ನೇ ಶತಮಾನದ ಅಂತ್ಯ (ಕ್ರಿ.ಶ. 1480) ದಿಂದೀಚೆಗೆ ಬರೆದವುಗಳೇ ಹೊರತು ಅದಕ್ಕಿಂತ ಹಳೆಯವಲ್ಲ. ಕೇವಲ ಪೌರಾಣಿಕ, ಸೃಜನಶೀಲ ಸಂಕಥನಗಳ ಆಧಾರದ ಮೇಲೆ ಇಂಥ ವ್ಯಕ್ತಿಗಳಿದ್ದರು ಎಂದುಕೊಂಡರೂ ಅವರ ಚರ್ಚೆಯ ವಾಚ್ಯ ಸೂಚಕಗಳನ್ನು ವಚನಗಳೆಂದು ಕರೆದ ದಾಖಲೆ 15ನೇ ಶತಮಾನಕ್ಕೂ ಮುನ್ನ ಇಲ್ಲ. ಇರುವ ದಾಖಲೆಗಳೆಲ್ಲವೂ ಕಾಳಾಮುಖ ವೀರಶೈವ ಮಾತ್ರ. ಹಾಗಾಗಿ ಸಂಶೋಧನಾ ಪಿತಾಮಹರು ಏನೇ ತಿರುತಿರುಚಿ ವಾದ ಮಂಡಿಸಿದರೂ ಲಿಂಗಾಯತ ಪ್ರತ್ಯೇಕಧರ್ಮ ಎಂಬುದು ಮರುಮರುಗಿ ರದ್ದಾಗುತ್ತದೆ.

ಅಂದ ಹಾಗೆ ''ಸಂಶೋಧನೆ ಎನ್ನುವುದು ಸತ್ಯವನ್ನು ಶೋಧಿಸಲು ಮಾಡಿಕೊಂಡ ಪ್ರತಿಜ್ಞೆ'' ಎನ್ನುವುದು ಕಲಬುರ್ಗಿಯವರ ಉದ್ಘೋಷ! ಅದನ್ನು ನಾನು ಮಾತ್ರ ನಿಷ್ಠವಾಗಿ ಪಾಲಿಸುತ್ತಿರುವೆನೆಂದು 'ಲಿಂಗಾಂಗಸಾಮರಸ್ಯಾರೂಢ'ನಾಗಿ ಪ್ರಾಮಾಣಿಸುತ್ತೇನೆ.

***

ಥಾಯ್ಲೆಂಡಿನಲ್ಲಿ ಬಸವಣ್ಣ!: ಲಿಂಗಾಯತ ಧರ್ಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಮೊದಲ ಸಾಲಿನ ಸಂಸ್ಕೃತಿ ಚಿಂತಕರಾದ ಪ್ರೊ. ಕಲಬುರ್ಗಿ, ಡಾ.ಎಸ್.ಎಂ. ಜಾಮದಾರ, ರಂಜಾನ್ ದರ್ಗಾ ನಂತರದ ಸಾಲಿನ ಶರಣ ಜಿ.ಬಿ. ಪಾಟೀಲ್ (ಕಾರ್ಯದರ್ಶಿ, ಜಾಗತಿಕ ಲಿಂಗಾಯತ ಮಹಾಸಭಾ) ಎನ್ನುವವರ ಅನುಭಾವದ ಸಂಕಥನವೊಂದನ್ನು ಹೀಗೆ ಪ್ರಕಟಿಸಲಾಗಿದೆ: ''ಸಂಗಮವರಿ (Marble) ಕಲ್ಲಿನಲ್ಲಿ ಕೆತ್ತಿದ ಅಷ್ಟೇನೂ ಆಕರ್ಷಣೆ ಇಲ್ಲದ 2 ಮೂರ್ತಿಗಳನ್ನು ಒಂದು ಚಿಕ್ಕ ದೇವಸ್ಥಾನದಲ್ಲಿ ಕಂಡೆ. ಒಂದು ಮೂರ್ತಿಯು ಅಂಗೈಯಲ್ಲಿ ಲಿಂಗ ಹಿಡಿದು ಪೂಜಿಸುವದು, ಎರಡನೆಯ ಮೂರ್ತಿಯ ಎದುರಿನಲ್ಲಿ ಸ್ಥಾವರಲಿಂಗ. ವೀರಭದ್ರನ ಮೂರ್ತಿಯ ಆಕಾರದ ಚಿಕ್ಕ ಚಿಕ್ಕ ಮೂರ್ತಿಗಳು. ನಾನು ಒಂದು ಕ್ಷಣ ದಂಗಾದೆ. ತಲೆಯಲ್ಲಿ ಸಾವಿರ ಬಲ್ಬ್ ಒಮ್ಮೆಲೇ ಹೊತ್ತಿಕೊಂಡಂತೆ. ನಾನು ನೋಡುತ್ತಿರುವುದು ಇಷ್ಟಲಿಂಗ ಪೂಜಾಧಾರಿಯ ಶರಣನದು. ಅದು ಬಸವಣ್ಣನವರದೂ ಆಗಿರಬಹುದು ಅಥವಾ ಯಾವುದೋ ಶರಣರದಿರಬಹುದು. ಇಂದಿನವರೆಗೂ ನಾವು ಬಸವಣ್ಣನವರ ವ್ಯಾಪ್ತಿಯು (ಪ್ರಚಾರವು) ಅಫ್ಘಾನಿಸ್ತಾನದವರೆಗೆ ಹರಡಿತ್ತೆಂದುಕೊಂಡಿದ್ದೆವು. ದೂರದ ಕಾಶ್ಮೀರ ದೊರೆಯು ವಚನಕಾರನಾಗಿದ್ದನ್ನು ಕಂಡಿದ್ದೇವೆ, ಆದರೆ ದೂರದ ಥಾಯ್ಲೆಂಡಿನಲ್ಲಿ ಬಸವಣ್ಣ ! ಅದ್ಭುತ, ಅಚ್ಚರಿ! ನಡೆಯುವವ ನಿಧಿಯನ್ನು ಎಡವಿದಂತೆ. ಕೈಲಿರುವ ಮೊಬೈಲ್‌ನಲ್ಲಿ ಫೋಟೋ ತೆಗೆದೆ. ಸುತ್ತಲೂ ಕಣ್ಣಾಡಿಸಿ ಹೆಚ್ಚಿನ ಕುರುಹುಗಳನ್ನು ಹುಡುಕಲು ಪ್ರಾರಂಭಿಸಿದೆ. ನನ್ನ ದೃಷ್ಟಿ ರಸ್ತೆಯ ಆಚೆ ಬದಿಯಲ್ಲಿ ಹರಿಯಿತು. ಅಲ್ಲೊಂದು ರೆಸಾರ್ಟ್. ಅದರ ಹೆಸರು 'ಬಸಯಾ', ಬಸವನ ವಿರೂಪಗೊಂಡ ಹೆಸರು, ಮತ್ತೊಂದು ನಿಧಿ! ಥಾಯ್ಲೆಂಡಿನಲ್ಲಿ ಬಸವ...'' ಹೀಗೆ ಪಾಟೀಲರ ಉದ್ವೇಗದ ಲೇಖನ ಸಾಗುತ್ತದೆ.

ಇರಲಿ, ಪದ್ಮಾಸನ ಹಾಕಿ ಬುದ್ಧನ ಧ್ಯಾನಸ್ಥ ರೂಪದಂತೆ ಬಲಹಸ್ತದ ಮೇಲೆ ಎಡಹಸ್ತವನ್ನು ಇಟ್ಟುಕೊಂಡ ಮೂರ್ತಿಯೊಂದರ ಸೊಂಟದ ಪಟ್ಟಿಯ ಕಟ್ಟು (Buckle) ಕೈಮೇಲಿನ ಲಿಂಗದಂತೆ ಗೋಚರಿಸುತ್ತಿರುವುದನ್ನು ಕಂಡ ಪಾಟೀಲರು 'ಥಾಯ್ಲೆಂಡಿನಲ್ಲಿ ಬಸವ' ಎಂದು ಆನಂದದ ಭಾವೋದ್ವೇಗದ ಕಡಲಲ್ಲಿ ತೇಲಾಡಿ ಸಂಶೋಧನಾ ಲೇಖನವನ್ನು ಬರೆದಿದ್ದಾರೆ. ಅಲ್ಲಿನ ಬಸಾಯಾ (Basaya) ಎನ್ನುವ ರೆಸಾರ್ಟಿನ ಬೋರ್ಡು ನೋಡಿ ಇದು ಜಗತ್ತಿನ 8ನೇ ಅದ್ಭುತದ ಥಾಯ್ ಬಸವಭಕ್ತ ಮಾಲೀಕತ್ವದ ರೆಸಾರ್ಟ್ ಇರಲೇಬೇಕು ಎಂದುಕೊಂಡು ತಮ್ಮ ಅಪಧಮನಿಗಳಲ್ಲಿ ಉಕ್ಕಿದ ಬಸಾಯಭಕ್ತಿಯ ರಕ್ತವನ್ನು ನಿಯಂತ್ರಿಸಿಕೊಂಡು ತ್ವರಿತವಾಗಿ ಲೇಖನವೊಂದನ್ನು ಬರೆದುಕೊಂಡು ಸಮಯಾಭಾವದ ಕಾರಣ ಸ್ವದೇಶಕ್ಕೆ ವಾಪಸಾಗಿದ್ದಾರೆ. ಅಂದ ಹಾಗೆ ಬಸಾಯಾ ಎಂದರೆ ವಾಸ್ತವ್ಯ. ಬಸಾಯಾ ಎಂಬುದು ಸಂಸ್ಕೃತ ಪದ ಮತ್ತು ಥಾಯ್ಲೆಂಡ್ ಹಿಂದೂ ದೇಶ! ಬಸಾಯಾ ಎಂದರೆ ವಿಜಯ, ಗಿಡಮೂಲಿಕೆಯ ಔಷಧಿ ಕೊಡುವ ಬೌದ್ಧ ಸನ್ಯಾಸಿ ಎಂಬೆಲ್ಲಾ ಅರ್ಥವಿದ್ದರೂ ಈ ರೆಸಾರ್ಟಿಗೆ ವಾಸ್ತವದಲ್ಲಿ 'ವಾಸ್ತವ್ಯ' ಎಂಬರ್ಥವೇ ಸೂಕ್ತ ಎಂದಿಡಲಾಗಿದೆ. ಅಂದ ಹಾಗೆ ಅವರು ಹಾಕಿರುವ ಚಿತ್ರದಲ್ಲಿರುವ ಗಡ್ಡಧಾರಿ ಸನ್ಯಾಸಿಯ ಹೆಸರು ಜೀವಕ. ಥಾಯ್ ಜನರು ಇವನು ಬುದ್ಧನ ಖಾಸಗಿ ವೈದ್ಯ ಎನ್ನುವುದಲ್ಲದೆ (ಥಾಯ್) ಮಸಾಜನ್ನು ಕಂಡುಹಿಡಿದ ಪಿತಾಮಹ ಎನ್ನುತ್ತಾರೆ.

ಈ ರೆಸಾರ್ಟ್ ಜಗತ್ತಿನ 8ನೇ ಅದ್ಭುತ ಹೌದೋ ಅಲ್ಲವೋ ಗೊತ್ತಿಲ್ಲ. ಆದರೆ ಖಂಡಿತವಾಗಿ ಲಿಂಗಾಯತ ಪ್ರತ್ಯೇಕ ಧರ್ಮ ಕೂಗಿಗರ 8ನೇ ಅದ್ಭುತ! ಹೀಗೆ ಅದ್ಭುತ ಸಂಕಥನಗಳನ್ನು ಕಟ್ಟಿ ಜನರನ್ನು ಹುಚ್ಚೆಬ್ಬಿಸಿ ಭಕ್ತಿಪಥಕ್ಕೆ ಹಚ್ಚುವುದು ಇಂದಿನ ಅನೇಕ ಚರ್ಚುಗಳ ತಂತ್ರ. ಅವತಾರ, ಪವಾಡ ಒಂದಾನೊಂದು ಕಾಲದ ತಂತ್ರ! ಆಲೇಲೂಯ, ಬಸಾಯಾ! ಮುಖ್ಯವಾಗಿ ಚೆನ್ನಬಸವ ಪುರಾಣದ ಕವಿಯು ಸಂಬೋಧಿಸಿರುವ ಗೌರವಾನ್ವಿತ ದೇವ, ದೇವರು, ದೇವರಾಜ, ನಾಥ ಎಂಬ ಸುಸ್ಪಷ್ಟ ಗೌರವಸೂಚಕಗಳಲ್ಲಿ ನಾಥ ಎಂದು ಬಳಸಿರುವುದನ್ನು ಹಿಡಿದು ಕಲಬುರ್ಗಿಯವರು ''ನಾಥ ಪಂಥದ ಕೇಂದ್ರವಾಗಿ ಸುಮುಕ್ತಿನಾಥರು ಇದರ ಪ್ರವರ್ತಕರೆಂದು ಚೆನ್ನ ಬಸವ ಪುರಾಣವು ಹೇಳುತ್ತದೆ'' ಎಂದು 'ಷರಾ' ಬರೆದ ಸಂಶೋಧನಾ ಚಾತುರ್ಯದ ಮಟ್ಟವನ್ನು ಪಾಟೀಲರು ಈ ಬಸಾಯಾ ಚಿಂತನೆಯ ಮಟ್ಟಿಗೆ ಉನ್ನತೀಕರಿಸಿದ್ದಾರೆ. ಅಂದಹಾಗೆ, ಈ ಶರಣರು ಥಾಯ್ಲೆಂಡಿಗೆ ಏಕೆ ಹೋಗಿರಬಹುದು ಎಂಬ ಆಲೋಚನೆ ನಿಮ್ಮಲ್ಲಿ ಒಂದು ಲಂಪಟನಗೆಯನ್ನು ಉಕ್ಕಿಸಿದರೆ ಅದು ನಿಮ್ಮ ಮನದ ಮುಂದಣ ಆಶೆ ಮಾತ್ರ!



ಚಿತ್ರ ಕೃಪೆ: ಜಿ.ಬಿ.ಪಾಟೀಲ್, ಲಿಂಗಾಯತ ಧರ್ಮದ ಅಂತರ್ಜಾಲ ತಾಣ

''ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದವೆತ್ತತ್ತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿಂದವತ್ತತ್ತ ನಿಮ್ಮ ಶ್ರೀ ಮಕುಟ, ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲ ಸಂಗಮದೇವಯ್ಯಾ, ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ'' ಎನ್ನುವಂಥ ಅಗಾಧ ಪರಂಪರೆಯ ವೀರಶೈವದ ನಿರಾಕಾರ ನಿರಾಮಯ ಶೂನ್ಯ ಸಿದ್ಧಾಂತವನ್ನು ಅತ್ಯಂತ ಶಿಥಿಲ ನಗೆಪಾಟಲ ಲೌಕಿಕ 'ಶಕ್ತಿ' ಸ್ಥಾವರವಾಗಿ ಪರಿವರ್ತನೆಗೊಳಿಸಿ ಅನಾತ್ಮಲಿಂಗವ ಕರಸ್ಥಲದಲ್ಲಿ ಸಂಕುಚಿತವಾಗಿ ಹಿಡಿದಿಟ್ಟುಕೊಂಡು ರಾಜಕೀಯ ಶಕ್ತಿಕೇಂದ್ರವಾಗುವತ್ತತ್ತಲತ್ತ... ಬಸವಶೋಷಣೆಯ ಬಸವರಾಜಕಾರಣದ ಜಾಗತಿಕ 'ಲಿಂಗಾಹತ'ದ ಜಾಗತಿಕ ಸತ್ಯ!

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಪ್ರತಿಸ್ಪಂದನ

ಮುಕುಂದ ದಾವಣಗೆರೆ

ವಿಶಿಯನ್ನು ಮರೆಯಲುಂಟೇ?

ಕ್ರಿಕೆಟಿಗ ಜಿ.ಆರ್.ವಿಶ್ವನಾಥ್ ಅವರ ಕುರಿತಾಗಿ 'ವಿಶ್ವರೂಪ ದರ್ಶನ' ಅಂಕಣದಲ್ಲಿ (ವಿಶ್ವವಾಣಿ ನ.9) ಮೂಡಿಬಂದ 'ನೋಟದಲ್ಲಿ ಲಿಟ್ಲ್ ಮಾಸ್ಟರ್, ಆಟದಲ್ಲಿ ಮೆಗಾ ಬ್ಲಾಸ್ಟರ್' ಎಂಬ ಲೇಖನವನ್ನು ಓದಿ ನನ್ನ ಮನಸ್ಸು 55 ವರ್ಷಗಳಷ್ಟು ಹಿಂದಕ್ಕೆ ಓಡಿತು. 1969ರ ನವೆಂಬರ್ 16ರ ಭಾನುವಾರ ನಡೆದ ಘಟನೆ ನೆನಪಿಗೆ ಬಂದಿತು.

ಆ ದಿನ ಭಾರತೀಯ ಸ್ಟೇಟ್ ಬ್ಯಾಂಕ್‌ನವರು ತಮಗೆ ಬೇಕಾಗುವ ಸಿಬ್ಬಂದಿಯನ್ನು ಆಯ್ಕೆಮಾಡಲು 3 ಗಂಟೆಗಳ ಲಿಖಿತ ಪರೀಕ್ಷೆ ಹಾಗೂ ಸಂದರ್ಶನವನ್ನು ಏರ್ಪಡಿಸಿದ್ದರು. ನಾನೂ ಒಬ್ಬ ಅಭ್ಯರ್ಥಿಯಾಗಿದ್ದೆ. ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗಿನ ಲಿಖಿತ ಪರೀಕ್ಷೆಯಲ್ಲಿ ಗಣಿತ, ಕನ್ನಡ ಮತ್ತು ಆಂಗ್ಲಭಾಷೆಯ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿತ್ತು. ಅದರಲ್ಲಿ ನಾನು ಚೆನ್ನಾಗಿ ಬರೆದಿದ್ದರಿಂದ ಖುಷಿಯಾಗಿದ್ದೆ. ಆದರೂ ಮನವನ್ನು ಒಂದು ವಿಷಯ ಕೊರೆಯುತ್ತಿತ್ತು- ಅಂದು ಬೆಳಗ್ಗೆಯಿಂದಲೂ ಪರೀಕ್ಷಾ ಕೇಂದ್ರದಲ್ಲೇ ಇದ್ದುದರಿಂದ ಅಂದು ನಡೆಯುತ್ತಿದ್ದ ಟೆಸ್ಟ್ ಮ್ಯಾಚ್‌ನ ಸ್ಕೋರ್ ತಿಳಿದುಕೊಳ್ಳಲು ಆಗಿರಲಿಲ್ಲ. ಮುಖ್ಯವಾಗಿ, ನಮ್ಮ ವಿಶ್ವನಾಥ್ ಸೆಂಚುರಿ ಬಾರಿಸಿದ್ರೋ ಇಲ್ಲವೋ ಎಂಬುದು ಗೊತ್ತಾಗದೆ ಚಡಪಡಿಸುತ್ತಿದ್ದೆ. ಆಗಿನ್ನೂ ಟಿವಿ, ಮೊಬೈಲ್ ಇರದಿದ್ದುದರಿಂದ ನಾವು ರೇಡಿಯೋದಲ್ಲಿ ಕಾಮೆಂಟರಿ ಕೇಳಬೇಕಾಗಿತ್ತು. ಆದರೆ ಬ್ಯಾಂಕಿನ ಪರೀಕ್ಷಾ ಕೇಂದ್ರದಲ್ಲಿ ಅದಕ್ಕೆ ಅವಕಾಶವಿರಲಿಲ್ಲ!

ಮಧ್ಯಾಹ್ನ 2 ಗಂಟೆಗೆ ಸಂದರ್ಶನ ಶುರುವಾಯಿತು. ನನ್ನ ಸರದಿ ಬಂದಾಗ ಸುಮಾರು 3 ಗಂಟೆ. ಒಳಗೆ ಬ್ಯಾಂಕಿನ ಮೂವರು ಅಧಿಕಾರಿಗಳು ಆಸೀನರಾಗಿದ್ದರು. ಅವರಲ್ಲಿ ಮೊದಲಿಗೆ ನನ್ನನ್ನು ಪ್ರಶ್ನಿಸಿದವರು ಬೆಂಗಳೂರು ಶಾಖೆಯ ಮುಖ್ಯಸ್ಥರಾಗಿದ್ದ ಆರ್.ಜೆ.ಬಾಸು. ಮೊದಲ ಪ್ರಶ್ನೆಯೇ ಕ್ರಿಕೆಟ್ ಬಗ್ಗೆ! ''ಎಲ್ಲಿ ಆಡಿದ್ದೀಯ? ದಾಂಡಿಗನಾ, ಬೌಲರ್ರಾ?'' ಎಂದು ಪ್ರಶ್ನಿಸಿದರು. ಅದಕ್ಕೆ ''ನಾನು ಗೂಟರಕ್ಷಕ ಮತ್ತು ದಾಂಡಿಗ'' ಎಂದು ತಿಳಿಸಿದೆ. ತಕ್ಷಣ ಅವರು, ''ಈ ದಿನದ ಸ್ಕೋರ್ ಗೊತ್ತಾ?'' ಎಂದು ಕೇಳಿದರು. ಅದಕ್ಕೆ ನಾನು, ''ಬೆಳಗ್ಗೆಯಿಂದ ನಮ್ಮನ್ನು ಹೊರಗೆ ಬಿಟ್ಟಿಲ್ಲ. ಆ ಸಮಾಚಾರಕ್ಕಾಗಿ ಕುತೂಹಲದಿಂದ ಕಾಯುತ್ತಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ, ವಿಶ್ವನಾಥ್ 100 ರನ್ನು ಪೂರೈಸಿದರೋ ಇಲ್ಲವೋ ತಿಳಿಯದೆ ಒದ್ದಾಡುತ್ತಿದ್ದೇನೆ'' ಎಂದೆ. ಅದಕ್ಕಾಗೇ ಕಾಯುತ್ತಿದ್ದವರಂತೆ ಅವರು, ''ನಿನಗೊಂದು ಶುಭಸುದ್ದಿ. ವಿಶ್ವನಾಥ್ 137 ರನ್ ಹೊಡೆದು ಔಟಾಗಿದ್ದಾರೆ'' ಎಂದರು. ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವರಿಗೆ ವಂದನೆ ಸಲ್ಲಿಸಿ ಕೈಕುಲುಕಲು ಹೊರಟವನು, ಅದು ನೌಕರಿಗಾಗಿನ ಸಂದರ್ಶನ ಎಂಬುದು ನೆನಪಾಗಿ ಸುಮ್ಮನಾದೆ. ಅವರು ಮುಂದುವರಿದು, ''ವಿಶ್ವನಾಥ್ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಗೊತ್ತಾ?'' ಎಂದು ಕೇಳಿದಕ್ಕೆ ನಾನು ''ಗೊತ್ತಿಲ್ಲ'' ಎಂದೆ. ಅದಕ್ಕವರು, ''ವಿಶ್ವನಾಥ್ ಇದೇ ಶಾಖೆಯಲ್ಲಿ ಕೆಲಸ ಮಾಡುತ್ತಿರುವುದು; ನಿನ್ನನ್ನು ಆಯ್ಕೆ ಮಾಡಿದರೆ ಬ್ಯಾಂಕಿನ ಟೀಮ್‌ನಲ್ಲಿ ಆಡುತ್ತೀಯಾ?'' ಎಂದು ಕೇಳಿದರು. ಅದಕ್ಕೆ ನಾನು, ''ಆ ಭಾಗ್ಯ ಸಿಕ್ಕರೆ ಖಂಡಿತ ಆಡುತ್ತೇನೆ ಮತ್ತು ಆ ದಿನಗಳನ್ನು ಎದುರುನೋಡುತ್ತೇನೆ'' ಎಂದುತ್ತರಿಸಿದೆ.

ಮುಂದಿನ ಪ್ರಶ್ನೆಗಳೆಲ್ಲ ಸುಲಭವಾಗಿದ್ದು ನಾನು ಸರಿಯಾಗಿ ಉತ್ತರಿಸಿದ್ದೆ. ಸಂದರ್ಶಕರು ಅದರಿಂದ ಖುಷಿಯಾಗಿದ್ದರು ಅನ್ನಿಸಿತು. ಸುಮಾರು 15 ನಿಮಿಷ ಅವಧಿಯ ಸಂದರ್ಶನ ಮುಗಿಸಿ ಅವರು ನನಗೆ ಶುಭ ಕೋರಿದರು. ''ಆದಷ್ಟು ಬೇಗ ನಿನ್ನನ್ನು ಈ ಶಾಖೆಯಲ್ಲಿ ನೋಡುವಂತಾಗಲಿ'' ಎಂದು ಆರ್.ಜೆ.ಬಾಸು ಅವರು ಹಾರೈಸಿದರು. ಭಾರತೀಯ ಸ್ಟೇಟ್ ಬ್ಯಾಂಕ್ ನೌಕರಿಗೆ ಆಯ್ಕೆ ಆಗಿದ್ದೇನೆಂದು ತಿಳಿಸುವ ಪತ್ರ 1970ರ ಜನವರಿ 10ರಂದು ನನಗೆ ಬಂತು. ಆದಷ್ಟು ಬೇಗ ಕೆಲಸಕ್ಕೆ ಸೇರಿಕೊಳ್ಳಲು ತಿಳಿಸಿದ್ದರು. ಅವರು ತಿಳಿಸಿದ್ದ ದಾಖಲೆ ಪತ್ರಗಳನ್ನು ತೆಗೆದುಕೊಂಡು 12ರ ಸೋಮವಾರ ಕೆಲಸಕ್ಕೆ ಹಾಜರಾದೆ. ಆಗ ಶುರುವಾದ ನನ್ನ ಹಾಗೂ ಜಿ.ಆರ್.ವಿಶ್ವನಾಥ್ ಅವರ ಒಡನಾಟ 2007ರ ಮಾರ್ಚ್ 31ರಂದು ನಾನು ನಿವೃತ್ತನಾಗುವವರೆಗೂ ಇತ್ತು. ಮಧ್ಯೆ ಮಧ್ಯೆ ನನಗೆ ಬೇರೆ ಬೇರೆ ಊರುಗಳಿಗೆ ವರ್ಗವಾದಾಗಿನ ಅವಧಿಯನ್ನು ಬಿಟ್ಟು ಮಿಕ್ಕೆಲ್ಲ ಸಮಯದಲ್ಲೂ, ನಾನು ಬೆಂಗಳೂರಿನಲ್ಲಿದ್ದಾಗ ಸಾಧ್ಯವಾದಷ್ಟು ಸಲ ಅವರನ್ನು ಭೇಟಿಯಾಗುತ್ತಿದ್ದೆ. ನನಗೆ ಬ್ಯಾಂಕಿನಲ್ಲಿ ಕೆಲಸ ಸಿಗುವುದಕ್ಕೆ ವಿಶ್ವನಾಥರೇ ಕಾರಣ ಎಂದು ಈಗಲೂ ತಿಳಿದು ಕೊಂಡಿದ್ದೇನೆ ಹಾಗೂ ಅದನ್ನು ಅವರಿಗೂ ತಿಳಿಸಿದ್ದೆ. ಅವರೊಬ್ಬ ಸಹೃದಯಿ ಮತ್ತು ಸ್ನೇಹಮಯಿ. ಅವರ ಜತೆ ಕಳೆದಂಥ ಸಮಯ ಯಾವಾಗಲೂ ನೆನಪಿನಲ್ಲಿ ಉಳಿಯುವಂಥದ್ದು.

(ಲೇಖಕರು ಹವ್ಯಾಸಿ ಬರಹಗಾರರು)

ಭಟ್ಟರ್ ಸ್ಕಾಚ್

- **ವಿನೂತಾ ಹೆಗಡೆ, ಶಿರಸಿ**
ಭಟ್ರೇ, ನಿಮ್ಮ ವಿದೇಶ ಸುತ್ತಾಟ ಮತ್ತೆ ಯಾವಾಗ?
- **ಗೊತ್ತಿರಲಿ, ವಿದೇಶದಲ್ಲಿಯೇ ಕುಳಿತು ನಿನ್ನ ಪ್ರಶ್ನೆಗೆ ಈಗ ಉತ್ತರಿಸುತ್ತಿದ್ದೇನೆ!**

- **ವಿನೋದ ಶೆಟ್ಟಿ, ಶಿವಮೊಗ್ಗ**
ಭಟ್ರೇ, ಕಪ್ಪೆಗೆ ಕಲ್ಲು ಹೊಡೆದರೆ ಮೂಕ ಹೆಂಡತಿ ಸಿಗ್ತಾಳೆ ಅಂತಾರಲ್ಲ?
- **ಇಂಥ ಅವಕಾಶವನ್ನು ತಪ್ಪಿಸಿಕೊಳ್ಳಬೇಡ, ಕಂಡ ಕಂಡ ಕಪ್ಪೆಗೆ ಕಲ್ಲು ಹೊಡೆ!**

- **ಸಂಗೀತಾ ಜಾಲಿ, ಬೆಂಗಳೂರು**
ಭಟ್ರೇ, ನನ್ನ ಗಂಡ ಸ್ವಲ್ಪ ಅಶಿಸ್ತಿನವ, ಅವನಿಗೆ ಯಾವ ಉಪದೇಶ ಹೇಳಲಿ?
- **ಉಪದೇಶ ಬೇಡ, ಆತನಿಗೆ ಏನೂ ಹೇಳದೇ ಉಪಕಾರ ಮಾಡು!**

- **ಸಿ.ಕೆ.ಮೋಹನ, ಬೆಳಗಾವಿ**
ಭಟ್ರೇ, ಜೀವನದಲ್ಲಿ ಬುದ್ಧಿ ಯಾವಾಗ ಬರುತ್ತೆ?
- **ದಿನವೂ ಬರಲು ಅದೇನು ಲದ್ದಿ ಅಂತ ಭಾವಿಸಿದ್ದೀಯಾ?!**

- **ರೂಪಾ ಹೊನ್ನಾವರ, ಹೊನ್ನಾವರ**
ಭಟ್ರೇ, ಪ್ರಿಯಕರನ ಮಾತನ್ನು ಕೇಳಲೋ, ಅಪ್ಪನ ಮಾತನ್ನು ಕೇಳಲೋ?
- **ನಿನ್ನ ಒಳ ಮನಸ್ಸಿನ ಮಾತನ್ನು ಕೇಳು!**

- **ಫಕೀರಪ್ಪ ಸೊನ್ನದ, ಹುಬ್ಬಳ್ಳಿ**
ಭಟ್ರೇ, ನನ್ನ ಬಗ್ಗೆ ಭರವಸೆ ಬರಲು ಏನು ಮಾಡಬೇಕು?
- **ದಿನವೂ ಭಟ್ಟರ ಮಾತುಗಳನ್ನು ಕೇಳಬೇಕು!**

- **ಚಂದ್ರಿಕಾ ಹೊಗೆಸೊಪ್ಪಿನಮಠ, ಗದಗ**
ಭಟ್ರೇ, ಪೋಲಿ ಪ್ರಶ್ನೆಗಳನ್ನು ಕೇಳಲು ಏನು ಮಾಡಬೇಕು?
- **'ಹೆಸರು ಬೇಡ, ಊರು ಬೇಡ' ಅಂತ ಬರೆದು ಮುಂದೆ ಏನು ಬೇಕಾದರೂ ಕೇಳಬಹುದು!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ನಿಮ್ಮ ಪ್ರಶ್ನೆಗಳಿಗೆ ಯಾರು ಉತ್ತರಿಸುತ್ತಾರೆ?
- **ನೀನಾದರೂ ನನ್ನ ಬಗ್ಗೆ ಯೋಚಿಸಿದ್ದೀಯಲ್ಲ, ಥ್ಯಾಂಕ್ಸ್ ಕಣೋ!**

- **ಶರತ್ ಗೌಡ, ಮಂಡ್ಯ**
ಭಟ್ರೇ, ಹೆಣ್ಣು ಅಭಿಮಾನಿಗಳಿಗೂ ಅಭಿಮಾನಿ ಅಂತಾನೆ ಕರೆಯಬೇಕಾ?
- **ಅಭಿಮಾನಿನಿ ಎನ್ನು!**

- **ರುದ್ರೇಶ ಕೆ., ಬಂಕಾಪುರ**
ಭಟ್ರೇ, ಸಚಿವ ಜಮೀರ್‌ಗೆ ಕುಳ್ಳ ಅಂತ ಕರೆಯಬಹುದಾ?
- **ಮತ್ತೆ ಲಂಬೂ ಅಂತ ಕರೆದುಬಿಟ್ಟೀಯಾ!**

ಆತನ ಬಲಿದಾನಕ್ಕೆ ನ್ಯಾಯ ಸಿಗಬೇಕಲ್ಲವೇ?

ಸುಮಾರು 50 ವರ್ಷಗಳ ಕಾಲ ರಾಜ್ಯದ ಆನೆ ಶಿಬಿರದ ಭಾಗವಾಗಿ, ದಸರಾ ಗಜಪಡೆ ನಾಯಕನಾಗಿ, ನಾನಾ ಕಾರ್ಯಾಚರಣೆಗಳ ಅಗ್ರೇಸರನಾಗಿ, ಅಂತಿಮ ಕ್ಷಣಗಳವರೆಗೂ ಹೋರಾಡಿ ಹಲವರ ಪ್ರಾಣ ಉಳಿಸಿದ ಅರ್ಜುನನ ಬಲಿದಾನಕ್ಕೆ ನ್ಯಾಯ ಸಿಗಬೇಕಾದರೆ, ಆತನ ಸಾವಿನ ರಹಸ್ಯ ಬಯಲಾಗಬೇಕು. ಆತನ ವೀರಗಾಥೆಗೆ ತಕ್ಕುದಾದ ಸ್ಮಾರಕ ರಚನೆಯಾಗಬೇಕು.

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ಇನ್ನು ಮೂರು ವಾರಗಳು ಕಳೆದರೆ ಆತನನ್ನು ಕಳೆದುಕೊಂಡು ಭರ್ತಿ ಒಂದು ವರ್ಷ. ಅಂದು ಆತ ತೋರಿದ ಪರಾಕ್ರಮವನ್ನು ಮಂತ್ರಿ ಮಾಗಧರು, ಅಧಿಕಾರಿಗಳಿಂದ ಹಿಡಿದು ಜನ ಸಾಮಾನ್ಯರವರೆಗೆ ಕೋಟ್ಯಂತರ ಜನರು ಕೊಂಡಾಡಿದ್ದರು. ಆ ದಿನ ತನ್ನ ಪ್ರಾಣವನ್ನು ಒತ್ತೆ ಇಟ್ಟು ಆತ ಹೋರಾಟಕ್ಕಿಳಿಯದೇ ಹೋಗಿದ್ದರೆ ಏನಾಗುತ್ತಿತ್ತು ಎಂದು ಊಹಿಸಲು ಸಾಧ್ಯವಿಲ್ಲ. ಅಲ್ಲಿದ್ದ ಅಧಿಕಾರಿಗಳು, ತನ್ನನ್ನು ನೋಡಿಕೊಳ್ಳುತ್ತಿದ್ದ ಪರಿಚಾರಕರು ಮತ್ತು ತನ್ನ ಸಂಗಾತಿಗಳನ್ನು ಆತ ಪ್ರಾಣ ಸಂಕಟದಿಂದ ಕಾಪಾಡಿದ್ದ. ಹೋರಾಟದ ವಿಚಾರದ ಬಂದಾಗ ಎಂದಿಗೂ ತಲೆ ಬಾಗದ ಆತ ಅಂದೂ ಕೂಡ ದಿಟ್ಟತನದಿಂದ ಅರ್ಧ ಗಂಟೆಗೂ ಹೆಚ್ಚು ಕಾಲ ಕಾಳಗ ನಡೆಸಿದ್ದ. ಮೊದಲ ಬಾರಿ ವೈರಿ ಮುನ್ನುಗ್ಗಿ ಬಂದಾಗ ಆತನನ್ನು ಹಿಮ್ಮೆಟ್ಟಿಸಿ ಅಟ್ಟಿಸಿಕೊಂಡು ಹೋಗಿದ್ದ. ಆದರೆ ಎರಡನೇ ಬಾರಿ ಅದೇ ಎದುರಾಳಿ ಎದುರು ಯಾಕೆ ಸೋತ ಎನ್ನುವುದು ಇಂದಿಗೂ ಪ್ರಶ್ನೆಯಾಗಿಯೇ ಉಳಿದಿದೆ. ಅಂದು ಆತನ ಜತೆಗಿದ್ದವರ ಸಮನ್ವಯ, ಸಹಕಾರ ಸರಿಯಾಗಿ ಸಿಕ್ಕಿರುತ್ತಿದ್ದರೆ, ಅವರು ಎಡವಟ್ಟು ಮಾಡದೇ ಹೋಗಿದ್ದರೆ ಆತ ಬದುಕಿರುತ್ತಿದ್ದ ಎಂಬ ಮಾತುಗಳು ಈಗಲೂ ಕೇಳಿ ಬರುತ್ತಿವೆ. ಆದರೆ ಇವೆಲ್ಲವೂ ಇಂದಿಗೂ ಊಹಾಪೋಹದ ಮಾತುಗಳಾಗಿಯೇ ಉಳಿದಿವೆ. ಆತನ ಮರಣೋತ್ತರ ಪರೀಕ್ಷೆಯನ್ನು ಅವಸರದಲ್ಲಿ ಮುಗಿಸುವ ಉದ್ದೇಶವೇನಿತ್ತು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ವರ್ಷ ಮುಗಿಯುತ್ತಾ ಬಂದರೂ ಆತನ ಸಾವಿನ ತನಿಖಾ ವರದಿಯನ್ನು ಬಹಿರಂಗಪಡಿಸದಿರಲು ಕಾರಣಗಳು ತಿಳಿದಿಲ್ಲ. ಆತನಿಗಾಗಿ ಸ್ಮಾರಕ ನಿರ್ಮಿಸುವ ಮಾತು ಕಾರ್ಯರೂಪಕ್ಕೆ ಬರಲು ಇನ್ನೆಷ್ಟು ಕಾಲ ಬೇಕೋ ಗೊತ್ತಿಲ್ಲ.

ಮನುಷ್ಯರೊಂದಿಗೆ ಮನುಷ್ಯರಿಗಿಂತ ಹೆಚ್ಚು ನಂಬಿಕಸ್ಥನಾಗಿ ಬದುಕಿದ ಅರ್ಜುನ ಎಂಬ ಅಸೀಮ ಸಾಹಸಿ ಆನೆಯ ದುರಂತ ಸಾವಿಗೆ ಒಂದು ವರ್ಷವಾಗುತ್ತಾ ಬಂತು. ಮಧ್ಯಮ ಪಾಂಡವನ ಹೆಸರು ಹೊತ್ತು ಅವನಂತೆ, ಗಜಪಡೆಯ ನಾಯಕನಾಗಿ ಮಿಂಚಿದ ಅರ್ಜುನನ ಸಾವು ಆತನ ಬಗ್ಗೆ ಅಷ್ಟಿಷ್ಟು ಬಲ್ಲ ಎಲ್ಲರಿಗೂ ನಂಬಲು ಕಷ್ಟವೆನಿಸುವ ವಿಷಯ. ಅರಣ್ಯಾಧಿಕಾರಿಗಳು, ಮಾವುತರು, ಕಾವಾಡಿಗರು, ಅರಿವಳಿಕೆ ತಜ್ಞರು ಮಾತ್ರವಲ್ಲ ಊರವರ ಪಾಲಿಗೂ ಅರ್ಜುನ ಎಂದರೆ ಅಭಯ ಮತ್ತು ವಿಶ್ವಾಸದ ಪ್ರತೀಕ. ನಾಡಿಗೆ ದಾಳಿ ಇಟ್ಟು ದಾಂಧಲೆ ನಡೆಸುವ ಪುಂಡಾನೆಗಳನ್ನು ಓಡಿಸುವುದಾಗಲಿ, ಅವುಗಳನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸುವುದಾಗಲಿ, ನರಭಕ್ಷಕ ಹುಲಿ ಸೆರೆ ಹಿಡಿಯುವ ಕಾರ್ಯಾಚರಣೆಯಾಗಲಿ, ಅರ್ಜುನ ಇದ್ದ ಎಂದರೆ ಅದು ಯಶಸ್ವಿಯಾಯಿತೆಂದೇ ಅರ್ಥ. ಇದೇ ಕಾರಣಕ್ಕೆ ಅನ್ಯ ರಾಜ್ಯಗಳ ಅಧಿಕಾರಿಗಳೂ ಆತನ ಸೇವೆಗೆ ದುಂಬಾಲು ಬಿದ್ದಿದ್ದರು. ಇಂತಹ ಅರ್ಜುನ ಇದ್ದಕ್ಕಿದ್ದಂತೆ ಸಕಲೇಶಪುರ ತಾಲ್ಲೂಕಿನ ಯಸಳೂರು ವಲಯದ ದಬ್ಬಳ್ಳಿಕಟ್ಟೆ ಅರಣ್ಯ ಪ್ರದೇಶದಲ್ಲಿ ಆನೆ ಸೆರೆ ಕಾರ್ಯಾಚರಣೆಯೊಂದರಲ್ಲಿ ಅಸುನೀಗಿದ ಎಂದರೆ ನಂಬಲು ಈಗಲೂ ಕಷ್ಟವೆನಿಸುತ್ತಿದೆ.

ಅಸೀಮ ಬಲಶಾಲಿ, ಪರಾಕ್ರಮಿ

ಕಳೆದ ತಿಂಗಳಷ್ಟೇ ಮುಗಿದ ಮೈಸೂರು ದಸರೆಯ ಜಂಬೂ ಸವಾರಿ ದಿನ ಆತ ಅನುಪಸ್ಥಿತಿ ಎಲ್ಲರಿಗೂ ಕಾಡಿತ್ತು. ಸಿನಿಮಾದಲ್ಲಿ ಹೀರೋ ಎಂಟ್ರಿಗೆ ಕಾಯುವಂತೆ ಜಂಬೂ ಸವಾರಿ ದಿನ ಅರ್ಜುನನ ಪ್ರವೇಶಕ್ಕೆ ಕಾಯುವವರಿದ್ದರು. ಗಜಪಡೆಯಲ್ಲಿ ಎಲ್ಲ ಆನೆಗಳಿಗಿಂತ ಹೆಚ್ಚು ಎತ್ತರ ಮತ್ತು ತೂಕದ ಆನೆಯಾಗಿದ್ದ ಆತನ ಗಾಂಭೀರ್ಯದ ನಡೆಯನ್ನು ಕಣ್ತುಂಬಿಕೊಳ್ಳಲೆಂದೇ ದಸರೆಗೆ ಬರುವವರಿದ್ದರು. ಗಜಪಡೆಯ ಸಾರಥ್ಯ ವಹಿಸಿದ ಅಭಿಮನ್ಯುವಿನ ಮಾರ್ಗದರ್ಶಕನಾಗಿ, ಹಿರಿಯಣ್ಣನಾಗಿ ಅರ್ಜುನ ಬಂದ ಎಂದರೆ ಅಲ್ಲಿ ಸೇರಿದ್ದ ಸಾವಿರಾರು ಜನರ ಮೊಬೈಲ್‌ಗಳು ಮತ್ತು ನೂರಾರು ಛಾಯಾಗ್ರಾಹಕರ ಕ್ಯಾಮೆರಾ ಕಣ್ಣುಗಳು ಆತನತ್ತಲೇ ನೆಟ್ಟಿರುತ್ತಿದ್ದವು.

1992ರಲ್ಲಿ ದಸರಾ ಗಜಪಡೆಯನ್ನು ಸೇರಿದ್ದ ಅರ್ಜುನ ಮೊದಲ ಮೂರು ವರ್ಷ ನಿಶಾನೆ ಆನೆಯಾಗಿ ಭಾಗವಹಿಸಿದ್ದ. 18 ವರ್ಷಗಳ ಕಾಲ ನಿರಂತರವಾಗಿ ಅಂಬಾರಿ ಹೊತ್ತಿದ್ದ ದ್ರೋಣ ವಿದ್ಯುತ್ ಸ್ಪರ್ಶಿಸಿ ದುರಂತ ಸಾವಿಗೀಡಾದಾಗ, ಅರ್ಜುನನಿಗೆ ಸಾರಥ್ಯ ನೀಡಲಾಗಿತ್ತು. ಮೊದಲ ವರ್ಷದ ಅಂಬಾರಿ ಸೇವೆಯನ್ನು ಅರ್ಜುನ ಯಶಸ್ವಿಯಾಗಿ ನಡೆಸಿದ್ದ. ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ದಸರಾದಲ್ಲಿ 25ಕ್ಕೂ ಹೆಚ್ಚು ವರ್ಷಗಳ ಕಾಲ ಅಂಬಾರಿ ಹೊತ್ತ ಹೆಗ್ಗಳಿಕೆ ಅವನದ್ದಾಗಿರಬೇಕಿತ್ತು. ಆದರೆ 1996ರಲ್ಲಿ ಕಾರಂಜಿ ಕೆರೆ ಬಳಿ ನಡೆದ ಮಾವುತನ ಸಾವಿಗೆ ಮುಂಗೋಪಿ ಅರ್ಜುನ ಕಾರಣ ಎಂಬ ನೆಪದಲ್ಲಿ ಮುಂದೆ ಒಂದೂವರೆ ದಶಕಗಳ ಕಾಲ ದಸರಾ ತಂಡದಿಂದ ಆತನನ್ನು ಹೊರಗಿಡಲಾಯಿತು. 15 ವರ್ಷಗಳ ಅಜ್ಞಾತವಾಸದಲ್ಲಿ ಆತ ಮಾವುತ ದೊಡ್ಡ ಮಾಸ್ತಿ ಅವರ ಕೈಯಲ್ಲಿ ಸಾಕಷ್ಟು ಪಳಗಿದ್ದ. ಮುಂದೆ ಅಂಬಾರಿ ಆನೆ ಬಲರಾಮನ ಉತ್ತರಾಧಿಕಾರಿ ಹುಡುಕಾಟದಲ್ಲಿದ್ದಾಗ ಅರ್ಜುನನಿಗೆ ಇನ್ನಾರೂ ಸಾಟಿ ಇರಲಿಲ್ಲ. 2012ರಿಂದ 2019ರ ತನಕ ನಿರಂತರ ಎಂಟು ವರ್ಷಗಳ ಕಾಲ, 60 ವರ್ಷಗಳು ತುಂಬುವವರೆಗೂ ಅರ್ಜುನ ಅಂಬಾರಿ ಹೊತ್ತು ನಡೆದಿದ್ದ. ಈ ನಡುವೆ ತನ್ನೆಲ್ಲ ಪ್ರೀತಿಯನ್ನು ಧಾರೆ ಎರೆದಿದ್ದ ಮಾವುತ ದೊಡ್ಡ ಮಾಸ್ತಿ ಅವರು ನಿಧನರಾಗಿ ಇಬ್ಬರು ಹೊಸ ಮಾವುತರು ಬಂದರೂ ಆತನ ವರ್ತನೆಯಲ್ಲಿ ಯಾವುದೇ ಬದಲಾವಣೆ ಆಗಿರಲಿಲ್ಲ.

ದಸರೆಯೊಂದೇ ಅರ್ಜುನನ ಗಮ್ಯವಾಗಿರಲಿಲ್ಲ. ಆನೆ ಸೆರೆ, ಹುಲಿ ಸೆರೆ ಕಾರ್ಯಾಚರಣೆಗಳಲ್ಲಿ ಆತನ ಸೇವೆ ನಿರಂತರವಾಗಿರುತ್ತಿತ್ತು. ಕಳೆದ ವರ್ಷವೂ ಜಂಬೂ ಸವಾರಿಯಲ್ಲಿ ನಿಶಾನೆ ಆನೆಯಾಗಿ ಭಾಗವಹಿಸಿದ್ದ. ಇದಾದ ಕೆಲವೇ ದಿನಗಳಲ್ಲಿ ಹಾಸನದಲ್ಲಿ ಆನೆ ಸೆರೆ ಕಾರ್ಯಾಚರಣೆಗೆ ದಸರಾ ತಂಡದ ಇತರ ಸದಸ್ಯರ ಜತೆ ಆತನನ್ನು ಕರೆಸಲಾಗಿತ್ತು. ಆದರೆ ಅಲ್ಲಿ ನಡೆಯಬಾರದ ದುರಂತ ನಡೆದುಹೋಗಿತ್ತು. ''ಅಂದು ಕಾರ್ಯಾಚರಣೆ ವೇಳೆ ಕಾಯಂ ಮಾವುತ ವಿನು ಬದಲು ಇನ್ನೊಬ್ಬ ಮಾವುತ ಅರ್ಜುನನ್ನು ಮುನ್ನಡೆಸುತ್ತಿದ್ದ. ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಪ್ರಶಾಂತ ಎಂಬ ಆನೆಗೆ ತಪ್ಪಾಗಿ ಅರಿವಳಿಕೆ ಚುಚ್ಚುಮದ್ದು ಹೊಡೆಯಲಾಗಿತ್ತು. ಪುಂಡಾನೆ ಎರಡನೇ ಬಾರಿಗೆ ದಾಳಿ ನಡೆಸಲು ಬಂದಾಗ ಅದನ್ನು ಹೆದರಿಸಲು ಹಾರಿಸಿದ ಗುಂಡು ಅರ್ಜುನನ ಕಾಲಿಗೆ ತಾಗಿತ್ತು. ಈ ಹಂತದಲ್ಲಿ ಮಾವುತ ಪ್ರಾಣ ಉಳಿಸಿಕೊಳ್ಳಲು ಅರ್ಜುನನನ್ನು ತೊರೆದು ಓಡಿ ಹೋಗಿದ್ದ. ಮಾವುತನ ಮಾರ್ಗದರ್ಶನವಿಲ್ಲದೆ, ಗುಂಡೇಟಿನ ನೋವಿನ ನಡುವೆಯೂ ಹೋರಾಟ

ಮುಂದುವರಿಸಿದ್ದ 67 ವರ್ಷದ ಅರ್ಜುನ, ತರುಣಾವಸ್ಥೆಯಲ್ಲಿದ್ದ ಆನೆಯ ದಾಳಿಗೆ ಸಿಲುಕಿ ಸಾವಿಗೀಡಾಬೇಕಾಯಿತು'' ಎಂಬ ಮಾತುಗಳು ಕೇಳಿ ಬಂದಿದ್ದವು.

ಇದೊಂದೇ ಅಲ್ಲ, ಕಳೆದ ಎರಡು ವರ್ಷಗಳಲ್ಲಿ ಅರ್ಜುನ ಸೇರಿ ಮೂರು ದಸರಾ ಆನೆಗಳು ಆನೆಗಳು ದುರಂತ ಮರಣವನ್ನು ಕಂಡಿವೆ. 2022ರ ಡಿಸೆಂಬರ್‌ನಲ್ಲಿ ಹುಣಸೂರಿನ ಭೀಮನಕಟ್ಟೆ ಶಿಬಿರದಲ್ಲಿ ಮೇಯಲು ಹೋಗಿದ್ದ ಬಲರಾಮ ಆನೆ ಮೇಲೆ ರೈತನೊಬ್ಬ ಗುಂಡು ಹಾರಿಸಿದ್ದ. ಇದರಿಂದ ಚೇತರಿಸಿಕೊಳ್ಳಲಾಗದೆ ಸುಮಾರು 5 ತಿಂಗಳ ಕಾಲ ನೋವುಂಡು ದಸರಾ ಆನೆ ಮೃತಪಟ್ಟಿತ್ತು. ಇದಾದ ಬಳಿಕ ಅರ್ಜುನನ ಸರದಿ. ಇದೇ ವರ್ಷ ಜೂನ್‌ನಲ್ಲಿ ಭವಿಷ್ಯದ ಅಂಬಾರಿ ಆನೆ ಎಂದು ಪರಿಗಣಿಸಲಾಗಿದ್ದ ಅಶ್ವತ್ಥಾಮ ಆನೆ ಭೀಮನಕಟ್ಟೆ ಶಿಬಿರದಲ್ಲಿಯೇ ವಿದ್ಯುತ್ ಸ್ಪರ್ಶಿಸಿ ಸಾವು ಕಂಡಿತ್ತು. ಅರ್ಜುನನ ಸಾವಿಗೆ ಕೆಲವೇ ತಿಂಗಳು ಮೊದಲು ಬೇಲೂರು ತಾಲ್ಲೂಕಿನಲ್ಲಿ ಡಾ. ವೆಂಕಟೇಶ್ ಎಂಬ ಅರಿವಳಿಕೆ ತಜ್ಞ ಕಾರ್ಯಾಚರಣೆ ವೇಳೆಯೇ ಆನೆ ದಾಳಿಗೆ ಸಿಲುಕಿ ಮೃತಪಟ್ಟಿದ್ದರು. ಇದಾದ ಬಳಿಕ ಇನ್ನೊಬ್ಬ ಅರಿವಳಿಕೆ ತಜ್ಞ ಡಾ. ಸನತ್‌ಕುಮಾರ್ ಎಂಬವರು ತೀವ್ರವಾಗಿ ಗಾಯಗೊಂಡಿದ್ದರು. ಇವೆಲ್ಲವೂ ಅಚಾನಕ್ ಆಗಿ ನಡೆದ ಘಟನೆಗಳಲ್ಲ. ಈ ದುರ್ಘಟನೆಗಳಿಗೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ನಿರ್ಲಕ್ಷ್ಯವೂ ಕಾರಣ. ಆದರೆ ಇದುವರೆಗೆ ಯಾವುದೇ ಅಧಿಕಾರಿ ಇಲ್ಲವೇ ಸಿಬ್ಬಂದಿ ಮೇಲೆ ಶಿಸ್ತು ಕ್ರಮ ತೆಗೆದುಕೊಂಡಿಲ್ಲ.

ಉಳಿದ ರಾಜ್ಯಗಳಿಗೆ ಹೋಲಿಸಿದರೆ ಪುಂಡಾನೆಗಳ ಸೆರೆ ಮತ್ತು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಕರ್ನಾಟಕದ ಅನುಭವ ಹಿರಿದು. 2013-14ರಲ್ಲಿ ಜಿ.ವಿ. ರಂಗರಾವ್ ಎಂಬವರು ಸಿಸಿಎಫ್ ಆಗಿದ್ದ ಅವಧಿಯಲ್ಲಿ ಹಾಸನ ಜಿಲ್ಲೆಯಲ್ಲಿ 20ಕ್ಕೂ ಹೆಚ್ಚು ಕಾಡಾನೆಗಳನ್ನು ಸೆರೆ ಹಿಡಿಯಲಾಗಿತ್ತು. ಆಗ ಹಿರಿಯ ಅಧಿಕಾರಿಗಳು ಕಾರ್ಯಾಚರಣೆಯ ಭಾಗವಾಗಿ ಕೆಳಹಂತದ ಸಿಬ್ಬಂದಿ ಜತೆ ಕಾಡಿನಲ್ಲಿರುತ್ತಿದ್ದರು. ಈಗ ಕಾಡಿನತ್ತ ತಲೆ ಹಾಕದೇ ಜಿಲ್ಲಾ ಕೇಂದ್ರಗಳಲ್ಲಿ, ರಾಜಧಾನಿಯಲ್ಲಿ ಕಾಲ ಕಳೆಯುವ ಅರಣ್ಯ ಅಧಿಕಾರಿಗಳಿದ್ದಾರೆ. ಇಂತಹ ಸೋಮಾರಿ ಅಧಿಕಾರಿಗಳ ಕಾರಣದಿಂದಲೇ ಕಾರ್ಯಾಚರಣೆಗಳು ವಿಫಲವಾಗುತ್ತಿವೆ. ಸಾಕಷ್ಟು ಪಳಗಿದ ದಸರಾ ಆನೆಗಳೂ ದುರಂತ ಸಾವು ಕಾಣುತ್ತಿವೆ. ಸಿಬ್ಬಂದಿಗಳೂ ಪ್ರಾಣ ಭೀತಿ ಎದುರಿಸುವಂತಾಗಿದೆ.

ಸತ್ಯದ ಸಮಾಧಿ ಆಗದಿರಲಿ

ಇವುಗಳ ಸತ್ಯಾಸತ್ಯತೆ ತಿಳಿಯುವ ಹಕ್ಕು ಕನ್ನಡಿಗರಿಗಿದೆ. ಕೋಟ್ಯಂತರ ಜನರ ಪ್ರೀತಿ, ಅಭಿಮಾನ, ಗೌರವಾದರಗಳಿಗೆ ಪಾತ್ರವಾಗಿದ್ದ ದಸರಾ ಆನೆಯ ಸಾವು ನಿಗೂಢವಾಗಿ ಉಳಿಯಬಾರದು. ಪಿಸಿಸಿಎಫ್ ಅಜಯ್ ಮಿಶ್ರಾ ನೇತೃತ್ವದ ಐವರು ಸದಸ್ಯರ ಸಮಿತಿ ಈಗಾಗಲೇ ಈ ಸಂಬಂಧ ಸರಕಾರಕ್ಕೆ ವರದಿ ಸಲ್ಲಿಸಿದೆ. ಸರಕಾರ ಈ ವರದಿಯನ್ನು ಬಹಿರಂಗಪಡಿಸದಿರುವುದು ಅರ್ಜುನನ ಸಮಾಧಿ ಜತೆ ಸತ್ಯವನ್ನೂ ಸಮಾಧಿ ಮಾಡುವ ಹುನ್ನಾರ ಎಂಬ ಮಾತುಗಳು ಕೇಳಿ ಬರುತ್ತಿವೆ. ಈ ತನಿಖಾ ವರದಿ ಮುಂದೆ ಇಂತಹ ಅಚಾತುರ್ಯ, ನಿರ್ಲಕ್ಷ್ಯ ಘಟಿಸದಿರಲು ನಮಗೆ ಪಾಠವಾಗಬೇಕು. ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ವಿಚಾರದಲ್ಲಿ ಕ್ರಿಯಾಶೀಲ ಸಚಿವರೆನಿಸಿರುವ ಈಶ್ವರ್ ಖಂಡ್ರೆ ಅವರು ಈ ನಿಟ್ಟಿನಲ್ಲಿ ಮುಂದಡಿ ಇಡಬೇಕಾಗಿದೆ.

ಸ್ಮಾರಕ ವಿಚಾರದಲ್ಲೂ ಗೊಂದಲ

ಇನ್ನು ಅರ್ಜುನನ ಸ್ಮಾರಕ ವಿಚಾರದಲ್ಲಿ ಸರಕಾರದ ನಿಧಾನ ನಡೆ ನಾವೆಷ್ಟು ಸಂವೇದನಾರಹಿತರು ಎನ್ನುವುದಕ್ಕೆ ಸಾಕ್ಷಿಯಂತಿದೆ. ಆರಂಭದಲ್ಲಿ ಸಮಾಧಿ ಎಲ್ಲಿ ಎಂಬ ವಿಚಾರದಲ್ಲಿಯೇ ಗೊಂದಲ ಮೂಡಿಸಲಾಯಿತು. ಬಳಿಕ ಸಮಾಧಿ ಸುತ್ತ ಕಲ್ಲುಗಳನ್ನು ಇಟ್ಟು ಸಂರಕ್ಷಣೆ ಮಾಡುವ ವಿಷಯದಲ್ಲಿ ದರ್ಶನ್ ಅಭಿಮಾನಿಗಳು ಮತ್ತು ಅಧಿಕಾರಿಗಳ ಮಧ್ಯೆ ಆರೋಪ- ಪ್ರತ್ಯಾರೋಪಗಳು ನಡೆದವು. ಇದೀಗ ಅರ್ಜುನ ವೀರ ಮರಣವನ್ನಪ್ಪಿದ ಯಸಳೂರು ಮತ್ತು ಮೈಸೂರಿನಲ್ಲಿ ಆತನ ಸಮಾಧಿ ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ಯಸಳೂರಿನಲ್ಲಿ ನಿರ್ಮಿಸಲುದ್ದೇಶಿಸಿರುವ ಸ್ಮಾರಕಕ್ಕೆ ಮೂರ್ನಾಲ್ಕು ತಿಂಗಳ ಹಿಂದೆಯೇ ಸಚಿವ ಖಂಡ್ರೆ ಶಂಕು ಸ್ಥಾಪನೆ ನೆರವೇರಿಸಿದ್ದಾರೆ. ಆದರೆ ಸಮಾಧಿ ಸುತ್ತ ಕಟ್ಟೆ ಕಟ್ಟಿರುವುದನ್ನು ಬಿಟ್ಟರೆ ಉಳಿದಂತೆ ಯಾವುದೇ ಮಹತ್ವದ ಪ್ರಗತಿ ಆಗಿಲ್ಲ. ಮೈಸೂರಿನಲ್ಲಿ

ಸ್ಮಾರಕದ ಸ್ಥಳ ಇನ್ನೂ ಅಂತಿಮವಾಗಿಲ್ಲ.

ಜನರ ಪ್ರೀತಿ ಒಡನಾಟ ಗಳಿಸಿದ ಆನೆಗಳಿಗಾಗಿ ನಿರ್ಮಿಸಿದ ಸ್ಮಾರಕಗಳು ಪ್ರವಾಸಿ ತಾಣಗಳಾಗಿ, ಯಾತ್ರಾ ಸ್ಥಳಗಳಾಗಿ ಬದಲಾದ ಉದಾಹರಣೆಗಳಿವೆ. ಅದು ನಮ್ಮ ಶ್ರದ್ಧೆ ಮತ್ತು ಪ್ರೀತಿಯ ದ್ಯೋತಕಗಳೂ ಹೌದು. ಗುರುವಾಯೂರಿನಲ್ಲಿ ಮೂರ್ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿದ ಕೇಶವನ್ ಹೆಸರಿನ ಆನೆಗಾಗಿ ನಿರ್ಮಿಸಿದ ಸ್ಮಾರಕ ಭಕ್ತರ ಶ್ರದ್ಧಾಕೇಂದ್ರವಾಗಿದೆ. ಶ್ರೀಲಂಕಾದ ಆನೆ ಸ್ಮಾರಕ ವಿಶ್ವಪ್ರಸಿದ್ಧವಾಗಿದೆ. ಸುಮಾರು 50 ವರ್ಷಗಳ ಕಾಲ ರಾಜ್ಯದ ಆನೆ ಶಿಬಿರದ ಭಾಗವಾಗಿ, ದಸರಾ ಗಜಪಡೆಯ ನಾಯಕನಾಗಿ, ನಾನಾ ಕಾರ್ಯಾಚರಣೆಗಳ ಅಗ್ರೇಸರನಾಗಿ, ಅಂತಿಮ ಕ್ಷಣಗಳ ವರೆಗೂ ಹೋರಾಡಿ ಹಲವರ ಪ್ರಾಣ ಉಳಿಸಿದ ಅರ್ಜುನನ ಸಾಹಸ ಗಾಥೆ ನಮ್ಮ ಮುಂದಿನ ಪೀಳಿಗೆಯವರಿಗೂ ತಿಳಿಯಬೇಕಾಗಿದೆ. ಇದಕ್ಕಾಗಿ ಆತನ ವೀರಗಾಥೆಗೆ ತಕ್ಕುದಾದ ಸ್ಮಾರಕ ರಚನೆಯಾಗಬೇಕು. ಆತನ ಸಾವಿನ ರಹಸ್ಯವನ್ನು ಬಹಿರಂಗಪಡಿಸುವ ಮೂಲಕ, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಮೂಲಕ ಆತನ ಬಲಿದಾನಕ್ಕೂ ನ್ಯಾಯ ಸಿಗಬೇಕು.

ಮಿಸ್ಟರ್ & ಮಿಸಸ್ ಮೋಸೆಸ್ ಈಗ ಮುಖ ಮುಚ್ಚಿಕೊಳ್ತಾರಾ?



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

ಡೊನಾಲ್ಡ್ ಟ್ರಂಪ್ ಅಮೆರಿಕದ 47ನೇ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಏಕೆಂದರೆ, ಅವರು ದೇಶದ ರಾಜಧಾನಿ ವಾಷಿಂಗ್ಟನ್ ಡಿ.ಸಿ.ಯಲ್ಲಿ ಸೋತಿದ್ದಾರೆ! ಒಂದೆರಡಲ್ಲ, ಬರೋಬ್ಬರಿ ಶೇ.92.4 ಮಾರ್ಜಿನ್ ಮತಗಳ ಮೂಲಕ, ಕೇವಲ ಶೇ.6.7ರಷ್ಟು ಮತ ಗಳಿಸಿ, ಹೀನಾಯವಾಗಿ ಸೋತಿದ್ದಾರೆ. ಖಂಡಿತ ನೀವು ಓದಿದ್ದು ಸರಿಯಾಗಿಯೇ ಇದೆ. ಟ್ರಂಪ್ ಏಕೆ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದರು ಅಂದರೆ, ಅವರು ವಾಷಿಂಗ್ಟನ್ ಡಿ.ಸಿ.ಯಲ್ಲಿ ಶೇ.85ರಷ್ಟು ಮತಗಳಿಂದ ಸೋತಿದ್ದಾರೆ. ಈ ಅಂಕಿ-ಅಂಶವನ್ನು ನೋಡಿದರೆ ಅಮೆರಿಕದ ರಾಜಧಾನಿ ಅಮೆರಿಕದಿಂದ ಎಷ್ಟು ದೂರವಾಗಿದೆ ಎಂಬುದು ಚೆನ್ನಾಗಿ ಅರ್ಥವಾಗುತ್ತದೆ.

ಕಮಲಾ ಹ್ಯಾರಿಸ್ ರಾಜಧಾನಿಯ ಅಭ್ಯರ್ಥಿಯಾಗಿದ್ದರು. ಅವರು ವಾಷಿಂಗ್ಟನ್ ಡಿ.ಸಿ.ಯ ಕುಲೀನ ಸಿಂಹಾಸನಾಧೀಶ ಬರಾಕ್ ಒಬಾಮಾ, ರಾಣಿ ಮಿಶೆಲ್ ಒಬಾಮಾ ಮತ್ತು ಶ್ರೇಷ್ಠತೆಯ ವ್ಯಸನದಲ್ಲಿ ಮುಳುಗಿರುವ ಹುಸಿ ರಣತಂತ್ರಗಾರರ ನೀಲಿಗಣ್ಣಿನ ಹುಡುಗಿಯಾಗಿದ್ದರು. ತಾವು ಯಾರನ್ನು ಬೆಂಬಲಿಸಿದರೂ ಅವರು ಗೆದ್ದುಬಿಡುತ್ತಾರೆಂಬ ಭ್ರಮೆ ಅವರಲ್ಲಿತ್ತು. 107 ದಿನಗಳ ಚುನಾವಣಾ ಪ್ರಚಾರದ ಅವಧಿಯಲ್ಲಿ ಅಮೆರಿಕದ ನೀತಿ-ನಿಯಮಗಳಿಗೆ ಅಪಚಾರವಸೆಗುವಂಥ ಯಾವ ತಪ್ಪನ್ನೂ ನಾವು ಮಾಡಿಲ್ಲ, ಕಳೆದ 4 ವರ್ಷಗಳ ಅವಧಿಯಲ್ಲೂ ನಮ್ಮಿಂದ ಯಾವುದೇ ತಪ್ಪಾಗಿಲ್ಲ, ಹೀಗಾಗಿ ಜನರು 'ಕಸದ ಭಾಷೆಯಲ್ಲಿ' ಮಾತನಾಡುತ್ತಿರುವ ರಿಪಬ್ಲಿಕನ್ನರನ್ನು ಸೋಲಿಸಿ ನಮ್ಮನ್ನು ಗೆಲ್ಲಿಸಿಬಿಡುತ್ತಾರೆ ಎಂಬ ನಂಬಿಕೆ ಅವರಲ್ಲಿತ್ತು. ಹೀಗಾಗಿಯೇ ಕಮಲಾ ಹ್ಯಾರಿಸ್ ಅಮೆರಿಕದಲ್ಲಿ ಹಣದುಬ್ಬರ ಅಥವಾ ವಲಸೆಗೆ ಸಂಬಂಧಿಸಿದ ಯಾವುದೇ ನೀತಿಯನ್ನು ಬದಲಿಸುವ ಕಿಂಚಿತ್ ಅಗತ್ಯವೂ ಇಲ್ಲ ಎಂದು ಬಹಳ ಪ್ರಾಮಾಣಿಕವಾಗಿ ಹೇಳಿದ್ದರು. ಏಕೆಂದರೆ ಅವರಿಗೂ, ಅವರ ತತ್ವಗಳಿಗೂ ಆರ್ಥಿಕತೆಯ ಸರಾಸರಿ ತಾಕತ್ತಿಗಿಂತ ಹಲವು ಪಟ್ಟು ಹೆಚ್ಚು ಶ್ರೀಮಂತಿಕೆಯಲ್ಲಿ ಬದುಕುವ ಸೌಕರ್ಯವಿತ್ತು. ಇದೇ ಕಾರಣಕ್ಕೆ ತಮಗೆ ವಲಸಿಗರ ಮತಗಳೂ ಸಿಗುತ್ತವೆ ಎಂದು ಅವರು ಲೆಕ್ಕಾಚಾರ ಹಾಕಿಕೊಂಡಿದ್ದರು. ಇದೇ ರೀತಿಯ ಪ್ರಚಾರವನ್ನು ಅಮೆರಿಕದ ಕೆಲ ಪ್ರಭಾವಿ ಮಾಧ್ಯಮಗಳೂ ತಮ್ಮದೇ ಆದ ರೀತಿಯಲ್ಲಿ ಮಾಡಿದ್ದವು.

ಹಾಗಂತ ಡೊನಾಲ್ಡ್ ಟ್ರಂಪ್ ಬಡವರಲ್ಲ. ಆದರೆ ಅವರ ಮನಸ್ಸು 'ಹೆವೆನ್ ಅವೆನ್ಯೂ' ಬದಲು ಅಮೆರಿಕದಲ್ಲಿ ವಾಸಿಸುತ್ತಿತ್ತು.

ಅಮೆರಿಕದ ಈ ಚುನಾವಣೆಯನ್ನು ನೋಡಿದಾಗ ನನಗೆ ರಿಚರ್ಡ್ ನಿಕ್ಸನ್ನರದು ಎನ್ನಲಾದ ಸಿದ್ಧಾಂತವೊಂದು ನೆನಪಾಗುತ್ತದೆ. ''ಎರಡು ತಪ್ಪುಗಳು ಸೇರಿದಾಗ ಒಂದು ಸರಿ ಆಗುವುದಿಲ್ಲವಾದರೆ ಮೂರು ತಪ್ಪು ಸೇರಿಸಿ ನೋಡೋಣ!'' ಎಂಬುದು ಅವರ ಸಿದ್ಧಾಂತವಾಗಿತ್ತಂತೆ. ಏಕೆ? ಏಕೆಂದರೆ, ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಕುಳಿತಿರುವ ನಾವು, ''ಅಮೆರಿಕದ ಚುನಾವಣೆಯನ್ನು ನಾವು ನೋಡುತ್ತಿದ್ದೇವೆ' ಎಂದು ಹೇಳಿದರೆ ನಿಜವಾಗಿಯೂ ನಾವು ಅಲ್ಲಿನ ಚುನಾವಣೆಯನ್ನು ನೋಡುತ್ತಿರುವುದಿಲ್ಲ. ಅಮೆರಿಕದ ದೊಡ್ಡ ಮಾಧ್ಯಮಗಳು ಅಲ್ಲಿನ ಚುನಾವಣೆಯನ್ನು ಹೇಗೆ ತೋರಿಸುತ್ತವೆಯೋ ಹಾಗೆ ನಾವು ನೋಡುತ್ತೇವೆ. ಪ್ರಭಾವಿ ದಿನಪತ್ರಿಕೆಗಳು ಅಥವಾ ಟಿವಿ ಚಾನಲ್‌ಗಳು ತಮ್ಮದೇ ಆದ ಅಜೆಂಡಾ ಇರಿಸಿಕೊಂಡು, ಚುನಾವಣೆ ಹೇಗೆ ನಡೆಯುತ್ತಿದೆಯೋ ಹಾಗೆ ತೋರಿಸದೆ, ತಿರುಚಿದ ವರದಿಗಳನ್ನು ಪ್ರಕಟಿಸಿದರೆ ಅಥವಾ ತಮಗೆ ಬೇಕಾದವರ ಸಂದರ್ಶನಗಳನ್ನು ಮಾತ್ರ ಪ್ರಕಟಿಸಿದರೆ ಆಗ ನಮಗೆ ಚುನಾವಣೆಯ ನಿಜವಾದ ಕಣ ಅರ್ಥವೇ ಆಗುವುದಿಲ್ಲ. ಅಧಿಕಾರದಲ್ಲಿರುವವರ ಈ ಆಟ ವಾಷಿಂಗ್ಟನ್ ಮತ್ತು ನ್ಯೂಯಾರ್ಕ್ ನಡುವೆ ಚಿನ್ನದ ಮೊಟ್ಟೆಯಿಡುವ ಕೋಳಿಯಾಗಿ ಪರಿಣಮಿಸಿದೆ. ಅಮೆರಿಕದ ದೊಡ್ಡ ಮಾಧ್ಯಮಗಳು 21ನೇ ಶತಮಾನದ ಮೋಸೆಸ್‌ನಂತೆ ವರ್ತಿಸುತ್ತವೆ. ಅವು ದೇವರ ಜತೆ ಮಾತನಾಡಿ ಬಳಿಕ, 'ದೇವರನ್ನು ತಲುಪುವ ದಾರಿ ಯಾವುದು' ಎಂಬ ಬಗ್ಗೆ ತಮ್ಮ ಅನುಯಾಯಿಗಳಿಗೆ ಪ್ರವಚನಗಳನ್ನು ನೀಡುತ್ತವೆ. ಆ ದಾರಿ ಯಾವಾಗಲೂ ದೂರದ ದಿಗಂತದಲ್ಲಿ ಕಾಣಿಸುತ್ತದೆಯೇ ಹೊರತು ಯಾರ ಕಾಲಿಗೂ ನಿಲುಕುವುದಿಲ್ಲ. ಅಮೆರಿಕದ ದೊಡ್ಡ ಮಾಧ್ಯಮಗಳ 10 ಕಮಾಂಡ್‌ಮೆಂಟುಗಳು ಒಂದೇ ಕಮಾಂಡ್‌ಮೆಂಟಿನ 10 ಅವತರಣಿಕೆಯಂತಿವೆ: ''ನಾವು ಹೇಳಿದ್ದನ್ನು ನೀವು ಕೇಳಬೇಕು, ಏಕೆಂದರೆ ನಿಮಗೇನು ಒಳ್ಳೆಯದು ಎಂಬುದು ನಮಗೆ ಗೊತ್ತಿದೆ''. ಈ ಕಮಾಂಡ್‌ಮೆಂಟುಗಳನ್ನು ಪ್ರಶ್ನಿಸುವವರ ಮೇಲೆ ನರಕದ ಬೆಂಕಿ ಬೀಳುತ್ತದೆ. 'ವಾಷಿಂಗ್ಟನ್ ಪೋಸ್ಟ್'ನ ಮಾಲೀಕ ಜೆಫ್ ಬೆಜೋಸ್ ಅವರು ಕಮಲಾ ಮತ್ತು ಟ್ರಂಪ್ ಇವರಿಬ್ಬರಲ್ಲಿ ಯಾರೊಬ್ಬರನ್ನೂ ಬೆಂಬಲಿಸಲು ನಿರಾಕರಿಸಿದಾಗ ಅವರು ಮೋಸೆಸ್ ಎಳೆದ ಗೆರೆ ದಾಟಿಬಿಟ್ಟಿದ್ದಾರೆ ಎಂಬಂತೆ ಎಲ್ಲರೂ ಅವರ ಮೇಲೆ ಮುಗಿಬಿದ್ದಿದ್ದರು. ಆದರೆ ಜೆಫ್ ಬೆಜೋಸ್ ಹೇಳಿದ್ದು ಕಟುಸತ್ಯವಾಗಿತ್ತು. ಅವರು ತಮ್ಮದೇ ಪತ್ರಿಕೆಯಲ್ಲಿ, ''ಅಮೆರಿಕನ್ನರು ಸುದ್ದಿ ಮಾಧ್ಯಮಗಳನ್ನು ನಂಬುವುದಿಲ್ಲ. ಏಕೆಂದರೆ ಮಾಧ್ಯಮಗಳು ಪಕ್ಷಪಾತಿಯಾಗಿವೆ'' ಎಂದು ಬರೆದಿದ್ದರು. ಅದು ವಿವಾದವಾದ ಬಳಿಕ ಅವರ ಸಂಪಾದಕೀಯ ಮಂಡಳಿಯ ಕೆಲ ಪ್ರಮುಖ ಸದಸ್ಯರು ರಾಜೀನಾಮೆ ನೀಡಿದ್ದರು. 2.5 ಲಕ್ಷ ಓದುಗರು ವಾಷಿಂಗ್ಟನ್ ಪೋಸ್ಟ್‌ನ ಡಿಜಿಟಲ್ ಚಂದಾದಾರಿಕೆ ರದ್ದು ಮಾಡಿದ್ದರು. ಅವರೇ ಕಮಲಾ ಹ್ಯಾರಿಸ್‌ಗೆ ಶೇ.92.4ರಷ್ಟು ಮತಗಳು ಬರುತ್ತವೆ ಎಂದು ಟಾಂ ಟಾಂ ಹೊಡೆದ ಬ್ರಿಗೇಡಿನ ಮುಂಚೂಣಿ ಸದಸ್ಯರಾಗಿದ್ದರು. ಫಲಿತಾಂಶ ಬಂದಾಗ ಬೆಜೋಸ್ ಹೇಳಿದ್ದು ನಿಜವಾಗಿತ್ತು.

ಜಗತ್ತಿನಲ್ಲಿ ಪ್ರಜಾಪ್ರಭುತ್ವ ಈಗಲೂ ಕೆಲಸ ಮಾಡುತ್ತಿರುವುದು ಏಕೆಂದರೆ ಮತದಾರರು ತಮ್ಮ ಕಣ್ಣು ತೆರೆದುಕೊಂಡೇ ಇರುತ್ತಾರೆ ಮತ್ತು ತಮಗಾದ ನೋವನ್ನು ನೆನಪಿಟ್ಟುಕೊಂಡಿರುತ್ತಾರೆ. ಮುಕ್ತ ಮಾಧ್ಯಮಗಳು ತಮ್ಮ ಮನಸ್ಸನ್ನು ಮುಕ್ತವಾಗಿಟ್ಟುಕೊಂಡಿದ್ದರೆ ಮಾತ್ರ ಪ್ರಸ್ತುತತೆ ಉಳಿಸಿಕೊಳ್ಳುತ್ತವೆ. ಈ ಬಾರಿಯ ಚುನಾವಣೆಯಲ್ಲಿ ಅಮೆರಿಕದ ಅತ್ಯಂತ ಪ್ರಮುಖ ಸುದ್ದಿವಾಹಿನಿ ಸಿಎನ್‌ಎನ್ ಟ್ರಂಪ್ ವಿರುದ್ಧ ಯಾವ ಪರಿ ಕೆಲಸ ಮಾಡಿತು ಅಂದರೆ, ತನ್ನದೇ ಚುನಾವಣೋತ್ತರ ಸಮೀಕ್ಷೆಯಲ್ಲಿ ಅಮೆರಿಕದ ಶೇ.72ರಷ್ಟು ಜನರು ಕಳೆದ ನಾಲ್ಕು ವರ್ಷಗಳ ಹಣದುಬ್ಬರದಿಂದ ಸಿಟ್ಟುಗೊಂಡಿದ್ದಾರೆ ಎಂದು ಹೇಳಿದ್ದನ್ನು ಅದು ನಂಬಲು ತಯಾರಿರಲಿಲ್ಲ. ಫಾಕ್ಸ್ ನ್ಯೂಸ್‌ನ ಎಕ್ಸಿಟ್ ಪೋಲ್‌ನಲ್ಲೂ ಇಂಥದೇ ಅಂಕಿ-ಅಂಶ ಬಂದಿತ್ತು. ಶೇ.70ರಷ್ಟು ಜನರು ಅಮೆರಿಕದ ಆರ್ಥಿಕತೆಯೇ ತಮ್ಮ ಪ್ರಮುಖ ಆತಂಕ ಎಂದು ಹೇಳಿದ್ದರು. ಟ್ರಂಪ್ ವಿರುದ್ಧ ಸಿಎನ್‌ಎನ್ ಎಷ್ಟು ಪಕ್ಷಪಾತಿಯಾಗಿತ್ತು ಅಂದರೆ, ಫಲಿತಾಂಶ ಪ್ರಕಟವಾಗುವ ವೇಳೆ ಇಡೀ ರಾತ್ರಿಯ ಕವರೇಜನ್ನು ಎಕ್ಸಿಟ್ ಪೋಲ್ ಭವಿಷ್ಯ ಸುಳ್ಳಾಗಲಿ ಎಂದು ಪ್ರಾರ್ಥಿಸುವುದಕ್ಕೇ ಅದು ಮೀಸಲಿಟ್ಟಿತ್ತು. ದೇವರು ದೊಡ್ಡವನು. ಅವನು ದೊಡ್ಡವರ ಪ್ರಾರ್ಥನೆಗೆ ಸುಲಭವಾಗಿ ಓಗೊಡುವುದಿಲ್ಲ.

ಆದರೆ ವಿದೇಶಿ ಪತ್ರಕರ್ತರಿಗೆ ಬಹಳ ಬೇಗ ಅಮೆರಿಕದ ಸತ್ಯ ಗೊತ್ತಾಗಿಬಿಟ್ಟಿತ್ತು. ಚುನಾವಣೆಗೂ ಮುನ್ನ ಅವರು ದೇಶ ಸುತ್ತಾಡಿದಾಗ ಫಲಿತಾಂಶ ಏನಿರುತ್ತದೆ ಎಂಬುದನ್ನು ಊಹಿಸಿದ್ದರು. ಅಕ್ಟೋಬರ್‌ನಲ್ಲಿ ಲಂಡನ್ನಿನ 'ದಿ ಟೈಮ್ಸ್' ವರದಿಗಾರ ಎಡ್ವರ್ಡ್ ಲೂಕಸ್ ಅಮೆರಿಕದ 'ವಿದೇಶಾಂಗ ನೀತಿ ಪಂಡಿತರ' ಜತೆಗೆ ಒಂದು ವಾರ ಕಳೆದಿದ್ದರು. ಅವರೆಲ್ಲರೂ ಟ್ರಂಪ್ ಹೀನಾಯವಾಗಿ ಸೋಲುತ್ತಾರೆ ಎಂದೇ ಹೇಳಿದ್ದರು. ನಿಮ್ಮ ಯೋಚನೆ ತಪ್ಪು, ಇಲ್ಲೇ ಸಮೀಪದಲ್ಲಿರುವ ಪೆನ್ಸಿಲ್ವೇನಿಯಾದ ಮತದಾರರ ಜತೆಗೆ ಒಮ್ಮೆ ಮಾತನಾಡಿ ನೋಡಿ, ಆಗ ವಾಸ್ತವ ತಿಳಿಯುತ್ತದೆ ಎಂದು ಎಡ್ವರ್ಡ್ ಲೂಕಸ್ ಹೇಳಿದ್ದನ್ನು ಅವರಾರೂ ಕಿವಿಗೆ ಹಾಕಿಕೊಂಡಿರಲಿಲ್ಲ. ಪೆನ್ಸಿಲ್ವೇನಿಯಾ ಏಕೆ ಅಮೆರಿಕದ ಚುನಾವಣೆಯಲ್ಲಿ ಬಹಳ ಮುಖ್ಯವಾದ ರಾಜ್ಯವೆಂದರೆ, ಅಲ್ಲಿನ ಮತದಾರರು ಯಾವ ಚುನಾವಣೆಯಲ್ಲಿ ಬೇಕಾದರೂ ಉಲ್ಟಾ ಹೊಡೆಯುತ್ತಾರೆ. ಅವರು ಡೆಮಾಕ್ರಟಿಕ್ ಅಥವಾ ರಿಪಬ್ಲಿಕನ್ ಪಕ್ಷಕ್ಕೆ ನಿಷ್ಠರಲ್ಲ. ಅವರು ಯಾವ ಕಡೆ ವಾಲುತ್ತಾರೋ ಆ ಪಕ್ಷ ಗೆಲ್ಲುವ ಸಾಧ್ಯತೆ ಹೆಚ್ಚಿರುತ್ತದೆ. ಲೂಕಸ್ ಇದರ ಬಗ್ಗೆ ಅಮೆರಿಕದ ಸೋಕಾಲ್ಡ್ ಎಲೆಕ್ಷನ್ ಎಕ್ಸ್‌ಪರ್ಟ್‌ಗಳ ಜತೆ ಮಾತನಾಡಲು ಹೋದರೆ ಅವರೆಲ್ಲರೂ 'ಬ್ಯುಸಿ' ಇದ್ದರು. ಹಾಗಾಗಿ ಲೂಕಸ್ ತಮ್ಮ ಪಾಡಿಗೆ ತಾವು ದೇಶ ಸುತ್ತಿಕೊಂಡು ಮರಳಿದರು. ನಂತರ ಲಂಡನ್ನಿಗೆ ಬಂದು ಅಕ್ಟೋಬರ್ 21ರ ಸಂಚಿಕೆಯಲ್ಲಿ ವರದಿ ಬರೆದರು. ಅದರಲ್ಲಿ, ''ಕಮಲಾ ಹ್ಯಾರಿಸ್‌ಗೆ ಕಾರ್ಯಕರ್ತರ ಕೊರತೆಯಿದೆ. ಅವರ ಪರವಾಗಿ ಓಡಾಡಿ ಪ್ರಚಾರ ಮಾಡಲು ಸಾಕಷ್ಟು ಜನರಿಲ್ಲ. ಇದು ದುಬಾರಿಯಾಗಿ ಪರಿಣಮಿಸಬಹುದು'' ಎಂದು ಹೇಳಿದ್ದರು. ಇದೇ ವೇಳೆ, ''ಟ್ರಂಪ್ ಪಾಳಯದಲ್ಲಿ ಸದ್ದು ಬಹಳ ಜೋರಾಗಿದೆ; ಜೀಸಸ್ ನಮ್ಮ ದೇವರು, ಟ್ರಂಪ್ ನಮ್ಮ ಪ್ರೆಸಿಡೆಂಟ್ ಎಂದು ಬರೆದ ಬೇಸ್‌ಬಾಲ್ ಕ್ಯಾಪ್‌ಗಳು ಬಿಸಿ ರೊಟ್ಟಿಯಂತೆ ಮಾರಾಟವಾಗುತ್ತಿವೆ. ಸ್ವತಂತ್ರ ಮತದಾರರು, ಅಂದರೆ ರಿಪಬ್ಲಿಕನ್ ಅಥವಾ ಡೆಮಾಕ್ರಟಿಕ್ ಪಕ್ಷಕ್ಕೆ ನೋಂದಾಯಿಸಿಕೊಂಡಿಲ್ಲದೆ ಇರುವ ಮತದಾರರು, ಕಮಲಾ ಹ್ಯಾರಿಸ್ ಬಗ್ಗೆ ತಮಗೆ ಯಾವ ಭರವಸೆಯೂ ಇಲ್ಲ, ಏಕೆಂದರೆ ಆಕೆ ನಮ್ಮೆಲ್ಲರ ಅತಿದೊಡ್ಡ ಕಳವಳವಾದ ಅಕ್ರಮ ವಲಸೆಯ ಬಗ್ಗೆ ಗಂಭೀರವಾಗಿಲ್ಲ ಎಂದು ಹೇಳುತ್ತಿದ್ದಾರೆ'' ಎಂದು ಬರೆದಿದ್ದರು. ''ಕಮಲಾ ಹ್ಯಾರಿಸ್ ಬಗ್ಗೆ ಅಮೆರಿಕದ ಸ್ವತಂತ್ರ ಮತದಾರರಿಗೆ ನಂಬಿಕೆ ಇರಲಿಲ್ಲ. ಅವರೊಬ್ಬ ದುರ್ಬಲ ಅಭ್ಯರ್ಥಿ. ಅವರ ಇತಿಹಾಸ ಹಾಗೂ ಚುನಾವಣಾ ಭರವಸೆಗಳೂ ದುರ್ಬಲವಾಗಿವೆ. ಆದರೆ ಆ ಭರವಸೆಗಳನ್ನೇ

ಅತಿಯಾಗಿ ಪ್ರಚಾರ ಮಾಡಲಾಗುತ್ತಿದೆ. ಎಡಪಂಥೀಯ ಡೆಮಾಕ್ರಟಿಕ್ ರಾಜಕೀಯ ಯಂತ್ರಗಳು ಮತ್ತು ಮಾಧ್ಯಮಗಳು ಕೂಡ ಸತ್ವವಿಲ್ಲದ ಅವರ ಚುನಾವಣಾ ಪ್ರಚಾರಕ್ಕೆ ಕೈಜೋಡಿಸಿವೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದರು'' ಎಂದು ಲೂಕಸ್ ಬರೆದಿದ್ದರು.

ಹಾಗೆ ನೋಡಿದರೆ ಈ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷ ಕಮಲಾ ಹ್ಯಾರಿಸ್ ಅವರನ್ನು ಅಧ್ಯಕ್ಷೀಯ ಅಭ್ಯರ್ಥಿಯಾಗಿ 'ಅಮೆರಿಕನ್ ರೀತಿಯಲ್ಲಿ' ಆಯ್ಕೆ ಮಾಡಿರಲಿಲ್ಲ. ಅಧಿಕೃತ ಅಭ್ಯರ್ಥಿಯಾಗಿದ್ದ ಜೋ ಬೈಡೆನ್ ಹಿಂದೆ ಸರಿದಾಗ ಒಬಾಮಾಗಳು ಮತ್ತು ಪಕ್ಷದ ಹಿರಿಯ ನಾಯಕರಾದ ನಾನ್ಸಿ ಪೆಲೋಸಿಯಂಥವರು ಸೇರಿಕೊಂಡು ಕಮಲಾ ರನ್ನು ಆ ಜಾಗಕ್ಕೆ ತಂದು ನಿಲ್ಲಿಸಿದ್ದರು. 'ಡಸ್ಟ್‌ಬಿನ್' ಅಭ್ಯರ್ಥಿ ಟ್ರಂಪ್‌ರನ್ನು ಯಾರು ಬೇಕಾದರೂ ಸೋಲಿಸಬಹುದು ಎಂಬ ಭ್ರಮೆ ಅವರಿಗಿತ್ತು. ಅವರ ಪ್ರಕಾರ ಕಮಲಾ ಹ್ಯಾರಿಸ್ ಅತ್ಯಂತ ಸಮರ್ಥ ಅಭ್ಯರ್ಥಿಯಾಗಿದ್ದರು. ಆಕೆ ಪಕ್ಷಕ್ಕೆ ನಿಷ್ಠಳಾಗಿದ್ದರು. ಆಕೆಯನ್ನು ಕಣ್ಮುಚ್ಚಿಕೊಂಡು ನಂಬಬಹುದಿತ್ತು. ಆ ನಂಬಿಕೆಯ ಪ್ರಕಾರವೇ ಕಮಲಾ ಎಲ್ಲಾ ನಿರ್ಧಾರಗಳನ್ನೂ ಒಬಾಮಾಗಳಿಗೆ ಬಿಟ್ಟು, ತಾವು ನಾಮ್-ಕೆ-ವಾಸ್ತೆ ಸಮಾರಂಭಗಳಲ್ಲಿ ಭಾಗವಹಿಸುವುದರಲ್ಲಿ ವ್ಯಸ್ತರಾಗಿದ್ದರು. ಈಗ ಮತದಾರರು ಏನು ಮಾಡಬೇಕಿತ್ತೋ ಅದನ್ನು ಮಾಡಿದ್ದಾರೆ. ಆದರೆ, ಡೆಮಾಕ್ರಟಿಕ್ ಪಕ್ಷದ ನಿಷ್ಠರು ಈ ಫಲಿತಾಂಶ ನೋಡಿ ಅಮೆರಿಕವನ್ನು ಬೈಯುತ್ತಾರೆಯೇ ಹೊರತು ತಮ್ಮನ್ನು ದೂಷಿಸಿಕೊಳ್ಳುವುದಿಲ್ಲ. ಏಕೆಂದರೆ ಮಿಸ್ಟರ್ ಆ್ಯಂಡ್ ಮಿಸಸ್ ಮೋಸೆಸ್ ತಪ್ಪು ಮಾಡಲು ಸಾಧ್ಯವಿಲ್ಲ! ಅಯ್ಯೋ, ಇನ್ನು 4 ವರ್ಷ ಅವರು ರಿಪಬ್ಲಿಕನ್ ಪಕ್ಷದ ಕಸದ ತೊಟ್ಟಿಯಿಂದ ಬರುವ ವಾಸನೆ ತಡೆದುಕೊಳ್ಳಲು ಮುಖಕ್ಕೆ ಬಟ್ಟೆ ಮುಚ್ಚಿಕೊಂಡು ಓಡಾಡಬೇಕಾಗುತ್ತದೆ. ಇಲ್ಲದಿದ್ದರೆ, ಪಾಪ, ಅವರ ಸೂಕ್ಷ್ಮ ಮೂಗಿಗೆ ತುಂಬಾ ಸಮಸ್ಯೆಯಾಗುತ್ತದೆ.

ಕೊನೆಯ ಪ್ರಚಾರಭಾಷಣ ಮಾಡಿ ಮುಗಿಸಿದಾಗಲೇ ಟ್ರಂಪ್‌ಗೆ ಫಲಿತಾಂಶ ನಿಚ್ಚಳವಾಗಿತ್ತು. ಹೀಗಾಗಿ ಅವರು ಬಹಳ ಖುಷಿಯಲ್ಲಿದ್ದರು. ತಮ್ಮ ಬಗ್ಗೆ ಅಪಪ್ರಚಾರ ಮಾಡುತ್ತಿದ್ದ ಮಾಧ್ಯಮಗಳನ್ನು ಹಿಂದಿಕ್ಕಿ ಶ್ವೇತಭವನದ ರೇಸ್‌ನಲ್ಲಿ ಬಹಳ ಮುಂದೆ ಬಂದಿದ್ದೇನೆ ಎಂಬುದು ಅವರಿಗೆ ಗೊತ್ತಿತ್ತು. ಅಮೆರಿಕದಲ್ಲಿ ಜನರು ನೇರವಾಗಿ ಅಧ್ಯಕ್ಷರನ್ನು ಆಯ್ಕೆ ಮಾಡುವುದಿಲ್ಲ. ಅಧ್ಯಕ್ಷರನ್ನು ಆಯ್ಕೆ ಮಾಡುವುದಕ್ಕೆಂದೇ ಜನರು ಎಲೆಕ್ಟೋರಲ್ ಕಾಲೇಜ್ ಎಂಬ ಪ್ರತಿನಿಧಿಗಳ ಗುಂಪನ್ನು ಪ್ರತಿ ರಾಜ್ಯದಲ್ಲೂ ಆಯ್ಕೆ ಮಾಡಿರುತ್ತಾರೆ. ಅವರು ಅಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ. ಆ ಗುಂಪುಗಳಲ್ಲಿ ಟ್ರಂಪ್ ಪರ ಒಲವಿರುವ ಹೆಚ್ಚಿನವರು 'ಪೊಲಿಟಿಕಲಿ ಇನ್‌ಕರೆಕ್ಟ್' ಆಗಿರುವ ಪುರುಷರು, ಬಿಳಿಯರು ಮತ್ತು ಯುವ ಅಮೆರಿಕನ್ನರಾಗಿದ್ದರು. ಅವರು ಚುನಾವಣೆ ಆರಂಭವಾಗುವುದಕ್ಕೂ ಮೊದಲೇ ಬೈಡನ್ ಸರಕಾರದ ಬಗ್ಗೆ ಬೇಸತ್ತು ಕುಳಿತಿದ್ದರು. ನಂತರ ಅವರ ಜತೆಗೆ ಬೇರೆ ಬೇರೆ ಅನಿವಾರ್ಯ ಕಾರಣಗಳಿಗಾಗಿ ಇನ್ನೊಂದಷ್ಟು ಗುಂಪುಗಳು ಕೈಜೋಡಿಸಿದವು. ಅಮೆರಿಕದಲ್ಲಿರುವ ಶೇ.31ರಷ್ಟು ಸ್ವತಂತ್ರ ಮತದಾರರಲ್ಲಿ ಹೆಚ್ಚಿನವರು ಈ ಬಾರಿ ಟ್ರಂಪ್‌ಗೆ ಮತ ಹಾಕಿದರು. ಅಂದರೆ, ಮತದಾನ ಮಾಡಿದ ಶೇ.54ರಷ್ಟು ಸ್ವತಂತ್ರ ಮತದಾರರಲ್ಲಿ ಶೇ.43ರಷ್ಟು ಮಂದಿ ಟ್ರಂಪ್ ಪರ ಮತ ಚಲಾಯಿಸಿದ್ದರು. ಇದು ಆರಂಭಿಕ ಲೆಕ್ಕಾಚಾರ. ಅಂತಿಮ ಲೆಕ್ಕಾಚಾರ ಅಲ್ಪಸ್ವಲ್ಪ ಬದಲಾಗಬಹುದು. ಆದರೆ, ಹೆಚ್ಚು ಬದಲಾಗುವುದಿಲ್ಲ. ಹಿಂದೆ ಕಮಲಾ ಹ್ಯಾರಿಸ್‌ರನ್ನೇ ಶ್ವೇತ ಭವನಕ್ಕೆ ಕಳುಹಿಸಬೇಕು ಎಂದು ಪಣತೊಟ್ಟಿದ್ದ ಲ್ಯಾಟಿನ್ ಅಮೆರಿಕನ್ ಮೂಲದ ಮತದಾರರು ಬಹಳ ದೊಡ್ಡ ಸಂಖ್ಯೆಯಲ್ಲಿ ಟ್ರಂಪ್ ಪಾಳಯಕ್ಕೆ ಜಿಗಿದಿದ್ದರು. ಏಕೆಂದರೆ, ಹಣದುಬ್ಬರ ಅವರನ್ನು ಸುಡುತ್ತಿತ್ತು. ಇನ್ನು, 2024ರಲ್ಲಿ ಜೋ ಬೈಡನ್‌ಗೆ ಲಭಿಸಿದ್ದ ಕರಿಯರ ಮತಗಳಲ್ಲಿ ಹ್ಯಾರಿಸ್ ಕನಿಷ್ಠ ಪಕ್ಷ ಶೇ.10ರಷ್ಟಾದರೂ ಮತಗಳನ್ನು ಕಳೆದುಕೊಂಡಿದ್ದರು. ಮಿಶಿಗನ್‌ನಲ್ಲಿ ಅರಬ್ ಅಮೆರಿಕನ್ನರು ಹ್ಯಾರಿಸ್‌ರಿಂದ ದೂರವಾಗಿ ಟ್ರಂಪ್‌ಗೆ ಅನುಕೂಲ ಮಾಡಿಕೊಟ್ಟರು. ಟ್ರಂಪ್ ಇಸ್ರೇಲ್‌ಗೆ ಬೆಂಬಲ ನೀಡುವವರಾಗಿದ್ದರೂ ಪ್ಯಾಲೆಸ್ತೀನ್ ಮತ್ತು ಗಾಜಾ ಪಟ್ಟಿಯ ವಿಷಯದಲ್ಲಿ ಬೈಡನ್ ಆಡಳಿತ ನಡೆದುಕೊಂಡ ರೀತಿಗಾಗಿ ಅವರ ಪಕ್ಷಕ್ಕೆ ಶಿಕ್ಷೆ ಕೊಡಲೇಬೇಕೆಂದು ಅರಬ್ ಅಮೆರಿಕನ್ನರು ನಿರ್ಧರಿಸಿದ್ದರು. ಆದರೆ ಅವರು ನೇರವಾಗಿ ಟ್ರಂಪ್‌ಗೆ ಮತ ಹಾಕಲಿಲ್ಲ, ಅದರ ಬದಲಿಗೆ 3ನೇ ಅಭ್ಯರ್ಥಿಯ ಪರ ನಿಂತು ತಮ್ಮ ಮತವನ್ನು ಉದ್ದೇಶಪೂರ್ವಕವಾಗಿ ವ್ಯರ್ಥ ಮಾಡಿದರು. ಇನ್ನು, ಈ ಸಲದ ಫಲಿತಾಂಶ ಹೀಗೇ ಇರುತ್ತದೆ ಎಂದು ಹೇಳುವ ಅನೇಕ ರಾಜಕೀಯೇತರ ಸುಳಿವುಗಳು ಕೂಡ ಚುನಾವಣೆಗೂ ಮೊದಲೇ ಲಭಿಸಿದ್ದವು. ಕ್ರಿಪ್ಟೋಕರೆನ್ಸಿಯನ್ನು ಕಾನೂನುಬದ್ಧ ಮಾಡುತ್ತೇನೆ ಎಂದು ಟ್ರಂಪ್ ಹೇಳಿದ ಮೇಲೆ ಬಿಟ್ ಕಾಯಿನ್ ಮೌಲ್ಯ ಶೇ.3ರಷ್ಟು ಏರಿಕೆಯಾಗಿತ್ತು. ಅಮೆರಿಕದ ಬಹುದೊಡ್ಡ ಬೆಟ್ಟಿಂಗ್ ಕಂಪನಿ 'ಬೆಟ್‌ಫೇರ್' ತನ್ನ ಪಂಟರ್‌ಗಳಿಗೆ ಈ ಸಲ ಟ್ರಂಪ್ ಗೆಲ್ಲುತ್ತಾರೆ ಎಂದು ಹೇಳುತ್ತಿತ್ತು. ಲಂಡನ್ನಿನಲ್ಲೂ ಬ್ರಿಟಿಷ್ ಜೂಜುಕೋರರು ಪೆನ್ಸಿಲ್ವೇನಿಯಾ, ಜಾರ್ಜಿಯಾ, ನೆವಾಡಾ, ನಾರ್ತ್ ಕೆರೋಲಿನಾದಲ್ಲಿ ಅಥವಾ 'ಬೇಲಿ ಮೇಲೆ ಕುಳಿತ' 7 ರಾಜ್ಯಗಳ ಪೈಕಿ 5 ರಾಜ್ಯಗಳಲ್ಲಿ ಟ್ರಂಪ್ ಗೆಲ್ಲುತ್ತಾರೆ ಎಂದೇ ಬೆಟ್ ಕಟ್ಟುತ್ತಿದ್ದರು. ಅಂದರೆ, ಅಮೆರಿಕದ ದೊಡ್ಡ ಮಾಧ್ಯಮಗಳಿಗಿಂತ ಹೆಚ್ಚಿನ ಮಾಹಿತಿ ಬೆಟ್ಟಿಂಗ್ ದಂಧೆಯವರಿಗೆ ಇತ್ತು. ಫಲಿತಾಂಶದ ದಿನ ಭಾರತೀಯ ಕಾಲಮಾನದಲ್ಲಿ ಬೆಳಗ್ಗೆ 7 ಗಂಟೆಗೆ ಯಾವ ನ್ಯೂಸ್ ಚಾನಲ್ ಬೇಕಿದ್ದರೂ ಲೀಡ್‌ಗಳನ್ನು ನೋಡಿ ಸರಳ ಲೆಕ್ಕಾಚಾರದೊಂದಿಗೆ ಟ್ರಂಪ್ ಗೆಲ್ಲುತ್ತಾರೆ ಎಂದು ಮೊದಲೇ ಹೇಳಬಹುದಿತ್ತು. ಆದರೆ, ಏನಾದರೂ ಪವಾಡ ಸಂಭವಿಸಬಹುದು ಎಂಬ ನಿರೀಕ್ಷೆಯಲ್ಲಿ ಹೆಚ್ಚಿನ ಮಾಧ್ಯಮಗಳು ಹಾಗೆ ಹೇಳುವುದನ್ನು ಬೇಕಂತಲೇ ತಪ್ಪಿಸುತ್ತಿದ್ದವು. ಅಧ್ಯಕ್ಷೀಯ ಚುನಾವಣೆಯ ಜತೆಗೇ ನಡೆದಿದ್ದ ಸೆನೆಟ್ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷವು ಟ್ರಂಪ್ ಎಫೆಕ್ಟ್‌ನಿಂದಲೇ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತಿದ್ದರೂ ಅದನ್ನು ಒಪ್ಪಿಕೊಳ್ಳಲು ಅಮೆರಿಕದ ಮಾಧ್ಯಮಗಳು ಸಿದ್ಧರಿರಲಿಲ್ಲ. ಕೊನೆಗೆ ಫಲಿತಾಂಶ ಬಂದಾಗ ಟ್ರಂಪ್ 2016ರಲ್ಲಿ ಹಿಲರಿ ಕ್ಲಿಂಟನ್ ಪಡೆದಿದ್ದಕ್ಕಿಂತ 30 ಲಕ್ಷ ಕಡಿಮೆ ಮತ ಮತ್ತು 2020ರಲ್ಲಿ ಜೋ ಬೈಡನ್ ಪಡೆದಿದ್ದಕ್ಕಿಂತ 70 ಲಕ್ಷ ಕಡಿಮೆ ಮತ ಪಡೆದಿದ್ದರೂ ಈ ಚುನಾವಣೆಯಲ್ಲಿ ಕಮಲಾ ಹ್ಯಾರಿಸ್‌ಗಿಂತ 50 ಲಕ್ಷ ಹೆಚ್ಚು ಮತ ಗಳಿಸಿ ವಿಜಯಿಯಾಗಿದ್ದರು. ಅದರೊಂದಿಗೆ, ಆವರೆಗಿನ ಎಲ್ಲಾ ಒತ್ತಡಗಳನ್ನೂ ಮೀರಿ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶವು ಭೂಮಿಯನ್ನು ಗಡಗಡ ನಡುಗಿಸದೆಯೇ ದೊಡ್ಡ ಭೂಕಂಪನವನ್ನು ಉಂಟುಮಾಡಿತ್ತು.

ಈ ಚುನಾವಣೆಯಲ್ಲಿ ಅಮೆರಿಕದ ದೊಡ್ಡ ಮಾಧ್ಯಮಗಳ ಕಳ್ಳಾಟಗಳ ನಡುವೆಯೂ ಲಂಡನ್ನಿನ ಒಂದು ಟಿವಿ ಚಾನಲ್‌ನಲ್ಲಿ ಚರ್ಚೆಗೆ ಕುಳಿತಿದ್ದ ವಿಐಪಿಯೊಬ್ಬರ ನಿಷ್ಪಕ್ಷಪಾತ ನಡವಳಿಕೆಯನ್ನು ಮೆಚ್ಚಿಕೊಳ್ಳಲೇಬೇಕು. ಬ್ರಿಟನ್ನಿನ ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅವರನ್ನು ಫಲಿತಾಂಶದ ದಿನ ಕಾಮೆಂಟರಿ ಹೇಳಲು ಚಾನಲ್-4 ಕರೆಸಿತ್ತು. ಅವರ ಜತೆಗೆ ಸ್ಟಾರ್ಮಿ ಡೇನಿಯಲ್ಸ್ ಕುಳಿತಿದ್ದರು. ಬೋರಿಸ್ ಜಾನ್ಸನ್ ತುಂಬಾ ನಿಷ್ಠುರ ಮತ್ತು ನಿಷ್ಪಕ್ಷಪಾತಿಯಾಗಿ ನಡೆದುಕೊಂಡರು. ಅವರು ಡೊನಾಲ್ಡ್ ಟ್ರಂಪ್ ಪರವಾಗಿಯೂ ಮಾತನಾಡಲಿಲ್ಲ ಅಥವಾ ಕಮಲಾ ಹ್ಯಾರಿಸ್ ಪರವಾಗಿಯೂ ಮಾತನಾಡಲಿಲ್ಲ. ಬದಲಿಗೆ, ಅತ್ಯಂತ ನಿಷ್ಠೆಯಿಂದ ತಮ್ಮ ಹೊಸ ಪುಸ್ತಕದ ಬಗ್ಗೆ ಮಾತನಾಡಿದರು. ಎಲ್ಲಿಯವರೆಗೆ ಅಂದರೆ, ಕೊನೆಗೆ ಸ್ಟುಡಿಯೋದಲ್ಲೇ ವೀಕ್ಷಕರಿಗೆ ಪುಸ್ತಕವನ್ನು ಎತ್ತಿ ಹಿಡಿದು ತೋರಿಸಿ, ಇಂದೇ ಹೋಗಿ ಒಂದು ಕಾಪಿ ಖರೀದಿಸಿ ಎಂದು ಹೇಳಿದರು. ಚಾನಲ್‌ನವರು ಅನಿವಾರ್ಯವಾಗಿ ಅವರನ್ನು 'ಹೊರಗೆ' ಹಾಕಬೇಕಾಯಿತು.

ಹಾಗಾಗಿ ಮೋಸೆಸ್ ಹೇಳುವಂತೆ: ಆಮೆನ್....

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 324

ಸಮಾಚಾರ ಸಣ್ಣದಲ್ಲ

ನಟ ಶಾರುಖ್‌ಗೆ ಬೆದರಿಕೆ, ಛತ್ತೀಸ್‌ಗಢ ವಕೀಲ ಸೆರೆ

ರಾಯಪುರ: ಬಾಲಿವುಡ್ ನಟ-ನಿರ್ಮಾಪಕ ಶಾರುಖ್ ಖಾನ್‌ಗೆ ಜೀವ ಬೆದರಿಕೆ ಹಾಕಿದ ಆರೋಪದಡಿ ಛತ್ತೀಸ್‌ಗಢದ ರಾಯಪುರದ ವಕೀಲ

ಫೈಜನ್ ಖಾನ್‌ನನ್ನು ಮುಂಬೈ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. ಆರೋಪಿ ಕಳೆದ ವಾರ ಬಾಂದ್ರಾ ಪೊಲೀಸ್ ಠಾಣೆಗೆ ಕರೆ ಮಾಡಿ 50 ಲಕ್ಷ ರು. ಕೊಡದೇ ಇದ್ದರೆ ನಟ ಶಾರುಖ್ ಖಾನ್‌ರನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದ. ಆರೋಪಿ ವಿರುದ್ಧ ಭಾರತೀಯ ನ್ಯಾಯಶಾಸ್ತ್ರ ಸಂಹಿತೆಯ (ಬಿಎನ್‌ಎಸ್‌ಎಸ್) 308(4) (ಕೊಲೆಸಾವಿನ ಬೆದರಿಕೆ) ಮತ್ತು 351(3)(4) (ಕ್ರಿಮಿನಲ್ ಬೆದರಿಕೆ) ಸೆಕ್ಷನ್‌ಗಳಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಬೆದರಿಕೆ ಪ್ರಕರಣದಲ್ಲಿ ವಕೀಲ ಫೈಜನ್ ಖಾನ್‌ನನ್ನು ಕಳೆದ ವಾರವೇ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದರು. ಆದರೆ ತನ್ನ ಫೋನ್ ಕಳೆದಿದೆ. ಅದನ್ನು ಬಳಸಿ ಬೇರೆ ಯಾರೋ ಕರೆ ಮಾಡಿದ್ದಾರೆಂದು ಹೇಳಿದ್ದ. ಈಗ ಆತನೇ ಬೆದರಿಕೆ ಕರೆ ಮಾಡಿರುವುದು ಸಾಬೀತಾಗಿದೆ. ಹಾಗಾಗಿಯೇ ಬಂಧಿಸಲಾಗಿದೆ.

ಯೋಗ ಗುರು ಶರತ್ ಜೋಯಿಸ್ ನಿಧನ

ವರ್ಜೀನಿಯ: ಅಮೆರಿಕದ ವರ್ಜೀನಿಯ ರಾಜ್ಯದಲ್ಲಿ ಅಷ್ಟಾಂಗ ಶೈಲಿಯ ಯೋಗ ತರಗತಿಗಳನ್ನು ನಡೆಸಿಕೊಡುತ್ತಿದ್ದ, ಹಾಲಿವುಡ್ ತಾರೆಯರು, ಖ್ಯಾತ ಪಾಪ್ ಗಾಯಕರನ್ನು ಶಿಷ್ಯರಾಗಿ ಹೊಂದಿದ್ದ

ಮೈಸೂರಿನ ಖ್ಯಾತ ಯೋಗ ಗುರು ಶರತ್ ಜೋಯಿಸ್ (53) ಹೃದಯಘಾತ ದಿಂದ ನಿಧನರಾದರು. ಪಾಪ್ ಗಾಯಕಿ ಮಡೋನಾ, ಗ್ವಿನೆತ್ ಪಾಲ್ಟ್ರೋ ಮತ್ತು ಸ್ಟಿಂಗ್ ಸೇರಿದಂತೆ ಹಲವು ವಿಶ್ವ ಪ್ರಸಿದ್ಧ ವ್ಯಕ್ತಿಗಳಿಗೆ ಅಷ್ಟಾಂಗ ಯೋಗವನ್ನು ಶರತ್ ಕಲಿಸಿಕೊಟ್ಟಿದ್ದಾರೆ. ಮೈಸೂರಿನ ಕೆ.ಪಟ್ಟಾಭಿ ಜೋಯಿಸ್ ಅವರ ಮೊಮ್ಮಗ ಶರತ್, ಸದ್ಯ ವರ್ಜೀನಿಯದಲ್ಲಿ ನೆಲೆಸಿದ್ದರು. ಅಜ್ಜ ಕೆ.ಪಟ್ಟಾಭಿ ಜೋಯಿಸ್ ಅವರಂತೆಯೇ ಸಾಂಪ್ರದಾಯಿಕ ಶೈಲಿಯಲ್ಲಿ ಯೋಗ ಶಾಲೆ ನಡೆಸುತ್ತಿದ್ದರು. ಮೈಸೂರಿನಲ್ಲಿಯೂ ಅವರ ಯೋಗ ಕೇಂದ್ರವಿದೆ. 1971ರ ಸೆ.29ರಂದು ಮೈಸೂರಿನಲ್ಲಿ ಸರಸ್ವತಿ(ಪಟ್ಟಾಭಿ ಜೋಯಿಸ್ ಅವರ ಪುತ್ರಿ) ಮತ್ತು ರಂಗಸ್ವಾಮಿ ದಂಪತಿ ಪುತ್ರನಾಗಿ ಜನಿಸಿದ್ದರು.

ಇಬ್ಬರು ಐಎಎಸ್ ಅಧಿಕಾರಿ ಅಮಾನತು

ತಿರುವನಂತಪುರಂ: ಹಿಂದೂ ಧರ್ಮ ಆಧಾರಿತ ವಾಟ್ಸಾಪ್ ಗ್ರೂಪ್ ರಚಿಸಿದ ಹಾಗೂ ಹಿರಿಯ ಅಧಿಕಾರಿಯನ್ನು ಟೀಕಿಸಿದ ಕಾರಣಕ್ಕೆ ಇಬ್ಬರು ಐಎಎಸ್ ಅಧಿಕಾರಿಗಳನ್ನು ಕೇರಳ ಸರಕಾರ ಅಮಾನತು ಮಾಡಿದೆ. ರಾಜ್ಯ ಕೈಗಾರಿಕಾ ಇಲಾಖೆ ನಿರ್ದೇಶಕ ಕೆ. ಗೋಪಾಲ ಕೃಷ್ಣನ್, ಹಿಂದೂ ಧರ್ಮದ ವಿವಿಧ ಸಮುದಾಯಗಳ ಅಧಿ ಕಾರಿಗಳನ್ನು ಸೇರಿಸಿ ವಾಟ್ಸಾಪ್ ಗ್ರೂಪ್ ರಚಿಸಿದ್ದರು. ಗೋಪಾಲ ಕೃಷ್ಣನ್ ಐಎಎಸ್ ಅಧಿಕಾರಿಗಳ ನಡುವೆ ಧರ್ಮದ ಆಧಾರ ಬಿರುಕು ಮೂಡಿಸಲೆತ್ನಿಸಿದ್ದಾರೆ ಎಂದು ಆರೋಪಿಸಲಾಗಿತ್ತು. ಕೃಷಿ ಇಲಾಖೆ ವಿಶೇಷ ಕಾರ್ಯದರ್ಶಿ ಎನ್.ಪ್ರಶಾಂತ್ ಸಾಮಾಜಿಕ ಮಾಧ್ಯಮದಲ್ಲಿ ಹಿರಿಯ ಐಎಎಸ್ ಅಧಿಕಾರಿಯನ್ನು ಟೀಕಿಸಿದ್ದರು. ಅಶಿಸ್ತು ಕಾರಣ ನೀಡಿ ಇಬ್ಬರನ್ನೂ ಅಮಾನತುಗೊಳಿಸಲಾಗಿದೆ. ಮುಖ್ಯ ಕಾರ್ಯದರ್ಶಿ (ಸಿಎಸ್) ಶಾರದಾ ಮುರಳೀಧರನ್ ವರದಿ ಆಧರಿಸಿಮುಖ್ಯಮಂತ್ರಿ ಪಿಣರಾಯಿ ವಿಜಯನ್, ಇಬ್ಬರೂ ಅಧಿಕಾರಿಗಳ ಅಮಾನತಿಗೆ ಆದೇಶಿಸಿದ್ದಾರೆ. ಸಿಎಸ್ ಹೊರಡಿಸಿದ ಅಮಾನತು ಆದೇಶದಲ್ಲಿ, ಇಬ್ಬರೂ ಅಧಿಕಾರಿಗಳು ಆಡಳಿತ ಸೇವೆಗೆ ಕಳಂಕ ತಂದಿದ್ದಾರೆಂದು ಉಲ್ಲೇಖಿಸಲಾಗಿದೆ.

ಚೀನಾ ಕ್ರೀಡಾ ಕೇಂದ್ರಕ್ಕೆ ನುಗ್ಗಿದ ಕಾರು-35 ಬಲಿ

ಬ್ಯಾಂಕಾಕ್: ದಕ್ಷಿಣ ಚೀನಾ ಝುಹೈನಲ್ಲಿರುವ ಕ್ರೀಡಾ ಕೇಂದ್ರದಲ್ಲಿ ವ್ಯಾಯಾಮ ಮಾಡುತ್ತಿದ್ದ ಜನರ ಮೇಲೆ ಚಾಲಕನೊಬ್ಬ ಉದ್ದೇಶಪೂರ್ವಕವಾಗಿ ಕಾರು ನುಗ್ಗಿಸಿದ್ದರಿಂದ 35 ಮಂದಿ ಜೀವ ಕಳೆದುಕೊಂಡಿದ್ದಾರೆ, 43 ಜನ ತೀವ್ರವಾಗಿ ಗಾಯಗೊಂಡಿದ್ದಾರೆ. ಪೀಪಲ್ಸ್ ಲಿಬರೇಶನ್ ಆರ್ಮಿ ನಗರದಲ್ಲಿ ವಾರ್ಷಿಕ ವೈಮಾನಿಕ ಪ್ರದರ್ಶನದ ಮುನ್ನಾದಿನವಾದ ಸೋಮವಾರ ತಡರಾತ್ರಿ, ಕಾರು ಚಾಲಕನಿಂದ ಸಾಮೂಹಿಕ ಹತ್ಯೆ ನಡೆದಿದೆ. ಕ್ರೀಡಾ ಕೇಂದ್ರಕ್ಕೆ ಕಾರು ನುಗ್ಗಿಸಿದ 62 ವರ್ಷದ ಚಾಲಕನನ್ನು ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ಕೃತ್ಯದ ಬಳಿಕ ಚಾಲಕ ಚಾಕು ಬಳಸಿ ಆತ್ಮಹತ್ಯೆಗೆ ಮುಂದಾಗಿದ್ದ ಎಂದು ವರದಿಯಾಗಿದೆ. ಫ್ಯಾನ್ ಎಂಬುದು ಆರೋಪಿಯ ಕುಟುಂಬದ ಹೆಸರು ಎಂದು ಪೊಲೀಸರು ಗುರುತಿಸಿದ್ದಾರೆ.

{ ವೈ.ಎಸ್.ಶರ್ಮಿಳಾ } ಎಪಿಸಿಸಿ ಅಧ್ಯಕ್ಷೆ

ಸಾಮಾಜಿಕ ಮಾಧ್ಯಮದಲ್ಲಿ ನಮ್ಮ ಕುಟುಂಬದ ವಿರುದ್ಧ ಅಶ್ಲೀಲ ಪೋಸ್ಟ್ ಪ್ರಕಟವಾಗುವುದರ ಹಿಂದೆ ಸೋದರನ ಕೈವಾಡವಿದೆ. ನನ್ನ ಮತ್ತು ತಾಯಿ ವಿರುದ್ಧವೇ ಸಾಮಾಜಿಕ ಜಾಲತಾಣದಲ್ಲಿ ಅಸಭ್ಯ ಪೋಸ್ಟ್ ಪ್ರಕಟವಾಗುವುದನ್ನು ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ವೈ.ಎಸ್.ಜಗನ್ ಮೋಹನ್ ರೆಡ್ಡಿ ಪ್ರೋತ್ಸಾಹಿಸಿದ್ದಾರೆ. ಬೆಂಬಲಿಗರ ಮೂಲಕ ಅಸಭ್ಯ ಪೋಸ್ಟ್‌ಗಳನ್ನು ಹಾಕಿಸುತ್ತಿದ್ದಾರೆ.

ವಯನಾಡು: ಪ್ರಿಯಾಂಕಾ ಭವಿಷ್ಯ ಇಂದು ನಿರ್ಧಾರ

ನೆಹರು ಕುಟುಂಬದ ಕುಡಿ, ಇಂದಿರಾ ಪ್ರೀತಿಯ ಮೊಮ್ಮಗಳ ಅಗ್ನಿಪರೀಕ್ಷೆ । ಎದುರಾಳಿಯಾಗಿ ಬಿಜೆಪಿಯ ನವ್ಯಾ ಹರಿದಾಸ್, ಸಿಪಿಐ ಸತ್ಯನ್ ಮೊಕೇರಿ

3 ಜಿಲ್ಲೆಗಳನ್ನು ಆವರಿಸಿಕೊಂಡಿರುವ ಕ್ಷೇತ್ರದ ಕಣದಲ್ಲಿ 16 ಅಭ್ಯರ್ಥಿಗಳು । ಏಳು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿ, 14 ಲಕ್ಷಕ್ಕೂ ಅಧಿಕ ಮತದಾರರು

ವಯನಾಡು: ಮಾಜಿ ಪ್ರಧಾನಿಗಳಾದ ನೆಹರು ಅವರ ಕುಟುಂಬದ ಕುಡಿ, ಇಂದಿರಾ ಗಾಂಧಿ ಅವರ ಪ್ರೀತಿಯ ಮೊಮ್ಮಗಳು ಪ್ರಿಯಾಂಕಾ ಗಾಂಧಿ ವಾದ್ರಾ, ಅವರ ಸಕ್ರಿಯ ರಾಜಕಾರಣದ ದೊಡ್ಡ ಭವಿಷ್ಯ ಬುಧವಾರ ಕೇರಳದ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ನಿರ್ಧಾರವಾಗಲಿದೆ.

ಸೋದರ ರಾಹುಲ್ ಗಾಂಧಿ ಇತ್ತೀಚೆಗಷ್ಟೇ ರಾಜೀನಾಮೆ ನೀಡಿದ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಪ್ರಿಯಾಂಕಾ ವಾದ್ರಾ, ಚುನಾವಣಾ ರಾಜಕೀಯ ಅರಂಗೇಟ್ರಂ ಪ್ರಯೋಗ ನಡೆದಿದೆ. 53 ವರ್ಷಗಳ ಪ್ರಿಯಾಂಕಾ ದಕ್ಷಿಣ ತುತ್ತ ತುದಿಯ ರಾಜ್ಯದ ಮೂಲಕ ಲೋಕಸಭೆ ಪ್ರವೇಶಕ್ಕೆ ಪ್ರಯತ್ನ ನಡೆಸಿದ್ದಾರೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಪ್ರಿಯಾಂಕಾ ವಾದ್ರಾ ಅವರಿಗೆ ಬಿಜೆಪಿಯ ಮಹಿಳಾ ಮೋರ್ಚಾ ಕೇರಳ ಘಟಕ ಪ್ರಧಾನ ಕಾರ್ಯದರ್ಶಿ ನವ್ಯಾ ಹರಿದಾಸ್ ಪ್ರತಿಸ್ಪರ್ಧಿ ಆಗಿದ್ದಾರೆ. ಸಿಪಿಐ ಪಕ್ಷದಿಂದ ಸತ್ಯನ್ ಮೊಕೇರಿ ಕೂಡಾ ತೀವ್ರ ಪೈಪೋಟಿ ನೀಡುತ್ತಿದ್ದಾರೆ. ಈ ಮೂವರನ್ನೂ ಸೇರಿಸಿದಂತೆ ಒಟ್ಟು 16 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

14 ಲಕ್ಷ ಮತದಾರರು ಇರುವ ವಯನಾಡು ಲೋಕಸಭಾ ಕ್ಷೇತ್ರದಲ್ಲಿ 2019 ಮತ್ತು 2024ರ ಮೇ ತಿಂಗಳಲ್ಲಿ ನಡೆದ ಚುನಾವಣೆಗಳಲ್ಲಿ ರಾಹುಲ್ ಗಾಂಧಿ ಭಾರೀ ಮತಗಳ ಅಂತರದಿಂದಲೇ ಗೆದ್ದಿದ್ದಾರೆ. ಇತ್ತೀಚಿನ ಚುನಾವಣೆಯಲ್ಲಿ 3.5 ಲಕ್ಷ ಮತಗಳ ಅಂತರದ ಭರ್ಜರಿ ಜಯ ಅವರದ್ದಾಗಿತ್ತು. ಆದರೆ, ಅವರು ಉತ್ತರ ಪ್ರದೇಶದ ರಾಯ್‌ಬರೇಲಿ ಲೋಕಸಭಾ ಕ್ಷೇತ್ರದ ಸದಸ್ಯತ್ವವನ್ನು ಉಳಿಸಿಕೊಂಡು, ಕೇರಳದ ವಯನಾಡು ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿದರು. ಆ ಮೂಲಕ ಸೋದರಿ ಪ್ರಿಯಾಂಕಾ ಅವರ ಸ್ಪರ್ಧೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಅಷ್ಟೇ ಅಲ್ಲದೇ, ಸೋದರಿಯನ್ನು ಲೋಕಸಭೆಗೆ ಕರೆದೊಯ್ಯಲೇಬೇಕೆಂಬ ಗುರಿ ಇಟ್ಟುಕೊಂಡು ಬಿರುಸಿನ ಪ್ರಚಾರವನ್ನೂ ನಡೆಸಿದ್ದಾರೆ.

ಸಿಪಿಐ ಮತ್ತು ಬಿಜೆಪಿ ಕೂಡಾ ಈ ಬಾರಿ ಗೆಲ್ಲುವ ವಿಶ್ವಾಸದಲ್ಲಿವೆ. ವಕ್ಫ್ ಬೋರ್ಡ್‌ನಿಂದ ವ್ಯಾಪಕ ಪ್ರಮಾಣದಲ್ಲಿ ಕ್ರೈಸ್ತರು, ಹಿಂದೂಗಳ ಆಸ್ತಿಗಳ ಸ್ವಾಧೀನ ವಿಚಾರವೇ ಈ ಬಾರಿಯ ವಯನಾಡು ಲೋಕಸಭಾ ಕ್ಷೇತ್ರ ಉಪ ಚುನಾವಣೆಯ ಪ್ರಮುಖ ವಿಷಯವಾಗಲಿದೆ. ಜತೆಗೆ ಹಿಂದೂಗಳು ಒಗ್ಗಟ್ಟಿನಿಂದ ಇರದೇ ಇದ್ದಲ್ಲಿ ಬದುಕು ಕಷ್ಟ ಎಂಬ ಬಿಜೆಪಿ ನಾಯಕರ ಎಚ್ಚರಿಕೆ ಸಂದೇಶವೂ ಈಗಿನ ಚುನಾವಣೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗಿದೆ. ಆದರೆ, ಕಾಂಗ್ರೆಸ್ 2019 ಮತ್ತು 2024ರ ಸಾರ್ವತ್ರಿಕ ಚುನಾವಣೆಯಲ್ಲಿ ರಾಹುಲ್ ಗೆಲ್ಲಿಸಿದ ಜನರ ವಿಶ್ವಾಸವನ್ನೇ ನಂಬಿಕೊಂಡಿದೆ. ಜತೆಗೆ ಮುಸ್ಲಿಂ ಮತಗಳ ಧ್ರುವೀಕರಣವೂ ಅದರ ದೊಡ್ಡ ಶಕ್ತಿಯಾಗಿದೆ.

ದೆಹಲಿ ನಿವಾಸಿ ಪ್ರಿಯಾಂಕಾ ವಾದ್ರಾ ಅವರನ್ನು ಗೆಲ್ಲಿಸಿದರೆ ಅವರು ಕ್ಷೇತ್ರಕ್ಕೆ ಅಪರೂಪದ ಅತಿಥಿಯಾಗಲಿದ್ದಾರೆ ಎಂಬ ಬಿಜೆಪಿ, ಸಿಪಿಐ ನಾಯಕರ ಪ್ರಚಾರ ನಡೆದಿದೆ. ಅದನ್ನು ಒಪ್ಪದ ಪ್ರಿಯಾಂಕಾ ತಾವು ನಿಯಮಿತವಾಗಿ ಕ್ಷೇತ್ರಕ್ಕೆ ಭೇಟಿ ನೀಡುವ ಭರವಸೆಯನ್ನು ವಯಮಾಡು ಮತದಾರರಿಗೆ ಪದೇ ಪದೇ ನೀಡುತ್ತಿದ್ದಾರೆ.

ವಯನಾಡು ಕ್ಷೇತ್ರ ವಿಶೇಷ

ವಯನಾಡು ಲೋಕಸಭಾ ಕ್ಷೇತ್ರ 3 ಜಿಲ್ಲೆ ಆವರಿಸಿಕೊಂಡಿರುವ ಬಹು ವಿಸ್ತಾರವಾದುದಾಗಿದೆ. ಕ್ಷೇತ್ರದಲ್ಲಿ ವಯನಾಡು ಜಿಲ್ಲೆಯ ಮಾನಂದವಾಡಿ, ಸುಲ್ತಾನ್ ಬತ್ತೇರಿ(ಎರಡೂ ಎಸ್‌ಟಿಗೆ ಮೀಸಲು) ಹಾಗೂ ಕಲ್ಪೆಟ್ಟಾ ವಿಧಾನಸಭಾ ಕ್ಷೇತ್ರಗಳಿವೆ. ಮಲ್ಲಪ್ಪುರಂ ಜಿಲ್ಲೆಯಿಂದ ಎರನಾಡ್, ನೀಲಂಬೂರ್, ವಂಡೂರ್ ವಿಧಾನಸಭಾ ಕ್ಷೇತ್ರಗಳೂ ಸೇರಿವೆ. ಕೋಯಿಕ್ಕೋಡ್ ಜಿಲ್ಲೆಯ ಥಿರುವಂಬಾಡಿ ವಿಧಾನಸಭಾ ಕ್ಷೇತ್ರೂ ವಯನಾಡು ಲೋಕಸಭಾ ಕ್ಷೇತ್ರಕ್ಕೆ ಸೇರಿಕೊಂಡಿದೆ. 14 ಲಕ್ಷಗಳಷ್ಟು ಮತದಾರರು ಕ್ಷೇತ್ರದಲ್ಲಿರುವುದರಿಂದ ಈ ಬಾರಿ ಒಂದು ಸಾವಿರಕ್ಕೂ ಅಧಿಕ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಮಲ್ಲಪುರಂ ಜಿಲ್ಲೆಯಲ್ಲಿ ಚುನಾವಣಾ ಪ್ರಕ್ರಿಯೆ ಆರಂಭಗೊಂಡು ಮಾದರಿ ನೀತಿ ಸಂಹಿತೆ ಜಾರಿಗೊಂಡಾಗಿನಿಂದ ಈವರೆಗೆ 720 ಗ್ರಾಂ ಚಿನ್ನ, 50.98 ಲಕ್ಷ ರು. ನಗದು ಹಣ, 30 ಲೀ. ವಿದೇಶಿ ಮದ್ಯ, 76 ಗ್ರಾಂ ಎಂಡಿಎಂಎ ಮಾದಕದ್ರವ್ಯ, 13 ಕಿಲೊ ಗಾಂಜಾ, ಒಂದು ದೇಶೀ ಬಂದೂಕು, 12 ಗುಂಡುಗಳನ್ನು ಚುನಾವಣಾ ಆಯೋಗ ಮತ್ತು ಪೊಲೀಸ್ ಜಂಟಿ ತಂಡ ವಶಪಡಿಸಿಕೊಂಡಿದೆ.

ಜಾರ್ಖಂಡ್‌ನಲ್ಲಿಂದು ಮತದಾನ

ರಾಂಚಿ: ಜಾರ್ಖಂಡ್ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ 43 ಕ್ಷೇತ್ರಗಳಲ್ಲಿ ಬುಧವಾರ ಬೆಳಗ್ಗೆ 7ರಿಂದ ಸಂಜೆ 6ರವರೆಗೂ ಮತದಾನವಾಗಲಿದ್ದು, 685 ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ.

ಇದೇ ವೇಳೆ, ಇತರೆ 15 ರಾಜ್ಯಗಳಲ್ಲಿನ 23 ವಿಧಾನಸಭಾ ಕ್ಷೇತ್ರಗಳು ಹಾಗೂ ಕೇರಳದ ವಯನಾಡು ಸೇರಿದಂತೆ 2 ಲೋಕಸಭಾ ಕ್ಷೇತ್ರಗಳಿಗೆ ಉಪ ಚುನಾವಣೆಯೂ ನಡೆಯಲಿದೆ.

- **ಮೊದಲ ಹಂತ 43 ಕ್ಷೇತ್ರ-685 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ**
- **ವಯನಾಡು ಸೇರಿ 2 ಲೋಕಸಭೆ ಕ್ಷೇತ್ರಗಳಲ್ಲಿ ಉಪ ಚುನಾವಣೆ**
- **15 ರಾಜ್ಯಗಳ 23 ವಿಧಾನಸಭಾ ಕ್ಷೇತ್ರಗಳಲ್ಲೂ ಉಪ ಚುನಾವಣೆ**

ಬುಡಕಟ್ಟು ರಾಜ್ಯ: ಬುಡಕಟ್ಟುಗಳ ರಾಜ್ಯ ಜಾರ್ಖಂಡ್‌ನಲ್ಲಿನ 81 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 2.60 ಕೋಟಿ ಮತದಾರರಲ್ಲಿ ಶೇ.26ರಷ್ಟು ಬುಡಕಟ್ಟು ಜನರೇ ಇದ್ದಾರೆ. ಸದ್ಯ ಮೊದಲ ಹಂತದಲ್ಲಿ 43 ಕ್ಷೇತ್ರಗಳಲ್ಲಿ ಮತದಾನಕ್ಕೆ ಸಿದ್ಧತೆಯಾಗಿದೆ. ನ.23ರಂದು ಮತ ಎಣಿಕೆಗೆ ದಿನ ನಿಗದಿಯಾಗಿದೆ.

ಬಿಜೆಪಿ ಮತ್ತು ಮಾಜಿ ಸಿಎಂ ಚಂಪೈ ಸೊರೇನ್, ಜಾರ್ಖಂಡ್ ವಿಕಾಸ್ ಮೋರ್ಚಾ(ಜೆವಿಎಂ) ಆಲ್ ಜಾರ್ಖಂಡ್ ಸ್ಟುಡೆಂಟ್ಸ್ ಯುನಿಯನ್(ಎಜೆಎಸ್‌ಯು) ಒಗ್ಗೂಡಿ ಜಾರ್ಖಂಡ್ ಚುನಾವಣೆ ಎದುರಿಸುತ್ತಿವೆ. ಇನ್ನೊಂದೆಡೆ, ಆಡಳಿತಾರೂಢ ಪಕ್ಷ, ಮುಖ್ಯಮಂತ್ರಿ ಹೇಮಂತ್ ಸೊರೇನ್ ನೇತೃತ್ವದ ಜಾರ್ಖಂಡ್ ಮುಕ್ತಿ ಮೋರ್ಚಾ(ಜೆಎಂಎಂ), ಕಾಂಗ್ರೆಸ್, ಆರ್‌ಜೆಡಿ ಜತೆಗೂಡಿ 'ಇಂಡಿಯ' ಒಕ್ಕೂಟದ ಭಾಗವಾಗಿ ಸ್ಪರ್ಧೆ ಮಾಡುತ್ತಿವೆ. ಇಂಡಿಯ ಒಕ್ಕೂಟದಿಂದ ಜೆಎಂಎಂ 43 ಕ್ಷೇತ್ರ, ಕಾಂಗ್ರೆಸ್ 30, ಆರ್‌ಜೆಡಿ 6, ಎಡಪಕ್ಷಗಳು 2 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿವೆ.

ಪ್ರಮುಖ ಕ್ಷೇತ್ರಗಳು: ಸೆರೈಕೆಲ್ಲಾ, ರಾಂಚಿ, ಜಮ್‌ಷೆಡ್‌ಪುರ-ಪೂರ್ವ ಮತ್ತು ಪಶ್ಚಿಮ, ಜಗನ್ನಾಥಪುರ ಮೊದಲ ಹಂತದ ಚುನಾವಣೆ ನಡೆಯಲಿರುವ 43 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಮುಖವಾದುದಾಗಿವೆ. ಜಮ್‌ಷೆಡ್‌ಪುರ-ಪಶ್ಚಿಮ ಕ್ಷೇತ್ರದಲ್ಲೇ ಅತ್ಯಧಿಕ ಸಂಖ್ಯೆಯ (28) ಅಭ್ಯರ್ಥಿಗಳಿದ್ದರೆ, ಜಗನ್ನಾಥಪುರ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ ಸಂಖ್ಯೆಯ(8) ಅಭ್ಯರ್ಥಿಗಳಿದ್ದಾರೆ. ರಾಜ್ಯದಲ್ಲಿ ಎನ್‌ಡಿಎ ಮೈತ್ರಿಕೂಟ ಮತ್ತು 'ಇಂಡಿಯ' ಒಕ್ಕೂಟದ ನಡುವೆ ನೇರ ಹಣಾಹಣಿ ನಡೆದಿದೆ.

'ಎನ್‌ಡಿಎ' ವತಿಯಿಂದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಇಂಡಿಯ' ಒಕ್ಕೂಟದಿಂದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಹೇಮಂತ್ ಸೊರೇನ್ ಮೊದಲಾದವರು ಭರ್ಜರಿ ಪ್ರಚಾರ ನಡೆಸಿದ್ದಾರೆ.

ರಾಜಧಾನಿ ರಾಂಚಿಯಿಂದ ಜಾರ್ಖಂಡ್‌ನ ಗುಡ್ಡಗಾಡು ಪ್ರದೇಶಗಳಲ್ಲಿನ ವಿಧಾನಸಭಾ ಕ್ಷೇತ್ರಗಳ ಮತಗಟ್ಟೆಗಳಿಗೆ ಚುನಾವಣಾಧಿಕಾರಿಗಳು ಹೆಲಿಕಾಪ್ಟರ್ ಮೂಲಕ ಮಂಗಳವಾರ ತೆರಳಿದರು.

ದಂಪತಿ ಸ್ಪರ್ಧೆ

ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತು ಪತ್ನಿ ಶಾಸಕಿ ಕಲ್ಪನಾ ಸೊರೇನ್ ಈ ಬಾರಿಯೂ ಚುನಾವಣೆಗೆ ಸ್ಪರ್ಧೆ ಮಾಡಿದ್ದಾರೆ. ಇವರದೇ ಕುಟುಂಬದ ಮಾಜಿ ಮುಖ್ಯಮಂತ್ರಿ, ಚಂಪೈ ಸೊರೇನ್ ಚುನಾವಣೆಯಲ್ಲಿ ಎದುರಾಳಿಯಾಗಿ ಎನ್‌ಡಿಎ ಮೈತ್ರಿಕೂಟದಲ್ಲಿದ್ದಾರೆ.

ಮೌಖಿಕ ಸಲ್ಲಿಕೆ ಬೇಡ, ಅರ್ಜಿ-ಇಮೇಲ್ ಬಳಸಿ

ಸುಪ್ರೀಂ ಕೋರ್ಟ್ ವಕೀಲರಿಗೆ ನೂತನ ಮುಖ್ಯ ನ್ಯಾಯಮೂರ್ತಿ ನಿರ್ದೇಶನ

ದೆಹಲಿ: ಪ್ರಕರಣಗಳ ತುರ್ತು ಪಟ್ಟಿ ಮತ್ತು ವಿಚಾರಣೆಗಳಿಗಾಗಿ ಕೋರಿ ಇನ್ನು ಮುಂದೆ ಮೌಖಿಕ ಸಲ್ಲಿಕೆಗೆ ಅವಕಾಶ ಇರುವುದಿಲ್ಲ. ಏನಿದದರೂ ಲಿಖಿತವಾಗಿಯೇ ಅರ್ಜಿ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ನೂತನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹೇಳಿದ್ದಾರೆ. ಅದಕ್ಕಾಗಿ ಇಮೇಲ್ ಅಥವಾ ಲಿಖಿತ ಪತ್ರಗಳನ್ನು ಕಳುಹಿಸಬಹುದಾಗಿದೆ ಎಂದೂ ಸುಪ್ರೀಂ ಕೋರ್ಟ್‌ನ ವಕೀಲರ ಸಮೂಹಕ್ಕೆ ಸೂಚನೆ ನೀಡಿದ್ದಾರೆ.

ಆಯಾ ದಿನದ ಕೋರ್ಟ್ ಕಲಾಪ, ವಿಚಾರಣೆಯ ಆರಂಭದ ವೇಳೆ, ಸರದಿಯಲ್ಲಿ ಇಲ್ಲದ ವಿಷಯಗಳನ್ನು ತುರ್ತಾಗಿ ವಿಚಾರಣೆಗೆ ತೆಗೆದುಕೊಳ್ಳಲು ಪೀಠವನ್ನು ವಕೀಲರು ಮೌಖಿಕವಾಗಿ ಕೋರಿಕೊಳ್ಳುವುದು ರೂಢಿಯಲ್ಲಿದೆ. ಆದರೆ, ಸಿಜೆ ಐ ಸಂಜೀವ್ ಖನ್ನಾ ಅವರು ಆ ಕ್ರಮದ ಬದಲಾಗಿ ಲಿಖಿತವಾಗಿಯೇ ಕೋರಿಕೆ ಸಲ್ಲಿಸಲು ಮಂಗಳವಾರ ಸೂಚಿಸಿದ್ದಾರೆ.

ನ್ಯಾಯಾಂಗದ ಸುಧಾರಣೆಗಳಿಗಾಗಿ ನಾಗರಿಕ ಕೇಂದ್ರಿತ ಕಾರ್ಯಸೂಚಿಯ ಬಗ್ಗೆ ವಿವರಿಸಿದ ಮುಖ್ಯ ನ್ಯಾಯಮೂರ್ತಿ, ಸಾಮಾನ್ಯ ನಾಗರಿಕರಿಗೆ ಸುಲಭವಾಗಿ ನ್ಯಾಯ ವಿಲೇವಾರಿಯಾಗಲು ಮತ್ತು ನಾಗರಿಕರಿಗೆ ಅವರ ಸ್ಥಾನಮಾನವನ್ನು ಲೆಕ್ಕಿಸದೆ ಸಮಾನತೆ ಒದಗಿಸುವುದು ನ್ಯಾಯಾಂಗದ ಸಾಂವಿಧಾನಿಕ ಕರ್ತವ್ಯವಾಗಿದೆ ಎಂದರು.

ಸಾಮಾನ್ಯ ಜನರಿಗೂ ಅರ್ಥವಾಗುವಂತೆ ತೀರ್ಪು ನೀಡುವುದು, ಮಧ್ಯಸ್ಥಿಕೆ ಪ್ರಕ್ರಿಯೆ ಉತ್ತೇಜಿಸುವುದಕ್ಕೆ ತಮ್ಮ ಆದ್ಯತೆ ಎಂದರು.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆ; ಮಾರಕಾಸ್ತ್ರ, ಮದ್ಯ ವಶ- 105 ಜನ ಬಂಧನ

ಥಾಣೆ: ಮಹಾರಾಷ್ಟ್ರ ವಿಧಾನಸಭೆಯ 288 ಕ್ಷೇತ್ರಗಳಲ್ಲಿಯೂ ನ.20ರಂದು ಒಂದೇ ಹಂತದಲ್ಲಿ ನಡೆಯಲಿರುವ ಚುನಾವಣೆಯ ಭಾಗವಾಗಿ ಬಿಜೆಪಿ, ಕಾಂಗ್ರೆಸ್, ಶಿವಸೇನೆಯ 2 ಬಣಗಳು, ನ್ಯಾಷನಲ್ ಕಾನ್ಫರೆನ್ಸ್ ಕಾಂಗ್ರೆಸ್(ಎನ್‌ಸಿಪಿ) 2 ಬಣಗಳು, ಎಂಎನ್‌ಎಸ್, ಎಐಎಂಐಎಂ, ಸಮಾಜವಾದಿ ಪಕ್ಷ, ಬಿಎಸ್‌ಪಿ, ಸಿಪಿಐ-ಎಂ ಹಾಗೂ ಸ್ಥಳೀಯ ಪಕ್ಷಗಳೂ ಚುನಾವಣಾ ಪ್ರಚಾರದಲ್ಲಿ ಬಿಜಿಯಾಗಿವೆ. ಈ ಮಧ್ಯೆ, ಚುನಾವಣಾ ಪ್ರಚಾರ ಸಂದರ್ಭ ಚುನಾವಣಾ ಆಯೋಗ ರಾಜ್ಯದ ವಿವಿಧೆಡೆ ನಡೆಸಿದ ಅಚ್ಚರಿಯ ದಾಳಿಗಳಲ್ಲಿ ಅಪಾರ ಪ್ರಮಾಣದಲ್ಲಿ ಮಾರಕಾಸ್ತ್ರಗಳು, ಮದ್ಯ ವಶವಾಗಿವೆ. ಈ ಸಂಬಂಧ 105 ಜನರನ್ನೂ ಬಂಧಿಸಲಾಗಿದೆ.

ಕಳೆದೆರಡು ದಿನಗಳಲ್ಲಿ (ಭಾನುವಾರ-ಸೋಮವಾರ ತಡರಾತ್ರಿ) ಮಹಾರಾಷ್ಟ್ರದ ವಿವಿಧೆಡೆ ಚುನಾವಣಾ ಆಯೋಗದ ಅಧಿಕಾರಿಗಳ ಜತೆಗೂಡಿ ಪೊಲೀಸರ ತಂಡ ಕ್ಷಿಪ್ರ ಕಾರ್ಯಾಚರಣೆ ನಡೆಸಿ 43 ಮಾರಕಾಸ್ತ್ರಗಳು, 5 ಲಕ್ಷ ರು. ಮೌಲ್ಯದ ಅಕ್ರಮ ಮದ್ಯವನ್ನು ವಶಪಡಿಸಿಕೊಂಡಿದೆ.

ಶಸ್ತ್ರಾಸ್ತ್ರ ಕಾಯಿದೆಯಡಿ 41 ಜನರನ್ನು ಬಂಧಿಸಲಾಗಿದೆ. ಅಕ್ರಮ ಮದ್ಯ, ಮಾದಕ ಪದಾರ್ಥ ಮಾರಾಟದಲ್ಲಿ ನಿರತರಾಗಿದ್ದ 15 ಮಂದಿಯನ್ನು ಸೆರೆ ಹಿಡಿಯಲಾಗಿದೆ. ವಿವಿಧ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ 105 ಜನರನ್ನೂ ಇದೇ ವೇಳೆ ಬಂಧಿಸಲಾಗಿದೆ ಎಂದು ಥಾಣೆ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಡೆಹರಾಡೂನ್: ಟ್ರಕ್, ಕಾರು ಡಿಕ್ಕಿ, ಆರು ಸಾವು

ಡೆಹರಾಡೂನ್: ಉತ್ತರಾಖಂಡ ರಾಜ್ಯದ ಡೆಹರಾಡೂನ್ ನಗರದಲ್ಲಿ ಕಾರು-ಟ್ರಕ್ ನಡುವಿನ ಅಪಘಾತದಲ್ಲಿ 6 ಮಂದಿ ಸಾವಿಗೀಡಾಗಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಆಯಿಲ್ ಆ್ಯಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್(ಒಎನ್‌ಜಿಸಿ) ಚೌಕ್ ಬಳಿ ಮಂಗಳವಾರ ನಸುಕಿನ 2 ಗಂಟೆಯಲ್ಲಿ ಟ್ರಕ್-ಕಾರು ನಡುವೆ ಅಪಘಾತವಾಗಿದೆ. ಡಿಕ್ಕಿಯ ರಭಸಕ್ಕೆ ಇನ್ನೋವಾ ಕಾರು ಪೂರ್ಣ ನಜ್ಜುಗುಜ್ಜಾಗಿದೆ. ಪರಿಣಾಮ 20ರ ಹರೆಯದ ಮೂವರು ಯುವಕರು, ಮೂವರು ಯುವತಿಯರು ದುರ್ಮರಣಕ್ಕೀಡಾಗಿದ್ದಾರೆ. ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ನಜ್ಜುಗುಜ್ಜಾದ ಕಾರಿನಲ್ಲಿ ಸಿಲುಕಿ ಕೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ 7 ಮಂದಿಯನ್ನೂ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಪಘಾತಕ್ಕೆ ಕಾರಣ ತಿಳಿಯಲು ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಗಾಯಾಳುಗಳಲ್ಲಿ 6 ಮಂದಿ ಕೊನೆಯುಸಿರೆಳೆದರೆ, ಮತ್ತೊಬ್ಬರು ಗಂಭೀರ ಸ್ಥಿತಿಯಲ್ಲಿದ್ದಾರೆ. ಗಾಯಾಳುವನ್ನು ಡೆಹ್ರಾಡೂನ್ ನಿವಾಸಿ ವಿದ್ಯಾರ್ಥಿ ಸಿದ್ಧೇಶ್ ಅಗರ್ವಾಲ್ (24) ಎಂದು ಗುರುತಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಚೆನ್ನೈ ವಿಮಾನ ನಿಲ್ದಾಣದಲ್ಲಿ 19 ಕೆಜಿ ಚಿನ್ನ ವಶ, 25 ಪ್ರಯಾಣಿಕರ ಬಂಧನ

ಚೆನ್ನೈ: ಚೆನ್ನೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಕ್ರಮ ಮಾರ್ಗದಲ್ಲಿ ಬೇರೆ ದೇಶದಿಂದ ಬಂದ 15 ಕೋಟಿ ರು. ಮೌಲ್ಯದ 19.5 ಕೆಜಿ ಚಿನ್ನ ವಶವಾಗಿದೆ.

ತೆರಿಗೆ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಮತ್ತು ಚೆನ್ನೈ ಕಸ್ಟಮ್ ಅಧಿಕಾರಿಗಳ ತಂಡ ಜಂಟಿ ಕಾರ್ಯಾಚರಣೆ ನಡೆಸಿದ್ದು, ಸಿಂಗಾಪುರದಿಂದ ಹೊರಟು ಚೆನ್ನೈಗೆ ಬಂದಿಳಿದ 25 ಪ್ರಯಾಣಿಕರನ್ನು ಬಂಧಿಸಿ, 19.50 ಕಿಲೊ ಚಿನ್ನವನ್ನೂ ವಶಪಡಿಸಿಕೊಂಡಿದೆ.

ಸ್ಕೂಟ್ ಏರ್‌ಲೈನ್ಸ್ ಮತ್ತು ಏರ್ ಇಂಡಿಯ ಹಾಗೂ ಇಂಡಿಗೋ ವಿಮಾನಗಳಲ್ಲಿ ಬಂದಿಳಿದ 25 ಪ್ರಯಾಣಿಕರೂ ಚಿನ್ನ ಕಳ್ಳಸಾಗಣೆದಾರರ ಒಂದೇ ಗ್ಯಾಂಗ್‌ಗೆ ಸೇರಿದವರು. ಗುಪ್ತಚರ ಮಾಹಿತಿ ಆಧರಿಸಿ ನಡೆಸಿದ ಅಚ್ಚರಿದಾಯಕ ಕಾರ್ಯಾಚರಣೆಯಲ್ಲಿ 25 ಪ್ರಯಾಣಿಕರನ್ನು ಬಂಧಿಸಲಾಗಿದೆ. ಅವರಿಂದ ವಶಕ್ಕೆ ಪಡೆದ ಚಿನ್ನ 24 ಕ್ಯಾರೆಟ್ ಗುಣಮಟ್ಟದ್ದಾಗಿದೆ. 19.50 ಕಿಲೊ ಚಿನ್ನವನ್ನು 25 ಮಂದಿಯೂ ಒಳಉಡುಪುಗಳಲ್ಲಿ ಅಡಗಿಸಿಟ್ಟು ಕಳ್ಳಸಾಗಣೆಗೆ ಯತ್ನಿಸಿ ಸಿಕ್ಕಿಬಿದ್ದಿದ್ದಾರೆ.

ಸಿಂಗಾಪುರ ವಿಮಾನ ನಿಲ್ದಾಣದಲ್ಲಿ ಅಪರಿಚಿತ ವ್ಯಕ್ತಿಗಳು ಚಿನ್ನವನ್ನು ನೀಡಿ, ಚೆನ್ನೈಗೆ ಸಾಗಿಸಲು ಹಣ ಕೊಟ್ಟರು ಎಂದು ಬಂಧಿತರೆಲ್ಲರೂ ವಿಚಾರಣೆ ವೇಳೆ ಒಂದೇ ರೀತಿ ಉತ್ತರ ನೀಡಿದ್ದಾರೆ.

ವಾಯುಮಾಲಿನ್ಯ; ಜನರ ಸಂಚಾರಕ್ಕೆ ನಿರ್ಬಂಧ

ಇಸ್ಲಾಮಾಬಾದ್: ವಾಯುಮಾಲಿನ್ಯ ಪಾಕಿಸ್ತಾನದಲ್ಲಿ ದಿನೇ ದಿನೇ ಹೆಚ್ಚುತ್ತಿದ್ದು, ಜನರು ಹಲವಾರು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಹಾಗಾಗಿ ಪಾಕ್ ಸರಕಾರ ಜನರ ಸಂಚಾರದ ಮೇಲೆ ಮಿತಿ ಹೇರಿದೆ.

ಪಂಜಾಬ್ ಪ್ರಾಂತ್ಯದಲ್ಲಿ ಹೆಚ್ಚಿನ ಹೊರಾಂಗಣ ಚಟುವಟಿಕೆ ನಿಷೇಧಿಸಲಾಗಿದೆ. ತೀವ್ರ ಸ್ವರೂಪದ ವಾಯುಮಾಲಿನ್ಯದಿಂದ ಉಂಟಾಗುವ ಕಾಯಿಲೆಗಳನ್ನು ತಡೆಯಲು ಕೆಲ ಪ್ರದೇಶಗಳಲ್ಲಿ ಅಂಗಡಿ, ಮಾಲ್‌ಗಳು ಸೇರಿದಂತೆ ಮಾರುಕಟ್ಟೆಗಳನ್ನು ಮುಚ್ಚಲು ಆದೇಶಿಸಿದೆ. ಜನರು ಹೊರಗಡೆ ಹೆಚ್ಚು ಓಡಾಡದಂತೆ ಕ್ರಮ ವಹಿಸಲಾಗಿದೆ. ನ.17ರ ವರೆಗೆ ಶಿಕ್ಷಣ ಸಂಸ್ಥೆಗಳು ಮತ್ತು ಉದ್ಯಾನ ಮತ್ತು ಪ್ರಾಣಿಸಂಗ್ರಹಾಲಯ ಮೊದಲಾದ ಸಾರ್ವಜನಿಕ ಸ್ಥಳ ಬಂದ್ ಮಾಡಿಸಲಾಗಿದೆ.

ಖ್ಯಾತ ಚಲನಚಿತ್ರ ನಿರ್ದೇಶಕ ಆರ್‌ಜಿವಿ ವಿರುದ್ಧ ಎಫ್‌ಐಆರ್

ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು-ಕುಟುಂಬ, ಡಿಸಿಎಂ ಪಿಕೆ ಫೋಟೊ ತಿರುಚಿ ಮಾನಹಾನಿ

ವಿವಾದಗಳಿಂದಲೇ ಹೆಚ್ಚು ಸುದ್ದಿಯಲ್ಲಿರುವ ಖ್ಯಾತ ಚಲನಚಿತ್ರ ನಿರ್ದೇಶಕ ರಾಮ್ ಗೋಪಾಲ್ ವರ್ಮಾ ವಿರುದ್ಧ ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯ ಮಡ್ಡಿಪಾಡು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ತಿರುಚಿದ ಫೋಟೋಗಳನ್ನು ಆರ್‌ಜಿವಿ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಆ ಕಾರಣಕ್ಕಾಗಿ ಅಪರಾಧ ಪ್ರಕರಣವನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಟಿಡಿಪಿ ಮುಖಂಡ ರಾಮಲಿಂಗಂ ಅವರು ನೀಡಿದ ದೂರಿನ ಮೇರೆಗೆ ಪ್ರಕಾಶಂ ಜಿಲ್ಲೆಯ ಮಡ್ಡಿಪಾಡು ಪೊಲೀಸ್ ಠಾಣೆಯಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಭಾನುವಾರ ರಾತ್ರಿ ಪ್ರಕರಣ ದಾಖಲಿಸಲಾಗಿದೆ.

ಸಿಎಂ ನಾಯ್ಡು, ಅವರ ಪುತ್ರ ನಾರಾ ಲೋಕೇಶ್, ಸೊಸೆ ಬ್ರಹ್ಮಿಣಿ ಮತ್ತು ತೆಲುಗು ದೇಶಂ ಪಕ್ಷದ (ಟಿಡಿಪಿ) ನಾಯಕರು

ಹಾಗೂ ಜನಸೇನಾ ಪಕ್ಷದ ಮುಖ್ಯಸ್ಥ, ಡಿಸಿಎಂ-ನಟ ಪವನ್ ಕಲ್ಯಾಣ್ ಫೋಟೊಗಳನ್ನು ಅವಮಾನವಾಗುವಂತೆ ಮಾರ್ಫಿಂಗ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ ಎಂಬುದು ರಾಮ್‌ಗೋಪಾಲ್ ವರ್ಮಾ ವಿರುದ್ಧದ ಆರೋಪ.

ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಜತೆ ನಿಕಟ ಸಂಬಂಧ ಹೊಂದಿರುವ ವರ್ಮಾ, ಹೆಚ್ಚಾಗಿ ನಾಯ್ಡು ವಿರುದ್ಧ ತಮ್ಮ ಸಿನಿಮಾಗಳಲ್ಲೂ ಟೀಕೆ, ವ್ಯಂಗ್ಯ ಮಾಡುತ್ತಿರುತ್ತಾರೆ ಎಂಬ ಮಾತುಗಳೂ ಇವೆ.

ಬಾಂಗ್ಲಾದೇಶಿಗಳ ಒಳನುಸುಳುವಿಕೆ; ಜಾರ್ಖಂಡ್, ಪ.ಬಂ. ಇ.ಡಿ ದಾಳಿ

ರಾಂಚಿ: ಬಾಂಗ್ಲಾದೇಶೀಯರು ಭಾರತದೊಳಕ್ಕೆ ನುಸುಳಿಕೊಂಡು ಬರುತ್ತಿರುವ ಪ್ರಕರಣಗಳಲ್ಲಿ ಅಕ್ರಮ ಹಣ ವರ್ಗಾವಣೆ ನಡೆದಿರುವ ಬಗ್ಗೆ ಸುಳಿವು ಪಡೆದಿರುವ ಜಾರಿ ನಿರ್ದೇಶನಾಲಯ(ಇ.ಡಿ) ಪಶ್ಚಿಮ ಬಂಗಾಳ ಮತ್ತು ಜಾರ್ಖಂಡ್ ರಾಜ್ಯಗಳ ಹಲವೆಡೆ ಮಂಗಳವಾರ ದಾಳಿ ನಡೆಸಿ ತೀವ್ರ ಶೋಧ ನಡೆಸಿದೆ.

43 ಕ್ಷೇತ್ರಗಳಲ್ಲಿ ಮೊದಲ ಹಂತದ ಮತದಾನಕ್ಕೆ ಸಜ್ಜಾಗಿರುವ ಜಾರ್ಖಂಡ್‌ನಲ್ಲಿ ಚುನಾವಣೆಗೆ ಒಂದು ದಿನ ಮೊದಲಷ್ಟೇ ಇ.ಡಿ.ಯ ರಾಂಚಿ ಕಚೇರಿಯ ಅಧಿಕಾರಿಗಳು ಎರಡೂ ನೆರೆ ಹೊರೆ ರಾಜ್ಯಗಳಲ್ಲಿನ ಒಟ್ಟು 17 ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ.

ಇ.ಡಿ ಅಧಿಕಾರಿಗಳ ತಂಡ ರಾಂಚಿ ಬರಿಯಾಟು ರಸ್ತೆಯ ಹೋಟೆಲ್ ಮತ್ತು ನಗರದ ರೆಸಾರ್ಟ್‌ನ ಹೊರಗೆ ಸಿಆರ್‌ಪಿಎಫ್ ಯೋಧರು ಭದ್ರತೆಗೆ ನಿಯೋಜನೆಗೊಂಡಿದ್ದ ದೃಶ್ಯಗಳನ್ನು ಮಾಧ್ಯಮ ತಂಡಗಳು ಸೆರೆಹಿಡಿದಿವೆ.

ಬಾಂಗ್ಲಾದೇಶಿ ಮಹಿಳೆಯರನ್ನು ಜಾರ್ಖಂಡ್‌ಗೆ ಕಳ್ಳಸಾಗಣೆ ಮಾಡಲಾಗುತ್ತಿದೆ ಎಂಬ ಆರೋಪಗಳಡಿ ಲಂಚ ಪ್ರಕರಣ ತನಿಖೆಗೆ ಇ.ಡಿ ಸೆಪ್ಟೆಂಬರ್‌ನಲ್ಲಿ ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ಪ್ರಕರಣ ದಾಖಲಿಸಿದೆ.

ಸಂತಾಲ್ ಪರಗಣ ಮತ್ತು ಕೊಲ್ಹಾನ್ ಪ್ರದೇಶಗಳಲ್ಲಿನ ಬುಡಕಟ್ಟು ಜನರ ಪ್ರಾಬಲ್ಯವನ್ನು ಬದಲಿಸಲೆಂದೇ ಸರಕಾರ ಇಂಥ ಒಳನುಸುಳುವಿಕೆಗೆ ಸಹಾಯ ಮಾಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಇತರ ಬಿಜೆಪಿ ನಾಯಕರು ಆರೋಪಿಸಿದ್ದಾರೆ.

ಆಡಳಿತಾರೂಢ ಜೆಎಂಎಂ ನೇತೃತ್ವದ ಒಕ್ಕೂಟ ಜಾರ್ಖಂಡ್ ರಾಜ್ಯವನ್ನು ರೋಹಿಂಗ್ಯಾ ಮತ್ತು ಬಾಂಗ್ಲಾದೇಶಿ ನುಸುಳುಕೋರರ ಧರ್ಮಶಾಲೆಯನ್ನಾಗಿಸುತ್ತಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆರೋಪಿಸಿದ್ದಾರೆ.

ಮೈಕ್ ವಾಲ್ಟ್ಜ ಅಮೆರಿಕ ರಾಷ್ಟ್ರೀಯ ಭದ್ರತೆ ಸಲಹೆಗಾರ

ವಾಷಿಂಗ್ಟನ್: ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚುನಾವಣೆ ಗೆದ್ದಾಗಿನಿಂದಲೂ ಅಚ್ಚರಿದಾಯಕ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಆರಂಭಿಸಿದ್ದಾರೆ. ಚೀನಾ ಮೂಲೆಗುಂಪು ಮಾಡಲು ಪೂರ್ಣ ತಯಾರಿ ನಡೆಸಿದ್ದಾರೆ. ಅಮೆರಿಕದ ನಿವೃತ್ತ ಸೇನಾ ರಾಷ್ಟ್ರೀಯ ಗಾರ್ಡ್ ಅಧಿಕಾರಿ ಮೈಕ್ ವಾಲ್ಟ್ಜ ಅವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನಾಗಿ ನೇಮಿಸಿದ್ದಾರೆ.

ಫ್ಲೋರಿಡಾ ರಾಜ್ಯದ ರಿಪಬ್ಲಿಕನ್ ಪಕ್ಷದ ನಾಯಕ ಮೈಕ್ ವಾಲ್ಟ್ಜ ಟ್ರಂಪ್ ಅವರ ಕಟ್ಟಾ ಬೆಂಬಲಿಗ. ಅಫ್ಘಾನಿಸ್ತಾನದಲ್ಲಿ ಹಲವು ವರ್ಷ ಸೇವೆ ಸಲ್ಲಿಸಿದ್ದಾರೆ. ಪೆಂಟಗನ್‌ನಲ್ಲಿ ಎರಡು ಬಾರಿ ನೀತಿ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ.

ಶಕ್ತಿಶಾಲಿ ಹುದ್ದೆಯಾದ ರಾಷ್ಟ್ರೀಯ ಭದ್ರತಾ ಸಲಹೆಗಾರ ಸ್ಥಾನಕ್ಕೆ ಸೆನೆಟ್ ಅನುಮೋದನೆ ಅಗತ್ಯವಿಲ್ಲ. ವಾಲ್ಟ್ಜ ಪ್ರಮುಖ ರಾಷ್ಟ್ರೀಯ ಭದ್ರತಾ ವಿಷಯಗಳ ಕುರಿತು ಟ್ರಂಪ್‌ಗೆ ಮಾಹಿತಿ ನೀಡಬೇಕಿರುತ್ತದೆ. ವಿವಿಧ ಭದ್ರತಾ ಏಜೆನ್ಸಿಗಳನ್ನು ಸಮನ್ವಯಗೊಳಿಸಲು ಜವಾಬ್ದಾರರಾಗಿರುತ್ತಾರೆ.

ಅವರು ಅಮೆರಿಕದಲ್ಲಿ ಇಂಡಿಯನ್ ಕಾಕಸ್‌ನ ಸಹ-ಅಧ್ಯಕ್ಷರಾಗಿದ್ದಾರೆ. 2023ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಭೇಟಿ ಸಂದರ್ಭ ಕ್ಯಾಪಿಟಲ್ ಹಿಲ್‌ನಲ್ಲಿ ಮೋದಿ ಭಾಷಣ ಕಾರ್ಯಕ್ರಮ ವ್ಯವಸ್ಥೆಯಲ್ಲಿ ವಾಲ್ಟ್ಜ ಪಾತ್ರ ಪ್ರಮುಖವಾಗಿತ್ತು. ಅಲ್ಲದೇ, ರಕ್ಷಣಾ ಕ್ಷೇತ್ರದಲ್ಲಿ ಭಾರತ-ಅಮೆರಿಕ ನಡುವಿನ ಸಹಕಾರ ಮತ್ತಷ್ಟು ಹೆಚ್ಚಬೇಕು ಎಂಬುದು ಮೈಕ್ ನಿಲುವಾಗಿದೆ ಎಂಬ ಅಂಶ ಗಮನಾರ್ಹ.

ಜಿರಿಬಾಮಲ್ಲಿ 2 ಶವ ಪತ್ತೆ; ಮಣಿಪುರದಲ್ಲಿ ನಿಷೇಧಾಜ್ಞೆ

ಇಂಫಾಲ: ಮಣಿಪುರ ರಾಜ್ಯದ ಜಿರಿಬಾಮ್ ಜಿಲ್ಲೆಯಲ್ಲಿ ಮಂಗಳವಾರ ಬೆಳಗ್ಗೆ ಇಬ್ಬರು ವೃದ್ಧರ ಮೃತದೇಹಗಳು ಪತ್ತೆಯಾಗಿವೆ.

ಕುಕಿ ಉಗ್ರರು ಜಕುರಾಧೋರ್ ಕರೋಂಗ್ ಪ್ರದೇಶದಲ್ಲಿ ಸೋಮವಾರ ಕೆಲ ಅಂಗಡಿಗಳಿಗೆ ಬೆಂಕಿ ಹಚ್ಚಿದ ಸಂದರ್ಭ ಲೈಶ್ರಾಮ್ ಬಾಲೆನ್ ಮತ್ತು ಮೈಬಮ್ ಕೇಶೋ ಮೃತಪಟ್ಟಿರಬೇಕು ಎಂದು ಅಂದಾಜು ಮಾಡಲಾಗಿದೆ.

ಇನ್ನೂ ಐವರು ನಾಪತ್ತೆಯಾಗಿದ್ದು, ಅವರ ಶೋಧಕ್ಕೆ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭದ್ರತಾ ಪಡೆಗಳೊಂದಿಗೆ ಸೋಮವಾರ ನಡೆದ ಗುಂಡಿನ ಚಕಮಕಿಯಲ್ಲಿ 11 ಕುಕಿ ಉಗ್ರರು ಹತರಾಗಿದ್ದರು. ಉಗ್ರರ ಸಾವು ಖಂಡಿಸಿ ಬೆಟ್ಟಗಳ ಕುಕಿ-ಜೋ ಬಹುಸಂಖ್ಯಾತ ಪ್ರದೇಶಗಳಲ್ಲಿ ಮಂಗಳವಾರ ಬೆಳಗ್ಗೆ 5ರಿಂದಲೇ ಬಂದ್ ನಡೆಸಲಾಗಿದೆ. ಈ ಪ್ರದೇಶದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿಗೊಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರದಲ್ಲಿ ಉಗ್ರರ ಧಮನ ಕಾರ್ಯಾಚರಣೆ ಮುಂದುವರಿದಿದೆ. ಅಸ್ಸಾಂ ರೈಫಲ್ಸ್, ಸಿಆರ್‌ಪಿಎಫ್ ಮತ್ತು ಪೊಲೀಸರನ್ನೊಳಗೊಂಡ ಬಲವರ್ಧನೆ ತಂಡಗಳು ಸ್ಥಳಕ್ಕೆ ಧಾವಿಸಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಸೋಮವಾರ ಸಂಜೆ ಇಂಫಾಲ್ ಪಶ್ಚಿಮ ಮತ್ತು ಇಂಫಾಲ ಪೂರ್ವ ಜಿಲ್ಲೆಗಳ ವಿವಿಧ ಗ್ರಾಮಗಳಿಂದ ಹಿಂಸಾತ್ಮಕ ಘರ್ಷಣೆಗಳು ವರದಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಭ್ರಷ್ಟಾಚಾರದ ಕೂಪದಲ್ಲಿ ಸಿಎಂ

ಬೆಂಗಳೂರು: ಕಾಂಗ್ರೆಸ್ ಸರಕಾರ 38 ಇಲಾಖೆಗಳಲ್ಲಿ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಮುಖ್ಯಮಂತ್ರಿ ಭ್ರಷ್ಟಾಚಾರದ ಕೂಪದಲ್ಲಿ ಕುಳಿತಿದ್ದಾರೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು. ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಖ್ಯಮಂತ್ರಿಗಳ ಕುಟುಂಬ ಮುಡಾದ 14 ನಿವೇಶನ ವಾಪಸ್ ಮಾಡಿದ್ದು, ಪ್ರಿಯಾಂಕ್ ಖರ್ಗೆಯವರು 5 ಎಕರೆ ವಾಪಸ್ ಮಾಡಿದ್ದರಿಂದ ಭ್ರಷ್ಟಾಚಾರ ಸಾಬೀತಾಗಿದೆ. ಅದರ ತನಿಖೆ ಏನಿದ್ದರೂ ನಿಮ್ಮ ಕಸರತ್ತು ಅಷ್ಟೇ ಎಂದು ವ್ಯಂಗ್ಯವಾಡಿದರು. ಸಿಎಂ ಸಿದ್ದರಾಮಯ್ಯ ಮಾತನಾಡುವಾಗ ಪ್ರಧಾನಿಯವರ ಯೋಗ್ಯತೆ, ತಮ್ಮ ಯೋಗ್ಯತೆ ಅರ್ಥ ಮಾಡಿಕೊಳ್ಳಬೇಕು. ವಯಸ್ಸು, ಅಧಿಕಾರದಲ್ಲಿ ನೀವು ಅವರ ಮಟ್ಟಕ್ಕಿದ್ದರೆ ಅವರನ್ನು ಪ್ರಶ್ನೆ ಮಾಡುವುದರಲ್ಲಿ ಅರ್ಥವಿದೆ. ಸಣ್ಣಸಣ್ಣ ವ್ಯಕ್ತಿಗಳೂ ಪ್ರಧಾನಮಂತ್ರಿಯನ್ನು ಕೀಳು ಭಾಷೆಯಲ್ಲಿ ಮಾತನಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಮದ್ಯ ಮಾರಾಟಗಾರರ ಸಂಘದವರು ಇತ್ತೀಚಿಗೆ ಆಪಾದನೆ ಮಾಡಿ, 500 ಕೋಟಿ ರು.ಗಳಷ್ಟು ಹಣ ಅಬಕಾರಿ ಸಚಿವರು ವಸೂಲಿ ಮಾಡಿದ್ದಾರೆಂದು ಹೇಳಿದ್ದಾರೆ. ಬಳಿಕ ಸುಲಿಗೆ ನಮ್ಮ ಗಮನಕ್ಕೂ ಬಂದಿದ್ದು, 700 ಕೋಟಿ ರು. ಲೂಟಿಯಾಗಿದೆ ಎಂದು ನಾವು ತಿಳಿಸಿದ್ದೆವು. ಇದು ಚುನಾವಣೆ ನಡೆ ಯುವ ಕಾರಣ ನಡೆದಿದೆ. ಈ ವಿಚಾರ ನಮ್ಮ ಪ್ರಧಾನಿ ಗಳು ಮಹಾರಾಷ್ಟ್ರದ ಚುನಾವಣೆ ಪ್ರಚಾರದ ಸಂದರ್ಭದಲ್ಲಿ ತಿಳಿಸಿದ್ದಾರೆ ಎಂದರು.

ಬಿಡಿಎ: 42 ಕೋಟಿ ರುಪಾಯಿ ಆಸ್ತಿ ವಶ

ಬೆಂಗಳೂರು: ಬಿಟಿಎಂ ಬಡಾವಣೆಯಲ್ಲಿ ಅನಧಿಕೃತ ಶೆಡ್ ತೆರವುಗೊಳಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ)ಸುಮಾರು 42 ಕೋಟಿ ಆಸ್ತಿ ವಶಪಡಿಸಿಕೊಂಡಿದೆ. ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಬಿಳೇಕಹಳ್ಳಿ ಗ್ರಾಮದ ಸರ್ವೆ ನಂ. 172/2ಎ ಮತ್ತು 172/3 ರಲ್ಲಿನ 23200 ಚದರ ಅಡಿಯ ಪ್ರದೇಶದಲ್ಲಿ ಅನಧಿಕೃವಾಗಿ ನಿರ್ಮಾಣವಾಗಿದ್ದ ಶೆಡ್ ಅನ್ನು ತೆರವುಗೊಳಿಸಿ, ಸುಮಾರು 42 ಕೋಟಿ ಬೆಲೆ ಬಾಳುವ ಪ್ರದೇಶ ವಶಪಡಿಸಿಕೊಂಡಿದೆ. ಕಾರ್ಯಾಚರಣೆಯನ್ನು ಬಿಡಿಎ ದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ದಕ್ಷಿಣ ವಿಭಾಗದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ನೆರವೇರಿಸಲಾಗಿದೆ.

50 ಕೋಟಿ ಜನ ಕೇಂದ್ರ ಆರೋಗ್ಯ ವಿಮೆ ವ್ಯಾಪ್ತಿಗೆ

ಬೆಂಗಳೂರು: ಆರೋಗ್ಯವಂತ ಭಾರತ ನಿರ್ಮಾಣಕ್ಕೆ ಪ್ರಧಾನಿ ಮೋದಿ ನಾಯಕತ್ವದಲ್ಲಿ ಬಹುದೊಡ್ಡ ಕ್ರಾಂತಿ ಆಗಿದ್ದು, ಆರೋಗ್ಯ ವಿಮೆ ವ್ಯಾಪ್ತಿಗೆ 500 ದಶಲಕ್ಷ ಜನರು ಪ್ರಯೋಜನ ದಾರರಾಗಿದ್ದಾರೆ ಎಂದು ಕೇಂದ್ರದ ಭಾರೀ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ ಘಟಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಳೆದ 10 ವರ್ಷಗಳ ಅವಧಿಯಲ್ಲಿ ಭಾರತ ಆರೋಗ್ಯ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ಕಂಡಿದ್ದು, ಶ್ರೀಸಾಮಾನ್ಯನಿಗೂ ಅತ್ಯಂತ ಸುಲಭ ದರದಲ್ಲಿ ಆರೋಗ್ಯ ಸೇವೆ ಲಭ್ಯವಾಗುತ್ತಿದೆ. ಪ್ರಧಾನಿಗಳ ಸಾಮಾಜಿಕ ಕಾಳಜಿ ಹಾಗೂ ದೂರದೃಷ್ಟಿಯಿಂದ ಇದೆಲ್ಲ ಸಾಧ್ಯವಾಗಿದೆ ಎಂದರು. ನರೇಂದ್ರ ಮೋದಿ ನಾಯಕತ್ವದಲ್ಲಿ ದೇಶದಲ್ಲಿ ಆರೋಗ್ಯ ವ್ಯವಸ್ಥೆ ಅತ್ಯಂತ ಬಲಿಷ್ಠವಾಗಿ ಬೆಳೆದಿದ್ದು, ದೇಶದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಬೆನ್ನೆಲುಬಾಗಿ ಕೆಲಸ ಮಾಡುತ್ತಿದೆ. ಪ್ರತಿಯೊಬ್ಬ ನಾಗರಿಕನಿಗೂ ಅತ್ಯಂತ ಗುಣಮಟ್ಟದ ಸೇವೆ ದೊರೆಯುತ್ತಿದೆ ಎಂದರು.

ವಿಶ್ವದ ಅತಿದೊಡ್ಡ ಯೋಜನೆ: ಕಳೆದ 10 ವರ್ಷಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಅನೇಕ ಸುಧಾರಣೆ ಜಾರಿಗೆ ಬಂದಿದ್ದು, ಅದರಲ್ಲಿ ಆಯು ಷ್ಮಾನ್ ಭಾರತ್ ಜಗತ್ತಿನಲ್ಲಿಯೇ ಅತಿದೊಡ್ಡ ಆರೋಗ್ಯ ಸೇವಾ ಯೋಜನೆಯಾಗಿದೆ. ದೇಶದ 500 ದಶಲಕ್ಷ ಜನರು ಆರೋಗ್ಯ ವಿಮೆ ವ್ಯಾಪ್ತಿಗೆ ಬಂದಿದ್ದು, ಜತೆಗೆ, ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ, ಪಿಎಂ ಆತ್ಮನಿರ್ಭರ್ ಸ್ವಾಸ್ಥ ಭಾರತ್ ಯೋಜನೆ, ಡಿಜಿಟಲ್ ಆರೋಗ್ಯ ಮಿಷನ್, ಮಿಶನ್ ಇಂದ್ರ ಧನುಷ್, ಜನೌಷಧಿ ಕೇಂದ್ರಗಳ ಸ್ಥಾಪನೆ ಸೇರಿದಂತೆ ಅನೇಕ ಕಾರ್ಯಕ್ರಮ ಜಾರಿ ಮಾಡಲಾಗಿದೆ ಎಂದರು

{ಯೋಗಿ ಅದಿತ್ಯನಾಥ್} ಉ.ಪ್ರ. ಸಿಎಂ

ಹೈದರಾಬಾದ್ ನಿಜಾಮದ ಆಡಳಿತ ಕಾಲದಲ್ಲಿ ರಜಾಕರಿಂದಲೇ ಮಲ್ಲಿಕಾರ್ಜುನ ಖರ್ಗೆ ಕುಟುಂಬದವರ ಸಾಮೂಹಿಕ ಹತ್ಯೆಯಾಗಿದೆ. ಆದರೆ ಮುಸ್ಲಿಂ ಮತಗಳಿಗಾಗಿ ಖರ್ಗೆ ಅವರು ಆ ಬಗ್ಗೆ ಈಗ ಏನನ್ನೂ ಮಾತನಾಡುವುದಿಲ್ಲ. ಅವರಿಗೆ ಕುಟುಂಬದವರ ಬಲಿದಾನಕ್ಕಿಂತಲೂ ಮತ ಬ್ಯಾಂಕ್ ಓಲೈಕೆಯೇ ಮುಖ್ಯವಾಗಿದೆ.

ಸಮಾರಂಭದಲ್ಲಿ 35 ಸಾವಿರಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸುವ ನಿರೀಕ್ಷೆ: ರಾಜಣ್ಣ

14ರಿಂದ ಅಖಿಲ ಭಾರತ ಸಹಕಾರ ಸಪ್ತಾಹ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಹಕಾರಿಗಳಲ್ಲಿ ಅರಿವು

ಏಳು ದಿನ ನಡೆಯುವ ಸಪ್ತಾಹದ ಅವಧಿಯಲ್ಲಿ ಸಹಕಾರ ಚಳವಳಿಯ ಸಾಧನೆ-ವೈಫಲ್ಯಗಳ ಕುರಿತು ಜನರಿಗೆ ಮನವರಿಕೆ ಮಾಡಿಕೊಡುವುದು ಸೇರಿದಂತೆ ಸಪ್ತಾಹಕ್ಕೆ ರಾಷ್ಟ್ರೀಯ ಸಹಕಾರ ಯೂನಿಯನ್ ನೀಡಿರುವ ಧ್ಯೇಯದೊಂದಿಗೆ ತಜ್ಞ ಉಪನ್ಯಾಸಕರಿಂದ 7 ದಿನಗಳ ವಿಷಯಗಳ ಕುರಿತು ರಾಜ್ಯಮಟ್ಟದ ಕಾರ್ಯಕ್ರಮಗಳಲ್ಲಿ ಮತ್ತು ಜಿಲ್ಲಾ ಸಹಕಾರ ಯೂನಿಯನ್ ಏರ್ಪಡಿಸುವ ಜಿಲ್ಲಾ ಮಟ್ಟದ ಕಾರ್ಯಕ್ರಮಗಳಲ್ಲಿ ಉಪನ್ಯಾಸ ಏರ್ಪಡಿಸಿ ಕ್ಷೇತ್ರದ ಬೆಳವಣಿಗೆಯ ಕುರಿತು ಸಹಕಾರಿಗಳಲ್ಲಿ ಜಾಗೃತಿ ಅರಿವು ಮೂಡಿಸಲಾಗುವುದು ಎಂದರು.

ಅಖಿಲ ಭಾರತ ಸಹಕಾರ ಸಪ್ತಾಹ ನವೆಂಬರ್ 14 ರಿಂದ 20 ರವರೆಗೆ ಆಚರಿಸಲಾಗುತ್ತಿದ್ದು, ಸಹಕಾರ ಸಪ್ತಾಹದ ಅವಧಿಯಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆ, ಅದರ ಸಾಧನೆ- ವೈಫಲ್ಯಗಳ ಬಗ್ಗೆ ಅವಲೋಕನ ನಡೆಸಲು ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಹಕಾರ ಸಚಿವ ಕೆ.ಎನ್ ರಾಜಣ್ಣ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮಾರಂಭದಲ್ಲಿ 35000 ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸುವರೆಂಬ ನಿರೀಕ್ಷೆ ಇದ್ದು, ಸಹಕಾರ ಕ್ಷೇತ್ರದಲ್ಲಿ ಮುಂದಿನ ತಲೆಮಾರಿನ ಸಹಕಾರಿ ನಾಯಕತ್ವದ ಗುಣಗಳೊಂದಿಗೆ ಸಜ್ಜುಗೊಳಿಸಲು ಜಿಲ್ಲಾ ಸಹಕಾರ ಯೂನಿಯನ್ ಮತ್ತು 8 ಸಹಕಾರ ತರಬೇತಿ ಕೇಂದ್ರಗಳ ಮೂಲಕ ಅಗತ್ಯ ಸಹಕಾರ ಶಿಕ್ಷಣ, ತರಬೇತಿ ನೀಡಲಾಗುತ್ತಿದೆ ಎಂದರು.

ಸಹಕಾರ ಚಳವಳಿ ಬಲಪಡಿಸಲು ಸಹಕಾರ ಸಂಸ್ಥೆಗೆ ಸರಕಾರ ಅಗತ್ಯ ಮಾರ್ಗದರ್ಶನ ನೀಡುತ್ತಿದ್ದು, ರೈತರ ಅಭಿವೃದ್ಧಿಗಾಗಿ ಈ ವರ್ಷ 36 ಲಕ್ಷ ರೈತರಿಗೆ 27 ಸಾವಿರ ಕೋಟಿಗಳ ಬೆಳೆ ಸಾಲದ ಗುರಿ ಇರಿಸಿಕೊಂಡಿದೆ. ಸಹಕಾರ ಸಂಸ್ಥೆಗಳಲ್ಲಿ ಸದಸ್ಯರು ಮತ್ತು ಅವಲಂಬಿತ ಕುಟುಂಬದ ಸದಸ್ಯರಿಗೆ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಅನುಷ್ಠಾನಗೊಳಿಸಿ, ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ. ಈಗಾಗಲೇ 41 ಲಕ್ಷ ಸದಸ್ಯರ ನೋಂದಣಿ ಗುರಿ ನಿಗದಿಪಡಿಸಲಾಗಿದೆ ಎಂದರು.

ರಾಜ್ಯಮಟ್ಟದ ಕಾರ್ಯಕ್ರಮ ನವೆಂಬರ್ 14 ರಂದು ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಉದ್ಘಾಟಿಸಲಾಗುವುದು. ನವೆಂಬರ್ 15 ರಂದು ಚಿತ್ರದುರ್ಗದಲ್ಲಿ, ನವೆಂಬರ್ 16 ರಂದು ಮಂಗಳೂರಿನಲ್ಲಿ, ನವೆಂಬರ್ 17 ರಂದು ಬಾಗಲಕೋಟೆಯಲ್ಲಿ ನಡೆಯುವ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಸಾಧಕರಿಗೆ ಸಹಕಾರರತ್ನ ಪ್ರಶಸ್ತಿ ನೀಡಲಿದ್ದಾರೆ.

ನವೆಂಬರ್ 18 ರಂದು ಬೀದರ್‌ನಲ್ಲಿ, ನವೆಂಬರ್ 19 ರಂದು ಚಿಕ್ಕಮಗಳೂರಿನಲ್ಲಿ ಮತ್ತು ನವೆಂಬರ್ 20 ರಂದು ಬೆಳಗಾವಿಯಲ್ಲಿ ಸಮಾರೋಪ ಸಮಾರಂಭ ಏರ್ಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಬೆಂಗಳೂರು: 66/11ಕೆ.ವಿ ಶೋಡೇಸ್ ಗ್ಲಾಸ್ ಫ್ಯಾಕ್ಟರಿ ವಿವಿ ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಬೆಳಗ್ಗೆ 10.00 ರಿಂದ 3.00 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ನಗರದ ತಲಘಟ್ಟಪುರ, ಅಂಜನಾಪುರ. ಅವಲಹಳ್ಳಿ, ರಾಘವನಪಾಳ್ಯ, ರಾಯಲ್ ಪಾರ್ಕ್ ಸಾರತಿ ನಗರ. ನಾಗೇಗೌಡನ ಪಾಳ್ಯ, ಶೋಭಾ ಅಪಾರ್ಟ್‌ಮೆಂಟ್ ,ನಾರಾಯಣನಗರ 1ನೇ ಮತ್ತು 2ನೇ ಬ್ಲಾಕ್, ದೀಕ್ಷ ಕಾಲೇಜ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

66/11 ಕೆ.ವಿ ಹೆಣ್ಣೂರು ರೋಡ್ ಉಪ-ಕೇಂದ್ರದಲ್ಲಿ ತುರ್ತುನಿರ್ವಹಣಾ ಕೆಲಸಗಳನ್ನು ನಿರ್ವಹಿಸುವು ದರಿಂದ ಹೆಣ್ಣೂರು ಬಂಡೆ, ಸಮುದ್ರಿಕಾ ಎನ್‌ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ಟ್ ಜಯಂತಿ ಕಾಲೇಜ್, ಕೆ.ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್ ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್ ಶಿಪ್, ನಗರಗಿರಿ ಟೌನ್‌ಶಿಪ್, ಕೆ.ನಾರಾಯಣಪುರ ಕ್ರಾಸ್, ಬಿ.ಡಿ.ಎಸ್. ಗಾರ್ಡನ್, ಕೊತನೂರು, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಂವಾದ ಕಾರ್ಯಕ್ರಮದಲ್ಲಿ ಇಸ್ರೋ ಅಧ್ಯಕ್ಷ ಸೋಮನಾಥ್ ಅಭಿಪ್ರಾಯ

ಟೆಲಿಸ್ಕೋಪ್ ವಿಜ್ಞಾನಕ್ಕೆ ಉತ್ತಮ ಕೊಡುಗೆ

ಬೆಂಗಳೂರು: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಟೆಲಿಸ್ಕೋಪ್ ಒದಗಿಸುವ ಯೋಜನೆ ಬಹಳ ವಿಶೇಷವಾಗಿದ್ದು, ಭವಿಷ್ಯದ ವೈಜ್ಞಾನಿಕ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಲಿದೆ ಎಂದು ಇಸ್ರೋ ಅಧ್ಯಕ್ಷ ಸೋಮನಾಥ್ ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ವೈಜ್ಞಾನಿಕ ಮನೋಭಾವ ಹಾಗೂ ವೈಚಾರಿಕತೆ ಹೆಚ್ಚಿಸಲು ಹೆಚ್ಚಿನ ಆದ್ಯತೆ ನೀಡುತ್ತಿದೆ. ಮೊದಲ ಹಂತದಲ್ಲಿ 833 ವಸತಿ ಶಾಲೆಗಳಿಗೆ ಟೆಲಿಸ್ಕೋಪ್ ನೀಡುವ ಕಾರ್ಯಕ್ರಮ ಬಹಳ ಮಹತ್ವದ್ದಾಗಿದೆ. ಎಲ್ಲಾ ಮಕ್ಕಳು ಬಾಹ್ಯಾಕಾಶ ಕ್ಷೇತ್ರದ ಬಗ್ಗೆ ಆಸಕ್ತಿ ಹೆಚ್ಚಿಸಿಕೊಳ್ಳಬೇಕು, ಹಾಗೆಯೇ ಆ ಕ್ಷೇತ್ರದಲ್ಲಿ ಸಂಶೋಧನೆಗೆ ಪ್ರೋತ್ಸಾಹ ನೀಡಬೇಕು ಎನ್ನುವ ಉದ್ದೇಶ ಹೊಂದಿದ್ದೇವೆ.

-ಎನ್.ಎಸ್.ಬೋಸರಾಜು, ಸಚಿವ

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದ ಬಗ್ಗೆ ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಯೋಜನೆ ಬಹಳ ವಿಶೇಷವಾಗಿದೆ.

ಸಣ್ಣ ವಯಸ್ಸಿನಲ್ಲೇ ಬಾಹ್ಯಾಕಾಶದ ಬಗ್ಗೆ ಆಸಕ್ತಿ ಬೆಳೆಸುವುದರಿಂದ ಮಕ್ಕಳಲ್ಲಿ ಹೊಸ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸಬಹುದಾಗಿದೆ. ಇಂತಹ ಯೋಜನೆ ಅನುಷ್ಠಾನಗೊಳಿಸುತ್ತಿರುವ ಸರಕಾರದ ಕ್ರಮ ಅನುಕರಣೀಯ.

ಇಸ್ರೋ ಅಧ್ಯಕ್ಷ ಡಾ.ಎಸ್ ಸೋಮನಾಥ್, ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಸ್.ಎಸ್.ಭೋಸರಾಜ್ ಅವರು ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಚಿತ್ರ : ಸುಧಾಕರ್ ದೇವರಾಜ್

ಈ ಯೋಜನೆಯಿಂದ ಭವಿಷ್ಯದ ವೈಜ್ಞಾನಿಕ ಕ್ಷೇತ್ರದಲ್ಲಿ ನಮ್ಮ ಮಕ್ಕಳ ಕೊಡುಗೆಯೂ ಹೆಚ್ಚಲಿದೆ ಎಂದರು. ಸಮಾಜ ಕಲ್ಯಾಣ ಇಲಾಖೆ ಸಚಿವರ ಉಪಸ್ಥಿತಿಯಲ್ಲಿ ಸಾಂಕೇತಿಕವಾಗಿ ಎರಡು ವಸತಿ ಶಾಲೆಗಳಿಗೆ ಟೆಲಿಸ್ಕೋಪ್ ನೀಡಲಾಯಿತು.

ಸಹಬಾಳ್ವೆಗೆ ರಾಜಕಾರಣ ಅಡ್ಡಿ: ಚನ್ನಮಲ್ಲಶ್ರೀ

ಬೆಂಗಳೂರು: ನಾನು ಶ್ರೇಷ್ಠ ಎಂಬ ಆಲೋಚನಾ ಕ್ರಮವನ್ನು ಮೀರಿ ಎಲ್ಲರೂ ಸಮಾನರೆಂಬ ಆಲೋಚನಾ ಕ್ರಮದಿಂದ ಬದುಕು ಸಾರ್ಥಕ್ಯ ಪಡೆಯಲು ಸಾಧ್ಯ. ಪಂಪ ಬಸವಣ್ಣ ಅವರ ಆಲೋಚನೆಯಲ್ಲಿ ವಿಶ್ವಪ್ರಜ್ಞೆ ಕಾಣುತ್ತದೆ. ಅದರಿಂದಾಗಿಯೇ ಅವರು ಆದರ್ಶವಾಗುತ್ತಾರೆ ಎಂದು ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ಕನ್ನಡ ಸಂಘರ್ಷ ಸಮಿತಿಯ 46ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ, ಮಹೇಶ್ ಊಗಿನಹಳ್ಳಿಗೆ ಕನ್ನಡ ಕಟ್ಟಾಳು ಹಾಗೂ ಎಂ.ಬಿ. ವಿಜಯಲಕ್ಷ್ಮಿಗೆ ನಿಸ್ಸೀಮ ಕನ್ನಡತಿ ಪ್ರಶಸ್ತಿ ಪ್ರದಾನ ಮಾಡಿ ಸ್ವಾಮೀಜಿ ಮಾತನಾಡಿದರು. ಬಹುತ್ವ ವಿಚಾರ ವಿಸ್ತಾರವಾಗುತ್ತಾ ಬರುತ್ತಿದೆ. ಸಹಬಾಳ್ವೆ ,ಸಮನ್ವಯತೆ ಪ್ರಜ್ಞೆಗೆ ಇತ್ತೀಚೆಗೆ ರಾಜಕಾರಣದ ಕಾರಣಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಧಕ್ಕೆ ಉಂಟಾಗುತ್ತಿದೆ ಎಂದು ವಿಷಾದಿಸಿದ ಅವರು, ಮಾನವನ ಪ್ರಜ್ಞೆ ಜಾಗೃತವಾಗಬೇಕು ಎಂದು ಕರೆಕೊಟ್ಟರು.

ಕನ್ನಡಕ್ಕೆ ಅಗ್ರಸ್ಥಾನ

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಕಲಾವಿದೆ ಜಯಲಕ್ಷ್ಮಿ ಪಾಟೀಲ್, ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಅಗ್ರಸ್ಥಾನ ದೊರೆಯಬೇಕು. ಆಂಗ್ಲಾ ಭಾಷೆ ಬದುಕಿಗೆ ಅನಿವಾರ್ಯವೆನ್ನುವ ವಾತವರಣ ಸೃಷ್ಟಿಸಲಾಗಿದೆ. ಹಿಂದಿ ಹೇರಿಕೆಯ ಇತ್ತೀಚಿನ ಬೆಳವಣಿಗೆಗಳನ್ನು ನೋಡಿದರೆ ನಾವು ಗೋಕಾಕ್ ಚಳವಳಿಯಂತಹ ಮತ್ತೊಂದು ಹೋರಾಟಕ್ಕೆ ಸಿದ್ಧರಾಗುವ ಪರಿಸ್ಥಿತಿ ಇದೆ ಎನಿಸುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಮಣ್ಣ ಎಚ್ ಕೋಡಿಹೊಸಹಳ್ಳಿ, ಕೇಂದ್ರ ಸರ್ಕಾರ ನಮ್ಮ ಮೇಲೆ ಹಿಂದಿ ಹೇರುವ ಪ್ರವೃತ್ತಿಯನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು. ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ ಆಶಯ ನುಡಿಗಳನ್ನಾಡಿದರು. ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ ಸ್ವಾಗತಿಸಿದರು. ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ ನಿರೂಪಣೆ ಮಾಡಿದರು.

ಕನ್ನಡ ಸಂಘರ್ಷ ಸಮಿತಿಯ 46ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಹೇಶ್ ಊಗಿನಹಳ್ಳಿ ಅವರಿಗೆ ಕನ್ನಡ ಕಟ್ಟಾಳು ಹಾಗೂ ಎಂ.ಬಿ. ವಿಜಯಲಕ್ಷ್ಮಿ ಅವರಿಗೆ ನಿಸ್ಸೀಮ ಕನ್ನಡತಿ ಪ್ರಶಸ್ತಿಯನ್ನು ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮೀಜಿ ಪ್ರದಾನ ಮಾಡಿದರು.

ಪ್ಯಾನಿಕ್ ಬಟನ್ ಅಳವಡಿಕೆಗೆ ವಿರೋಧ

ಬೆಂಗಳೂರು: ಸಾರ್ವಜನಿಕ ಸೇವಾ ವಾಹನಗಳಲ್ಲಿ ವಿಎಲ್‌ಟಿಡಿಗಳು ಮತ್ತು ಪ್ಯಾನಿಕ್ ಬಟನ್ ಅಳವಡಿಸುವುದನ್ನು ಕಡ್ಡಾಯಗೊಳಿಸಿರುವ ಕ್ರಮಕ್ಕೆ ಕೆಲ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದು, ಎಲ್ಲ ವಾಹನಗಳಿಗೆ ಅಳವಡಿಸಲಿಕ್ಕೆ ನಿರ್ದೇ ಶಿಸಿರುವುದು ಅನ್ಯಾಯ ಎಂದಿದೆ.

ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಡಿವೈಸಸ್ ಮತ್ತು ತುರ್ತು ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಲು ವಾಹನ ಮಾಲೀಕರು ವಿರೋಧ ವ್ಯಕ್ತಪಡಿಸಿದ್ದು, ಅನಗತ್ಯ ಹೊರೆ ಸೃಷ್ಟಿಸುವ ಈ ಕ್ರಮ ಸಡಿಲಿಸುವಂತೆ ಯೂನಿಯನ್ ಪ್ರತಿನಿಧಿಗಳು ಒತ್ತಾಯಿಸಿದ್ದು, ಈ ಸಾಧನ ಅಳವಡಿಸಿಕೊಳ್ಳದೇ ಪ್ರತಿದಿನ ಪ್ರತಿದಿನ ಫಿಟ್‌ನೆಸ್ ಪರೀಕ್ಷೆಗೆ ಹೋಗುವ ನೂರಾರು ವಾಹನಗಳಿಗೆ ಕ್ಲಿಯರೆನ್ಸ್ ನೀಡಲು ಆರ್‌ಟಿಒಗಳು ನಿರಾಕರಿಸುತ್ತಿದ್ದಾರೆ ಎಂದು ಹೇಳಿದರು.

ಟ್ರಕ್ ಸೇರಿದಂತೆ ಎಲ್ಲ ವಾಹನಗಳಲ್ಲಿ ಇಂತಹ ಸಾಧನಗಳು ಬೇಕೇ ಎಂದು ಪ್ರಶ್ನಿಸಿದ ಅವರು, ಸಾರಿಗೆಯು ಸಮವರ್ತಿ ಪಟ್ಟಿ ಮಾಡಲಾದ ವಿಷಯವಾಗಿದೆ ಮತ್ತು ಕೇಂದ್ರದ ಆದೇಶ ಅನುಸರಿಸುವ ಅಥವಾ ತಿರಸ್ಕರಿಸುವ ವಿವೇಚನೆ ರಾಜ್ಯ ಸಾರಿಗೆ ಇಲಾಖೆ ಹೊಂದಿದೆ. ಕರ್ನಾಟಕ ಹೊರತುಪಡಿಸಿ ಭಾರತದಲ್ಲಿ ಎಲ್ಲಿಯೂ ಈ ನಿಯಮ ಕಡ್ಡಾಯಗೊಳಿಸಿಲ್ಲ. ಎಂಪ್ಯಾನಲ್ ಮಾಡಲಾದ ಮಾರಾಟಗಾರರ ಸಾಧನಗಳು ಮಾರುಕಟ್ಟೆ ದರಕ್ಕಿಂತ ಮೂರು ಪಟ್ಟು ದುಬಾರಿಯಾಗಿದೆ ಎಂದರು.

ಸಾರ್ವಜನಿಕ ಸೇವಾ ವಾಹನಗಳಲ್ಲಿ ವಿಎಲ್‌ಟಿಡಿಗಳು ಮತ್ತು ಪ್ಯಾನಿಕ್ ಬಟನ್ ಅಳವಡಿಸುವುದನ್ನು ಸೆ.10ರೊಳಗೆ ಅಳವಡಿಸಿಕೊಳ್ಳಲು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಗಡುವು ನೀಡಿತ್ತು.

ಅಳವಡಿಕೆಗೆ 18,000 ರು. ಖರ್ಚು: ಕೆ ರಾಧಾಕೃಷ್ಣ ಹೊಳ್ಳ ಮಾತನಾಡಿ, ಎಲ್ಲ ಹೊಸ ವಾಹನಗಳಿಗೆ ವಿಎಲ್‌ಟಿಡಿ ಮತ್ತು ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಲಾಗಿದೆ. ಎಲ್ಲಾ ಹಳೆಯ ವಾಹನಗಳಿಗೂ ಅಳವಡಿಸಲು ನಿರ್ದೇಶಿಸುವುದು ಅನ್ಯಾಯ. ಪ್ರತಿಯೊಬ್ಬರೂ ಸ್ಮಾರ್ಟ್ ಫೋನ್ ಹೊಂದಿದ್ದಾರೆ. ಪ್ಯಾನಿಕ್ ಬಟನ್‌ಗಳಿಗಿಂತ ತುರ್ತು ಸಂದರ್ಭಗಳಲ್ಲಿ ಇದು ಹೆಚ್ಚಿನ ಸಹಾಯ ನೀಡುತ್ತದೆ. ಸಾರಿಗೆ ಇಲಾಖೆಯಿಂದ ಗುರುತಿಸಲಾದ ಮಾರಾಟಗಾರರಿಂದ ಮಾತ್ರ ನಾವು ಸಾಧನಗಳನ್ನು ಅಳವಡಿಸಿಕೊಳ್ಳಬೇಕು. ಮಾರುಕಟ್ಟೆಗಳಲ್ಲಿ ಆ ಸಾಧನಗಳ ಬೆಲೆ 4,000 ರು.ಗಿಂತ ಕಡಿಮೆಯಿದೆ. ಆದರೆ, ನಮ್ಮ ಬಸ್‌ಗಳಲ್ಲಿ ಅದನ್ನು ಅಳವಡಿಸಲು ಸುಮಾರು 18,000ರು. ಖರ್ಚು ಮಾಡಬೇಕಾಗುತ್ತದೆ ಎಂದರು.

ಬೆಂಗಳೂರು ಒನ್ ಕೇಂದ್ರಗಳಲ್ಲಿ ಇ-ಖಾತಾ ಲಭ್ಯ

ಬೆಂಗಳೂರು: ಇ-ಖಾತಾ ಮಾಡಿಸಲು ಸೈಬರ್‌ಗಳಿಗೆ ಹೋಗಿ ಗಂಟೆಗಟ್ಟಲೆ ಕಾದು ಸುಸ್ತಾಗುವ ಜನತೆಗೆ ಪಾಲಿಕೆಯು 'ಬೆಂಗಳೂರು ಒನ್' ನಾಗರಿಕ ಕೇಂದ್ರ ಗಳಲ್ಲಿ ಅವಕಾಶ ಕಲ್ಪಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಇ-ಖಾತಾ ಪಡೆಯು ವವರಿಗೆ ಪಾಲಿಕೆ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾ ಗಿತ್ತು. ಅಲ್ಲದೇ ವೆಬ್‌ಸೈಟ್‌ಗಳ ಮೂಲಕ ಇ-ಖಾತಾ ಪಡೆಯುವುದಕ್ಕೂ ಅವಕಾಶ ನೀಡಲಾಗಿತ್ತು. ಆದರೆ ಕೆಲ ಸೈಬರ್‌ಗಳಲ್ಲಿ ಮನಬಂದಂತೆ ಹಣ ವಸೂಲಿ ಮಾಡುತ್ತಿರುವ ದೂರುಗಳು ಕೇಳಿಬಂದ ಬೆನ್ನಲ್ಲೆ ಪಾಲಿಕೆಯು ಬಿಬಿಎಂಪಿ ಕಚೇರಿಗಳಲ್ಲಿ ಇ ಖಾತಾಗೆ ಕೌಂಟರ್ ತೆರೆಯಲು ಸೂಚನೆ ನೀಡಿದ್ದು, ಬೆಂಗಳೂರು ಒನ್ ನಾಗರಿಕ ಕೇಂದ್ರಗಳಲ್ಲಿಯೂ ಇ- ಖಾತಾ ಪಡೆಯಲು ಅವಕಾಶ ಮಾಡಿಕೊಟ್ಟಿದೆ. ಇ-ಖಾತಾ ಬಗ್ಗೆ ಈಗಾಗಲೇ ಬೆಂಗಳೂರು ಒನ್ ಸಿಬ್ಬಂದಿಗೆ ತರಬೇತಿ ನೀಡಿರುವ ಪಾಲಿಕೆ, ಸದ್ಯ ಇ-ಖಾತಾ ಮಾಡಿಕೊಡಲು 45ರು. ದರ ನಿಗದಿ ಮಾಡಿದೆ. ಬೇಕಾಬಿಟ್ಟಿ ಹಣ ವಸೂಲಿ ಮಾಡುವುದಕ್ಕೆ ಕಡಿವಾಣ ಹಾಕಲು ಈ ಸಿದ್ಧತೆ ಮಾಡಿರುವ ಬಿಬಿಎಂಪಿಯು ಜನರು ತಮ್ಮ ಹತ್ತಿರದ ಬೆಂಗಳೂರು ಒನ್ ಕೇಂದ್ರಗಳಲ್ಲಿ ದಾಖಲೆಗಳನ್ನು ಸಲ್ಲಿಸಿ ಶೀಘ್ರವಾಗಿ ಇ-ಖಾತಾ ಪಡೆಯಲು ಅವಕಾಶ ಕಲ್ಪಿಸಿಕೊಟ್ಟಿದೆ.



ಸ್ವತಃ ನೀವೇ ಸಲ್ಲಿಸಿ

ಬಿಬಿಎಂಪಿ ವ್ಯಾಪ್ತಿಯಲ್ಲಿ ಇ-ಖಾತಾ ಪಡೆಯುವ ಸಲುವಾಗಿ ಕನ್ನಡ ಹಾಗೂ ಇಂಗ್ಲೀಷ್ ಭಾಷೆಯ ತರಬೇತಿ ವೀಡಿಯೋವನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಸ್ವತಃ ಇ-ಖಾತಾಗೆ ಸಲ್ಲಿಸಬಹುದು.

ಪ್ರತಿ ಆಸ್ತಿಗೆ ಪಾವತಿಸಬೇಕಾದ ಶುಲ್ಕ

- ಬೆಂಗಳೂರು ಒನ್ ಕೇಂದ್ರದಲ್ಲಿ 45 ರು. ಶುಲ್ಕ ಮತ್ತು ಪ್ರತಿ ದಾಖಲೆಯ ಪುಟ ಸ್ಕ್ಯಾನ್ ಮಾಡಲು 5 ರು. ಪಾವತಿಸಬೇಕು.
- ಬಿಬಿಎಂಪಿಗೆ 125 ರು.(ಅಂತಿಮ ಇ-ಖಾತಾ ಮುದ್ರಣಕ್ಕೆ ಸಿದ್ಧವಾದಾಗ ಮಾತ್ರ) ಪಾವತಿಸಬೇಕು.

ಅಗತ್ಯ ದಾಖಲೆಗಳು

- ನಿಮ್ಮ ಆಸ್ತಿ ತೆರಿಗೆ ರಶೀದಿ
- ಮಾರಾಟ ಅಥವಾ ನೋಂದಾಯಿತ ಪತ್ರ
- ಎಲ್ಲ ಮಾಲೀಕರ ಆಧಾರ್
- ಬೆಸ್ಕಾಂ ಬಿಲ್
- ಜಲಮಂಡಳಿ ಬಿಲ್ (ನೀವು ಕಾವೇರಿ ಸಂಪರ್ಕ ಹೊಂದಿದ್ದರೆ)
- ಬಿಡಿಎ ಅಥವಾ ಯೋಜನಾ ಪ್ರಾಧಿಕಾರದಿಂದ ಲೇಔಟ್ ಅಥವಾ ಸೈಟ್ ಅನುಮೋದನೆ (ಇದರ ದಾಖಲೆ ಹೊಂದಿದ್ದರೆ)
- ಬಿಬಿಎಂಪಿಯಿಂದ ಕಟ್ಟಡ ಯೋಜನೆ ಅನುಮೋದನೆ (ಇದರ ದಾಖಲೆ ಹೊಂದಿದ್ದರೆ)
- ಡಿಸಿ ಪರಿವರ್ತನೆ (ಇದರ ದಾಖಲೆ ಹೊಂದಿದ್ದರೆ)
- ಬಿಡಿಎ ಅಥವಾ ಕರ್ನಾಟಕ ಹೌಸಿಂಗ್ ಬೋರ್ಡ್ ಅಥವಾ ಯಾವುದೇ ಸರಕಾರಿ ಪ್ರಾಧಿಕಾರದಿಂದ ಹಂಚಿಕೆ ಪತ್ರ (ಇದು ನಿಮ್ಮ ಪ್ರಕರಣಕ್ಕೆ ಅನ್ವಯಿಸಿದರೆ ಮತ್ತು ನೀವು ಇದರ ದಾಖಲೆ ಹೊಂದಿದ್ದರೆ)

ಉತ್ತರ ಭಾರತದಲ್ಲಿ ಟೊಮೇಟೊ ಬೇಡಿಕೆ ಇಳಿಕೆ | ಕೆಜಿಗೆ 40–50 ರು. ಇದ್ದ ಟೊಮೇಟೊ ಈಗ 10–15 ರು.

ಟೊಮೇಟೊ ದರದಲ್ಲಿ ದಿಢೀರ್ ಕುಸಿತ

ಹೂವಪ್ಪ ಐ.ಎಚ್. ಬೆಂಗಳೂರು

ಗಗನಮುಖಿಯಾಗಿದ್ದ ಕೆಂಪು ಬಂಗಾರ ಟೊಮೇಟೊ ಬೆಲೆ ಗಣನೀಯವಾಗಿ ಇಳಿಮುಖವಾಗಿದ್ದು, ಗ್ರಾಹಕರು ನಿಟ್ಟುಸಿರು ಬಿಡುವಂತಾಗಿದೆ. ಕಳೆದೊಂದು ವಾರದಿಂದ ಮಾರುಕಟ್ಟೆಗೆ ಬರುವ ಟೊಮೇಟೊ ಪ್ರಮಾಣ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಟೊಮೇಟೊ ಬೆಲೆ ಇಳಿಕೆಗೆ ಕಾರಣವಾಗಿದೆ.

ಇನ್ನೊಂದೆಡೆ ಟೊಮೇಟೊ ಬೆಳೆಗೆ ರೋಗ ಬಾಧೆಯಿಂದ ಟೊಮೇಟೊ ಡ್ಯಾಮೇಜ್ ಆಗಿದ್ದರಿಂದ, ಉತ್ತರ ಭಾರತದ ರಾಜ್ಯಗಳಿಂದಲೂ ಟೊಮೇಟೊ ಬೇಡಿಕೆ ಇಳಿಕೆಯಾಗಿದೆ. ಪರಿಣಾಮ ಎಪಿಎಂಸಿ ಮಾರುಕಟ್ಟೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಟೊಮೇಟೊ ಬರುತ್ತಿದ್ದು, ಬೆಲೆಯಲ್ಲಿ ಇಳಿಕೆಯಾಗಲು ಇದು ಕೂಡಾ ಕಾರಣವಾಗಿದೆ ಎನ್ನುತ್ತಾರೆ ಬೆಂಗಳೂರು ಎಪಿಎಂಸಿ ಟೊಮೇಟೊ ವ್ಯಾಪರಿ ವಿರೇಶ್. ಈ ಹಿಂದೆ ಉತ್ತಮ ಬೆಲೆ ಬಂದ ಕಾರಣ ಹೆಚ್ಚಿನ ಪ್ರಮಾಣದಲ್ಲಿ ರೈತರು ಟೊಮೇಟೊ ಬೆಳೆದಿದ್ದಾರೆ. ಜತೆಗೆ ನೆರೆಯ ಆಂಧ್ರ ಪ್ರದೇಶ ಸೇರಿದಂತೆ ಚಿತ್ರದುರ್ಗದ ಚಳ್ಳಕೆರೆ, ದಾವಣಗೆರೆ ಸೇರಿದಂತೆ ರಾಜ್ಯದ ಇತರೆ ಭಾಗಗಳಿಂದ ಕೋಲಾರದ ಎಪಿಎಂಸಿ ಮಾರುಕಟ್ಟೆಗೆ ಮತ್ತು ಬೆಂಗಳೂರು ದಾಸಂಪುರ ಎಪಿಎಂಸಿಗೆ ಸರಬರಾಜಾಗುತ್ತಿದೆ. ಬೆಂಗಳೂರು ಎಪಿಎಂಸಿಗೆ ಅಂದಾಜು 13 ಕೆಜಿ ತುಂಬಿದ ಬಾಕ್ಸ್ 30-40 ಸಾವಿರ ಬಾಕ್ಸ್ ಬರುತ್ತಿದ್ದು, ಇನ್ನು ಕೋಲಾರ ಮಾರುಕಟ್ಟೆಗೆ ಲಾರಿಗಳ ಲೆಕ್ಕದಲ್ಲಿ 80-100 ಲಾರಿಗಳಷ್ಟು ಟೊಮೇಟೊ ಬರುತ್ತಿದೆ.

ಯಾವುದೇ ನಷ್ಟವಿಲ್ಲ

ಟೊಮೇಟೊ ಬೆಲೆ ಕುಸಿತ ಕಂಡರೂ ಸಹ ಈಗ ಸದ್ಯದ ಮಟ್ಟಿಗಿರುವ ಬೆಲೆಯಲ್ಲಿ ರೈತರಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ. ಬದಲಾಗಿ ಇದೇ ಬೆಲೆ ಮುಂದುವರಿದರೆ ಹಾಕಿದ ಬಂಡವಾಳದ ಜತೆಗೆ ಮೂರು ಕಾಸು ಲಾಭ ಮಾಡಿಕೊಳ್ಳಬಹುದಾಗಿದೆ. ಇತ್ತ ಬೆಲೆ ಕುಸಿತದಿಂದ ಗ್ರಾಹಕರಿಗೆ ಖುಷಿ ತಂದಿದ್ದು ನಿರಾಳವಾಗಿ ಟೊಮೇಟೊ ಖರೀದಿಗೆ ಮುಂದಾಗಿದ್ದಾರೆ ಎನ್ನುತ್ತಾರೆ ಟೊಮೇಟೊ ವ್ಯಾಪಾರಿಗಳು.

ಹಿಂದೆ ಹೊರ ರಾಜ್ಯಗಳಿಂದ ಟೊಮೇಟೊಗೆ ಬೇಡಿಕೆ ಹೆಚ್ಚಾದ ಕಾರಣ ಕಳೆದ ಒಂದುವರೆ ತಿಂಗಳಿಂದ ಟೊಮೇಟೊ ಬೆಲೆ ಗಗನಕ್ಕೇರಿತ್ತು. ಕೋಲಾರ ಮಾರುಕಟ್ಟೆಯಲ್ಲಿ ಕಳೆದರುಡು ತಿಂಗಳ ಹಿಂದೆ15 ಕೆಜಿ ಬಾಕ್ಸ್ ಗೆ ಉತ್ತಮ ಗುಣಮಟ್ಟ ದರ್ಜೆ ಟೊಮೇಟೊ ಬೆಲೆ 1000–1100 ರು. ಮಧ್ಯಮ 800 ರಿಂದ 900 ರು. ವರೆಗೆ ಮಾರಟವಾಗಿತ್ತು. ಕೆಲವೇ ದಿನಗಳ ಹಿಂದೆ ಇಷ್ಟೇ 15 ಕೆಜಿ ಒಂದು ಬಾಕ್ಸ್ ಟೊಮೇಟೊ ರೂ 600 ರಿಂದ ರೂ 700 ವರೆಗೆ ಮಾರಾಟವಾಗುತ್ತಿತ್ತು.

ಆದರೆ ಈಗ ದಿಢೀರ್ ಬೆಲೆ ಇಳಿಕೆಯಾಗಿ ಉತ್ತಮ ಗುಣಮಟ್ಟ ಟೊಮೇಟೊ 250–300 ರು. ಮಧ್ಯಮ 150–200 ರು. ಗೆ ಮಾರಾಟವಾಗುತ್ತಿದೆ. ಅಂದರೆ ಹಿಂದೆ ಕೆಜಿಗೆ 40–50 ಇದ್ದ ಬೆಲೆ ಈಗ ಗುಣಮಟ್ಟ ಆಧಾರದಲ್ಲಿ 10–15 ರು. ಗೆ ಇಳಿದಿದೆ. ಚಿಲ್ಲರೆ ದರದಲ್ಲಿ ಈ ಹಿಂದೆ 60–70 ಇದ್ದ ಬೆಲೆ ಈಗ 20–30 ರು. ಗೆ ಇಳಿಕೆಯಾಗಿದೆ.

ಎರಡು ಮೂರು ತಿಂಗಳ ಹಿಂದೆ ಟೊಮೇಟೊಗೆ ಬೇಡಿಕೆ ಹೆಚ್ಚಾಗಿತ್ತು. ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿ ಮಾರಕಟ್ಟೆಇಂದಲೇ ಹಲವು ರಾಜ್ಯಗಳಿಗೆ ಸರಬರಾಜಾಗುತ್ತಿತ್ತು. ಈ ಕಾರಣಕ್ಕೆ ಎಲ್ಲ ರೈತರೂ ಟೊಮೇಟೊ ಬೆಳೆಯಲು ಆರಂಭಿಸಿದರು. ಇದೀಗ ಉತ್ಪಾದನೆ ಹೆಚ್ಚಾಗಿದೆ ಆದರೆ ಕೆಲ ತಿಂಗಳ ಹಿಂದೆ ಸುರಿದ ಮಳೆಗೆ ಟೊಮೇಟೊ ಡ್ಯಾಮೇಜ್ ಆದ ಕಾರಣ ಏಕಾಏಕಿ ದರ ಕುಸಿಯುತ್ತಿದೆ. ಕರ್ನಾಟಕವಷ್ಟೇ ಅಲ್ಲ, ನೆರೆಯ ಹಲವು ರಾಜ್ಯಗಳಲ್ಲಿಯೂ ಟೊಮೇಟೊ ಉತ್ಪಾದನೆ ಹೆಚ್ಚಾಗಿದೆ ಎಂದು ಹೇಳುತ್ತಾರೆ ಟೊಮೇಟೊ ವ್ಯಾಪಾರಿಗಳು.

ಬೆಲೆ ಕುಸಿಯಲು ಪ್ರಮುಖ ಕಾರಣ: ಉತ್ಪಾದನೆಯಲ್ಲಿ ಹೆಚ್ಚಳ, ವೈರಸ್ ಪಿಡುಗು ಮತ್ತು ಬಾಂಗ್ಲಾ ದೇಶ, ಕೋಲ್ಕತ್ತಾ ಹಾಗೂ ಮಹಾರಾಷ್ಟ ಅಲ್ಲಿಗೆ ರಫ್ತು ಮಾಡಲು ಆಗುತ್ತಿಲ್ಲ. ಎರಡು ಮೂರು ತಿಂಗಳ ಹಿಂದೆ ಟೊಮೇಟೊಗೆ ಬೇಡಿಕೆ ಹೆಚ್ಚಾಗಿತ್ತು. ಕರ್ನಾಟಕದಿಂದ ಹಲವು ಹೊರ ರಾಜ್ಯಗಳಿಗೆ ಟೊಮೇಟೊ ಸರಬರಾಜಾಗುತ್ತಿತ್ತು. ಈ ಕಾರಣಕ್ಕೆ ಎಲ್ಲ ರೈತರೂ ಟೊಮೇಟೊ ಬೆಳೆಯಲು ಆರಂಭಿಸಿದರು. ಇದೀಗ ಉತ್ಪಾದನೆ ಹೆಚ್ಚಾಗಿದೆ ಕರ್ನಾಟಕವಷ್ಟೇ ಅಲ್ಲ, ನೆರೆಯ ಹಲವು ರಾಜ್ಯಗಳಲ್ಲಿಯೂ ಟೊಮೇಟೊ ಉತ್ಪಾದನೆ ಹೆಚ್ಚಾಗಿದೆ.

ಕಳೆದ ಮೂರು ವರ್ಷಗಳಿಂದೀಚೆಗೆ ರಾಜ್ಯದಲ್ಲಿ ಟೊಮೇಟೊಗೆ ವೈರಸ್ ಕಾಟ ಹೆಚ್ಚಾಗಿದೆ. ವೈರಸ್ ಸೋಂಕಿನ ಕಾರಣದಿಂದ ಟೊಮೇಟೊ ಜೀವಿತಾವಧಿ ಕಡಿಮೆಯಾಗುತ್ತಿದೆ. ಸೋಂಕು ಇರುವ ಟೊಮೇಟೊ ವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸು ವುದೂ ಕಷ್ಟವಾಗುತ್ತಿದೆ ಟೊಮೇಟೊ ವೇಗವಾಗಿ ಹಾಳಾಗುತ್ತಿದೆ ಹೀಗಾಗಿ ಇಲ್ಲೇ ದಾಸ್ತನು ಹೆಚ್ಚಾಗಿದ್ದ ರಿಂದ ಬೆಲೆ ಕುಸಿಯಳು ಪ್ರಮುಖ ಕಾರಣ ಎನ್ನುತ್ತಾರೆ ಕೋಲಾರ ಎಪಿಎಂಸಿ ವ್ಯಾಪಾರಿಗಳು.

ಬಿ ಪಾಸಿಟಿವ್

ನಮ್ಮನ್ನೇ ಸಂತೈಯಿಸಿಕೊಳ್ಳುವ ಮುನ್ನ...

ನಾವು ಯಾವಾಗಲೂ ಹೀಗೆಯೆ. ನಮ್ಮ ತಪ್ಪುಗಳನ್ನು, ನಮ್ಮ ಸೋಲುಗಳನ್ನು, ನಮಗಾದ ಅವಮಾನಗಳನ್ನು ಒಪ್ಪಿಕೊಳ್ಳುವುದೇ ಇಲ್ಲ. ವಾಸ್ತವದದಲ್ಲಿ ಅದು ಸತ್ಯವಾಗಿದ್ದರೂ ವಾಸ್ತವಿಕತೆಯನ್ನು ಒಪ್ಪಿಕೊಳ್ಳದ, ನಮ್ಮನ್ನು ನಾವು ಸಂತೈಯಿಸಿಕೊಳ್ಳುವ, ಕ್ಷಣಿಕ ಆನಂದ ಅನುಭವಿಸುವ ದೌರ್ಬಲ್ಯದ ಮನಸ್ಥಿತಿಯ ಕಾರಣದಿಂದಾಗಿ ನಮ್ಮ ವೈಫಲ್ಯಗಳನ್ನು ಮತ್ತೊಂದು ಒಪ್ಪಿತವಲ್ಲದ ದೃಷ್ಟಿಕೋನದಲ್ಲಿ ಸಮರ್ಥಿಸಲು ಮುಂದಾಗುತ್ತೇವೆ. ಏನಾದರೊಂದು ನೆಪ ಹೇಳಿ ನಮ್ಮನ್ನೆ ನಾವು ಸಮಾಧಾನಿಸಿಕೊಳ್ಳಲು ಹೆಣಗಾಡುತ್ತೇವೆ. ನಮಗೆ ತತ್ಕಾಲದ ಸುಖದ ಅನುಭೂತಿಯನ್ನು ನೀಡಿದರೂ, ನಿಜ ಅರ್ಥದಲ್ಲಿ ಇದೊಂದು ವ್ಯಸನದ ಖಿನ್ನತೆಯ ಭಾವವೇ. ನಮ್ಮ ಮನಸ್ಸು ಬೇಸರದಿಂದ, ನೋವಿನಿಂದ, ಸಂಕಟದಿಂದ ಕೊರಗುವಿಕೆಯ ಹತಾಶೆಯ ಸ್ಥಿತಿ. ಇಂತಹ ನಮ್ಮ ಮನೋಸ್ಥಿತಿಯು ನಮ್ಮ ಬದುಕಿನ ಪ್ರಗತಿಗೆ, ಭವಿತ್ಯವದ ಯಶಸ್ಸಿಗೆ ಮಾರಕವಾಗಿ ಪರಿಣಮಿಸಬಲ್ಲದು.

ನಮಗೆಲ್ಲ ತೀರ ಪರಿಚಿತವಿರುವ ಈಸೋಪನ ದೃಷ್ಟಾಂತದ ಪ್ರಸಂಗವಿದು. ಹಸಿದ ನರಿಯೊಂದು ಆಹಾರವನ್ನು ಹುಡುಕುತ್ತಿರುವ ಸಂದರ್ಭದಲ್ಲಿ ದ್ರಾಕ್ಷಿಯ ತೋಟವೊಂದು ಕಾಣುತ್ತದೆ. ದ್ರಾಕ್ಷಿಯ ಗೊಂಚಲುಗಳು ರಸಭರಿತವಾಗಿದ್ದವು. ಕೊಂಚ ಎತ್ತರದಲ್ಲಿ ತೂಗಾಡುತ್ತಿದ್ದ ದ್ರಾಕ್ಷಿಯ ಗೊಂಚಲುಗಳನ್ನು ಕಂಡು ನರಿಗೆ ಹೋದ ಜೀವ ಬಂದಂತಾಯಿತು. ಅವುಗಳನ್ನು ತಿನ್ನಲು ಸಾಕಷ್ಟು ಪ್ರಯತ್ನಿಸಿತಾದರೂ ಅದು ಸಫಲವಾಗಲಿಲ್ಲ. ಹಸಿದ ನರಿಗೆ ಎಗರಿ, ಎಗರಿ ಇನ್ನಷ್ಟು ಸುಸ್ತಾಯಿತೇ ಹೊರತು ಒಂದು ದ್ರಾಕ್ಷಿಯೂ ಕೂಡ ನಿಲುಕಲಿಲ್ಲ. ಕೊನೆಗೆ ನರಿ 'ಇಲ್ಲಿರುವ ದ್ರಾಕ್ಷಿಗಳು ತುಂಬ ಹುಳಿಯಾಗಿದೆ ಅನಿಸುತ್ತೆ. ಇಂತಹ ದ್ರಾಕ್ಷಿಗೆ ಇಷ್ಟೊಂದು ಶ್ರಮ ಹಾಕುವುದು ಒಳ್ಳೆದಲ್ಲ. ಅವುಗಳನ್ನು ತಿಂದರೆ ಖಂಡಿತವಾಗಿಯೂ ಆರೋಗ್ಯಕ್ಕೆ ಮಾರಕವಾಗುತ್ತಿತ್ತು. ದ್ರಾಕ್ಷಿ ಸಿಗದದ್ದೇ ಒಳ್ಳೆಯದು' ಎಂದು ತನ್ನಷ್ಟಕ್ಕೆ ತಾನೆ ಹೇಳುತ್ತ ಅಲ್ಲಿಂದ ಹೊರಟುಹೋಯಿತು.

ಬಹುತೇಕ ಬಾರಿ ನಾವು ಇಂತಹುದೇ ಮನಃ ಸ್ಥಿತಿಯನ್ನು ಹೊಂದಿರುತ್ತೇವೆ. ಸಿಲುಕದೇ ಹೋಗಿದ್ದರಿಂದಾದ ನಿರಾಶೆಯ ಭಾವಕ್ಕೆ, ಸಂಕಟಕ್ಕೆ ನೈಜ ಕಾರಣಗಳನ್ನು ಹುಡುಕದೇ ನಮ್ಮ ಅಂತರಂಗಕ್ಕೆ ನಾವೇ ವಂಚಿಸಿಕೊಳ್ಳುತ್ತೇವೆ. ನಮ್ಮ ಸೋಲುಗಳನ್ನು ಮುಚ್ಚಿಟ್ಟು ಕೊಳ್ಳಲು ಪ್ರಯತ್ನಿಸುತ್ತವೆ. ಗೆಲ್ಲಲಾಗದಿರುವುದನ್ನು, ಪಡೆಯಲಾಗುದ್ದನ್ನು ಸಮರ್ಥಿಸಿಕೊಳ್ಳುತ್ತ ಮತ್ತೆಲ್ಲೋ ಗೆಲ್ಲಬಹುದು ಎಂಬ ಕಲ್ಪನೆಯಲ್ಲಿ ಪಲಾಯನ ಮಾಡುವುದು ವಿವೇಚನೆಯ ನಿರ್ಧಾರವಾಗಲಾರದು. ಒಂದರ್ಥದಲ್ಲಿ ಅಲ್ಲಮನ ಮಾತಿನಂತೆ ಕೊಟ್ಟ ಕುದುರೆಯನೇರದೆ ಮತ್ತೊಂದು ಬಯಸುವ ಹೇಡಿತನವಿದು. ಇದರಿಂದ ಸಾಧ್ಯತೆಗಳೆಲ್ಲವೂ ಕನಸುಗಳಾಗಿ ಬಿಡುತ್ತವೆ. ಇದು ನಮ್ಮ ಭವಿತವ್ಯದ ಪ್ರಯತ್ನಗಳಿಗೆ ಕಡಿವಾಣ ಹಾಕುತ್ತದೆ. ಹೊಸ ಯೋಚನೆ, ಯೋಜನೆಗಳ ಮೇಲೆ ಕಲ್ಲುಚಪ್ಪಡಿಯೆಳೆಯುತ್ತದೆ. ಬದುಕಿನ ವಿಕಾಸಕ್ಕೆ ಮಾರಕವಾಗಿ ಪರಿಣಮಿಸುತ್ತದೆ. ಹಾಗಾಗಿ ನಾವು ನಮ್ಮ ಇಂಥದೊಂದು ಸಲ್ಲದ ಮನೋದೌರ್ಬಲ್ಯದ ಬೇಲಿ ದಾಟಿ ಬಂದು ವಾಸ್ತವಿಕತೆಯನ್ನು ಒಪ್ಪಿಕೊಳ್ಳುವುದು ಜಾಣತನವಾಗಿದೆ. ತುಂಬ ಎಚ್ಚರದಿಂದ ಎಲ್ಲವನ್ನು ಅವಲೋಕಿಸುವುದು, ಅರಿವಿನಿಂದ ಇರುವುದು ತುಂಬ ಜಾಣತನವಾಗಿದೆ.

● ಮಹಾದೇವ ಬಸರಕೋಡ

ಸಮಾಜದ ಋಣ

ಸಮಾಜ ಎನ್ನುವುದು ಸಾಗರ. ಅದರಲ್ಲಿ ನಾವು ಒಂದು ಹನಿ ನೀರು. ಮನುಷ್ಯ ಯಾವತ್ತಿಗೂ ಸಮಾಜಜೀವಿ. ಸಮಾಜ ಎಂದರೆ ನಾವು. ನಾವು ಎಂದರೆ ಸಮಾಜ. ಮನುಷ್ಯ ಮತ್ತು ಸಮಾಜ ಇವು ಒಂದೇ ನಾಣ್ಯದ ಎರಡು ಮುಖಗಳು. ಸಮಾಜ ಎಂದರೆ ಸಾಮೂಹಿಕ ಸಂಕಲ್ಪ ಮತ್ತು ಅದರ ಫಲವಾದ ಕ್ರಿಯೆಯೇ ಸಮಾಜ. ಕೆಲವು ಸಮಾಜಶಾಸ್ತ್ರಜ್ಞರು ಜೀವರಕ್ಷಕ ಸಂಬಂಧಗಳ ಒಟ್ಟು ಮೊತ್ತವೇ ಸಮಾಜ ಎಂದು ಹೇಳುತ್ತಾರೆ. ವ್ಯಕ್ತಿಯಿರದೇ ಸಮಾಜ ರೂಪವಾಗದು. ಸಮಾಜವಿಲ್ಲದೇ ಮನುಷ್ಯರು ಬದುಕಲಾರರು. ಪ್ರತಿಯೊಬ್ಬ ವ್ಯಕ್ತಿಗೂ ಸಮಾಜದ ಅವಶ್ಯಕತೆ ತುಂಬಾ ಇದೆ. ಸಮಾಜ ಎನ್ನುವ ಬೃಹತ್ ಮರದ ನೆರಳಿನಲ್ಲಿ ನಾವು ಜೀವಿಸಿದರೆ ನಮ್ಮ ಬದುಕು ಸುಂದರ, ಸುಮಧುರ. ಸಮಾಜದ ಆಶ್ರಯ ತ್ಯಜಿಸಿ ಅದರಾಚೆಗೆ ಬದುಕ ಹೊರಟರೆ ಅವರ ಬದುಕೇ ಶೂನ್ಯ. ವ್ಯಕ್ತಿ ಮತ್ತು ಸಮಾಜದ ಮಧ್ಯ ಹೊಂದಾಣಿಕೆ ತುಂಬಾ ಅವಶ್ಯವಾಗಿದೆ. ಇವೆರಡರ ಹೊಂದಾಣಿಕೆಯ ನಡುವೆ ಅಪಸ್ವರ ಬಂದರೆ ಬದುಕು ಗೆದ್ದಲುಹುಳು ಬಿದ್ದ ಮರವಾಗುವುದು. ಸಮಾಜ ನಿರ್ಮಿಸಿದ ಕೆಲವು ಮೌಲ್ಯಗಳು, ನೀತಿ ನಿಯಮಗಳು, ಕಟ್ಟುಪಾಡುಗಳ ಚೌಕಟ್ಟಿನಲ್ಲಿಯೇ ನಮ್ಮ ಜೀವಮಾನ ಕಳೆಯಬೇಕು. ಇಂತಹ ಸಮಾಜವೇ ಮುಂದೊಂದು ದಿನ ನಮ್ಮ ಸುಖ ದುಃಖ, ಕಷ್ಟ ನಷ್ಟ, ನೋವು ನಲಿವು, ಎಲ್ಲ ಬಗೆಯ ಆಗು ಹೋಗುಗಳಿಗೆ ಬೆನ್ನುಲುಬಾಗಿ ನಿಲ್ಲುವುದು.

ನಮ್ಮ ಬದುಕು ಯಾವಾಗಲೂ ಸಮಾಜಮುಖಿ ಆಗಿರಬೇಕು. ನಾವು ಸಮಾಜಮುಖಿಯಾಗಿ ಬೆಳೆಯಬೇಕು. ಸಮಾಜ ನಮಗೆ ಎಲ್ಲವನ್ನೂ ಕೇಳದೇ ನೀಡಿದ ಕಲ್ಪವೃಕ್ಷ. ಅದರ ಋಣದ ಭಾರ ನಮ್ಮ ಹೆಗಲ ಮೇಲೆ ಸಾಕಷ್ಟಿದೆ. ನಾವು ಯಾವಾಗಲೂ ಸಮಾಜಕ್ಕೆ ಋಣಿಯಾಗಿರಬೇಕು. ಸಮಾಜಕ್ಕೆ ಪುನಃ ವಾಪಸ್ಸು ಯಾವುದೋ ರೂಪದಲ್ಲಿ ನೀಡಬೇಕಾಗಿರುವುದು ನಮ್ಮ ಧರ್ಮ. ಸಮಾಜ ಕೊಡುವಂತಹ ನೆಮ್ಮದಿ, ಸುರಕ್ಷೆ, ಭದ್ರತೆ, ಮಾರ್ಗದರ್ಶನ ನಮಗೆ ಬೇರೆಲ್ಲಿಯೂ ಸಿಗದು. ಈ ಸಮಾಜವೇ ನಮಗೊಂದು ಪಾಠಶಾಲೆ. ಇದರ ಮೂಲಕ ಗಳಿಸಿಕೊಳ್ಳುವ ಅನುಭವಗಳು ಬೇರೆ ಯಾವ ಶಾಲಾ ಕಾಲೇಜು, ಪುಸ್ತಕಗಳು ಸಹ ಕಟ್ಟಿಕೊಡುವುದಿಲ್ಲ. ವ್ಯಕ್ತಿಯ ಅನುಕೂಲ, ಸುಖಕ್ಕಾಗಿ ಸಮಾಜವನ್ನು ರೂಪಿಸಿಕೊಂಡಿದ್ದೇವೆ. ಬುದ್ಧಿವಂತ, ಹೃದಯವಂತ ಮನುಷ್ಯರು ಮಾತ್ರ ಉತ್ತಮ ಸಮಾಜ ನಿರ್ಮಿಸಬಲ್ಲರು. ಮನುಷ್ಯ ಮನುಷ್ಯನಂತಾಗಲು ಸಮಾಜ ಹಾಗೂ ಸಾಮಾಜಿಕ ಜೀವನ ನಮ್ಮೆಲ್ಲರಿಗೂ ಅತ್ಯಗತ್ಯ. ಮೊದಲು ಈ ಸಮಾಜದಲ್ಲಿ ಸಾಮಾಜಿಕ ಜೀವನಕ್ಕೆ ಮೊದಲ ಆದ್ಯತೆ ನೀಡಬೇಕು.

● ರಂಗನಾಥ್ ಗುಡಿಮನಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಬಣ್ಣಬಣ್ಣದ ಲೋಕ; ಬಣ್ಣಿಸಲು ಸಾಲದು!

● ದಿವ್ಯಶ್ರೀ ಹೆಗಡೆ

ಸಿನಿಮಾ ಎಂದರೆ ಹುಚ್ಚು ಪ್ರೀತಿ. ಊರಲ್ಲೊಂದೇ ಒಂದೇ ಒಂದು ಟಿ.ವಿ ಇರುವ ಕಾಲವಿತ್ತು ಆಗ ಒಂದಷ್ಟು ಜನ ಸೇರಿ ಆ ಮನೆಗೆ ಟಿ.ವಿ ನೋಡಲು ಹಾತೊರೆದು ಓಡಿ ಹೋಗಿ, ಬರುತ್ತಿದ್ದ ಒಂದೆರಡು ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧೆಯಿಂದ ನೋಡುವುದಿತ್ತು. ಅದರ ಜೊತೆ ವಾರದ ತುದಿಯಲ್ಲಿ ಬರುತ್ತಿದ್ದ ಸಿನಿಮಾ ಎಲ್ಲರನ್ನೂ ತನ್ನತ್ತ ಸೆಳೆದುಕೊಳ್ಳುತ್ತಿದ್ದವು. ಅದರಲ್ಲಿ ಬರುತ್ತಿದ್ದ ಪೌರಾಣಿಕ ಕಥೆಯೋ, ಸಾಮಾಜಿಕ ಕಥೆಯೋ ಅತ್ಯಂತ ಆಕರ್ಷಿಸಿ ಗಂಟೆಗಟ್ಟಲೆ ಅಲ್ಲಿ ಕುಳಿತು ನೋಡುತ್ತಿದ್ವಿ ಅನ್ನೊ ಹಳೆಯವರ ಮಾತುಗಳು. ಆ ದಿನಗಳಲ್ಲಿ ಮನೋರಂಜನೆಗೆ ಹೊಸ ಮಾರ್ಗವಾಗಿ ಗುರುತಿಸಿಕೊಂಡಿದ್ದೇ ಸಿನಿಮಾಗಳು. ಆ ಪ್ರದೇಶದಲ್ಲಿ ಅಪರೂಪದಲ್ಲೊಂದು ಅಪರೂಪ ದಲ್ಲಿ ಇರುತ್ತಿದ್ದ ಥಿಯೇಟರ್‌ಗಳು ಸಿನಿಮಾಕ್ಕೆ ಹೋಗಬೇಕು ಎಂದು ಆಸೆಯಿಂದ ಸಾಗಿ ಎರಡಾಣೆಗೆ ಒಂದು ಸಿನಿಮಾವನ್ನು ನೋಡಿ ಖುಷಿ ಪಟ್ಟಿದ್ದು ಎಲ್ಲವೂ ಇದೆ. ಭಾವನೆಗಳು ಹಾಗೂ ಮನುಷ್ಯರು ಕಪ್ಪು ಬಿಳುಪಿನಲ್ಲಿ ಬಂದರೂ ಅದನ್ನು ನೋಡುವ ಹುರುಪು ಬಹಳವಾಗಿತ್ತು. ಸಿನಿಮಾ ಅಂದರೆ ಈಗಲೂ ಅದೇ ಕ್ರೇಜ್ ಇದ್ದೆ ಇದೆ ಆದರೆ ಈಗ ಬ್ಲಾಕ್ ಆಂಡ್ ವೈಟ್ ಸಿನಿಮಾಗಳು ಕಾಲಾಂತರದಲ್ಲಿ ಬದಲಾಗಿ ಕಲರ್ ಫುಲ್ ಸಿನಿಮಾವಾಗಿ, 3ಡಿ ಹಾಗೇ ದಿನದಿನ ಹೊಸತನವನ್ನು ತೋರಿಸುತ್ತಲೇ ಇದೆ.

> **ಸುಮ್ಮನೇ ನೋಡುತ್ತಾ ಕುಳಿತವರಿಗೆ ಸಿನಿಮಾ ಕಾಡಬೇಕು. ಅಲ್ಲಿನ ಯಾವುದೋ ಒಂದು ಭಾವ ಕನೆಕ್ಟ್ ಆಗಲಿಲ್ಲವೆಂದರೆ, ಅದು ಹೇಗೆ ತಾನೇ ಸಿನಿಮಾ ಆದೀತು?**



ಭಾವನೆಯ ರೂಪ

ಕಪ್ಪು ಮತ್ತು ಬಿಳಿಯಲ್ಲೇ ಎಲ್ಲ ಭಾವನೆ ಬಿಚ್ಚಿಡುತ್ತಿದ್ದರು. ಒಂದು ವಸ್ತುವಿನ ಅದರದ್ದೇ ಆದ ಮೂಲ ಬಣ್ಣದಿಂದಲ್ಲದಿದ್ದರೂ ಅದು ಜನರನ್ನು ಆರ್ಷಿಸಿತ್ತು ಏಕೆಂದರೆ ಸಿನಿಮಾದಲ್ಲಿ ಜನರು ತಮ್ಮನ್ನು ತಾವು ಗುರುತಿಸಿಕೊಳ್ಳಲು ಈಗಾಗಲೆ ಪ್ರಾರಂಭಿಸಿದ್ದರು. ಯಾವಾಗಲೂ ಸಿನಿಮಾ ನೋಡುಗನನ್ನು ತನ್ನ ಜಾಲದಲ್ಲಿ ಇರಿಸಿಕೊಳ್ಳುತ್ತದೆ. ಸುಮ್ಮನೇ ನೋಡುತ್ತಾ ಕುಳಿತವರಿಗೆ ಸಿನಿಮಾ ಕಾಡಬೇಕು. ಅಲ್ಲಿನ ಯಾವುದೋ ಒಂದು ಭಾವ ಕನೆಕ್ಟ್

ಆಗಲಿಲ್ಲವೆಂದರೆ, ಅದು ಹೇಗೆ ತಾನೇ ಸಿನಿಮಾ ಆದೀತು?

ಬಣ್ಣಬಳಿದುಕೊಂಡಾಗ

ಕಣ್ಣಿಗೆ ಕಾಣುತ್ತಿದ್ದ ಕಪ್ಪುಬಿಳುಪನ್ನು ಬದಲಿಸು ಹಲವಾರು ಪ್ರಯತ್ನಗಳು ನಡೆದವು. ಎಡ್ವರ್ಡ್ ರೈಮಂಡ್ ಟರ್ನರ್ ಅವರು ಮೊದಲ ಬಾರಿಗೆ ಬಿಳಿಪರದೆಯ ಮೇಲೆ ಬಣ್ಣದ ಹಾಸನ್ನು ತರಲು ಯತ್ನಿಸುತ್ತಾರೆ, ನಂತರದಲ್ಲಿ ಬಣ್ಣದ ಸಂಯೋಜನೆಗಳನ್ನು ಛಾಯಾಗ್ರಹಣದಲ್ಲಿ ಪರಿಚಯವಾದ ಕಲರ್ ಸಿನಿಮಾಗಳು ರಂಗಕ್ಕೆ ಪರಿಚಯವಾಗುತ್ತಾ ಜನರ ಕಣ್ಣೀಗೆ ಬೀಳುತ್ತದೆ. 1909ರಲ್ಲಿ ಕಿನೆಮಾಕಲರ್ ಚಲನಚಿತ್ರಗಳನ್ನು (ಮೋಷನ್ ಪಿಕ್ಚರ್) ಪರಿಚಯಿಸುತ್ತಾರೆ. 1906ರ ಈಚೆಗೆ ಚಲಿಸುವ ವಸ್ತುಗಳ ಸ್ವಾಭಾವಿಕವಾದ ಬಣ್ಣಗಳು ಸಿನಿಮಾಗಳಲ್ಲಿ ಬಿಂಬಿತವಾಗುತ್ತಾ ಬಂದಿದೆ. ನಂತರದಲ್ಲಿ 1908 ರಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೊದಲು ಪ್ರದರ್ಶನ ಕಂಡ ಟು ವಿಸಿಟ್ ಟು ದ ಸೀ ಸೈಡ್ ಸಿನಿಮಾ ಮೊದಲ ಸ್ವಾಭಾವಿಕ ಬಣ್ಣವನ್ನು ಹೊಂದಿದ ಸಿನಿಮಾ ಆಗಿ ಗುರುತಿಸಿಕೊಂಡಿದೆ. ಭಾರತದಲ್ಲಿ ಮೋತಿ ಬಿ ಗಿಡ್ವಾಣಿಯವರ ನಿರ್ದೇಶನದಲ್ಲಿ ಇಂಪೆರಿಯಲ್ ಸಿನಿಮಾ ಕಂಪನಿಯ ಮೂಲಕ 1937 ರಲ್ಲಿ ನಿರ್ಮಾಣವಾದ ಕಿಸಾನ್ ಕನ್ಯಾ ಎಂಬ ಸಿನಿಮಾ ಮೊದಲ ಕಲರ್ ಸಿನಿಮಾ ಆಗಿ ಪ್ರದರ್ಶನವನ್ನು ಕಂಡಿತು.

ಭಾರತದಲ್ಲಿ 1930-40 ರ ಸಂದರ್ಭದಲ್ಲಿ ಬ್ಲಾಕ್ ಆಂಡ್ ವೈಟ್ ಸಿನಿಮಾಗಳೇ ಮುಂಚೂಣಿಯಲ್ಲಿತ್ತು. ಕೆಲವು ಕಲರ್ ಸಿನಿಮಾಗಳು ತೆರೆಯ ಮೇಲೆ ಕಾಣಿಸಿಕೊಂಡರೂ ಹೆಚ್ಚಿನ ಸದ್ದನ್ನು ಮಾಡಲಿಲ್ಲ. ಪ್ರಾರಂಭದಲ್ಲಿ ಬಣ್ಣಗಳನ್ನು ಪರದೆಯ ಮೇಲೆ ತರುವುದು ಕಷ್ಟ ಸಾಧ್ಯವಾಗಿತ್ತು ತದ 1950ರ ನಮತರ ಸಿನಿಮಾ ಕ್ಷೇತ್ರದಲ್ಲಿ ಹೊಸ ಹೊಸ ತಂತ್ರಜ್ಞಾನದ ಮೂಲಕ ಸಿನಿಮಾಗಳು ಬಣ್ಣದ ಸಿನಿಮಾಗಳು ತೆರೆಯ ಮೇಲೆ ಪ್ರದರ್ಶನವನ್ನು ಕಂಡವು. 1951ರಲ್ಲಿ ತೆರೆಕಂಡ ರಾಜ್ ಕಪೂರ್ ಅವರ ಅವಾನಾ ಮತ್ತು ಮದರ್ ಇಂಡಿಯಾ ಚಿತ್ರಗಳಲ್ಲಿ ಸೂಕ್ಷ್ಮವಾಗಿ ಉಪಯೋಗಿಸಲ್ಪಟ್ಟ ಬಣ್ಣಗಳನ್ನು ನಾವು ಕಾಣಬಹುದಾಗಿದೆ. ಭಾರತದ ಹಳ್ಳಿಯ ಚಿತ್ರಣವನ್ನು ತಿಳಿಸಿದ ಮೆಹಬೂಬ್ ಖಾನ್ ಅವರ ಮದರ್ ಇಂಡಿಯಾ ಚಿತ್ರ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾಗಿತ್ತು. ಈ ಚಿತ್ರದ ಕಲರ್ ಫಿಲ್ಮ್ ಎನ್ನುವ ಕಾರಣಕ್ಕೆ ಇದು ಮಹತ್ವವನ್ನು ಪಡೆದಿತ್ತು. ಸಿನಿಮಾಗಳು ಹೇಗೆಲ್ಲ ವರ್ಷದಿಂದ ವರ್ಷಕ್ಕೆ ಬದಲಾವಣೆಯನ್ನು ಹೊಂದುತ್ತಾ ಬಂದಿದೆ.

ಜರ್ಮನಿಯ ಕಲರ್ ಟೆಕ್ನಾಲಜಿಯನ್ನು 1940ರಲ್ಲಿ ಪ್ರಭಾತ್ ಫಿಲ್ಮ್ ಕಂಪನಿಯು ಸೈರಂಧ್ರಿ ಎಂಬ ಪೌರಾಣಿಕ ಕಥೆಗೆ ಬಳಸಲಾಯಿತು. ಸಿನಿಮಾ ತಂತ್ರಜ್ಞಾನದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿದ್ದು 1960ರ ಕಾಲಘಟ್ಟ ಎಲ್ಲ ಪ್ರೊಡಕ್ಷನ್ ಹೌಸ್‌ಗಳು ಕಲರ್ ಸಿನಿಮಾಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಾ ಬಂದವು. 1959ರಲ್ಲಿ ಬಿಡುಗಡೆಯಾದ ವಿ.ಶಾಂತಾರಾಮ್ ಅವರ ನವರಂಗ್ ಸಿನಿಮಾ ಕ್ಷೇತ್ರದಲ್ಲಿ ಹೊಸತನವನ್ನು ತರಲು ಶುರುಮಾಡಿತು.

ಹಾಡಿಗೆ ಮಾತ್ರ ಕಲರ್‌ಗಳು ಬಳಕೆಯಾಗುತ್ತಾ ಬಂದಿದ್ದೂ ಇದೆ. ಕೆ.ಆಸಿಫ್ ಅವರ ಮುಘಲ್-ಎ-ಅಜಾಮ್ ಮೊದಲು ಬ್ಲಾಕ್ ಆಂಡ್ ವೈಟ್ ಸಿನಿಮಾ ಆಗಿ ಬಿಡುಗಡೆಯಾದರೂ ಇದರಲ್ಲಿ ಬರುವ ಹಾಡಿನ ಭಾಗಗಳು ಕಲರ್ ಸಿನಿಮಾ ಆಗಿ ಹೊಂದಿದ್ದು ಇದರ ವಿಶೇಷತೆ. ನಂತರದಲ್ಲಿ ಇದು 2004 ರಲ್ಲಿ ಇದು ಸಂಪೂರ್ಣ ಕಲರ್ ಸಿನಿಮಾ ಆಗಿ ಬಿಡುಗಡೆಗೊಂಡಿತ್ತು.

ಕಲರ್ ಸಿನಿಮಾದ ಕಾಲ

1970ರ ನಂತರದಲ್ಲಿ ಕಲರ್ ಸಿನಿಮಾಗಳು ಹೆಚ್ಚಿನದಾಗಿ ಪ್ರೇಕ್ಷಕರನ್ನು ಸೆಳೆದಿದ್ದಲ್ಲದೆ ಹೆಚ್ಚಿನ ಸಿನಿಮಾಗಳು ಕಲರ್ ಫಿಲ್ಮ್‌ಗಳಾಗಿಯೇ ನಿರ್ಮಾಣವಾಗಿದೆ. ಅಣ್ಣವ್ರು ನಟಿಸಿದ್ದ ಕಪ್ಪುಬಿಳುಪು ಮತ್ತು ಕಲರ್ ಸಿನಿಮಾಗಳಲ್ಲಿ ಅವರ ಅಭಿಮಾನಿಗಳ ಲವು ಕಿಂಚಿತ್ತು ಕಡಿಮೆಯಾಗಿರದಿದ್ದು ಕನ್ನಡಿಗರು ನೋಡುತ್ತಲೇ ಬಂದಿದ್ದೇವೆ.

ಇದು ಹೊಸ ಟ್ರೆಂಡ್ ಜಮಾನ

ಸಿನಿಮಾದಲ್ಲಿ ಈಗ ಒಂದು ಟ್ರೆಂಡ್ ಶುರುವಾಗಿದೆ ಅದು ಡಾರ್ಕ್ ಥೀಮ್ ಪೆಲೆಟ್ ಸಿನಿಮಾಗಳು. ಪ್ರಶಾಂತ್ ನೀಲ್ ಅವರ ಕೆ.ಜಿ.ಎಫ್ 1 ಮತ್ತು 2 , ಸಲಾರ್, ಕಬ್ಜಾ ಇವೆಲ್ಲವೂ ಇಂದಿನ ಟ್ರೆಂಡ್ ಆಗಿ ಬದಲಾಗುತ್ತಿದೆ. ಹೆಚ್ಚು ಕಪ್ಪು ಬಣ್ಣದಲ್ಲಿಯೇ ಬರುವ ಸಿನಿಮಾಗಳು ಈ ಪಟ್ಟಿಯಲ್ಲಿ ಸೇರ್ಪಡೆಯಾಗುತ್ತಿವೆ. ಕನ್ನಡ ಅಷ್ಟೆ ಅಲ್ಲದೇ ಎಲ್ಲ ಭಾಷೆಗಳಲ್ಲಿಯೂ ಇಂತಹ ಪ್ರಯೋಗಗಳು ನಡೆಯುತ್ತಿದೆ. ರೂಪಾಂತರ, ಕೋಟಾ ಫ್ಯಾಕ್ಟರಿ ಮತ್ತು ಮಲೆಯಾಳಂನಲ್ಲಿ ಬಂದಿರುವ ಬ್ರಹ್ಮಯುಗಂ ಇಂತಹ ಹಲವು ಸಿನಿಮಾಗಳು ಇಂದು ಸಕತ್ ಟ್ರೆಂಡ್‌ನಲ್ಲಿದೆ. ದಿನದಿಂದ ದಿನಕ್ಕೆ ಟ್ರೆಂಡ್ ಗಳು ಬದಲಾಗುತ್ತಿವೆ. ಬ್ಲಾಕ್ ಆಂಡ್ ವೈಟ್ ಸಿನಿಮಾ ನಂತರದಲ್ಲಿ ಕಲರ್ ಫುಲ್ ಸಿನಿಮಾಗಳು ಮುಂಚೂಣಿಯಲ್ಲಿತ್ತು ಈಗ ಮತ್ತೆ ಬ್ಲಾಕ್ ಪೆಲೆಟ್ ಸಿನಿಮಾಗಳು ಚಿತ್ರಮಂದಿರಕ್ಕೆ ಬರುತ್ತಿದೆ. ಸಿನಿಮಾಗಳು ಬಣ್ಣದ ಮೂಲಕ ಕಥೆಯನ್ನು ಹೇಳಿ ನೋಡುಗರನ್ನು ತಲುಪುತ್ತಿರುವುದು ವಿಶೇಷ.

ನೆನಪಿನ ಹಾದಿಯಲ್ಲಿ ಮಾಸದ ಹೆಜ್ಜೆಗಳು

> **ಒಮ್ಮೆ ನೀನು ಕೈಹಿಡಿದ ಕ್ಷಣ, ನಮ್ಮ ಹೃದಯಗಳ ನಡುವಿನ ಬಾಂಧವ್ಯದ ಆ ಸ್ಪಂದನೆ, ಎಲ್ಲವೂ ಅಳಿಯದಂತೆ ಮನಸ್ಸಿನಲ್ಲಿ ಉಳಿದುಕೊಂಡಿವೆ. ಇದೀಗ ನೀನು ನನ್ನ ಹತ್ತಿರ ಇಲ್ಲದಿರಬಹುದು! ಆದರೆ ನಿನ್ನ ನೆನಪುಗಳು ನನ್ನ ಸುತ್ತಮುತ್ತಲೂ ನಿಂತಿವೆ.**

● ಲಕ್ಷ್ಮೀಕಾಂತ್ ಎಲ್.ವಿ.

ನಿನ್ನ ಜೊತೆ ಕಳೆದ ಪ್ರೀತಿ ಭರಿತ ಕ್ಷಣಗಳು, ಹೃದಯದ ನವಿಲುಗರಿಗಳಂತೆ ಎದ್ದು ಕಾಣುತ್ತಿವೆ. ನಿನ್ನೊಂದಿಗೆ ಕಳೆದ ಪ್ರತಿ ಕ್ಷಣವೂ ನನ್ನ ಮನಸ್ಸಿನಲ್ಲಿ ಹಸಿರು ನೆನಪಾಗಿ ಉಳಿದಿವೆ. ಈ ನೆನಪುಗಳು ನನ್ನ ಮನಸ್ಸಿನ ಒತ್ತಾಸೆಯಾಗಿ, ನನ್ನ ಆಲೋಚನೆಗಳ ಬೆನ್ನುಹತ್ತುತ್ತಿವೆ. ಗೆಳತಿ, ಕಾಲವು ಬದಲಾಗಬಹುದು, ಆ ಸಮಯದ ನೋವು-ನಲಿವುಗಳು ಮರೆಯಾದರೂ, ಪ್ರೀತಿಯ ನೆನಪುಗಳು ಮಾತ್ರ ಹೃದಯದ ಗರ್ಭದಲ್ಲೇ ಹಚ್ಚ ಹಸಿರಾಗಿಯೇ ಉಳಿದಿರುತ್ತವೆ. ಬದುಕು ಬದಲಾದರೂ ಕೂಡ ಒಲವಿನ ಒನಪು ಬದಲಾಗದು ಕಣೆ. ಬದಲಾಗಿದ್ದು ಬದುಕಾದರೂ ಕೂಡ ಪ್ರೀತಿ ಎಂದಿಗೂ ಪ್ರೀತೀನೆ.

ನೆನಪುಗಳ ಬೆನ್ನತ್ತಿದ ಮನಸ್ಸು

ನೀನು ನನ್ನ ಜೀವನದಿಂದ ದೂರವಾದರೂ, ನಿನ್ನ ಜೊತೆ ಕಳೆದ ಆ ನೆನಪುಗಳು ಇನ್ನೂ ನನ್ನ ಮನಸ್ಸಿನಲ್ಲಿ ಹಸಿರಾಗಿಯೇ ಉಳಿದಿವೆ. ದಿನಗಳು ಉರುಳಿದರೂ ಕೂಡ ನನಗೆ ಆ ನೆನಪುಗಳ ಚಿತ್ತಾರ ಮತ್ತೆ ಮತ್ತೆ ಕಣ್ಣೆದುರಾಗಿ ಮೂಡುತ್ತದೆ. ನಾವಿಬ್ಬರೂ ಸೇರಿ ಕಂಡಂತ ಪ್ರತಿ ಕನಸು, ಅಲ್ಲಿ ತೋರಿದ ಭವಿಷ್ಯಗಳೆಲ್ಲ ಒಂದೊಂದು ಹೂವಿನಂತೆ ಅದರ ಸುಮದಂತೆ ನನ್ನ ಹೃದಯದಲ್ಲಿ ಹೊಮ್ಮುತ್ತಿವೆ. ಕೇವಲ ಆ ನೆನಪುಗಳ ಜತೆ ಕಳೆದು ಹೋದ ಆ ಕ್ಷಣಗಳನ್ನು ಈಗ ಹೊಸದಾಗಿ ಅನುಭವಿಸುತ್ತಿರುವಂತೆ ಮನಸ್ಸು ತೇಲುತ್ತಿದೆ.



ನೆನಪುಗಳ ಹಾದಿಯಲ್ಲಿ

ಗೆಳತಿ, ಪ್ರತಿ ನೆನಪಿನ ಹೆಜ್ಜೆಯು ನನ್ನ ಬದುಕಿನ ಹಾದಿಯಲ್ಲಿ ದೀಪವಿಟ್ಟಿದೆ. ಒಮ್ಮೆ ನೀನು ಕೈಹಿಡಿದ ಕ್ಷಣ, ನಮ್ಮ ಹೃದಯಗಳ ನಡುವಿನ ಬಾಂಧವ್ಯದ ಆ ಸ್ಪಂದನೆ, ಎಲ್ಲವೂ ಅಳಿಯದಂತೆ ಮನಸ್ಸಿನಲ್ಲಿ ಉಳಿದುಕೊಂಡಿವೆ. ಇದೀಗ ನೀನು ನನ್ನ ಹತ್ತಿರ ಇಲ್ಲದಿರಬಹುದು! ಆದರೆ ನಿನ್ನ ನೆನಪುಗಳು ನನ್ನ ಸುತ್ತಮುತ್ತಲೂ ನಿಂತಿವೆ. ನಿನ್ನ ಮಾತುಗಳು, ನಿನ್ನ ನಗು, ನಿನ್ನ ಕನಸುಗಳು ಪ್ರತಿಯೊಂದು ನನ್ನ ಜೀವನದಲ್ಲಿನ ಅಳಿಸದ ಪುಟವಾಗಿ ಉಳಿದಿವೆ. ಈ ನೆನಪುಗಳೆಲ್ಲವೂ ನನ್ನ ಮನಸ್ಸಿನಲ್ಲಿ ಹಸಿರು ಗಿಡದಂತೆ ಕಂಗೊಳಿಸುತ್ತಾ ನೆನಪುಗಳೆಲ್ಲ ಸುಮಗಳಾಗಿ ಅರಳಿ ನಿಂತಿವೆ. ಅವು ನನ್ನಲ್ಲಿ ಮಧುರವಾಗಿ ಹೂಮಳೆ ಸುರಿಸುತ್ತಿವೆ ಕಣೆ; ನನ್ನನ್ನು ಪ್ರೀತಿಯ ಒಡಲಾಗಿ ಸುತ್ತುತ್ತಿವೆ. ಕಾಲ ಸವೆದಷ್ಟೂ ಆ ನೆನಪುಗಳೆಲ್ಲ ಇನ್ನೂ ಹಸಿರಾಗಿ ಉಳಿದಿವೆ. ನನ್ನಲ್ಲಿ ಹೊಸ ಉತ್ಸಾಹ, ಹೊಸ ಬದುಕಿನ ಹಂಬಲವನ್ನು ನೀಡುತ್ತಿವೆ.

ಎಡಬಿಡದೆ ನೆಪಮಾಡಿ ಕಾಡುವ ನಿನ್ನ ನೆನಪುಗಳೊಂದಿಗೆ ಬಾಳುವುದು ಕಷ್ಟ. ಆದರೆ ಅದೇ ಸಮಯದಲ್ಲಿ ಅದು ಜೀವನದಲ್ಲಿ ದೊಡ್ಡ ಉತ್ಸಾಹವನ್ನೇ ತರುತ್ತದೆ. ಅವುಗಳನ್ನು ನನಗೆ ಉಳಿಸಿಕೊಟ್ಟ ರೀತಿಯೇ, ನನ್ನ ಹೃದಯವನ್ನು ಕೂಡ ಹಸಿರಾಗಿಸಿಕೊಂಡಿವೆ. ಎಷ್ಟೇ ನೆನಪುಗಳ ಜೊತೆ ಒದ್ದಾಡಿದರೂ ವಾಸ್ತವ ಜಗತ್ತಿನೊಂದಿಗೆ ಬದುಕುವುದು ಸ್ವಲ್ಪ ಕಷ್ಟ. ನಿನ್ನ ನೆನಪುಗಳ ಹಾದಿಯನ್ನೇ ನೋಡುತ್ತಾ ಕಾದಿರುವೆ. ಮರಳಿ ಬರುವೆಯೆಂಬ ನಂಬಿಕೆಯಲ್ಲಿ. ಬರುತ್ತೀಯಾ ತಾನೆ..?

ಗಿರಿಧಾಮಲ್ಲೊಂದು ಧಬ ಧಬೆ!

● ಪ್ರಹ್ಲಾದ ಪರ್ವತಿ

ಹಿಮಾಲಯ ಪರ್ವತ ಶ್ರೇಣಿಯಲ್ಲಿ ಉಗಮವಾಗುವ ಯಮುನಾ ನದಿಯ ಉಗಮ ಸ್ಥಾನದ ಯಮನೋತ್ರಿಗೆ ಕುಟುಂಬದೊಂದಿಗೆ ಪ್ರವಾಸ ಕೈಕೊಂಡಾಗ ಮಾರ್ಗ ಮಧ್ಯದ ಮಸ್ಸೂರಿಯ ಸುಂದರ ಹಚ್ಚ ಹಸುರಿನ ಗಿರಿಧಾಮದಲ್ಲಿ ಧುಮ್ಮಿಕ್ಕುವ ಧಭ ಧಭೆಯ ನೋಟ ಕುತೂಹಲ ಹುಟ್ಟಿಸಿತು. ಉತ್ತರಾಖಂಡದ ತೆಹ್ರಿ ಗರ್ವಾಲ್ ಜಿಲ್ಲೆಯ ರಾಮಗಾಂವ ಬಳಿಯ ಕೆಂಪ್ಟಿ ಜಲಪಾತದ ಭೋರ್ಗರೆತ ನಾದವು ನಿಸರ್ಗ ಸಂಗೀತದ ನಿರುಪಮ ಉದಾಹರಣೆ ಎಂದರೆ ತಪ್ಪಾಗದು. ಯಮನೋತ್ರಿಯ ಯಮುನಾನದಿಯ ಮೂಲದ ನೀರು ದಟ್ಟಾರಣ್ಯದ ಮೂಲಕ ಈ ಜಲಪಾತವನ್ನು ಸೃಷ್ಟಿಸುತ್ತದೆ. ಸ್ಫಟಿಕ ಸ್ವಷ್ಟ ನೀರಿನ ಜಲಪಾತವು ಬಂಗ್ಲೋ ಕಿ ಕಂಡಿ ಗ್ರಾಮದ ನೈರುತ್ಯದಿಂದ ಪ್ರಾರಂಭವಾಗಿ ವಾಯುವ್ಯಕ್ಕೆ ಚಲಿಸಿ ವರ್ಷವಿಡೀ ಹರಿಯುತ್ತದೆ. ಪರ್ವತದ ಶಿಲೆಗಳಲ್ಲಿ ನುಗ್ಗಿ ಬರುವ ನೀರು 4500 ಅಡಿಗಳ ಎತ್ತರದಿಂದ ಕಮರಿಗೆ ಬೀಳುತ್ತದೆ. ಅಲ್ಲಿಗೆ ಸೇರುವ ಮುನ್ನ ಐದು ವಿಭಿನ್ನ ತೊರೆಗಳಾಗಿ ಧುಮ್ಮಿಕ್ಕುವ ದೃಶ್ಯ ನೋಡುಗರನ್ನು ಮೋಡಿ ಮಾಡುತ್ತದೆ. ಜಲಪಾತದ ತಳದಲ್ಲಿರುವ ಕೊಳವು ಉಲ್ಲಾಸಕರ ಈಜುವಿಕೆಗೆ ಪ್ರಶಸ್ತವಾಗಿದೆ. ಹತ್ತಿರದ ಮಾನವ ನಿರ್ಮಿತ ದೊಡ್ಡ ಕೊಳದಲ್ಲಿ ಬೋಟಿಂಗ್ ಮಾಡಲು ಅವಕಾಶ ಕಲ್ಪಿಸಿದ್ದು ಅದು ಸಹ ನೀರಿನಾಟಕ್ಕೆ ಬಹು ಜನಪ್ರಿಯವಾಗಿದೆ. ಇಲ್ಲಿರುವ ಕ್ಲಿಫ್ ಜಂಪಿಂಗ್ ಸಾಹಸ ಕ್ರೀಡೆ ಯುವಕರನ್ನು ಸೆಳೆಯುತ್ತದೆ. ಜಲಪಾತದ ಕೆಳಗಿನವರೆಗೂ ಇಳಿಯಲು ಮೆಟ್ಟಿಲುಗಳಿದ್ದು, ಸದಾ ನೀರಿನ ತೇವದಿಂದ ಬಹು ಜಾಗರೂಕತೆಯಿಂದ ಮೆಟ್ಟಿಲು ಇಳಿದು ಹತ್ತಬೇಕು ಅಥವಾ ನಿಗದಿತ ಶುಲ್ಕ ನೀಡಿ ಕೇಬಲ್ ಕಾರ್ ಮೂಲಕ ಪಯಣಿಸಬಹುದು. ಸೀಳು ಸೀಳಾಗಿ ಹಾಲಿನ ನೊರೆಯಂತೆ ಪ್ರಪಾತಕ್ಕೆ ಉಕ್ಕಿ ಹರಿಯುವ ನೀರು ಸೊಗಸುಗಾತಿಯಂತೆ ಠೀವಿಯಿಂದ ಪ್ರಪಾತಕ್ಕೆ ಇಳಿಯುವದು ರುದ್ರ ರಮಣೀಯವಾಗಿದೆ. ಜಲಪ್ರವಾಹದ ತುಂತುರು ಹನಿಗಳು ಮಾರ್ಗದುದ್ದಕ್ಕೂ ಹಾರಿ ಬಂದು ವರ್ಷಾಧಾರೆಯ ಅನುಭವ ನೀಡುತ್ತವೆ. ಕೊಳಕ್ಕೆ ಬಿದ್ದ ಜಲದಿಂದ ಏಳುವ ಧೂಮದೊಡನೆ, ಭೋರ್ಗರೆತದ ಶಬ್ದ ಹೃದಯ ಕಂಪಿಸುವಂತಿರುತ್ತದೆ. ಕೊಳದಲ್ಲಿ ಸ್ನಾನ ಮಾಡಲು, ಈಜಲು ಮಕ್ಕಳಾದಿಯಾಗಿ ವಯಸ್ಕರರು ಸರದಿಗಾಗಿ ಕಾದು ನೀರಿನಲ್ಲಿ ಧುಮುಕುತ್ತಾರೆ.



ಕ್ಯಾಂಪ್ ಟೀ

ಸ್ವಾತಂತ್ರ್ಯ ಪೂರ್ವದಲ್ಲಿ (1835) ವಸಾಹತು ಶಾಹಿ ಯುಗದಲ್ಲಿ ಬ್ರಿಟಿಷ್ ಅಧಿಕಾರಿ ಜಾನ್ ಮೆಕಿನಾನ್ ಈ ಪ್ರವಾಸಿ ತಾಣವನ್ನು ಅಭಿವೃದ್ಧಿ ಪಡಿಸಿ ಆಗಾಗ್ಗೆ ಇಲ್ಲಿ ಚಹಾ ಕೂಟಗಳನ್ನು (ಇಚಇಟ ಖಿಭಿಚ) ಆಯೋಜಿಸುತ್ತಿದ್ದ. ಇದರಿಂದಾಗಿಯೇ ಈ ತಾಣಕ್ಕೆ ಕ್ಯಾಂಪ್ಟಿ ಜಲಪಾತ ಎಂದು ಹೆಸರು ಬಂದಿರುವದಾಗಿ ಹೇಳಲಾಗಿದೆ. ಸಮುದ್ರ ಮಟ್ಟದಿಂದ 1400ಮೀಟರ್ ಎತ್ತರದಲ್ಲಿರುವ ಈ ತಾಣವು ಸುತ್ತಮುತ್ತಲಿನ ಪರ್ವತಗಳ ಸುಂದರ ನೋಟದಿಂದ ಲಕ್ಷಾಂತರ ಪ್ರವಾಸಿಗರನ್ನು ದೂರದೂರಿನಿಂದ ಆಕರ್ಷಿಸುತ್ತದೆ. ಫಾಲ್ಸ್ ಬಳಿಯ ಲಖ್ವಾಡದಲ್ಲಿ ಕೆಂಪ್ಟಿಫಾಲ್ಸ್ ರೋಪ್ ವೇ ಮೂಲಕ ದೈತ್ಯಾಕಾರದ ಜಲಪಾತ ಅದರ ಸುತ್ತಮುತ್ತಲಿನ ರಮ್ಯ ಪ್ರದೇಶದ ಪಕ್ಷಿ ನೋಟವನ್ನು ಸವಿಯಬಹುದು. ಪ್ರಕೃತಿಪ್ರಿಯರು ಇಲ್ಲಿಂದ ನಿಸರ್ಗದ ಪ್ರಶಾಂತ ವಾತಾವರಣ, ಪಕ್ಷಿ ಸಂಚಾರ, ಮೌನ ಸೀಳಿ ಜಿಗಿದು ಬರುವ ನೀರಿನ ಲಾಸ್ಯವನ್ನು ಕಣ್ತುಂಬಿಕೊಳ್ಳಬಹುದು.ಪ್ರಕೃತಿಯ ಅದ್ಭುತ ನೋಟಗಳನ್ನು ಛಾಯಾಗ್ರಹಣ ಮಾಡುವವರಿಗೆ ಇದು ನೆಚ್ಚಿನ ತಾಣವಾಗಿದೆ. ವಾರ್ಷಿಕ ಹತ್ತು ಲಕ್ಷ ಪ್ರವಾಸಿಗರನ್ನು ಆಕರ್ಷಿಸುವ ಈ ಜಲಪಾತಕ್ಕೆ ಬೇಸಿಗೆಯ ಉತ್ತುಂಗದಲ್ಲಿ ಪ್ರವಾಸಿಗರ ದಂಡೇ ಹರಿದು ಬರುತ್ತದೆ. ಕೆಂಪ್ಟಿ ಫಾಲ್ಸ್ ಪ್ರದೇಶದ ಆಹಾರ ಮಳಿಗೆಗಳಲ್ಲಿ ಸ್ಥಳೀಯ ರುಚಿಕರ ಭಕ್ಷ್ಯಗಳನ್ನು ಸವಿಯಬಹುದು. ಕರಕುಶಲ ವಸ್ತು, ಸ್ಮರಣಿಕೆ, ಸಾಂಪ್ರದಾಯಿಕ ಗರ್ವಾಲಿ ಶಾಲು, ಕಲಾಕೃತಿಗಳ ಮಾರಾಟದ ಅಂಗಡಿಗಳು ನೋಡುಗರನ್ನು ಆಕರ್ಷದೇ ಇರವು. ಜಲಪಾತದ ವೀಕ್ಷಣೆಗೆ ಬೆಳಗಿನ 8 ಗಂಟೆಯಿಂದ ಸಂಜೆ 5 ರ ವರೆಗೆ ಮಾತ್ರ ಕಾಲಾವಕಾಶವಿರುತ್ತದೆ. ಮಸ್ಸೂರಿಯಿಂದ ಯಮನೋತ್ರಿಗೆ ಸಾಗುವ ಮಾರ್ಗದಲ್ಲಿ 13 ಕಿಮೀ ದೂರದಲ್ಲಿರುವ ಈ ಜಲಪಾತವನ್ನು ಬಸ್, ಟ್ಯಾಕ್ಸಿ ಮೂಲಕ ತಲುಪಬಹುದು. ಡೆಹ್ರಾಡೂನ್ ರೈಲು ನಿಲ್ದಾಣ 45 ಕಿಮೀ ಹಾಗೂ ಡೆಹ್ರಾಡೂನ್ ಜಾಲಿ ಗ್ರಾಂಟ್ ವಿಮಾನ ನಿಲ್ದಾಣ 69 ಕಿಮೀ ದೂರದಲ್ಲಿದೆ. ಇಲ್ಲಿಗೆ ಭೇಟಿ ನೀಡಲು ಜೂನ್‌ನಿಂದ ಅಕ್ಟೋಬರ್‌ವರೆಗೆ ಹವಾಮಾನ ಆಹ್ಲಾದಕರವಾಗಿರುತ್ತದೆ. ಜುಲೈದಿಂದ ಆಗಸ್ಟ್‌ವರೆಗಿನ ಮಳೆಗಾಲದಲ್ಲಿ ಜಲಪಾತವು ಹಚ್ಚ ಹಸರಿನಿಂದ ಕಂಗೊಳಿಸುತ್ತದೆ ಹಾಗೂ ಜನಸಂದಣಿ ಕಡಿಮ ಇರುತ್ತದೆಯಾದರೂ ಮುನ್ನೆಚ್ಚರಿಕೆಯಿಂದ ಪ್ರವಾಸವನ್ನು ಕೈಕೊಳ್ಳಬಹುದಾಗಿದೆ.

ಉತ್ತರಾಖಂಡದ ಅತ್ಯಂತ ಜನಪ್ರಿಯವಾದ ಕೆಂಪ್ಟಿ ಜಲಪಾತವು ಕಳೆದ 150 ವರುಷಗಳಿಂದ ಪ್ರವಾಸಿಗರನ್ನು ಆಕರ್ಷಿಸುವ ಐತಿಹಾಸಿಕ ಮಹತ್ವದ ತಾಣವಾಗಿದೆ. ಬೃಹತ್ ಪರ್ವತ ಬಂಡೆ ಹಸಿರು ಕಣಿವೆಗಳಿಂದ ಸುತ್ತುವರೆದು ಕಿರಿದಾದ-ಇಳಿಜಾರು ರಸ್ತೆಯಲ್ಲಿ ಪ್ರಯಾಣಿಸುವಾಗ ರೋಮಾಂಚನವಾಗುತ್ತದೆ.ದೂರದಿಂದಲೇ ಜಲಪಾತಕ್ಕೆ ಬೀಳುವ ನೀರಿನ ಹಿತವಾದ ಶಬ್ದವು ನೈಸರ್ಗಿಕ ಚಮತ್ಕಾರವನ್ನು ಪರಿಚಯಿಸುತ್ತದೆ.

> **ಪ್ರಕೃತಿಪ್ರಿಯರು ಇಲ್ಲಿಂದ ನಿಸರ್ಗದ ಪ್ರಶಾಂತ ವಾತಾವರಣ, ಪಕ್ಷಿ ಸಂಚಾರ, ಮೌನ ಸೀಳಿ ಜಿಗಿದು ಬರುವ ನೀರಿನ ಲಾಸ್ಯವನ್ನು ಕಣ್ತುಂಬಿಕೊಳ್ಳಬಹುದು.ಪ್ರಕೃತಿಯ ಅದ್ಭುತ ನೋಟಗಳನ್ನು ಛಾಯಾಗ್ರಹಣ ಮಾಡುವವರಿಗೆ ಇದು ನೆಚ್ಚಿನ ತಾಣವಾಗಿದೆ. ವಾರ್ಷಿಕ ಹತ್ತು ಲಕ್ಷ ಪ್ರವಾಸಿಗರನ್ನು ಆಕರ್ಷಿಸುವ ಈ ಜಲಪಾತಕ್ಕೆ ಬೇಸಿಗೆಯ ಉತ್ತುಂಗದಲ್ಲಿ ಪ್ರವಾಸಿಗರ ದಂಡೇ ಹರಿದು ಬರುತ್ತದೆ.**

ಅವೆನ್ಯೂ ರೋಡ್
ನಿತ್ಯದ ವಿಂಡೋ ಶಾಪಿಂಗ್
ವಿಶ್ವವಾಣಿ
13.11.2024 ಬುಧವಾರ
vishwavani.news

ದಿನ ಭವಿಷ್ಯ

ಮೇಷ ಬಿಡುವಿರದ ಕೆಲಸದಲ್ಲಿ ತೊಡಗಿಸಿಕೊಂಡರೂ ಆರೋಗ್ಯ ಚೆನ್ನಾಗಿರುತ್ತದೆ. ಹಾಗಿದ್ದರೂ ಬದುಕನ್ನು ಲಘುವಾಗಿ ತೆಗೆದುಕೊಳ್ಳಬೇಡಿ.

ವೃಷಭ ಸಹೋದರ-ಸಹೋದರಿಯರಿಂದ ಆರ್ಥಿಕ ಸಹಾಯ ಸಿಗಲಿದೆ. ಜತೆಗಿರುವವರ ಜತೆ ವಾದ ವಿವಾದಕ್ಕೆ ತೊಡಗಬೇಡಿ.

ಮಿಥುನ ಯಾವುದೇ ಭಿನ್ನಾಭಿಪ್ರಾಯದ ವಿಷಯಗಳಿದ್ದಲ್ಲಿ ಸೌಹಾರ್ದತೆಯಿಂದ ಬಗೆಹರಿಸಿಕೊಳ್ಳಿ. ಪ್ರೀತಿ ಪಾತ್ರರ ಸಂಗವಿಲ್ಲದೇ ಖಾಲಿತನ.

ಕಟಕ ಇಂದು ಮನಸ್ಸು ಸಂದಿಗ್ಧತೆಯಿಂದ ಕೂಡಿರುತ್ತದೆ. ಹೊಸ ಪುಸ್ತಕವನ್ನು ಖರೀದಿಸುವಿರಿ. ಸಂಗಾತಿಯ ಜತೆ ಕಲಹ.

ಸಿಂಹ ಮಾನಸಿಕವಾಗಿ ಅತ್ಯಂತ ದುರ್ಬಲರಾಗಿರುತ್ತೀರಿ. ಆದ್ದರಿಂದ ನೋವಿಗೀಡಾಗಬಹುದಾದ ಸಂದರ್ಭಗಳಿಂದ ದೂರವಿರಿ.

ಕನ್ಯಾ ಮನೆಯಿಂದ ಹೊರಡುವಾಗ ಹಿರಿಯರ ಆಶೀರ್ವಾದವನ್ನು ತೆಗೆದುಕೊಳ್ಳಿ. ಇದರಿಂದ ನಿಮಗೆ ಆರ್ಥಿಕ ಲಾಭವಾಗಲಿದೆ.

ತುಲಾ ಈ ಅವಧಿ ಹೊಸ ಯೋಜನೆಗಳು ಹಾಗೂ ಆಲೋಚನೆಗಳ ಬಗ್ಗೆ ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸೂಕ್ತವಾಗಿದೆ.

ವೃಶ್ಚಿಕ ದೀರ್ಘಕಾಲ ಬಾಕಿಯಿರುವ ಯೋಜನೆಗಳು ಇಂದು ಕೈಗೂಡಲಿದೆ. ಹೊಸ ಉದ್ಯಮಗಳನ್ನು ಆರಂಭಿಸುವ ಬಗ್ಗೆ ಯೋಚಿಸುವಿರಿ.

ಧನು ದಿನದ ಕೊನೆಯಲ್ಲಿ ಮನೆಯ ಸದಸ್ಯರಿಗೆ ಸಮಯ ನೀಡಲು ಬಯಸುವಿರಿ. ಆದರೆ ಈ ಸಮಯ ಆಪ್ತರೊಂದಿಗೆ ವಿವಾದವಾಗಬಹುದು.

ಮಕರ ಖರ್ಚುಗಳಲ್ಲಿ ಅನಿರೀಕ್ಷಿತ ಏರಿಕೆ ನಿಮ್ಮ ಮನಸ್ಸಿನ ಶಾಂತಿಗೆ ಭಂಗ ತರುತ್ತದೆ. ಮಕ್ಕಳ ಕನಸುಗಳನ್ನು ಬೆಂಬಲಿಸುವುದು ಅಗತ್ಯ.

ಕುಂಭ ಸೋಲುಗಳಿಂದ ಪಾಠ ಕಲಿಯುವಿರಿ. ಸಹೋದ್ಯೋಗಿಗಳು ಮತ್ತು ಹಿರಿಯರ ಸಂಪೂರ್ಣ ಸಹಕಾರದಿಂದ ಕಚೇರಿ ಕೆಲಸ ಮುಗಿಯುತ್ತದೆ.

ಮೀನ ಅನಗತ್ಯವಾಗಿ ದೂಷಿಸುವುದು ಚೈತನ್ಯ ವನ್ನು ಕುಗ್ಗಿಸಬಹುದು. ಮನೆಯಲ್ಲಿನ ಕೆಲವು ಬದಲಾವಣೆಗಳು ಭಾವುಕರನ್ನಾಗಿಸಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಕನ್ನಡದ ಖ್ಯಾತ ಪತ್ರಕರ್ತ, ಲೇಖಕ ರವಿ ಬೆಳಗೆರೆ ಹುಟ್ಟುಹಬ್ಬ
- 1907: ಪೌಲ್ ಕೊರ್ನೂ ಎಂಬ ಎಂಜಿನಿಯರ್‌ನು ಪೈಲೇಟ್‌ಗಳಿಲ್ಲದ ಹೆಲಿಕಾಪ್ಟರ್ ಅನ್ನು ಹಾರಿಸಿದನು
- 2015: ಪ್ಯಾರಿಸ್‌ನಲ್ಲಿ ಭಯೋತ್ಪಾದಕರ ದಾಳಿಯಿಂದ 130ಕ್ಕೂ ಹೆಚ್ಚುಜನ ಅಸುನಿಗಿದ್ದರು.
- ವಿಶ್ವ ಕರುಣೆ ದಿನ

ಚಿತ್ರಸ್ಫೂರ್ತಿ



ದಿನ ದರ್ಶಿಕೆ

ಕಾರ್ತಿಕ ಮಾಸ, ಶುಕ್ಲ ಪಕ್ಷ, ದ್ವಾದಶಿ ತಿಥಿ, ರೇವತಿ ನಕ್ಷತ್ರ, ವಜ್ರ ಯೋಗ, ಬಾಲವ ಕರಣ, ಹೇಮಂತ ಋತು, ಮೀನ ಲಗ್ನ, ತುಲಾ ರಾಶಿ, ದಕ್ಷಿಣಾಯನ, ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಒಂದು ಗ್ಲಾಸ್ ಬಿಸಿ ನೀರಿಗೆ 3 ಕಮಲದ ಹೂಗಳನ್ನು ಸೇರಿಸಿ 2 ಗಂಟೆಗಳ ಕಾಲ ಬಿಡಿ. ನಂತರ ಅದನ್ನು ಶೋಧಿಸಿ ಸ್ವಲ್ಪ ತಣ್ಣಗಾದ ನಂತರ ಕುಡಿಯಿರಿ. ಈ ಪಾನೀಯ ದೇಹವನ್ನು ತಂಪಾಗಿಸುತ್ತದೆ. ಮೂತ್ರಪಿಂಡಗಳನ್ನು ಆರೋಗ್ಯವಾಗಿರಿಸುತ್ತದೆ. ಹೃದಯದ ಆರೋಗ್ಯಕ್ಕೆ ಒಳ್ಳೆಯದು. ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ. ಅತಿಯಾದ ರಕ್ತಸ್ರಾವ ನಿಲ್ಲುತ್ತದೆ.

ಸೌಂದರ್ಯ ಸೂತ್ರ

ಒಂದು ಬೌಲ್‌ಗೆ ಸ್ವಲ್ಪ ಮೊಸರು, ಬಾದಾಮಿ ಪುಡಿಯನ್ನು ಸೇರಿಸಿ ಒಂದು ಪ್ಯಾಕ್ ತಯಾರಿಸಿಕೊಳ್ಳಿ. ನಂತರ ಅದನ್ನು ಮುಖಕ್ಕೆ ಹಚ್ಚಿ ಒಂದೆರಡು ನಿಮಿಷ ಮಸಾಜ್ ಮಾಡಿ ಒಣಗುವವರೆಗೆ ಬಿಡಿ. ಬಳಿಕ, ತಣ್ಣನೆ ನೀರಿನಿಂದ ಮುಖವನ್ನು ತೊಳೆದುಕೊಳ್ಳಿ. ಇದರಿಂದ ತ್ವಚೆ ಮೃದುವಾಗುವುದರ ಜತೆಗೆ ಮುಖದ ಮೇಲಿನ ಕಲೆಗಳು ಕಡಿಮೆಯಾಗುತ್ತವೆ.

ಆನೆಗಳು ಎಷ್ಟೇ ಬೃಹದಾಕಾರವಾಗಿದ್ದರೂ, ಅದು ಎಲ್ಲರಲ್ಲೂ ಪ್ರೀತಿಯನ್ನು ತೋರಿಸುವುದು, ತನ್ನ ಪಾಡಿಗೆ ತಾನು ಇರುವುದನ್ನು ನೋಡುವುದರಲ್ಲೇ ತುಂಬಾ ಕ್ಯೂಟ್‌ನೆಸ್ ಇದೆ!
ಚಿತ್ರಕೃಪೆ: ನ್ಯಾಷನಲ್ ಜಿಯೋಗ್ರಾಫಿ

ಮುಂದಿಟ್ಟ ಹಾಲನ್ನು ತಿರಸ್ಕರಿಸಿದ ರಾಮಕೃಷ್ಣನ ಬೆಕ್ಕು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಮ್ಮೆ ಕೃಷ್ಣದೇವರಾಯ ಹತ್ತಾರು ಜನರಿಗೆ ಸಣ್ಣ ಬೆಕ್ಕಿನ ಮರಿಗಳನ್ನು ಕೊಟ್ಟು, ಅವನನ್ನು ಸಾಕಲು ಅನುಕೂಲವಾಗುವಂತೆ ಒಂದೊಂದು ಹಸುವನ್ನು ಕೊಟ್ಟ.

''ಮಹಾಪ್ರಭೂ ನನಗೂ ಒಂದು ಬೆಕ್ಕಿನ ಮರಿ ಕೊಡಿ'' ಎಂದ ತೆನಾಲಿ ರಾಮಕೃಷ್ಣ. ಅರಸ ಅವನಿಗೂ ಒಂದು ಮರಿ ಮತ್ತು ಹಸುವನ್ನು ಕೊಟ್ಟು ''ನಿಮ್ಮಲ್ಲಿ ಬೆಕ್ಕನ್ನು ಯಾರು ಚೆನ್ನಾಗಿ ಬೆಳೆಸುತ್ತೀರೋ ಅವರಿಗೆ ಬಹುಮಾನ ಕೊಡ್ತಿನಿ ಎಂದ.

ಮೂರು ತಿಂಗಳ ಬಳಿಕ ರಾಜನ ಆಜ್ಞೆಯಂತೆ ಎಲ್ಲರೂ ಬೆಕ್ಕುಗಳನ್ನು ಕರೆತಂದರು. ಬೆಕ್ಕುಗಳಿಗೆಂದು ರಾಣಿವಾಸದವರು ಒಂದೊಂದು ಬಟ್ಟಲು ಹಾಲನ್ನಿಟ್ಟರು. ಬೇರೆಲ್ಲ ಬೆಕ್ಕುಗಳು ಹಾಲನ್ನು ಕುಡಿಯಲಾರಂಭಿಸಿದಾಗ ರಾಮಕೃಷ್ಣನ ಬೆಕ್ಕು ಮಾತ್ರ ಸಿರ್ ಎಂದು ಮುಖ ತಿರುಗಿಸಿತು. ಅದನ್ನು ಕಂಡ ಅರಸ ಕೇಳಿದ ''ರಾಮಕೃಷ್ಣ, ನಿನ್ನ ಬೆಕ್ಕೇಕೆ ಹಾಲು ಕುಡಿಯುತ್ತಿಲ್ಲ?''

''ಮಹಾಪ್ರಭೂ, ಬೆಕ್ಕುಗಳಿಗೆ ಕಣ್ಣು ಮುಚ್ಚಿ ಹಾಲು ಕುಡಿಯೋದೊಂದು ದುರಭ್ಯಾಸ. ನನ್ನ ಬೆಕ್ಕು ಹಾಗೆ ಮಾಡಬಾರದೂಂತ ಮೊದಲ ದಿನ ಬಿಸಿ ಹಾಲನ್ನ ಕೊಟ್ಟೆ. ಕುಡಿದಾಗ ಅದರ ಮೀಸೆ ಸುಟ್ಟಿತು. ಮತ್ತೆ ಪ್ರತಿದಿನವೂ ಹಾಗೆ ಮಾಡಿದೆ. ಈಗ ಬೆಕ್ಕು ಹಾಲನ್ನೇ ಕುಡಿಯೊದಿಲ್ಲ'' ಎಂದ ರಾಮಕೃಷ್ಣ.

''ಆದರೆ ನಿನ್ನ ಬೆಕ್ಕು ಬೇರೆಲ್ಲ ಬೆಕ್ಕುಗಳಿಗಿಂತ ದಪ್ಪವಾಗಿದೆಯಲ್ಲ, ಅದು ಹೇಗೆ?'' ಎಂದು ಪ್ರಶ್ನಿಸಿದ ಅರಸ.

''ಮಹಾಸ್ವಾಮೀ, ಪ್ರಾಣಿಗಳು ತಮ್ಮ ಆಹಾರಕ್ಕೆ ಇನ್ನೊಬ್ಬರನ್ನು ಅವಲಂಬಿಸುವುದಿಲ್ಲ. ಹಾಲಿಲ್ಲದಿದ್ದರೇ ನಂತೆ? ನನ್ನ ಬೆಕ್ಕು ಪ್ರತಿದಿನವೂ ಬೇಕಾದಷ್ಟು ಇಲಿ ಮತ್ತು ಪಾರಿವಾಳಗಳನ್ನು ತಿನ್ನುತ್ತಿತ್ತು. ಅದಕ್ಕೇ ಅದು ದಪ್ಪವಾಗಿದೆ'' ಎಂದ ರಾಮಕೃಷ್ಣ.

ರಾಜ ಸುಪ್ರಿತನಾಗಿ ''ಈ ಬೆಕ್ಕು ನಮಲ್ಲೇ ಇರಲಿ'' ಎಂದ.

''ಬೆಕ್ಕಿನ ಹಿಂದೆ ಬಂದ ಹಸು? ಎಂದು ಕೇಳಿದ ರಾಮಕೃಷ್ಣ.

''ಅದು ಗೋದಾನ. ಹಸು ನಿನಗೆ ಇರಲಿ'' ಎಂದು ನಕ್ಕು ನಡೆದ ಅರಸ.

ತೆನಾಲಿರಾಮಕೃಷ್ಣನ ಈ ಕಥೆ ನಾವು ಅನೇಕ ಬಾರಿ ಮಕ್ಕಳಿಗೆ ಹೇಳಿದ್ದೇವೆ ಅವನ ಜಾಣತನಕ್ಕೆ ತೀಕ್ಷ್ಣ ಬುದ್ಧಿಗೆ ಮೆಚ್ಚಿಗೆ ಕೂಡ ಸೂಚಿಸಿದ್ದೇವೆ. ಆದರೆ ರಾಮಕೃಷ್ಣ ಬೆಕ್ಕನ್ನು ಸಾಕಿದ ರೀತಿ ಒಂದು ಒಳಾರ್ಥವನ್ನು ನಮಗೆ ತಿಳಿಸಿಕೊಡುತ್ತದೆ ಅನಿಸುವುದಿಲ್ಲವೇ? ಎಲ್ಲರಂತೆ ಅವನು ಬೆಕ್ಕಿಗೆ ನಿತ್ಯವೂ ಹಾಲನ್ನು ಕೊಟ್ಟು ಮನೆಯಲ್ಲೇ ಅದು ಬೆಳೆಯಲು ಅವಕಾಶ ಮಾಡಿಕೊಡದೆ, ಪ್ರಾಣಿ ಧರ್ಮದಂತೆ ನಿತ್ಯವೂ ಅದು ಬೇಟೆಯಾಡಿ ಬದುಕುವುದನ್ನು ಅದಕ್ಕೆ ಕಲಿಸಿಕೊಟ್ಟ. ಅದರಿಂದಾಗಿ ಆ ಬೆಕ್ಕು ಆಹಾರಕ್ಕಾಗಿ ಅವನ ಮೇಲೆ ಅವಲಂಬಿತವಾಗಿದೆ. ತನ್ನ ಆಹಾರವನ್ನು ತಾನೇ ಬೇಟೆಯಾಡಿ ತಿನ್ನುವುದನ್ನು ರೂಢಿಸಿಕೊಂಡಿತು. ನಮ್ಮ ಮಕ್ಕಳಿಗೂ ನಾವು ಇಂಥದ್ದೇ ಒಂದು ಜೀವನ ಕಲೆಯನ್ನು ಕಲಿಸಬೇಕು ಅಲ್ಲವೇ? ನಾವು ಎಷ್ಟೇ ಐಶ್ವರ್ಯವಂತ ರಾಗಿದ್ದರೂ, ಅನುಕೂಲಸ್ಥರಾಗಿದ್ದರೂ ಕೂಡ ನಾಳೆ ನಮ್ಮ ಮಕ್ಕಳು ಅವರ ಅನ್ನವನ್ನು ಅವರೇ ಸಂಪಾದಿಸಿಕೊಳ್ಳಲು ಶಕ್ತರಾಗಿರ ಬೇಕು. ಕೂತು ತಿಂದವನಿಗೆ ಕುಡಿಕೆ ಹಣ ಸಾಲದು ಎನ್ನುವ ಗಾದೆಯಂತೆ

ತಂದೆ-ತಾಯಿಗಳ ಐಶ್ವರ್ಯವನ್ನು ಅನುಭವಿಸಿ ಮೋಜು ಮಾಡುವ ಮಕ್ಕಳಿಗೆ ಯಾವುದು ಹೆಚ್ಚು ದಿನ ಉಳಿಯುವುದಿಲ್ಲ. ಮಕ್ಕಳಿಗೆ ನಾವು ಒಳ್ಳೆಯ ವಿದ್ಯೆ-ಬುದ್ಧಿ ದುಡಿಯುವ ಕಲೆಯನ್ನು ಹೇಳಿಕೊಟ್ಟಾಗ ನಾಳಿನ ದಿನ ಅವರು ಕೂಡ ಸಮಾಜಕ್ಕೆ ಬೇಕಾದವರಾಗಿ, ನಾಲ್ಕು ಜನಕ್ಕೆ ಪ್ರತ್ಯುಪಕಾರ ಮಾಡುವಂತೆ ಬೆಳೆಯುತ್ತಾರೆ. ಆದ್ದರಿಂದಲೇ ಮಕ್ಕಳ ಮೇಲೆ ಮಮಕಾರವೇ ಎಷ್ಟೇ ಇರಲಿ ಅವರನ್ನು ಆರಾಮದಾಯಕ ಬದುಕಿಗೆ ಒಗ್ಗಿಸಬೇಡಿ, ಕಷ್ಟ-ಸುಖ ಗೊತ್ತಾಗುವಂತೆ ಅವರನ್ನು ಬೆಳೆಸಿ. ಬದುಕಿನ ನಾನಾ ಕಷ್ಟಗಳ ಬಗ್ಗೆ ಗೊತ್ತಾದಾಗ ಅದಕ್ಕೆ ಹೇಗೆ ನಿಭಾಯಿಸಬೇಕು ಎನ್ನುವುದನ್ನು ಕೂಡ ಅವರು ತಿಳಿದುಕೊಳ್ಳುತ್ತಾರೆ. ಆದ್ದರಿಂದಲೇ ಮಕ್ಕಳಿಗೆ ಬದುಕುವ ಕಲೆಯನ್ನು ಹೇಳಿಕೊಡಿ , ಜೀವನ ಜ್ಞಾನವನ್ನು ತುಂಬಿ ಮುಂದೆ ಅವರ ಬದುಕನ್ನು ಅವರೇ ಆರಿಸಿಕೊಳ್ಳುತ್ತಾರೆ.

ಪದಬಂಧ



ಎಡದಿಂದ ಬಲಕ್ಕೆ

2. ಮೊಲ ಮೊದಲಾದುವುಗಳ ಮೃದುವಾದ ಉಣ್ಣೆ (3)
5. ಶಾಶ್ವತವಲ್ಲದ್ದು (3)
6. ಪ್ರತ್ಯುತ್ತರ (4)
7. ಗಲ್ಲಿಯಲ್ಲಿ ಬಿಲ್ಲಿ ಕಂಡಾಗ ಏನು ಗೊಂದಲ (4)
9. ಮಧುರವಾದ ಸ್ವಾದ (2)
11. ಹೊಸದಾಗಿ ಕಂಡಿತೇ ಬೆಣ್ಣೆ (4)
13. ಗೋಧಿ, ಅಕ್ಕಿ, ರಾಗಿ ಮುಂತಾದುವುಗಳ ಹಾಲಿನಿಂದ ಮಾಡುವ ಒಂದುಬಗೆಯ ಸಿಹಿತಿಂಡಿ (4)
16. ಮತ್ತೊಂದು ಹಾರ (2)
18. ಇದು ವಿಶ್ವಕ್ಕೆ ಸಂಬಂಧಿಸಿದ್ದು (4)
20. ಗಂಟೆಯ ನೆಂಟ (4)
22. ಕನಿಕರ ತೋರಿಸು (3)
23. ಅಮೂಲ್ಯವಾದ ವಸ್ತುಗಳನ್ನಿಡುವ ಕಬ್ಬಿಣದ ಪೆಟ್ಟಿಗೆ (3)

ಎಡದಿಂದ ಬಲಕ್ಕೆ

1. ಕದಂಬರ ರಾಜಧಾನಿ (4)
2. ಕುದುರೆಗೆ ಮತ್ತೊಂದು ಹೆಸರು (3)
3. ಜಾತ್ರೆಯ ದಿನ ಎಳೆದ ರಥ (2)
4. ವಿಷ್ಣುವಿಗೆ ಮತ್ತೊಂದು ಹೆಸರು (4)
6. ಕೊಳೆಯಾದ ಎಂದರ್ಥ (3)
8. ಬರಹದ ಚಿನ್ಹೆ (2)
10. ಮನೆಯ ಹಿಂದಿನ ಸಣ್ಣ ಪ್ರದೇಶ (3)
12. ಸಾರಹೀನವಾದದ್ದು (3)
13. ಮೃದುವಾದ ಕೆನ್ನೆ ಎಂದರ್ಥ (4)
14. ತಲೆಕೆಳಗಾಗಿ ಬಂದಿರುವ ಮೇಲುಹೊದಿಕೆ (3)
15. ಮರ್ಕಟ (2)
17. ಮೂರು ಗುಣಗಳಲ್ಲಿ ಒಂದು (4)
19. ಆಳವಾದ ಪ್ರಪಾತ (3)
21. ಪುಣ್ಯಕ್ಷೇತ್ರಗಳಿಗೆ ಪ್ರಯಾಣ ಮಾಡುವಿಕೆ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಪ್ರತೀಕಾರ 4. ಕಂಬಿ 6. ಅಡವಿ 8. ಅಲೆಮಾರಿ 9. ಪತಂಗ 10. ಕರ್ಣ 11. ವನಿತೆ 13. ಪಾಲಕ 17. ಮಯ 18. ಪರಾಕು 19. ತಲೆಮಾರು 21. ಶಬರ 23. ಯಶ 24. ಅಂತರಂಗ

ಮೇಲಿನಿಂದ ಕೆಳಕ್ಕೆ: 2. ಕಾಮಾಲೆ 3. ಕಡ 5. ಬಿಡುಗಡೆ 6. ಅರಿಕೆ 7. ವಿಪತ್ಕಾಲ 8. ಅರ್ಣವ 12. ನಿರಂಕುಶ 14. ಕಮರು 15. ಅಪಜಯ 16. ಕಾತರ 20. ಮಾವುತ 22. ಬರ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಅತಿ ಎತ್ತರದ ಬುದ್ಧ

ಜಗತ್ತಿನ ಅತಿ ಎತ್ತರದ ವಿಗ್ರಹ ಸ್ಪ್ರಿಂಗ್ ಟೆಂಪಲ್ ಬುದ್ಧ ಇರುವುದು ಚೀನಾದ ಹೆನೆನ್ ಪ್ರಾಂತ್ಯದಲ್ಲಿ. ಚೀನಾದ ಮಹಾಗೋಡೆಯಂತೆ, ಇಂದಿನ ದಿನಕ್ಕೆ ಅತಿ

ಎತ್ತರದ ಪ್ರತಿಮೆಯೆಂದು ಗಿನ್ನೆಸ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಈ ಪ್ರತಿಮೆ ದಾಖಲಾಗಿದೆ. ವೈರೋಕನಾ ಬುದ್ಧನ ಪ್ರತಿರೂಪದಂತಿರುವ ಈ ವಿಗ್ರಹ ರಾರಾಜಿಸುತ್ತಿರುವುದು ಲೋಟಸ್ ವೇದಿಕೆಯ ಮೇಲೆ. ಇದರ ಎತ್ತರ 108 ಮೀಟರ್. ಲೋಟಸ್ ವೇದಿಕೆಯ ಎತ್ತರ ಇಪ್ಪತ್ತು ಮೀಟರ್. ವೇದಿಕೆಯ ಎತ್ತರವನ್ನು ವಿಗ್ರಹದ ಜೊತೆಗೆ ಸೇರಿಸಿದಲ್ಲಿಒಟ್ಟು ಎತ್ತರ 128 ಮೀಟರ್ ಅಂದರೆ 420 ಅಡಿ ಆಗುತ್ತದೆ. ಈ ಲೋಟಸ್ ವೇದಿಕೆಯ ಅಡಿಯಲ್ಲಿ ಡೈಮಂಡ್ ಸೀಟ್ ಹಾಗೂ ಸುಮೇರು ಸೀಟ್‌ಗಳೆಂಬ ಎರಡು ಬಹುಮಹಡಿಗಳ ಕಟ್ಟಡಗಳಿವೆ.

ಪುಸ್ತಕ ಲೋಕ

ಅತ್ತರ್

ಕೆ.ನಲ್ಲತಂಬಿ ಬರೆದ ಕಥೆಗಳ ಗುಚ್ಛ 'ಅತ್ತರ್'. ಈ ಕಥಾ



ಸಂಕಲನದಲ್ಲಿ ನಾವು ಕಂಡ ಜಗತ್ತೇ ನಲ್ಲತಂಬಿ ಅವರ ಕಕ್ಷೆಯಲ್ಲಿ ಕೌತುಕ ಹುಟ್ಟಿಸಿ ಹೊಸ ವೇಷ ತೊಟ್ಟು ನಮಗೆ ಗೋಚರವಾಗುತ್ತದೆ. ಪ್ರಸ್ತುತ ಲೋಕರೂಢಿ ವ್ಯಾಪಾರ ಸಂಬಂಧಗಳಲ್ಲಿನ ಅನೇಕ ಸೂಕ್ಷ್ಮ ವಿಚಾರಗಳು ಈ ಸಂಕಲನದ ಕಥಾವಸ್ತುಗಳಾಗಿವೆ. ಅವರ ಕತೆಗಳಲ್ಲಿನ ಪಾತ್ರಗಳ ರಂಜನೆ ಅತಿಶಯೋಕ್ತಿ ಎನಿಸುವುದಿಲ್ಲ. ಆಯಾ ಕತೆಗಳ ಹಿನ್ನೆಲೆ, ಕತೆ ಘಟಿಸುವ ಸ್ಥಳಗಳನ್ನು ಅಷ್ಟೇ ಸುಂದರವಾಗಿ ಅವರ ನಿರೂಪಣೆಯಲ್ಲಿ ಚಿತ್ರಿಸಿದ್ದಾರೆ. ಈ ಸಂಕಲನದ ಎಲ್ಲ ಕತೆಗಳು ಉಭಯ ಭಾಷೆಗಳಲ್ಲಿ ಅವರಿಂದ ರಚನೆಯಾಗಿ, ಈ ರಾಜ್ಯಗಳ ಪ್ರಮುಖ ಮಾಧ್ಯಮಗಳಲ್ಲಿ ಪ್ರಕಟಗೊಂಡಿವೆ.

ಟ್ವೀಟ್‌ಮೆಂಟ್

ವಿರಾಜ್ ಸೇಠ್: ಟ್ವಿಟ್ಟರ್ ಎಲ್ಲರಿಗೂ ವಿನಮ್ರವಾಗಿದೆ ಗುರು! ನಿಜವಾಗ್ಲೂ ಪ್ರಜಾಸತ್ತಾತ್ಮಕ ವೇದಿಕೆ.

ಮನೀಶ್ ಪಾಂಡೇ: ಎಕ್ಸ್ ಅಂತಾ ಹೇಳುವುದನ್ನು ಯಾವಾಗ ಶುರುಮಾಡ್ತೀರೋ? ಎಲಾನ್ ಅಣ್ಣ ಕಂಪನಿಯನ್ನ ಖರೀದಿ ಮಾಡಿದ, ಆದರೆ, ಬ್ರಾಂಡ್ ಆಗಿ ಮಾಡೋಕೆ ಆಗೇಇಲ್ಲ!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಆರ್.ವೈಶಾಲಿ ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

- ಎ. ಚೆಸ್.
- ಬಿ. ಸ್ನೂಕರ್.
- ಸಿ. ಬಾಸ್ಕೆಟ್ ಬಾಲ್.
- ಸಿ. ಕ್ರಿಕೆಟ್.

ಉತ್ತರ: ಎ. ಚೆಸ್.

ಮಾಹಿತಿ

ಡಿಸೆಂಬರ್ 1, 2023 ರಂದು, ಆರ್. ವೈಶಾಲಿ ಭಾರತದ ಮೂರನೇ ಮಹಿಳಾ ಚೆಸ್ ಗ್ರ್ಯಾಂಡ್ ಮಾಸ್ಟರ್ ಆದರು. ಅವರು ಭಾರತದ 84ನೇ ಗ್ರ್ಯಾಂಡ್ ಮಾಸ್ಟರ್ ಕೂಡ ಆಗಿದ್ದಾರೆ. 22 ವರ್ಷದ ಈ ಆರ್.ವೈಶಾಲಿ, ಭಾರತದ ಮಹಿಳಾ ಗ್ರ್ಯಾಂಡ್ ಮಾಸ್ಟರ್‌ಗಳಾದ ಕೊನೇರು ಹಂಪಿ ಮತ್ತು ಡಿ. ಹರಿಕಾ ಅವರ ಸಾಲಿಗೆ ಸೇರಿದರು. ಕೊನೇರು ಹಂಪಿ 2002 ರಲ್ಲಿ 15 ನೇ ವಯಸ್ಸಿನಲ್ಲಿ ಗ್ರ್ಯಾಂಡ್ ಮಾಸ್ಟರ್ ಆದ ಮೊದಲ ಭಾರತೀಯ ಮಹಿಳೆ.

ಭಗವಂತನಲ್ಲಿ ಭಕ್ತಿಯ ಆಳವನ್ನು ಅರಿತಾಗ

● ವಿದ್ಯಾಶಂಕರ ಶರ್ಮ



ನಮ್ಮ ದಿನವು ಪ್ರಾರಂಭವಾಗುವಾಗ ಪೂಜೆ ಮತ್ತು ಪ್ರಾರ್ಥನೆಗಳು ನಮ್ಮ ಮನಸ್ಸನ್ನು ಪ್ರಶಾಂತವಾಗಿಸುವಲ್ಲಿ ಬಹಳ ಅನೂಕೂಲವಾಗಿ ಪರಿಣಮಿಸುತ್ತವೆ. ಆ ಸರ್ವಶಕ್ತನಲ್ಲಿ ನಾವು ಶರಣು ಹೋದಾಗ ನಮ್ಮ ಮನಸ್ಸಿನ ಭಾರವು ಕಡಿಮೆ ಆಗುವದನ್ನು ನಾವು ಸ್ವತಃ ಅನುಭವಿಸುತ್ತೇವೆ. ಪೂಜಾ ಕೊಠಡಿಯೋ, ದೇವರ ಭಾವಚಿತ್ರವೋ, ಮೂರ್ತಿಯೋ ಹೀಗೆ ಯಾವುದೋ ಒಂದು ಆಕಾರವನ್ನು ನಮ್ಮ ಮನಸ್ಸಿನ ಏಕಾಗ್ರತೆಗಾಗಿ ನಮ್ಮ ವ್ಯವಸ್ಥೆಯಲ್ಲಿ ಮಾಡಿಕೊಂಡಿರುತ್ತೇವೆ. ಆದರೆ ಆ ಆಕಾರವೋ, ಜಾಗವೋ, ಭಾವಚಿತ್ರವೋ ದೂರವಾದಾಗ ನಮ್ಮ ಮನಸ್ಸು ಮತ್ತೆ ಚಂಚಲವಾಗುತ್ತದೆ. ಅಂದರೆ ನಮ್ಮ ಭಕ್ತಿಯು ಅಡಿಪಾಯ ಅಷ್ಟೇನೂ ಭದ್ರವಾಗಿಲ್ಲ ಎನ್ನುವ ಚಡಪಡಿಕೆ ನಮ್ಮನ್ನು ಕಾಡುತ್ತದೆ. ಹಾಗಾದರೆ ಭಕ್ತಿಯ ಅದ್ಯಾವ ಸ್ತರವು ನಮ್ಮ ಗಮ್ಯವಾಗಬೇಕು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಸಾಧಕರ, ಬಲ್ಲವರ ಜೀವನವು ಈ ಸಂದಿಗ್ಧತೆಗೆ ಉತ್ತರವಾಗಿ ಕಾಣುತ್ತದೆ. ಶ್ರೀರಾಮಕೃಷ್ಣ ಪರಮಹಂಸರು ಭಕ್ತಿಯ ಪರಾಕಾಷ್ಠೆಯಲ್ಲಿ ತಮ್ಮನ್ನು ತಾವೇ ಮರೆಯುತ್ತಿದ್ದರಂತೆ. ಅಂತಹ ಯೋಗಿಗಳ ಮಟ್ಟಕ್ಕೆ ತಲುಪುವುದು ಸತತ ಸಾಧನೆಯಿಂದಲೇ. ನಮ್ಮ ಭಕ್ತಿಯ ತುಲನೆಗೆ ಇತಿಹಾಸದಲ್ಲಿ ನಮ್ಮಂತಹ

ಸಾಮಾನ್ಯರೂ ಕಾಣುತ್ತಾರೆ. ಅಂತಹ ಅಪರೂಪದ ಭಕ್ತೆಯೇ 'ಗೋದಾದೇವಿ'. ಈಕೆಯ ಕತೆ ಬಹಳ ರೋಚಕವಾಗಿದೆ. ತಮಿಳನಾಡಿನಲ್ಲಿ ವಿಷ್ಣುಚಿತ್ತರೆಂಬ ಪ್ರಮುಖ ವ್ಯಕ್ತಿ ಇದ್ದರು. ಒಂದು ದಿನ ಅವರು ತಮ್ಮ ಹೂದೋಟದಲ್ಲಿ ಕೆಲಸ ಮಾಡುತ್ತಿದ್ದಾಗ, ಒಂದು ಸುಂದರವಾದ ಹೆಣ್ಣು ಮಗು ಅವರಿಗೆ ಸಿಗತ್ತದೆ. ತಮಗೆ ಭಗವಂತನೇ ಪ್ರಸಾದವಾಗಿ ಕೊಟ್ಟನು ಎಂದುಕೊಂಡು ಮಗುವನ್ನು ಪ್ರೀತಿಯಿಂದ ಬೆಳಸುತ್ತಾರೆ. ಆ ಮಗುವಿಗೆ 'ಗೋದಾ' ಎಂದು ನಾಮಕರಣ ಮಾಡುತ್ತಾರೆ. ವಿಷ್ಣುಚಿತ್ತರು ದಿನವೂ ತುಳಸಿ ಮತ್ತು ಹೂವನ್ನು ಕಟ್ಟಿ ದೇವಸ್ಥಾನಕ್ಕೆ ಅರ್ಪಿಸಲು ಒಂದು ಬುಟ್ಟಿಯಲ್ಲಿ ಇಡುತ್ತಿದ್ದರು. ಆಗ ಗೋದಾದೇವಿಯು ಆ ಹಾರಗಳನ್ನು ತನ್ನ ಮುಡಿಯಲ್ಲಿ ಇಟ್ಟುಕೊಂಡು ಕನ್ನಡಿಯಲ್ಲಿ ನೋಡಿಕೊಂಡು ಮತ್ತೆ ಆ ಹಾರಗಳನ್ನು ಬುಟ್ಟಯಲ್ಲಿ ಇಡುತ್ತಿದ್ದಳು. ಇದು ವಿಷ್ಣುಚಿತ್ತರಿಗೆ ಗೊತ್ತಿರಲಿಲ್ಲ. ಒಂದು ದಿನ ದೇವಸ್ಥಾನದ ಅರ್ಚಕರು ಆ ಹಾರದಲ್ಲಿ ಕೂದಲನ್ನು ಕಂಡು ಹಾರವನ್ನು ದೇವರಿಗೆ ಹಾಕಲಾಗದು ಎಂದು ಎಸೆದುಬಿಟ್ಟರು.

ಬಹಳ ಖೇದಗೊಂಡ ವಿಷ್ಣುಚಿತ್ತರು ಮನೆಗೆ ಬಂದು ಮಗಳನ್ನು ವಿಚಾರಿಸುತ್ತಾರೆ. ಆಗ ಮಗಳು ತಾನು ಮಾಡುತ್ತಿರುವದನ್ನು ತಂದೆಗೆ ಹೇಳುತ್ತಾಳೆ. ಆಗ ಅವರು ಮಗಳನ್ನು ಬಯ್ಯುತ್ತಾರೆ. ಅಂದು ರಾತ್ರಿ ವಿಷ್ಣುಚಿತ್ತರಿಗೆ ಒಂದು ಕನಸು ಬೀಳುತ್ತದೆ. ಅದರಲ್ಲಿ ಶ್ರೀವಿಷ್ಣುವು ಕಾಣಿಸಿಕೊಂಡು 'ನನಗೆ ನಿಮ್ಮ ಮಗಳು ಮುಡಿದ ಹೂವೇ ಇಷ್ಟ' ಎಂದು ಹೇಳುತ್ತಾನೆ. ಆಶ್ಚರ್ಯಗೊಂಡ ವಿಷ್ಣುಚಿತ್ತರು ಮರುದಿನದಿಂದ ತಮ್ಮ ಮಗಳು ಮುಡಿದ ಹೂವನ್ನೇ ಭಗವಂತನಿಗೆ ಅರ್ಪಿಸಲು ಶುರು ಮಾಡುತ್ತಾರೆ. ಗೋದಾದೇವಿ ಚಿಕ್ಕ ವಯಸ್ಸಿನಿಂದ ತಂದೆಯಿಂದ ಕೃಷ್ಣನ ಕತೆಯನ್ನು ಕೇಳುತ್ತ ಬೆಳೆದಳು. ಕೃಷ್ಣನೆಡೆಗೆ ಮುಗ್ಧ ಭಕ್ತಿಯನ್ನು ಬೆಳಸಿಕೊಂಡು ಅವನೇ ತನ್ನ ಪತಿಯೆಂದು ಭಾವಿಸಿದ್ದಳು. ಹೂವು ಕೃಷ್ಣನಿಗೆ ಚೆನ್ನಾಗಿ ಕಾಣಿಸುವುದೇ ಎಂದು ತಾನೇ ಮುಡಿದು ನೋಡಿಕೊಳ್ಳುತ್ತಿದ್ದಳು. ಅವಳ ಈ ನಿಷ್ಕಳಂಕ ಭಕ್ತಿಯೇ ದೇವರಿಗೆ ಪ್ರಿಯವಾಗಿಬಿಟ್ಟಿತು. ಇದು ಭಗವಂತನಲ್ಲಿ ಭಕ್ತಿಯ ಪರಾಕಾಷ್ಠೆಯ ನಿದರ್ಶನ. ನಾವು ಹೇಗೆ ನಮ್ಮ ಪ್ರೀತಿ ಪಾತ್ರರಲ್ಲಿ ನೆಡೆದುಕೊಳ್ಳುತ್ತೇವೋ ಅದೇ ರೀತಿಯಾಗಿ ದೇವರನ್ನು ಪ್ರೀತಿಸಬೇಕು. ಮನುಷ್ಯರಿಗಾಗಿ ಅಳುವ ನಾವು, ಭಗವಂತನಿಗಾಗಿ ಅಳಬೇಕು, ಅದೇ ಭಕ್ತಿಯ ಸರ್ವಶ್ರೇಷ್ಠ ಅಭಿವ್ಯಕ್ತಿ. ಇನ್ನೊಂದು ಗಣನೀಯ ಅಂಶವೆಂದರೆ, ಗೋದಾಬಾಯಿ ಅಂತಹ ಭಕ್ತರು ಸಾಮಾನ್ಯ ಕಟ್ಟುಪಾಡುಗಳನ್ನು ಲೆಕ್ಕಿಸದೆ ದೇವರಲ್ಲಿ ಪ್ರೀತಿ ತೋರಿದ್ದು. ತಾನು ಮುಡಿದ ಹೂವು ದೇವರಿಗೆ ಅರ್ಪಿಸಲು ಯೋಗ್ಯವೇ ಎಂದು ಅವಳು ಎಂದೂ ಯೋಚಿಸಲಿಲ್ಲ. ಇಂತಹ ಅಸಹಜ ಗುಣಗಳೇ ಶ್ರೇಷ್ಠತೆಯನ್ನು ತರುತ್ತದೇನೋ!

ಕೃಷ್ಣನಲ್ಲಿ ಕಷ್ಟವನ್ನು ಕೇಳಿದ ಕುಂತಿ, ರಾಮನಿಗಾಗಿ ಹಣ್ಣುಗಳನ್ನು ತಿಂದು ಆರಿಸಿ ಇಟ್ಟ ಶಬರಿ ಇವರೆಲ್ಲ ಭಕ್ತಿಯ ಭಾವಪರಶವತೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ದೇವರನ್ನು ಒಲಿಸಿಕೊಂಡವರು. ಭಕ್ತಿಯಲ್ಲಿ ಜಗವನ್ನು ಮರೆತವರು. ಅಂತಹ ಪರಿಪೂರ್ಣ ಭಕ್ತಿಯ ಸೆಲೆ ನಮ್ಮ ಹೃದಯದಲ್ಲಿ ಜಿನುಗಿದರೆ ನಾವು ಧನ್ಯರು. 'ಸರ್ವಶಕ್ತನಿಗೆ ನಾನು ನಿನ್ನವನು' ಎಂಬ ನಮ್ಮ ಮೊರೆ ಕೇಳಿದಾಗ ನಿಸ್ಸಂಶಯವಾಗಿ ಭಕ್ತಿಯ ರಸಗಂಗೆ ತಾನೇ ತಾನಾಗಿ ನಮ್ಮೊಳಗೆ ಹರಿಯುವದು. ಭಗವಂತನ ಪ್ರೀತಿಯ ಆ ಅಲೌಕಿಕ ಅನುಭವ ಬಲ್ಲವರೇ ಬಲ್ಲರು.



ಬದುಕಿನ ಪ್ರತಿಕ್ಷಣದ ಸಂಭ್ರಮಾಚರಣೆ

● ವಿಜಯಕುಮಾರ್ ಕಟ್ಟೆ

ದಿನವ ಹಾಳು ಮಾಡಬೇಡ, ನಿನ್ನೆ ನಿನ್ನೆಗೆ ನಾಳೆ ನಾಳೆಗೆ ಇಂದು ನಮಗೆ, ಇಂದಿನ ದಿನವೇ ಶುಭ ದಿನವು, ಮಾನವ ಜನ್ಮ ದೊಡ್ಡದು... ಹೀಗೆ ಬದುಕಿನ ಮಹತ್ವದ ಬಗ್ಗೆ ಅನೇಕ ಮಹಾಮಹಿಮರ ಅದ್ಭುತ ನುಡಿಗಳಿವೆ. ಇದರ ಅರ್ಥ ಪ್ರತಿದಿನವೂ ನಮಗೆ ಉಡುಗೊರೆಯಿದ್ದಂತೆ. ಹುಟ್ಟಿದ ಮೇಲೆ ಒಂದು ದಿನ ಹೊರಡಲೇಬೇಕು ಇದರ ನಡುವೆಯೇ ನಮ್ಮೀ ಜೀವನ ಸಾಗಬೇಕು. ಇಡೀ ದಿನವನ್ನು ಸುಂದರವಾಗಿ ನಮ್ಮ ಕೆಲಸ ಕಾರ್ಯಗಳನ್ನು ಯೋಜಿಸಿಕೊಂಡು ಸಾಗಬೇಕು. ಪ್ರತಿಯೊಂದು ದಿನವನ್ನು ಶುಭ ದಿನವೆಂದು ಸಕಾರಾತ್ಮಕವಾಗಿ ಭಾವಿಸಬೇಕು. ಹೀಗೆ ಜೀವಿಸುವ ಆಯ್ಕೆ ನಮ್ಮದೇ ಆಗಿರುತ್ತದೆ.

ಪ್ರತಿನಿತ್ಯ ನಾವು ಉತ್ಸವದಂತೆ ಬದುಕನ್ನು ಆಚರಿಸಿಕೊಂಡರೆ ಜೀವನದ ಬಗ್ಗೆ ಧನ್ಯತೆ ಮತ್ತು ಸಾರ್ಥಕತೆ ಮೂಡಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ನಮ್ಮ ಚಿಂತನೆ ಸಾಗಬೇಕು. ಹುಟ್ಟು ಮತ್ತು ಸಾವಿನ ನಡುವಿರುವುದೇ ನಮ್ಮೀ ಜೀವನವೆಂಬುದು ಅರಿಯಬೇಕು. ಸಮಯದ ಜೊತೆಗೆ ನಮ್ಮ ಬದುಕೂ ಸಾಗಬೇಕು. ಇಡೀ ದಿನವನ್ನು ಸುಂದರವಾಗಿ ಯೋಜಿಸಿಕೊಳ್ಳಲು ಸಾಧ್ಯವಿದೆ. ನಮ್ಮ ಕೆಲಸ ಕಾರ್ಯಗಳನ್ನು ಯೋಜಿಸಿಕೊಂಡು ಸಾಗಬೇಕು. ಈ ಕಾರ್ಯಗಳನ್ನು ಮುತುವರ್ಜಿ ವಹಿಸಿ ಕಾರ್ಯರೂಪಕ್ಕೆ ತರಬೇಕು. ಇಂತಹ ಮನಸ್ಥಿತಿ ತಂದುಗೊಂಡಾಗ 'ಅಯ್ಯೋ ಬೆಳಗಾಯಿತೇ' ಎಂದು ಗೊಣಗಿಕೊಂಡು ಏಳದೆ 'ಆಹಾ ಎಂತಹ ಸುಂದರ ಬೆಳಗು' ಎಂಬ ಸಕಾರಾತ್ಮಕತೆ ಇಡೀ ದಿನ ಸುಂದರವಾಗಿ ನಮ್ಮ ಸಂಗಾತಿಯಾಗುತ್ತದೆ.

ಜೀವನವೆಂಬುದೊಂದು ಚಕ್ರ. ಹುಟ್ಟು ಸಾವುಗಳು ನಿರಂತರ. ಪ್ರತಿ ಬದುಕಿನ ಆರಂಭಕ್ಕೂ ಸಾವೆಂಬ ಅಂತ್ಯವೂ ಇದೆ. ಯಾವುದೂ ಶಾಶ್ವತವಲ್ಲ. ಈ ಪರಮ ಸತ್ಯವನ್ನು ಅರ್ಥ ಮಾಡಿಕೊಳ್ಳುತ್ತೇವೆಯೋ ಆಗ ಈ ಲೌಕಿಕ ವ್ಯವಹಾರಗಳಿಂದ, ನೋವುಗಳಿಂದ ಮುಕ್ತರಾಗುತ್ತೇವೆ. ಆಯಾ ದಿನವನ್ನು ಅನಗತ್ಯ ವಿಚಾರಗಳನ್ನು ದೂರವಿರಿಸಿ ಆದ್ಯತೆಯಿಂದ ಇಷ್ಟಪಟ್ಟು ಕೆಲಸ ಮಾಡಿ, ಅದನ್ನೊಂದು ಸಂಭ್ರಮಾಚರಣೆಯಂತೆ ಜೀವಿಸಿದ್ದಲ್ಲಿ ನಮ್ಮ ಗುರಿಯನ್ನು ಮುಟ್ಟುತ್ತೇವೆ ಮತ್ತು ಸಂತೋಷ ಲಭ್ಯವಾಗುವುದು ಮಾತ್ರವಲ್ಲದೆ ಜೀವನದ ಪ್ರತಿಕ್ಷಣವು ಹೀಗೆ ಅನುಭವಿಸಿದಾಗ ಮಾತ್ರ ಈ ಜೀವನದ ನಿಜವಾದ ಫಲಗಳನ್ನು ಸವಿಯಲು ಸಾಧ್ಯವಾಗುತ್ತದೆ. ನಿರಾಳವಾದ, ನೆಮ್ಮದಿಯಾದ ಬದುಕು ನಿಜ ಅರ್ಥದಲ್ಲಿ ಸಾರ್ಥಕ ಜೀವನ ನಮ್ಮದಾಗುತ್ತದೆ.

ಸಮಾಚಾರ ಸಣ್ಣದಲ್ಲ

ಮೊದಲ ಸುತ್ತಿನಲ್ಲೇ ಟ್ರೀಸಾ, ಗಾಯತ್ರಿ ಸೋಲು

ಕುಮಾಮೊಟೊ (ಜಪಾನ್): ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಕುಮಾಮೊಟೊ ಮಾಸ್ಟರ್ಸ್ ಜಪಾನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಡಬಲ್ಸ್ ಮೊದಲ ಸುತ್ತಿನಲ್ಲೇ ಚೀನಾ ತೈಪಿಯ ಆಟಗಾರ್ತಿಯರೆದುರು ಸೋಲನುಭವಿಸಿದರು. ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಭಾರತದ ಆಟಗಾರ್ತಿಯರು ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 16-21, 16-21ರಲ್ಲಿ ಹ್ಸು ಯಿನ್ ಹುಯಿ ಮತ್ತು ಲಿನ್ ಯಿನ್-ಹುಯಿ ಅವರಿಗೆ ಮಣಿದರು. ವಿಶ್ವ ಕ್ರಮಾಂಕದಲ್ಲಿ 24ನೇ ಸ್ಥಾನದಲ್ಲಿರುವ ಚೀನಾ ತೈಪಿ ಆಟಗಾರ್ತಿಯರು ಕೇವಲ 36 ನಿಮಿಷಗಳಲ್ಲಿ ಜಯಶಾಲಿಯಾದರು. ಭಾರತದ ಆಟಗಾರ್ತಿಯರ ಜೊತೆ ಇದುವರೆಗೆ ನಡೆದ ಮೂರು ಮುಖಾಮುಖಿಗಳಲ್ಲಿ ಇದು ಚೀನಾ ತೈಪಿ ಆಟಗಾರ್ತಿಯರಿಗೆ ಮೊದಲ ಜಯ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಸಿಂಗಲ್ಸ್‌ನಲ್ಲಿ ತಮ್ಮ ಅಭಿಯಾನವನ್ನು ಬುಧವಾರ ಆರಂಭಿಸಲಿದ್ದಾರೆ.

ಡೆಲ್ಲಿ ತಂಡಕ್ಕೆ ಮುನಾಫ್ ಬೌಲಿಂಗ್ ಕೋಚ್

ದೆಹಲಿ: ಮುಂಬರುವ 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಮೆಗಾ ಹರಾಜಿಗೂ ಮುನ್ನ ಭಾರತ ತಂಡದ ಮಾಜಿ ವೇಗಿ ಮುನಾಫ್ ಪಟೇಲ್ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಬೌಲಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ. ಡೆಲ್ಲಿ ಫ್ರಾಂಚೈಸಿಯ ಕೋಚಿಂಗ್ ವಿಭಾಗದಲ್ಲಿ ಇಲ್ಲಿಯ ವರೆಗೂ ಮೂರನೇ ಬದಲಾವಣೆ ಇದಾಗಿದೆ.

ಇದಕ್ಕೂ ಮುನ್ನ ಟೀಮ್ ಇಂಡಿಯಾದ ಮಾಜಿ ಕ್ರಿಕೆಟಿಗ ಹೇಮಂಗ್ ಬದಾನಿ ಅವರನ್ನು ಮುಖ್ಯ ಕೋಚ್ ಆಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ನೇಮಿಸಿತ್ತು. ಡೆಲ್ಲಿ ಕ್ಯಾಪಿಟಲ್ಸ್ ಹೆಡ್ ಕೋಚ್ ಆಗಿ ಹೇಮಂಗ್ ಬದಾನಿ ಅವರು ಆಸ್ಟ್ರೇಲಿಯಾದ ಮಾಜಿ ನಾಯಕ ರಿಕಿ ಪಾಂಟಿಂಗ್ ಅವರ ಸ್ಥಾನವನ್ನು ತುಂಬಿದ್ದರು. ಇದಲ್ಲದೇ ವೇಣು ಗೋಪಾಲ್ ರಾವ್ ಅವರನ್ನು ಕ್ರಿಕೆಟ್ ನಿರ್ದೇಶಕರನ್ನಾಗಿ ಡೆಲ್ಲಿ ಫ್ರಾಂಚೈಸಿ ನೇಮಿಸಿದೆ. ಕೋಚಿಂಗ್ ಸಿಬ್ಬಂದಿಯಲ್ಲಿ ಮುನಾಫ್ ಪಟೇಲ್ ಅವರನ್ನು ಸೇರಿಸುವ ಮೂಲಕ ಮೂರನೇ ಪ್ರಮುಖ ಬದಲಾವಣೆಯನ್ನು ಡೆಲ್ಲಿ ಮಾಡಿಕೊಂಡಿದೆ. ಮುನಾಫ್ ಪಟೇಲ್ ಟೀಮ್ ಇಂಡಿಯಾದ ಪ್ರಮುಖ ವೇಗದ ಬೌಲರ್ ಆಗಿದ್ದರು. ಮುನಾಫ್ ಪಟೇಲ್ ಭಾರತ ತಂಡದ ಪರ 13 ಟೆಸ್ಟ್, 70 ಏಕದಿನ ಹಾಗೂ 2 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಮುನಾಫ್ ಪಟೇಲ್ ಅವರು ಮಹೇಂದ್ರ ಸಿಂಗ್ ಧೋನಿ ನಾಯಕತ್ವದ 2011ರ ಐಸಿಸಿ ಏಕದಿನ ವಿಶ್ವಕಪ್ ವಿಜೇತ ತಂಡದ ಸದಸ್ಯರಾಗಿದ್ದರು.

ಹಿರಿಯ ಆಟಗಾರರ ಬ್ಯಾಟ್‌ನಲ್ಲಿ ರನ್ ಬರ | ಪರಿಚಿತವಲ್ಲದ ಸೂಪರ್‌ಸ್ಪೋರ್ಟ್ ಪಾರ್ಕ್‌ನಲ್ಲಿ ಪಂದ್ಯ

ಭಾರತಕ್ಕೆ ಬ್ಯಾಟರ್‌ಗಳದ್ದೇ ಚಿಂತೆ

ಸೆಂಚುರಿಯನ್: ಭಾರತ, ಇಲ್ಲಿನ ಸೂಪರ್‌ಸ್ಪೋರ್ಟ್ ಪಾರ್ಕ್‌ನಲ್ಲಿ ಬುಧವಾರ ನಡೆಯುವ ಮೂರನೇ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ತನಗೆ ಅಷ್ಟೇನೂ ಪರಿಚಿತವಲ್ಲದ ಈ ತಾಣದಲ್ಲಿ ಬ್ಯಾಟಿಂಗ್ ವೈಭವವನ್ನು ಮರಳಿ ಕಂಡುಕೊಳ್ಳುವ ಸವಾಲು ತಂಡದ ಮುಂದಿದೆ.

2009ರ ನಂತರ ಒಮ್ಮೆ ಮಾತ್ರ ಭಾರತ ಇಲ್ಲಿ ಟಿ20 ಪಂದ್ಯ ಆಡಿದೆ. 2018ರಲ್ಲಿ ನಡೆದ ಆ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಸೋಲನುಭವಿಸಿತ್ತು. ಈಗ ತಂಡದಲ್ಲಿರುವವರಲ್ಲಿ ಹಾರ್ದಿಕ್ ಪಾಂಡ್ಯ ಮಾತ್ರ ಆ ಪಂದ್ಯ ಆಡಿದ್ದರು. ಮೂರು ಪಂದ್ಯಗಳ ಸರಣಿ ಈಗ 1-1ರಲ್ಲಿ ಸಮನಾಗಿದೆ.

ಪರಿಚಿತವಲ್ಲದ ತಾಣದಲ್ಲಿ ಹೊಂದಿಕೊಳ್ಳುವುದರ ಜೊತೆ ತಂಡಕ್ಕೆ ಸವಾಲಾಗಿರುವ ಇನ್ನೊಂದು ವಿಷಯ ಎಂದರೆ ಬ್ಯಾಟರ್‌ಗಳ ಲಯ ಅಷ್ಟೇನೂ ಉತ್ತಮ ಮಟ್ಟದಲ್ಲಿ ಇಲ್ಲದಿರುವುದು. ಗೆಬೆರ್ಹಾದ ರೀತಿ ಇಲ್ಲಿನ ಪಿಚ್ ಕೂಡ ಮೇಲ್ನೋಟಕ್ಕೆ ವೇಗ ಮತ್ತು ಬೌನ್ಸ್‌ಗೆ ನೆರವಾಗುವಂತಿದೆ.

ಎರಡನೇ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ವೇಗದ ಬೌಲರ್‌ಗಳ ಎದುರು ಬ್ಯಾಟರ್‌ಗಳು ಪರದಾಡಿದರು. ಹೀಗಾಗಿ ತಂಡ 6 ವಿಕೆಟ್‌ಗೆ 124 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಸೆಂಚುರಿಯನ್ ಕ್ರೀಡಾಂಗಣ ಕೂಡ ಇಂಥ ಸ್ವರೂಪ ಹೊಂದಿದೆ.

ಸಮಸ್ಯೆ ಆರಂಭದಿಂದಲೇ ಶುರುವಾಗುತ್ತಿದೆ. ಅಭಿಷೇಕ್ ಶರ್ಮಾ ಅವರ ಪರದಾಟ ಮುಂದುವರಿದಿದ್ದು ಗಂಭೀರ ಚಿಂತೆಗೆ ಕಾರಣವಾಗಿದೆ. ಕಳೆದ ಎಂಟು ಇನಿಂಗ್ಸ್‌ಗಳಿಂದ ಅವರೂ ಒಂದೂ 20ರ ಮೇಲೆ ರನ್ ಗಳಿಸಿಲ್ಲ. ಸಂಜು ಸ್ಯಾಮ್ಸನ್ ಜೊತೆ ಆರಂಭ ಆಟಗಾರನ ಪಾತ್ರವನ್ನು ತಿಲಕ್ ವರ್ಮಾ ಅವರಿಗೆ ವಹಿಸಿ, ಮಧ್ಯಮ ಕ್ರಮಾಂಕದಲ್ಲಿ ಬೀಸಾಟವಾಡುವ ರಮಣದೀಪ್ ಸಿಂಗ್ ಅವರಿಗೆ ಅವಕಾಶ ನೀಡುವ ಯೋಚನೆ ಸುಳಿದಿದೆ.

ಆದರೆ ಅಭಿಷೇಕ್ ಅಷ್ಟೇ ಅಲ್ಲ, ಸೀನಿಯರ್ ಬ್ಯಾಟರ್‌ಗಳಾದ ನಾಯಕ ಸೂರ್ಯಕುಮಾರ್ ಯಾದವ್, ಪಾಂಡ್ಯ, ರಿಂಕು ಸಿಂಗ್ ಕೂಡ ಅವರೂ ಕೂಡ ಬ್ಯಾಟಿಂಗ್ ಹಿನ್ನಡೆಗೆ ಹೊಣೆ ವಹಿಸಬೇಕಾಗಿದೆ. ಸೂರ್ಯ ಮತ್ತು ರಿಂಕು ತಮ್ಮ ಸಾಮರ್ಥ್ಯಕ್ಕೆ ತಕ್ಕ ರೀತಿ ಆಡಿಲ್ಲ. ರಿಂಕು ಮೊದಲ ಬೌಂಡರಿಗೆ 28 ಎಸೆತಗಳನ್ನು ತೆಗೆದುಕೊಂಡಿದ್ದರು.

ಇವರು ಉತ್ತಮ ಕಾಣಿಕೆ ನೀಡಿದರಷ್ಟೇ ಸಂಜು ಸ್ಯಾಮ್ಸನ್ ಅವರ ಮೇಲಿನ ಒತ್ತಡ ಕಡಿಮೆಯಾಗಲಿದೆ.

ಬೌಲರ್‌ಗಳೂ ಸ್ಥಿರ ಪ್ರದರ್ಶನ ನೀಡಿಲ್ಲ. ಡರ್ಬನ್‌ನಲ್ಲಿ ಅರ್ಷದೀಪ್ 25 ರನ್ನಿಗೆ 1 ವಿಕೆಟ್ ಪಡೆದರೆ, ಎರಡನೇ ಪಂದ್ಯದಲ್ಲಿ 41 ರನ್ನಿಗೆ 1 ವಿಕೆಟ್ ಗಳಿಸಿದ್ದರು. ಕೊನೆಯ ಪಂದ್ಯದ ಕೊನೆಯ ಓವರ್‌ನಲ್ಲಿ ಎಡಗೈ ವೇಗಿ ಬೌಲಿಂಗ್‌ನಲ್ಲಿ ಟ್ರಿಸ್ಟನ್ ಸ್ಟಬ್ಸ್ 4 ಬೌಂಡರಿ ಬಾರಿಸಿದ್ದರು. ಅಲ್ಪಸ್ಕೋರುಗಳ ಪಂದ್ಯದಲ್ಲಿ ಇದು ದುಬಾರಿಯಾಯಿತು. ತಂಡ ಯಶ್ ದಯಾಳ್ ಅಥವಾ ವೈಶಾಖ ವಿಜಯಕುಮಾರ್ ಅವರಿಗೆ ಅವಕಾಶ ಕೊಡಬಹುದೇ ಎಂಬುದು ಖಚಿತವಾಗಿಲ್ಲ.

ಆದರೆ ಗೂಢ ಎಸೆತಗಳ ಬೌಲರ್ ವರುಣ್ ಚಕ್ರವರ್ತಿ ಮೊದಲ ಬಾರಿ 5 ವಿಕೆಟ್ ಗೊಂಚಲು ಪಡೆದು ಸೋಲಿನಲ್ಲೂ ಮಿಂಚಿದ್ದರು. ಅವರ ಜೊತೆ ರವಿ ಬಿಷ್ಣೋಯಿ ಕೂಡ ಉತ್ತಮ ಪ್ರದರ್ಶನ ನೀಡಿರುವುದು ಸಮಾಧಾನದ ಅಂಶ.

ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್‌ಗಳೂ ಪರದಾಡಿದ್ದಾರೆ. ಮರ್ಕರಂ, ಮಿಲ್ಲರ್ ಮತ್ತು ಕ್ಲಾಸೆನ್ ಇನ್ನೂ ನಿರೀಕ್ಷಿತ ಮಟ್ಟದಲ್ಲಿ ಆಡಿಲ್ಲದಿರುವುದು ಆತಿಥೇಯರ ಚಿಂತೆಗೆ ಕಾರಣವಾಗಿದೆ. ಟ್ರಿಸ್ಟನ್ ಸ್ಟಬ್ಸ್ ಕಳೆದ ಪಂದ್ಯದಲ್ಲಿ ಉಪಯುಕ್ತ ಆಟವಾಡಿದ್ದರು. ಜೆರಾಲ್ಡ್ ಕೋಟ್ಜಿಯಾ ಅವರೂ ಕೆಳಕ್ರಮಾಂಕದಲ್ಲಿ ಆಡಿದ್ದರಿಂದ ಎರಡನೇ ಪಂದ್ಯದಲ್ಲಿ ಆತಿಥೇಯರು ಗೆಲ್ಲಲು ಸಾಧ್ಯವಾಯಿತು.

ಹೈಬ್ರೀಡ್ ಮಾದರಿಯಲ್ಲಿ ಆಡದಿದ್ದರೆ, ದಕ್ಷಿಣ ಆಫ್ರಿಕಾಕ್ಕೆ ಟೂರ್ನಿ

ನೆಲೆ ಕಾಣದ ಚಾಂಪಿಯನ್ಸ್ ಟ್ರೋಫಿ

ದೆಹಲಿ: ಮುಂಬರುವ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ಆಡಲು ಭಾರತ ತಂಡ ಪಾಕಿಸ್ತಾನಕ್ಕೆ ಹೋಗುವುದಿಲ್ಲ ಎಂಬುದು ಖಚಿತವಾಗುತ್ತಿದ್ದಂತೆ ಸಾಕಷ್ಟು ಬೆಳವಣಿಗೆಗಳು ನಡೆಯುತ್ತಿವೆ. ಅದರಂತೆ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಟೂರ್ನಿಯಲ್ಲಿನ ಭಾರತ ತಂಡದ ಪಂದ್ಯಗಳನ್ನು ಹೈಬ್ರೀಡ್ ಮಾದರಿಯಲ್ಲಿ ಆಯೋಜಿಸಲು ಸೂಚನೆ ನೀಡಿದೆ. ಆದರೆ, ಇದಕ್ಕೆ ಪಿಸಿಬಿ ಒಪ್ಪಿಲ್ಲವಾದರೆ ಸಂಪೂರ್ಣ ಟೂರ್ನಿಯನ್ನು ದಕ್ಷಿಣ ಆಫ್ರಿಕಾದಲ್ಲಿ ನಡೆಸಲು ಕ್ರಮಕೈಗೊಳ್ಳಲಾಗುವುದು ಎಂದು ವರದಿಯಾಗಿದೆ.

ಪಾಕಿಸ್ತಾನ ಟೂರ್ನಿಯ ಬಹುತೇಕ ಪಂದ್ಯಗಳನ್ನು ತನ್ನ ದೇಶದಲ್ಲಿ ಆಡಿಸಬೇಕು ಹಾಗೂ ಭಾರತ ತಂಡದ ಪಂದ್ಯಗಳನ್ನು ದುಬೈನಲ್ಲಿ ಆಡಿಸಬೇಕು ಎಂದು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಯೋಜನೆ ರೂಪಿಸಿದೆ. ಟೂರ್ನಿಯ ಪಂದ್ಯ ಕೂಡ ಯುಎಇನಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಹೈಬ್ರೀಡ್ ಮಾಡೆಲ್ ಅನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಒಪ್ಪಿಕೊಂಡರೆ ಪಿಸಿಬಿಗೆ ಟೂರ್ನಿಯ ಸಂಪೂರ್ಣ ಆತಿಥ್ಯದ ಹಕ್ಕುಗಳನ್ನು ನೀಡಲಾಗುತ್ತದೆ. ಆದರೆ, ಇಲ್ಲಿಯವರೆಗೂ ಪಿಸಿಬಿ ಎಲ್ಲ ಪಂದ್ಯಗಳನ್ನು ಪಾಕಿಸ್ತಾನದಲ್ಲಿ ಆಯೋಜಿಸಬೇಕೆಂಬ ಒಮ್ಮತವನ್ನು ಹೊಂದಿದೆ.

ಚಾಂಪಿಯನ್ಸ್ ಟ್ರೋಫಿ ದಕ್ಷಿಣ ಆಫ್ರಿಕಾಗೆ ಶಿಫ್ಟ್?: ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯನ್ನು ಹೈಬ್ರೀಡ್ ಮಾದರಿಯಲ್ಲಿ ಆಯೋಜಿಸುವ ಬಗ್ಗೆ ಖಚಿತಪಡಿಸುವಂತೆ ಪಿಸಿಬಿಗೆ ಐಸಿಸಿ ಪತ್ರ ಬರೆದಿದೆ ಎಂದು ಪಿಟಿಐ ವರದಿ ಮಾಡಿದೆ. ಒಂದು ವೇಳೆ ಹೈಬ್ರೀಡ್ ಮಾದರಿಯನ್ನು ಪಿಸಿಬಿ ಸ್ವೀಕರಿಸಿಲ್ಲವಾದರೆ, ಸಂಪೂರ್ಣ ಟೂರ್ನಿಯನ್ನು ದಕ್ಷಿಣ ಆಫ್ರಿಕಾಗೆ ಐಸಿಸಿ ಸ್ಥಳಾಂತರಿಸಬಹುದು. ಈ ಬಗ್ಗೆ ಇನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಆದರೆ, ವರದಿಗಳ ಪ್ರಕಾರ ಈ ಬಗ್ಗೆ ಪಿಸಿಬಿ, ಪಾಕಿಸ್ತಾನ ಸರಕಾರದ ಬಳಿ ಈ ಬಗ್ಗೆ ಚರ್ಚೆ ನಡೆಸುತ್ತಿದೆ ಎಂದು ಹೇಳಲಾಗುತ್ತಿದೆ.

ಅಂಧರ ತಂಡ ಹೋಗುವುದು ಅನುಮಾನ

ದೆಹಲಿ: ನವೆಂಬರ್ 22 ರಿಂದ ಡಿಸೆಂಬರ್ 3 ರವರೆಗೆ ಪಾಕಿಸ್ತಾನದಲ್ಲಿ ನಡೆಯುವ ಅಂಧರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿಯೂ ಭಾರತ ಪಾಲ್ಗೊಳ್ಳುವುದು ಅನುಮಾನ ಎನ್ನಲಾಗಿದೆ. ಪಾಕ್‌ಗೆ ತೆರಳಲು ಭಾರತೀಯ ಪುರುಷರ ಅಂಧರ ಕ್ರಿಕೆಟ್ ತಂಡಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಇನ್ನೂ ಅನುಮತಿ ನೀಡಿಲ್ಲ.

ಭಾರತೀಯ ಅಂಧರ ಕ್ರಿಕೆಟ್ ತಂಡವು ಈಗಾಗಲೇ ಪಾಕ್‌ಗೆ ತೆರಳುವ ಬಗ್ಗೆ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದಿಂದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸ್ವೀಕರಿಸಿದೆ ಆದರೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದಿಂದ ಅಧಿಕೃತ ಅನುಮತಿ ಪಡೆದಿಲ್ಲ. ಒಂದೊಮ್ಮೆ ಅನುಮತಿ ಸಿಗದಿದ್ದರೆ ಭಾರತ ವಿಶ್ವಕಪ್ನಲ್ಲಿ ಭಾಗವಹಿಸುವಂತಿಲ್ಲ. ಇದುವರೆಗಿನ ಮೂರು ಆವೃತ್ತಿಯ ಟಿ20 ವಿಶ್ವಕಪ್‌ಗಳಲ್ಲಿ ಭಾರತ ಹ್ಯಾಟ್ರಿಕ್ ಗೆಲುವು ಸಾಧಿಸಿತ್ತು.

ರಾಜ್ಯ ಕ್ರಿಕೆಟ್ ಪಂದ್ಯಾವಳಿ: 32 ತಂಡಗಳು ಭಾಗಿ

ಚಿಕ್ಕಮಗಳೂರು: ರಾಜ್ಯ ಮಟ್ಟದ ಸಾಫ್ಟ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಬೆಂಗಳೂರಿನ ಕರ್ನಾಟಕ ಸ್ಟೇಟ್ ಸಾಫ್ಟ್ ಬಾಲ್ ಕ್ರಿಕೆಟ್ ಸಂಸ್ಥೆ ನಡೆಸುತ್ತಿದ್ದು, ಈ ಪಂದ್ಯಾವಳಿಗೆ ಕರ್ನಾಟಕ ರಾಜ್ಯದ 31 ಜಿಲ್ಲೆಯಿಂದ 32 ತಂಡಗಳು ಭಾಗವಹಿಸುತ್ತಿದ್ದಾವೆ.

ಚಿಕ್ಕಮಗಳೂರು ಜಿಲ್ಲೆಯಿಂದ ಕ್ರಿಕೆಟ್ ಕ್ಲಬ್ ಅಧ್ಯಕ್ಷರು ಹಾಗೂ ಕಾಫಿ ಬೆಳೆಗಾರರಾದ ಎಸ್.ಎಲ್. ಮಂಜುನಾಥ್ ಅವರ ಮಾಲೀಕತ್ವದಲ್ಲಿ ಚಿಕ್ಕಮಗಳೂರು ಕ್ರಿಕೆಟ್ ಕ್ಲಬ್ ತಂಡವೂ ಭಾಗವಹಿಸಿಕೊಳ್ಳಲಿದೆ.

ಕಾಫಿ ಬೆಳೆಗಾರರಾದ ಎಸ್.ಎಲ್. ಮಂಜುನಾಥ್, ನವೀನ್ ಕೆಂಜಿಗೆ, ರವಿ ಪಿ.ಕೆ. ಮನು ಎಂಟರ್ ಪ್ರೈಸಸ್, ಸಿ. ಎಸ್. ವಿನಯ್, ಕೋಟೆ, ಮಲ್ನಾಡು ಇನ್ಫ್ರಾ ಸ್ಟ್ರಕ್ಚರ್ ಪ್ರೈವೇಟ್ ಲಿ., ಶ್ರೀಪಾಲ್, ಹಳ್ಳಿಹಿಪ್ಪು, ವೈಷ್ಣವಿ ಎಂಟರ್‌ಪ್ರೈಸಸ್ ಸೇರಿ ಈ ಫ್ರಾಂಚೈಸ್‌ನ ಸಜೀವ ಮಾಲೀಕತ್ವ ಪಡೆದಿದ್ದು, ಪಾಲುದಾರರು, ಕೆ.ಎಸ್.ಪಿ.ಎಲ್. ಟೀಮ್, ಚಿಕ್ಕಮಗಳೂರು ಜಿಲ್ಲೆ ಎಂಬುದಾಗಿ ತಿಳಿಸಿದರು. ಈ ಕ್ರಿಕೆಟ್ ಆಟವನ್ನು ಪ್ರೋತ್ಸಾಹಿಸಲು ಈ ಬಾರಿ ಚಂದನ ನೆಟ್‌ವರ್ಕ್ ಮುಂದೆ ಬಂದು ರೈಟ್ಸ್ ಹಕ್ಕು ಪಡೆದಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಎಲ್ಲ ಕ್ರಿಕೆಟ್ ಪ್ರೇಮಿಗಳು ಹೆಚ್ಚಿನ ರೀತಿ ಪ್ರೋತ್ಸಾಹಿಸಲು ಹಾಗೂ ಸಹಕರಿಸಲು ಮಂಜುನಾಥ ಮನವಿ ಮಾಡಿದರು.

ಕಾಫಿ ಬೆಳೆಗಾರರಾದ ಎಸ್.ಎಲ್.ಮಂಜುನಾಥ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಒಡಿಶಾ ವಿರುದ್ಧ ಕರ್ನಾಟಕಕ್ಕೆ ಗೆಲುವು

ಬೆಂಗಳೂರು: ಕರ್ನಾಟಕ ತಂಡವು ಬೋಲಂಗೀರ್‌ನಲ್ಲಿ ನಡೆದ 23 ವರ್ಷದೊಳಗಿನವರ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಒಡಿಶಾ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿತು.

ಮೊದಲ ಇನ್ನಿಂಗ್ಸ್‌ನಲ್ಲಿ 204 ರನ್ ಹಿನ್ನಡೆ ಕಂಡು, ಫಾಲೊ ಆನ್‌ಗೆ ಒಳಗಾದ ಒಡಿಶಾ ತಂಡವು ಸೋಮವಾರ ಎರಡನೇ ಇನ್ನಿಂಗ್‌ನಲ್ಲಿ 99.2 ಓವರ್‌ಗಳಲ್ಲಿ 346 ರನ್ (ಭಾನುವಾರ 6ಕ್ಕೆ274) ಗಳಿಸಿತು. ಹಿಂದಿನ ದಿನ ಔಟಾಗದೇ ಉಳಿದಿದ್ದ ಸಾವನ್ ಪೆಹಾರಿಯಾ 121 ರನ್ (229ಎ) ಮತ್ತು ಸುಜಲ್ ಸಿಂಗ್ 84 ರನ್ ಹೊಡೆದು ಕೊಂಚ ಪ್ರತಿರೋಧತೋರಿದರು. ಕರ್ನಾಟಕದ ಮನ್ವಂತ್ ಕುಮಾರ್ ಎಲ್. ಮತ್ತು ಪಾರಸ್ ಗುರುಭಕ್ಷ ಆಯರ್ ತಲಾ ಮೂರು ವಿಕೆಟ್ ಪಡೆದರೆ, ಶಶಿಕುಮಾರ್ ಕೆ. ಎರಡು ವಿಕೆಟ್ ಕಬಳಿಸಿದರು.

ಗೆಲುವಿಗೆ 143 ರನ್‌ಗಳ ಸುಲಭ ಗುರಿ ಪಡೆದ ಕರ್ನಾಟಕ ತಂಡವು ಪ್ರಖರ್ ಚತುರ್ವೇದಿ (ಔಟಾಗದೇ 72; 96ಎ) ಮತ್ತು ಹರ್ಷಿಲ್ ಧರ್ಮಾನಿ (ಔಟಾಗದೇ 54; 45ಎ) ಅವರ ಬ್ಯಾಟಿಂಗ್ ಬಲದಿಂದ 29 ಓವರ್‌ಗಳಲ್ಲಿ ದಡ ಸೇರಿತು. ಅವರಿಬ್ಬರು ಎರಡನೇ ವಿಕೆಟ್‌ಗೆ ಮುರಿಯದ 105 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ 389. ಒಡಿಶಾ 62.3 ಓವರ್‌ಗಳಲ್ಲಿ 185. ಎರಡನೇ ಇನಿಂಗ್ಸ್: ಒಡಿಶಾ 99.2 ಓವರ್‌ಗಳಲ್ಲಿ 346 (ಸಾವನ್ ಪೆಹಾರಿಯಾ 121, ಸುಜಲ್ ಸಿಂಗ್ 84, ಮನ್ವಂತ್ ಕುಮಾರ್ ಎಲ್. 53ಕ್ಕೆ 3, ಪಾರಸ್ ಗುರುಭಕ್ಷ ಆರ್ಯ 77ಕ್ಕೆ 3, ಶಶಿಕುಮಾರ್ ಕೆ. 49ಕ್ಕೆ 2). ಕರ್ನಾಟಕ: 29 ಓವರ್‌ಗಳಲ್ಲಿ 1ಕ್ಕೆ 143 (ಪ್ರಖರ್ ಚತುರ್ವೇದಿ ಔಟಾಗದೇ 72, ಹರ್ಷಿಲ್ ಧರ್ಮಾನಿ ಔಟಾಗದೇ 54)

ವಿಟಾಕೀಸ್



ವಿಜಯ ದಾಸರು ಚಿತ್ರಕ್ಕೆ ಚಾಲನೆ

ಖ್ಯಾತ ಹರಿದಾಸರಾದ ವಿಜಯದಾಸರ ಜೀವನ ಚರಿತೆಯ ಕುರಿತ ದಾಸವರೇಣ್ಯ ಶ್ರೀ ವಿಜಯದಾಸರು 2 ಚಿತ್ರ ಸೆಟ್ಟೇರಿದೆ. ಈ ಚಿತ್ರದ ಮುಹೂರ್ತ ಸಮಾರಂಭ ಬಸವನಗುಡಿಯ ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನೆರವೇರಿತು. ಸತ್ಯಧ್ಯಾನಾಚಾರ್ಯ ಕಟ್ಟಿ ಚಿತ್ರದ ಮೊದಲ ಸನ್ನಿವೇಶಕ್ಕೆ ಆರಂಭ ಫಲಕ ತೋರಿದರು, ತೇಜಸ್ವಿನಿ ಅನಂತ ಕುಮಾರ್ ಕ್ಯಾಮೆರಾ ಚಾಲನೆ ಮಾಡಿ ಚಿತ್ರಕ್ಕೆ ಶುಭಕೋರಿದರು. ಜೆ.ಎಂ.ಪ್ರಹ್ಲಾದ್ ಚಿತ್ರಕಥೆ ಮತ್ತು ಸಂಭಾಷಣೆ ರಚಿಸಿದ್ದು, ಮಧುಸೂದನ್ ಹವಾಲ್ದಾರ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಎಸ್.ಪಿ.ಜೆ ಮೂವೀಸ್ ಲಾಂಛನದಲ್ಲಿ ತ್ರಿವಿಕ್ರಮ ಜೋಶಿ ಈ ಚಿತ್ರವನ್ನು ನಿರ್ಮಿಸುತ್ತಿದ್ದು, ವಿಜಯದಾಸರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಪ್ರಭಂಜನ ದೇಶಪಾಂಡೆ, ಗೋಪಾಲದಾಸರ ಪಾತ್ರದಲ್ಲಿ ಕಾಣಿಕೊಳ್ಳುತ್ತಿದ್ದು, ವಿಜಯದಾಸರ ಪತ್ನಿ ಹರಳಮ್ಮನವರ ಪಾತ್ರದಲ್ಲಿ ಶ್ರೀಲತಾ ಬಾಗೇವಾಡಿ ನಟಿಸುತ್ತಿದ್ದಾರೆ.

ಈಗಾಗಲೇ ಚಿತ್ರೀಕರಣವೂ ಆರಂಭವಾಗಿದ್ದು, ಹಂಪೆ, ಆನೆಗುಂದಿ, ಹುಲಗಿ, ಶ್ರೀರಂಗಪಟ್ಟಣ ಮುಂತಾದ ಕಡೆ ಚಿತ್ರೀಕರಣ ನಡೆಯಲಿದೆ. ಮುಂದಿನ ನಾಲ್ಕು ತಿಂಗಳಲ್ಲಿ ಶೂಟಿಂಗ್ ಮುಗಿಸಿ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ನಿರ್ಧರಿಸಿದೆ. ಚಿತ್ರದಲ್ಲಿ ಒಟ್ಟು ಒಂಬತ್ತು ಹಾಡುಗಳಿವೆ.

ವಿಜಯ ದಾಸರು ಚಿತ್ರದ ಮೊದಲ ಭಾಗ ತೆರೆಗೆ ಬಂದು ಯಶಸ್ವಿಯಾಗಿದೆ. ವಿಜಯದಾಸರ ಆರಾಧನಾ ಸಂದರ್ಭದಲ್ಲಿಯೇ ಎರಡನೇ ಭಾಗಕ್ಕೆ ಚಾಲನೆ ಸಿಕ್ಕಿದೆ. ನನ್ನದಲ್ಲದ ಕ್ಷೇತ್ರಕ್ಕೆ ನಿರ್ದೇಶಕ ಮಧುಸೂದನ್ ಹವಾಲ್ದಾರ್ ನನ್ನನ್ನು ಎಳೆದು ತಂದಿದ್ದಾರೆ. ಹರಿದಾಸರ ಕುರಿತಾಗಿ ಹತ್ತು ಸಿನಿಮಾಗಳನ್ನು ನಿರ್ಮಿಸುವ ಯೋಜನೆಯಿದೆ.
-ತ್ರಿವಿಕ್ರಮ ಜೋಶಿ
ನಿರ್ಮಾಪಕ



ದೇಶ ಕಂಡ ಸಜ್ಜನ ರಾಜಕಾರಣಿಗಳಲ್ಲಿ ದಿ.ಅನಂತಕುಮಾರ್ ಅವರು ಒಬ್ಬರು. ಅನಂತಕುಮಾರ್ ಅವರ ಕುರಿತಾದ ಚಿತ್ರ ಮಾಡುವ ಕುರಿತಂತೆ ತ್ರಿವಿಕ್ರಮ ಜೋಶಿ ಘೋಷಿಸಿದ್ದಾರೆ. ಈ ಬಗ್ಗೆ ತೇಜಸ್ವಿನಿ ಅನಂತ್ ಕುಮಾರ್ ಅವರ ಜತೆಗೆ ಚರ್ಚಿಸಿದ್ದೇನೆ. ಸದ್ಯದಲ್ಲೇ ಈ ಚಿತ್ರವನ್ನು ಆರಂಭಿಸುತ್ತೇವೆ. ಅನಂತ್ ಕುಮಾರ್ ಅವರು ನಡೆದು ಬಂದ ಹಾದಿ, ರಾಜಕಾರಣದಲ್ಲಿ ಅವರು ಮೂಡಿಸಿದ ಛಾಪು, ಸಮಾಜ ಸೇವೆಯ ಕುರಿತಂತೆ ಚಿತ್ರದಲ್ಲಿ ಹೇಳಲಾಗುತ್ತಿದೆ ಎಂದು ತ್ರಿವಿಕ್ರಮ ಜೋಶಿ ತಿಳಿಸಿದರು.

ಭರ್ಜರಿಯಾಗಿ ಬರಲಿದ್ದಾನೆ ಬಾರ್ಬರಿಕ





ಪೌರಾಣಿಕ ಮತ್ತು ಸಾಮಾಜಿಕ ಅಂಶಗಳು ಬೆರೆತಿರುವ ತ್ರಿಬಾಣಧಾರಿ ಬಾರ್ಬರಿಕ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಭೀಮನ ಮೊಮ್ಮಗ ಮತ್ತು ಘಟೋತ್ಕಚನ ಮಗ ಬಾರ್ಬರಿಕನ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಈ ಸಿನಿಮಾದ ಮೋಷನ್ ಪೋಸ್ಟರ್ ರಿಲೀಸ್ ಆಗಿದ್ದು, ಮೂರು ಬಾಣಗಳನ್ನು ಏಕಕಾಲಕ್ಕೆ ಹೂಡುವ ಬಾರ್ಬರಿಕನ ಅದ್ಭುತ ಪರಾಕ್ರಮವನ್ನು ಈ ಪೋಸ್ಟರ್‌ನಲ್ಲಿ ವಿವರಿಸಲಾಗಿದೆ. ಈ ಜಗತ್ತು ಗಮನಿಸದ ಒಬ್ಬ ಮಹಾವೀರನ ಕಥೆ ಇದು ಎಂದು ಈ ಪೋಸ್ಟರ್‌ನಲ್ಲಿ ಬಣ್ಣಿಸಲಾಗಿದೆ. ಒಂದು ಕಡೆ ಪೌರಾಣಿಕ ಕಥೆ ಹೇಳುತ್ತಲೇ, ಇನ್ನೊಂದು ಕಡೆ ಪ್ರಸ್ತುತ ಕಾಲ ಘಟ್ಟವನ್ನು ಇಲ್ಲಿ ವಿವರಿಸಲಾಗಿದೆ. ಗಾಂಢೀವಧಾರಿ ಅರ್ಜುನ, ಪಾಶುಪತಾಸ್ತ್ರಂ, ಬ್ರಹ್ಮಾಸ್ತ್ರಂ, ಗರುಡ ಪುರಾಣಂ ಮುಂತಾದ ಪುಸ್ತಕಗಳ ಜತೆಗೆ ಗನ್ ಸಹ ತೋರಿಸಲಾಗಿದೆ. ಈ ಮೂಲಕ ಪೌರಾಣಿಕ ಮತ್ತು ಸಮಕಾಲೀನ ವಿಷಯಗಳನ್ನು ಈ ಚಿತ್ರದಲ್ಲಿ ಹೇಳಿರುವ ಸೂಚನೆ ನೀಡಲಾಗಿದೆ.

ಮೋಹನ್ ಶ್ರೀವತ್ಸ ನಿರ್ದೇಶನ ಮಾಡಿದ್ದು, ವಾನರ ಸೆಲ್ಯುಲಾಯ್ಡ್ ನಿರ್ಮಾಣ ಸಂಸ್ಥೆಯಲ್ಲಿ ವಿಜಯಪಾಲ್ ರೆಡ್ಡಿ ನಿರ್ಮಿಸುತ್ತಿದ್ದಾರೆ. ವಸಿಷ್ಠ ಸಿಂಹ, ಸತ್ಯರಾಜ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸಂಚಿ ರೈ, ಸತ್ಯಂ ರಾಜೇಶ್, ಕ್ರಾಮತಿ ಕಿರಣ್, ಮೊಟ್ಟ ರಾಜೇಂದ್ರ, ವಿ.ಟಿ.ವಿ.ಗಣೇಶ, ಉದಯಭಾನು ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ. ಕುಶೇಂದರ್ ರಮೇಶ್ ರೆಡ್ಡಿ ಛಾಯಾಗ್ರಹಣ, ಮಾರ್ತಾಂಡ ವೆಂಕಟೇಶ ಸಂಕಲನ, ಶ್ರೀನಿವಾಸ್ ಪನ್ನ ಕಲಾ ನಿರ್ದೇಶನ ಮತ್ತು ರಾಣ ಸಂಕರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಇನ್ಫ್ಯೂಷನ್ ಬ್ಯಾಂಕ್ ಎಂಬ ಸಂಗೀತ ತಂಡವು ಈ ಚಿತ್ರಕ್ಕೆ ಸಂಗೀತ ಸಂಯೋಜಿಸುತ್ತಿದೆ. ತ್ರಿಬಾಣಧಾರಿ ಬಾರ್ಬರಿಕ ತನ್ನ ಪೋಸ್ಟರ್ ಮೂಲಕವೇ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಈ ಚಿತ್ರವು ಪ್ಯಾನ್ ಇಂಡಿಯಾ ಚಿತ್ರವಾಗಿ ಬಿಡುಗಡೆಯಾಗಲಿದೆ.

ಸ್ಪಿರಿಟ್ ಹೆಚ್ಚಿಸಿದ ಲೀ ಡಾಂಗ್

ಪ್ರಭಾಸ್ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ, ಸದ್ಯ ದಿ ರಾಜಾ ಸಾಬ್ ಚಿತ್ರದಲ್ಲಿ ಬ್ಯುಸಿಯಾಗಿರುವ ಪ್ರಭಾಸ್ ಬಳಿಕ ಸ್ಪಿರಿಟ್ ಚಿತ್ರದಲ್ಲಿ ನಟಿಸಲಿದ್ದಾರೆ. ಸಂದೀಪ್ ರೆಡ್ಡಿ ವಂಗ ಈ ಚಿತ್ರವನ್ನು ನಿರ್ದೇಶನ ಮಾಡಲಿದ್ದು, ಚಿತ್ರ ಸೆಟ್ಟೇರುವ ಮೊದಲೇ ನಿರೀಕ್ಷೆ ಹೆಚ್ಚಿಸಿದೆ. ವಿಶೇಷ ಎಂದರೆ ಈ ಚಿತ್ರದಲ್ಲಿ ಕೊರಿಯನ್ ಖ್ಯಾತ ನಟ ಲೀ ಡಾಂಗ್ ಸಿಯೋಕ್ ನಟಿಸಲಿದ್ದಾರೆ ಎನ್ನಲಾಗುತ್ತಿದೆ. ಇದನ್ನು ಕೇಳಿ ಸಿನಿಪ್ರಿಯರು ಖುಷಿಯಾಗಿದ್ದಾರೆ, ಲೀ ಡಾಂಗ್ ವಿಲನ್ ಪಾತ್ರದಲ್ಲಿ ನಟಿಸುತ್ತಿದ್ದು ಪ್ರಭಾಸ್ ಹಾಗೂ ಲೀ ಡಾಂಗ್ ನಡುವಿನ ಫೈಟಿಂಗ್ ಸೀನ್ ಹೇಗಿರಬಹುದು ಎಂದು ನೋಡಲು ಸಿನಿಪ್ರಿಯರು ಕಾತರರಾಗಿದ್ದಾರೆ. ಸ್ಪಿರಿಟ್ ಮಾತ್ರವಲ್ಲ, ಸಲಾರ್ 2 ನಲ್ಲಿಯೂ ಲೀ ಡಾಂಗ್ ನಟಿಸುವ ನಿರೀಕ್ಷೆ ಇದೆ. ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ಸಿದ್ಧವಾಗುತ್ತಿರುವ ಸಲಾರ್ 2 ಮೊದಲ ಭಾಗಕ್ಕಿಂತ ಇನ್ನೂ ಅದ್ದೂರಿಯಾಗಿ ಮೂಡಿಬರಲಿದೆ. ಹಾಗಾಗಿ ಈ ಭಾಗದಲ್ಲಿ ಪ್ರಭಾಸ್ ಮುಂದೆ ಪವರ್ ಫುಲ್ ವಿಲನ್ ಆಗಿ ಲೀ ಡಾಂಗ್ ನಟಿಸಲಿದ್ದಾರಂತೆ. ಇದು ಕೂಡ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಹೊಂಬಾಳೆ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿದೆ.

ರಿಪ್ಪನ್ ಸ್ವಾಮಿಯ ಜತೆಯಾದ ಅಶ್ವಿನಿ

ಈ ಹಿಂದೆ ವಿಜಯ್ ರಾಘವೇಂದ್ರ ಅಭಿನಯದ ಮಾಲ್ಗುಡಿ ಡೇಸ್ ಚಿತ್ರವನ್ನು ನಿರ್ದೇಶಿಸಿದ್ದ ಕಿಶೋರ್ ಮೂಡುಬಿದ್ರೆ, ಈಗ ಮತ್ತೆ ವಿಜಯ್ ರಾಘವೇಂದ್ರ ಅವರ ಜತೆಯಾಗಿದ್ದು ರಿಪ್ಪನ್ ಸ್ವಾಮಿ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಫಸ್ಟ್ ಲುಕ್ ಪೋಸ್ಟರ್‌ನಿಂದಲೇ ಕುತೂಹಲ ಮೂಡಿಸಿರುವ ರಿಪ್ಪನ್ ಸ್ವಾಮಿ ಚಿತ್ರದಲ್ಲಿ ಚಿನ್ನಾರಿ ಮುತ್ತ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ರಿಪ್ಪನ್ ಸ್ವಾಮಿಗೆ ನಾಯಕಿಯಾಗಿ ಯಾರು ನಟಿಸಬಹುದು ಎಂಬ ಕುತೂಹಲವಿತ್ತು, ಅದಕ್ಕೆ ಈಗ ಉತ್ತರ ಸಿಕ್ಕಿದೆ. ನಾಯಕಿಯಾಗಿ ನಟಿ ಅಶ್ವಿನಿ ಚಂದ್ರಶೇಖರ್ ಬಣ್ಣಹಚ್ಚಿದ್ದಾರೆ. ರಿಪ್ಪನ್ ಸ್ವಾಮಿ ಕೌಟುಂಬಿಕ ಕಥೆಯ ಜತೆಗೆ ಒಂದಷ್ಟು ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿದ್ದು, ಈ ಚಿತ್ರದಲ್ಲಿ ಅಶ್ವಿನಿ ಡಾಕ್ಟರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ನಟಿ ಅಶ್ವಿನಿ ಕನ್ನಡದಲ್ಲಿ ಪ್ರೇಮ ಪಲ್ಲಕ್ಕಿ, ಒಂದು ರೊಮ್ಯಾಂಟಿಕ್ ಪ್ರೇಮ ಕಥೆ, ಆಕ್ಟೋಪಸ್ ಸಿನಿಮಾಗಳಲ್ಲಿ ನಟಿಸಿದ್ದಾರೆ. ತೆಲುಗು, ತಮಿಳು ಚಿತ್ರಗಳಲ್ಲಿಯೂ ಅಭಿನಯಿಸಿ ಮನಗೆದ್ದಿದ್ದಾರೆ. ಈಗ ರಿಪ್ಪನ್ ಸ್ವಾಮಿಯ ಜತೆಯಾಗಿದ್ದು, ಮತ್ತೊಮ್ಮೆ ಪ್ರೇಕ್ಷಕರ ಮನಗೆಲ್ಲಲು ಸಿದ್ಧವಾಗಿದ್ದಾರೆ. ರಿಪ್ಪನ್ ಸ್ವಾಮಿ ಸಿನಿಮಾದಲ್ಲಿ ನಾಯಕನ ಪಾತ್ರದಷ್ಟೇ ನಾಯಕಿಯ ಪಾತ್ರವೂ ಪ್ರಮುಖವಾಗಿದೆ. ಪಂಚಾನನ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗಿದ್ದು ಶೀಘ್ರದಲ್ಲಿಯೇ ತೆರೆಗೆ ಬರಲಿದೆ.